ಮಾಡಿ ಸೇರಿಸಿದ್ದಕ್ಕಕ್ಕೂ ಹೋಗದೆ ವ್ಯರ್ಥವಾಗಲಿಲ್ಲ-
ಯೆಂಬುದು ಎಷ್ಟು ಸಂತೋಷವು! (ಅಂನ್ವಾಯ ವೆಂಬಳ್ಕ) ಆ
ದದರಿಂದ ಮೇಲಿನ ಮಾಸ್ತರನ ವಿಷಯಕ್ಕೆ ಸರಕಾರದವರಿ
ದ ಬಾಂನಾಗಿ ವಿಚಾರವಾಗ ಬೇಕೆಂಬಾಶೆ ನನಗುಂಟು.

ಮುಕ್ಕಾಂ ಗಲಗಲಿ	ಮುಂದಕೆ ಸಾಗುವದು.
ತಾ॥ ೧೦|೮|೩೧	ಗೋ. ಕೇ. ಜೋ. ತೇ.

ರಾ॥ ರಾ॥ ಮಠಪತ್ರಕರ್ತರವರಿಗೆ.

ಅಯ್ಯಾ ಎಡಿಟರರೇ, ನಾನು ಸ್ವಲ್ಪದಿವಸಗಳಿಂ
ದ ಒಂದೆರಡು ಚಿತ್ರಗಳು ಕಳುಹಿದ್ದು ಅವು ತಮ್ಮಿಂದ ಸ್ವೀ
ಕರಿಸಲ್ಪಟ್ಟು ತಮ್ಮ ಮನೋಹರವಾದ ಪತ್ರಿಕೆಯಲ್ಲಿ
ಪ್ರಸಿದ್ಧರಾದದ್ದನ್ನು ಕಂಡು ನಾನು ಬಹಳ ಸಂತೋಷ-
ಪಡುತ್ತೇನೆ. ಈ ಸಲಕ್ಕೆ ಬರೆದ ನಾಲ್ಕು ಸಾಲುಗಳು ತ
ಮ್ಮ ಮುಂದಿನ ಸಂಚಿಕೆಯಲ್ಲಿ ಬರೆದು ಪ್ರಸಿದ್ಧಿಸುವಿ
ರೆಂಬ ಅಭಿಲಾಷೆಯಿಂದ ಕಳುಹಿದ್ದೇನೆ.

॥ ಶಿಷ್ಯಾಪರಾಧಿಗಳೋದಯಂತಃ॥

ಎಂಬ ಸಂಸ್ಕೃತ ಭಾಷೆಯಲ್ಲಿದ್ದ ಗಾದೆಯು ಸಾಲೆ
ಗಳ ಬೋಧಕರಿಗೆ ಬಹಳ ಉಚಿತವಾಗುವುಳ್ಳ-

ದ್ದಾಗಿದೆ. ಈ ಗಾದೆಯ ವಾಸ್ತವಿಕ ಅರ್ಥದಕಡೆಗೆ ಲಕ್ಷ್ಯಕೊಟ್ಟಲ್ಲಿ ತಿಳಿಯಬರುವದೇನಂದರೆ, ಶಾಲೆಯಲ್ಲಿ ಬರುವ ಬಾಲಕರಿಗೆ ಪತ್ರವಿದ್ಯೆಯನ್ನು ಮಾತ್ರ ಕಲಿಸುವದು ಬೋಧಕರ ಕೆಲಸವೆಂದು ತಿಳಿಯಕೂಡದು. ಆದರೆ ಅವರಿಗೆ ಸುಶಿಕ್ಷೆಯನ್ನು ಕಲಿಸುವದು, ಬೋಧಕರಿಗೆ ಅವಶ್ಯವಾಗಿದೆ.

ಮೇಲೆ ಬರೆದ ಗಾದೆಯ ಅರ್ಥವೇನಂದರೆ, ಶಿಷ್ಯರು ಅಪರಾಧವನ್ನು ಮಾಡಿದರೆ, ಅದಕ್ಕೆ ಯೋಗ್ಯವಾದ ಶಿಕ್ಷೆಯನ್ನು ಗುರುವಿಗೆ ಮಾಡಬೇಕು. ಹೀಗಿರುವದರಿಂದಾ ಬಾಲಕರನ್ನು ಬಾಲ್ಯಾವಸ್ಥೆಯಲ್ಲಿ, ಅವರ ಬುದ್ಧಿಯು ಕೋಮಲವಾಗಿರುವದರಿಂದ, ಹ್ಯಾಗೆ ಕಲಿಸಬೇಕೋ ಹಾಗೆ ಕಲಿಯುತ್ತಾರೆ. ಆದದರಿಂದ ಅವರಿಗೆ ಬಾಲ್ಯತನದಲ್ಲಿಯೇ, ಸುನೀತಿಯಿಂದಲೂ, ವಿನಯದಿಂದಲೂ ವರ್ತಿಸುವದಕ್ಕೆ ಕಲಿಸಿದ್ದುಂಟಾದರೆ, ಅವರು ಪ್ರೌಢತನದಲ್ಲಿ ದಂಡಕ್ಕೆ ಗುರಿಯಾಗದೆ, ಒಳ್ಳೆನಡತೆಯಿಂದ ನಡೆಯುವರು, ಎಂಬುವದು ಸ್ಪಷ್ಟವಾಗಿ ತೋರುತ್ತದೆ.

ಮಿರಜ ಬಾನದ ದಕ್ಷಿಣ ಭಾಗದ ಮರಾಠ ಪತ್ರಿಕೆಯ
ಎಡಿಟರ ಮುಕ್ಕಾಮು ಬೆಳಗಾಂವ ಇವರಿಗೆ—

ಕಾನಡಾ ಜಿಲ್ಲಾ ಕಾರವಾರ ತಾಲೂಕ ಕಸಬಾ ಬಾಡದಲ್ಲಿ ಆ ಮಾಸ್ತರರ ವಿಜ್ಞಾಪನೆ ಯಾವದೆಂದರೆ — ಸದರಿ ಊರ ಸಾಹಾಪಿ ಜನರ ನಡತೆಯನ್ನು ಕೆಳಗೆ ಕಾಣಿಸುತ್ತೇನೆ- ಅದನ್ನು ತಾವು ಮನಸ್ಸಿಗೆ ತಂದು ತಮ್ಮ ಕಾಲಪತ್ರಿಕೆಯಲ್ಲಿ ಪ್ರಸಿದ್ಧ ಮಾಡಬೇಕೆಂದು ಪ್ರಾರ್ಥಿಸುತ್ತೇನೆ-

(೧) ಸದರಿ ಊರಲ್ಲಿ ಕನ್ನಡ ಶಾಲಾ ಸ್ಥಾಪನ ಆಗಿ ಸುಮಾರು (೫) ಐದು ವರ್ಷಗಳು ಆಯಿತು. ಅದರ ಇಷ್ಟರಲ್ಲಿ ಈ ಶಾಲೆಯಲ್ಲಿ (೭) ಏಳು ಜನ ಮಾಸ್ತರರು ಆದರು. ಇಷ್ಟು ಮಾಸ್ತರರು ಬದಲುವದಕ್ಕೆ ಕಾರಣವು ಈ ಊರ ನಿವಾಸಿಗಳ ನಡತೆಯು ಕೇಳಿರಿ. ಸದರಿ ಶಾಲೆಯಲ್ಲಿ ಮೊದಲನೇ ಬಂದ ಮಾಸ್ತರರು ಒಂದು ತಿಂಗಳ ಮಾತ್ರ ಶಾಲೆ ಕೆಲಸವನ್ನು ನೋಡಿದರು. ಈ ಮಾಸ್ತರರು ಹೊಸದಾಗಿ ಬಂದ ಕಾರಣ ಅವರ ವಿಚಾರ ಮನಸ್ಸಿಗೆ ತಿಳಿಯದೆ ನಡೆದರು, ನಗರಕ್ಕೆ ನಿ ಹೋದರು. ಎರಡನೇ ಬಂದ ಮಾಸ್ತರರ ಮೇಲೆ ಈ ಊರ ಜನರು ಬಹಳ ಗೋಳಾಟವನ್ನು ಮಾಡಿ, ಮೇಲ-

ಅಧಿಕಾರಿಗಳಿಗೆ ಅರ್ಜಿಯ ಮಾಡಿದರು; ಅವ-
ರು ಸಹಾ (೧) ಒಂದು ತಿಂಗಳು ಸದರಿ ಊರಲ್ಲಿ ಯಿ
ದ್ದು ಪರಾರಿಯಾಗಿ ಹೋದರು. ಆ ಮೇಲೆ ೩ನೇ ಬಂದ
ಮಾಸ್ತರ ಶಿರಿನಾಮವು ಇದೇ ಮೇರೆಗೆ ಆಗಿ ಅ-
ವರು ಸಹಾ ೧೨ ತಿಂಗಳು ಉಳಕೊಂಡು ಪರಾರಿಯಾ
ಗಿ ಹೋದರು. ೪ನೇ ಬಂದ ಶಿವರಾಮ ನಾಯಕನೆಂಬವ
ರು ೨ ವರ್ಷ ಸದರಿ ಶಾಲೆ ಕೆಲಸ ಮಾಡಿದರು. ಅವ
ರು ಊರ ನಿವಾಸಿಗಳ ಅಭಿಪ್ರಾಯದಂತೆ ನಿಷ್ಕ್ರಿಯರಾ
ಗಿದ್ದು ದಿವಸ ಉಳಿಯುವ ಕಾರಣ ಆಯಿತು. ೫ನೇ
ಬಂದ ರಾಮಚಂದ್ರಯ್ಯ ಗೋವಿಂದ ಜೋಶಿ ಎಂಬವರು-
ಸರಕಾರಿ ಶಾಲೆ ಮೇರೆಗೆ ಕೆಲಸವಷ್ಟು ನೋಡಿದಕಾ
ರಣ, ಊರವಾಸಿ ಜನರು ಅವರಿಗೆ ಬಹಳ ಹಗೆ ಮಾ
ಡಿದರು; ಕಟ್ಟಕಡೆಗೆ ಅವರು ಸಹಾ ೨।೩ ತಿಂಗಳು
ಇದ್ದು ಪರಾರಿಯಾಗಿ ಹೋದರು. ೬ನೇ ಬಂದ ತಮ-
ಣ್ಣನೆಂಬವನು ಕೆಲವು ದಿವಸ ಊರನಿವಾಸಿಗಳ ಮತ
ದಂತೆ ನಡೆದ ಕಾರಣ ಸ್ವಲ್ಪ ದಿವಸ ಇದ್ದವರಿಗೆ ಮಾ-
ತ್ರ ಅವರ ಮೇಲೆ ಹಗೆ ಮಾಡಲಿಲ್ಲ. ಅನಂತರ ಅ
ವನು ಸರಕಾರದ ಕಾಯದೆಯಂತೆ ಕೆಲಸ ಮಾಡಲಿಕ್ಕೆ ಹತ್ತಿ

ದ ಕೂಡಲೆ, ಅವನ ಮೇಲೆ ಹಗೆ ಮಾಡಲಿಕ್ಕೆ ಆರಂ-
ಭವಾಯಿತು. ತರುವಾಯ ಅವನ ಮೇಲೆ ಮೆ-
ಹರಬಾನ ಡಿ. ಇ. ಇ. ಜಿಲ್ಲಾ ಕಾನಡಾ ಇವರ ಕ-
ಡೆಗೆ ನಿದರ್ಶಿ ಯುವನ ವಿಷಯವಾಗಿ ಎಷ್ಟೋ ಬೋ-
ಬಾಟಗಳೂ, ಅರ್ಜಿಗಳು ಸಿಕ್ಕಾ ಮಾಡಿದಂತೆ; ಇದ
ರ ಸಲುವಾಗಿ ಸಿದರಿ ತಮ್ಮಪ್ಪನು (೧) ಐದು ರುಪಾ
ಯಿ ಕಡಿಮೆಯಾಗಿ ಕುಮಟಾ ತಾಲೂಕ ಬಾಡದಲ್ಲಿ
ವರ್ಗವಾಗುವದಕ್ಕೆ ಕಾರಣವೆಂದು ಕೆಲವು ಸಭ್ಯ
ಗೃಹಸ್ಥರು ಹೇಳುತ್ತಾರೆ.

ಮುಂಪ್ರು ಈ ಊರನಿವಾಸಿಯವರಹೇ
ಳುವೇನಂದರೆ - ಹುಡುಗರಿಗೆ ವಿಕಾರಿ ಕಾಲದಂ
ತೆ ಅಭ್ಯಾಸ ಮಾಡಿಸದೆ, ತಮ್ಮ ಹೇಳಿಕೆ ಮೇ
ರೆಗೆ ಮಾಡಿಸಬೇಕು. ಹುಡುಗರಿಗೆ ಮಿತ್ರರಗಳೂ,
ನಾಟಕಗಳೂ ಕಲಿಯಬಾರದು. ಮೋಡಿ ಹಸ್ತಾಕ್ಷರ
ಗಳ ಕಾಗದಗಳು ಓದಿಸಬೇಕು. ಇದಾದರೆ ಸರ್ವ-
ಶಾಲೆ ಹುಡುಗರಿಗೆ ಫೀ ತಗೊಂಡು ಬರಲಿಕ್ಕೆ ಮನೆ
ಗಳು ಸಿಕ್ಕದರೆ, ಅವರ ತಂದೆ ತಾಯಿಗಳೂ, ಪರಿಪಾ
ಲನೆ ಮಾಡುವವರೂ ಫೀ ಕೊಡದೆ, ಕೆಲವರು ಮಾಸ್ತ್ರ

ರರ ಬೋಧಾಟು ಮಾಡುತ್ತಾರೆ. ಮತ್ತು ಕೆಲವರು ಮೇಲ ಅಧಿಕಾರರ ಕಡೆಗೆ ಚಾಡಿಹೇಳುತ್ತಾರೆ. ಮತ್ತು ಕೆಲವರು ಮೇಲ ಅಧಿಕಾರರು ಕೊಡುವ ಹುಕುಂಮಿನ ಹಾಗೆ ಕಾಗದ ಬರೆದು ಮಾಸ್ತರರಬಳಿಗೆ ಕಳುಹಿಸುತ್ತಾರೆ.

೨ ನನಗೆ ನಿದರಿಶಾಲೆಯಲ್ಲಿ ವರ್ಗವಾಗಿ ಈಗ—೧೨ ತಿಂಗಳು ಆಯಿತು. ಇಷ್ಟರಲ್ಲಿ ಮೇಲೆ ಹೇಳಿದಹಾಗೆ ಎಷ್ಟೋ ಕಾಗದಗಳು ಬಂದವು. ಅವುಗಳೊಳಗೆ ನಾಂದಾದೊಂದು ಕೆಳಗೆ ಕಾಣಿಸಿದ್ದೇನೆ.

“ स्कूल मास्तर यांसि— आमचा मुलास तु-”
“म्ही फी आणे करीता सांगीतले ह्मणें. तर फी कोणत्या”
“महीन्याची द्यावी. वासूदेव तर दोन महीने पर्यंत शा-„
“ळेस जात नव्हता. कांहीं दिवस आमचे घरचे अडच-„
“णी मुळें ठेवून घेतला. व कांहीं रोज दुखें आणीले-„
“सीवाय शाळेस येणें जरूर नाहींसे तुह्मी सांगीतले-„
“ह्मणें. घरीं राहिला असता फी मात्र देणे बाकी राहि-„
“ली. ती कसी हें जरूर कळवावें. हा शाळेस गेले या„
“अथवा नाही गेलेया त्याची वासपुस करीत नाहींत„
“याला मोडी हस्ताक्षर वाचणे सी येत नाही. आह्मणे„

"मुलास शाळेंत आजुन ऐक वर्षा जहाले. पत्याचे"
"वय सहा वर्षांचे आहे. असे असता हें लीहुणें,"
"कशाचे म्हणून आम्हास काही कळत नाहीं. मुला,"
"स जेव्हां वाचणे अगर लिहुणेस येत नाहीं त्या-,"
"वरून तुम्ही काय शीकवीता हें समजत नाहीं. फी,"
"मात्र देणे चुकत नाहीं. आता त्याणी कीती मही-,"
"न्याची फी देणे आहे हें जरूर लीहून कळवणें. आ-,"
"पण या उपर त्याला फक्त मोडी कागद शीकवावे,"
"बाकी बुके शीकवीणे काहीं जरूर नाहीं. कळावे,"
"तारीख ७ अगोस्थ सन १८७१ इसवि. शंकरराव पा-,"
"टेकर म्हणून राहणार वासुदेवाच्या आपानें लीहीं-,"
"ले आहे"

(४) మహారాజశ్రీ ఈ స్కూలువారికి శలు
గళ్ళ మాస్టరుగారికి బ్రాహ్మణ స్త్రీ అవరుగారి ఇల్లు
లు చదువుకున్నారు? అవరు ముందు స్కూలువానికి
మ పంపినట్లు స్పష్టంగా తెలుసు? ఇక మాస్టరు
గారి అధికారము అమ్మాయికి ఈ బాలుడు
కి (?) చదువు? మా అధికారము లేదు. విచార-

ಮೂಡಲಗೀ.

ತಾರೀಖು ೨೦ ನೇ ಅಗಸ್ಟ ೧೮೬೧

(ಸಹಿ) ವಿ. ಮ. ಗೋ. ಸ್ವಾ.

Notice.

ನೋಟೀಸು.

ಬೆಳಗಾಂವಿ ಜಿಲ್ಲೆಯೊಳಗಿನ ಯಾವತ್ತು ಮಾಸ್ತರರಿಗೆ ತಿಳಿಸುವದೇನಂದರೆ, ಸಾಲ್ಗಾದ್ದ ಸ್ಥಳಗಳನ್ನು ಬಿಟ್ಟು ಯೆರಡನೇ ಊರಿಗೆ ಹೋಗುವದಕ್ಕೆ ಮಾಸ್ತರರಿಗೆ ಪ್ರಾವ್ಹಿಜನಲ್ ರಜಾ ಕೊಡತಕ್ಕದ್ದೆಂದು ಸರಕಾರದವರು ಗೊತ್ತು ಮಾಡಿದ್ದಾರೆ. ಆದರೆ ಮಾಸ್ತರರು ತಮ್ಮ ಸ್ಥಳಗಳನ್ನು ಬಿಟ್ಟು ಎರಡನೆ ಸ್ಥಳಗಳಿಗೆ ಹೋಗುವದರ ದಕ್ಕಿಂದ ರಜಾ ಬೇಕ ಬೇಕಾದರೆ ಪ್ರಾವ್ಹಿಜನಲ್ ರಜಾ ಬೇಡದೆ ಎರಡನೇ ಪ್ರಕಾರದ ರಜಾ ಬೇಡಬೇಕು. ತಾರೀಖು ೧೫ ನೇ ಮಾಹೆ ಅಗಸ್ಟ ಸನ ೧೮೬೧ ಇಸವಿ.

[illegible]

for ಇನಸ್ಪೆಕ್ಟರ ದಕ್ಷಿಣ ಭಾಗ.

Notice

ನೋಟೀಸು-

ಧಾರವಾಡ ಜಿಲ್ಹೆಯೊಳಗಿನ ಯಾವತ್ತು ಮಾಸ್ತರರಿಗೆ ತಿಳಿಸುವದೇನಂದರೆ- ಸಾಲೀ ಇಯತ್ತೆಗಳನ್ನು ಬಿಟ್ಟು ಎರಡನೇ ಊರಿಗೆ ಹೋಗುವದಕ್ಕೆ ಮಾಸ್ತರರಿಗೆ ಪ್ರಿವಿಲೇಜ ಲೀವ ಕೊಡಬಾರದೆಂದು ಸರಕಾರದವರು ಠರಾವು ಮಾಡಿದ್ದಾರೆ. ಆದರೆ ಮಾಸ್ತರರು ತಮ್ಮ ಸ್ಥಳಗಳನ್ನು ಬಿಟ್ಟು ಎರಡನೇ ಸ್ಥಳಗಳಿಗೆ ಹೋಗುವದರ ದರ್ಜಿಂದ ರಜಾ ಬೇಡ- ಬೇಕಾದರೆ ಪ್ರಿವಿಲೇಜ ಲೀವ ಬೇಡದೆ ಎರಡನೇ ಪ್ರಕಾರ ರಜಾ ಬೇಡ ಬೇಕು. ತಾರೀಖು ೧೮ ನೇ ಮಾಹೆ ಅಗಸ್ಟ ೧೮೭೧ ಯಿಸವಿ.

(Signed) C. B. Dharwar

ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ
ಜಿಲ್ಲಾ ಧಾರವಾಡ.

ಪಶುಗಳ ವರ್ಣನೆಗಳು.

ಕುದುರೆಯ ವರ್ಣನೆ:-

॥ ವಾರ್ಧಕ ಷಟ್ಪದಿ ॥

ಚತುರಂಗದ ಗತಿಯ ಪಿರಿದಧ್ವನಿಯ ವರ್ಣಗಳ ।
ಭೂತ [illegible] ಸುಲಕ್ಷಣಾವಳಿಯತೆ ।
ಸ್ಫೂರ್ತಿ [illegible] ವಿಶೇಷಾರ್ಥದಿಂ [illegible] ವಿಸ್ತಾರದಿಂ [illegible] ॥
[illegible] ವಿಪ್ರ ತಕರಸು ಪ್ರಬಂಧದಂ ।
ಕೀರ್ತಿ [illegible] ವಾಜಿಯಂ [illegible] ।
[illegible] ನೋಡು [illegible] ಕಳಾವಿದದ [illegible] ಮುದ್ದೊ
ಸ್ಪಷ್ಟದೊಳು ॥೧॥

ಈ ಪದ್ಯದಲ್ಲಿ ಕುದುರೆಯ [illegible], ಶಾಸ್ತ್ರದವರೂ [illegible] ನೆ. ಎರಡು ಅರ್ಥಗಳಲ್ಲಿದ್ದರಿಂದ [illegible] ಕಾವ್ಯದಲ್ಲಿ ಬರೆಯಲ್ಪಟ್ಟಿದೆ.

ಅರ್ಥ:- ನಾಲ್ಕು ಪಾದಗಳ ಗಮನವುಳ್ಳ (ನಾಲ್ಕು ಚರಣಗಳುಳ್ಳ), ಒಳ್ಳೇ ಧ್ವನಿಯುಳ್ಳ (ಶೃಂಗಾರಾದಿ ರಸಗಳೂ, ಧ್ವನ್ಯರ್ಥವೂ ಉಳ್ಳ), ಬಣ್ಣದಿಂದ ಹಿಡಿದು (ಅಕ್ಷರಗಳಿಂದ ಒಪ್ಪು.

ವ), ಆಭರಣಗಳು (ಶ್ಲೇಷಾ, ಉಪಮಾ ಮೊದಲಾ
ದ ಅಲಂಕಾರಗಳು), ಬೇಡ ಮಣಿ, ಕಂಠಾಭರಣ ಮುಂ
ತಾದ ಒಳ್ಳೇ ಲಕ್ಷಣಗಳುಳ್ಳ (ಕವಿ ಲಕ್ಷಣದಿಂದ ಕೂಡಿದ)
ಸುಂದರವಾದ ಧ್ವನಿಯಿಂದ ಶೋಭಿಸುವ (ಕಿವಿಗೆ ಇಂಪಾ
ದ), ಬಹಳ ಹಣಬಾಳುವಂಥ (ವಿಶೇಷವಾದ ಅರ್ಥಗ-
ಳುಳ್ಳ), ಪುಷ್ಟವಾದ (ನಿರ್ದುಷ್ಟವಾದ), ತರುಣವಾದ
(ನೂತನವಾದ), ಶಾಸ್ತ್ರದಂತೆ ಮನೋಹರವಾದ ಸು
ದತಿಯನ್ನು ಕಂತು ಕಲಾವಿದನಾದ ಪುರುಷನು ಸಂತೋ-
ಷಪಟ್ಟು ನೋಡುತ್ತಿದ್ದನು.

ಎಮ್ಮೆಕೋಣಗಳ ವರ್ಣನೆ.

॥ ಮಹಾಸ್ರಗ್ಧರಾ ವೃತ್ತಂ ॥

ಪೊಳ್ಪುಳ್ಳಂ ಮೇದು ಮಧ್ಯಂದಿನದ ಬಿಸಿ [illegible] ಬಿಸಂ
ಭರಂಗೊಂ ।
ದೆಳ್ಳಸುತ್ತಂ ಪಿಲ್ಲಾಭ್ರಪ್ಲದಿ ಮುಳ್ಗಿರ್ದ್ದುವ ಮಂಥಿ
ತ್ತಿನಿಂದ ॥
ಪುಳಿಸುತ್ತಂ ಪೊಂದ ನೋಟ್ಗೊಡುತೆ ಮಹಿಷ್ಯಂ
ಬ್ರಾತಂ ಗಾಡಿಗೊಳ್ಳುತ್ತಂ

ದಂಷ್ಟ್ರದರ್ಶಿತ್ರಭ್ರಕಾಯಂ ಪ್ರಥುಮುಷಿಕ ನಿಕಾಯಂ ಕಳಂಕ್ರೋ
ತ್ಪನ್ನಕಾಯಂ ॥ ೨ ॥

ಅರ್ಥ - ಕೋರೆದಾಡೆಗಳಿಂದ ಶರೀರವುಳ್ಳಂಥ, ಬಳ್ಳಿ ಸೋಗದುಳ್ಳ ಎಮ್ಮೆ ಕೋಣಗಳು ದೊಳ್ಳೆ ಕುಳ್ಳನ್ನು ಮೇದು, ಮೃತ್ಯುವಿನ ಉಗ್ರವಾದ ಬಿಸಿಲು ಬೆನ್ನಿಗೆ ತಾಕಲಾಗಿ, ತಾಳಲಾರದೆ ಓಡುತ್ತ ಬಂದು ಕೆರೆಯ ನೀರೊಳಗೆ ಮುಳುಗಿ, ಕೆಸರೊಳಗೆ [illegible], ಹೈಕಳು, ಕೆಸರು ಹಚ್ಚಿಕೊಂಡು, [illegible] ಒಂದಕ್ಕೊಂದು ಕಾದಾಡುತ್ತ, ಪಿಲ್ಲಾರಿಸುತ್ತ, ಅಡವಿಯಲ್ಲಿ ಓಡುತ್ತಿದ್ದವು.

ನಾಯಿಯ ವರ್ಣನೆ.

ಕಂದ॥ ನೆಗೆದ ಕುಡಿವಾಲ ಮುಗ್ಗ್ಯಾವ
ಬಗೆ ಬಳ್ಳುವ ದನದ ಮೃಗಾವಳಿ [illegible] ॥
ಸ್ವರ್ಗದ ಮಂಚ್ಯ ವಿರಿದಟ್ಟು ।
ತ್ರಗಲದೆ ಪಿಡಿದೆತ್ತು ನಾಯಿಂತತ್ತನ ಬೊಗ್ಗೆ ॥ ೩ ॥

ಅರ್ಥ - ಎತ್ತಿದ ಕುಡಿಬಾಲವೂ, ಉಬ್ಬಿದ ಮೊಗವೂ, ಬಗ್ಗಿದ ನಡುವೂ, ಹೆದರಿಸುವ ಮೋರೆಯೂ ಉಳ್ಳ ನಾಯಿಯು ಅಡವಿಯಲ್ಲಿ ಎಲ್ಲಿಯ ಮೃಗವನ್ನು [illegible] ಹಿಡಿಯುತ್ತು.

ಆನೆಯ ವರ್ಣನೆ.

॥ ಮತ್ತೇಭವಿಕ್ರೀಡಿತವೃತ್ತ ॥

ಕರಿನೀಲಾಚಲದಂದದೊಳ್ಕೆಯುಬಲ್ಪಿಂ ಕಾಲಮೇಘಂ
ಸ್ವರೋ।
ತ್ವರಮುಂ ಗರ್ಜಿಸಿ ಜಿಹ್ವೆ ಬಾಳಿದುನವಂಕ್ರೈ ಸೋಂಕು
ತೆ ಬ್ಬಾತುನಿ॥
ಕರ್ಣಕಮಾಂಗಳ್ತಿವಂತೆ ಶಕ್ರನ ಪಾಕಂ ಪೂಸಪಾತ್ರೆ
ಕ್ಕಿಸಿ।
ಕರಮುತ್ತಂ ಸಿದಿವಂತೆ ತಳ್ಳಸಿದಿದತ್ರಾಣತ್ರ ಮುಕ್ತಾ
ಶಿಳ್ಳಂ॥೪॥

ಇದರಲ್ಲಿ ಶ್ಲೇಷಾಲಂಕಾರ ವಿದ್ದುದರಿಂದ ಸ್ಥಾನದೊಳಗೆ ದ್ವೈಯಾರ್ಥವು ಬರೆಯಲ್ಪಟ್ಟಿದೆ.

ಅರ್ಥ — ಆನೆ ಯೆಂಬ ಕರಿನೀಲವರ್ಣದ ಮೇಘ ಕಾಲಮೇಘನೆಂಬ ಬೇಡನು (ಮಳೆಗಾಲದ ಮೋಡವು) ಸೆಳೆಯುವ ಬಿಲ್ಲನ್ನು ಪಿಡಿದು (ಇಂದ್ರಧನುಸ್ಸನ್ನು ಧರಿಸಿ), ಗಾಜಿ (ಗುಡುಗಿನ ಸ್ವರವನ್ನು ಮಾಡಿ), ಬಾಣಗಳನ್ನು (ಮಳೆಯನ್ನು) ಸುರಿಸಿ ಸಿಡಿಲಿಂದಿರಿದಾಗಿ, ಆ ವಿವರದ ಧಾತುಗಳೊಳಗಿಂದ ಹರಿಯುವ ಜಲ

ಬಾಹದಂತೆ ಆನೆಯ ಮೈಯೊಳಗಿಂದ ರಕ್ತವು ಸೋರುತಿತ್ತು; ಹನಿಗಳು ಸಿಡಿಯುವಂತೆ ರಕ್ತಸಿಕ್ತದ ಮುತ್ತುಗಳು ಅದರ ಕತ್ತರಿಸಿದ ಮೈಯೊಳಗಿಂದ ಸಿಡಿದು ಬಿದ್ದವು.

ಸಿಂಹನ ವರ್ಣನೆ-

॥ಚಂಪಕ ಮಾಲಾವೃತ್ತ॥

ಬಿಡಿಸಲುಲಂ ಸ್ವಹಸ್ತದಿಂ ಮಳೆಬಂದ್ರವಿಳಾತಳದ್ವಿಪೇಂ
ದ್ರಮಾ।
ಬುದರಕಳಿಡಿಪೆ ಮುತ್ತದು ಹುರಿದುರುಳಿಗ ಜೆಸೆ ಮೊ
ಚ್ಛನಾದದಿಂ।
ಬೋಡನದು ಗರ್ಜಿಸುತ್ತೆ ಕೆಳಗಂಟೆ ಬಲಂಘಿಸಿ ಪಾಯ್ದು
ಮೂರ್ಛಿತಾ।
ಮಡಿದು ದುಕ್ಕದಲ್ಲಿ ನಿಜದೇಹವನೊಂದಿಸಿಕೆಟ್ಟು
ಪ್ರೋಗಳೆ ॥೫॥

ಅರ್ಥ- ಒಂದು ಸಿಂಹವು ಚಂದ್ರಕಾಂತ ಶಿಲೆಯಲ್ಲಿ ತನ್ನ ಪ್ರತಿಛಾಯವನ್ನು ಕಂಡು, ಇದು ಎರಡನೇ ಸಿಂಹ ಎಂದು ತಿಳಿದುಕೊಂಡು ಸಿಟ್ಟಿನಿಂದ ಅದಕ್ಕೆ ಇದಿರಾಯಿತು, ಅದೂ ಇದರಂತೆ ಇದಿರಾಯಿ

ತು, ಇದು ಗರ್ಜಿಸಿದ ಕೂಡಲೇ ಅದೂ ಗರ್ಜಿಸಿತು, ಇದು ಕ್ರೋಧಾವೇಶದಿಂದ ಹಾರಿ ಅದಕ್ಕೆ ಹಾಯಲಾಗಿ ಅದಕ್ಕೂ ಹಾಗೆ ತಲೆಯೊಡೆದು ಸತ್ತು, ಹೋಯಿತು. ಬುದ್ಧಿಶಕ್ತಿ ಇಲ್ಲದ ಕೋಪವನ್ನು ಬಳಸಿದರೆ ಈ ಬಗೆಯಿಂದ ನಾಶ ಹೊಂದುವರು.

ಹುಲಿಯ ವರ್ಣನೆ.

॥ ಚಂಪಕ ಮಾಲಾ ವೃತ್ತ ॥

ಕುಸಿದ ಶಿರಾಂಗ ಮುಜ್ವಲಿತ ಪಿಂಗಳ ಲೋಚನ ಮುಗ್ರದಂ-
ಷ್ಟ್ರಮಾ।
ಎಸೆದ ಮುಸಂಧಿಬಂಧ ವಿಚಿತ್ರ ಯೋಗ್ಯ ಬಾಲ ವಿಶಾಲ ಮುಗ್ರ ವಿ
ಭೀಷಣಂ
ವಸುಧೆಗೆ ಭಾರ ಶೋಭಿತ ತನು ಮುಂಗಡೆ ನಾಲ್ಕು ವರ
ಲಕ್ಷ್ಮಣಮಾ।
ಎಸೆ ಯುತ ಕಸ್ತು ದಂಷ್ಟ್ರ ಶತಮಿಂ ಪ್ರಸವಿಸು ದುರ್ಗ ಶೋಂದು
ಶಾರ್ದೂಲ ರೂಪಿನಿ

ಅರ್ಥ — ಕುಸಿದ ಪೃಷ್ಠಭಾಗದಿಂದಲೂ, ಪ್ರಕಾಶಿಸುವ ಪಿಂಗಳ ವರ್ಣದ ಕಣ್ಣುಗಳಿಂದಲೂ, ಭಯಂಕರವಾ

ದ ಶೋಣಿತ ದಾಹಗಳಿಂದಲೂ, ಮನಸಿನ ಹಾಹಾಕಾರದಿಂ
ದಲೂ, ನೆಲದ ಮೇಲೆ ಅಲ್ಲಾಡಿಸುವ ಕಾಲುಗಳಿಂದ
ಕೈಬಡಿಸುವ ಪೆಟ್ಟುಗಳಿಂದಲೂ, ಮೇಲಕ್ಕೆ ಚಿಮ್ಮುವ ರಕ್ತ
ದ ಸ್ರೋತಗಳಿಂದಲೂ, ಮುಂಗಡೆ ಬೀಳುತಿರುವ ಕಾಲು
ಗಳಿಂದಲೂ, ಕಿವಿಸಿಡಿ ಮುಗಿಲ ಹೊಗೆಗಳಿಂದಲೂ,
ಅನೇಕರಾದವರ ಗಾಯಗಳಿಂದಲೂ ಒಪ್ಪುವದು ಆಯು
ಒಂದು ಸ್ಥಳದಲ್ಲಿ ಇತ್ತು.

A Tale.

"ಯುಕ್ತಿ ಹೆಚ್ಚಿನದೋ ಅಥವಾ ಶಕ್ತಿ ಹೆಚ್ಚಿನದೋ ಎಂಬುದ ರ ವಿಷಯಕವಾದ"

೧ ಕಲ್ಪಿತ ಕಥೆ.

ಒಂದು ಹಳ್ಳಿಯಲ್ಲಿ ಬಾಲಪ್ಪನೆಂಬ ಒಬ್ಬ ಒಕ್ಕಲಿ
ಗನು ಇರುತ್ತಿದ್ದನು. ಅವನಿಗೆ ಇಬ್ಬರು ಮಕ್ಕಳು.
ಅವರಲ್ಲಿ ಹಿರಿಯ ಮಗನ ಹೆಸರು "ಭೀಮನು"; ಸಣ್ಣ
ಚಿಕ್ಕ ಮಗನ ಹೆಸರು 'ರಾಮನು' ಇವರಿಬ್ಬರಿಗೆ ಅವರಪ್ಪ
ಕಲಿಸಿದ್ದು ಸ್ವಲ್ಪ. ಹೀಗಿರುತ್ತಿರಲು ಒಂದಾನೊಂದು-

ದಿವಸ ಅವರಿಬ್ಬರ ನಡುವೆ ಯುಕ್ತಿ ಶ್ರೇಷ್ಠವೋ ಅ-
ಥವಾ ಶಕ್ತಿ ಶ್ರೇಷ್ಠವೋ ಎಂಬ ವಿಷಯದಲ್ಲಿ ಬಹಳ
ಕಾಠಿಣ್ಯವಾದ ವಾಗ್ವಾದ ನಡೆಯಿತು. ಆಗಲೂ ಇಬ್ಬರು
ಬೇಸತ್ತು, ತಮ್ಮ ತಂದೆಯಾದ ಬಾಪ್ಪನ ಬಳಿಗೆ
ಈ ನ್ಯಾಯ ತಿದ್ದು ಇಬ್ಬರೂ ಅವನೆದುರಿಗೆ ಶಿರಬಾ-
ಗಿಸಿಕೊಂಡು ನಿಂತು ಹೇಳಲಾರಂಭಿಸಿದ್ದೇನೆಂದರೆ,
ನಮ್ಮಿಬ್ಬರಿಗೂ ಯುಕ್ತಿ ಶ್ರೇಷ್ಠವೋ ಅಥವಾ ಶಕ್ತಿ
ಶ್ರೇಷ್ಠವೋ ಎಂಬ ವಿಷಯದ ಬಗ್ಗೆ ವಾಗ್ವಾದ ನಡೆ-
ಯುತ್ತಿರುವುದು ಇಪ್ಪತ್ತಕ್ಕೆ ಮಿಕ್ಕಿ ದಿನಗಳಾದವು.
ಆದರೆ ಈ ನ್ಯಾಯವು ಇದುವರೆಗೂ ನಮ್ಮಿಂದ ಬಗೆ-
ಹರಿಯಲಿಲ್ಲವಾದ ಕಾರಣ ಈಗ ತಮ್ಮ ಶ್ರೀಯವರ ಸನ್ನಿ-
ಧಾನಕ್ಕೆ ಬಂದಿದ್ದೇವೆ, ತಾವೀಗ ಇದನ್ನು ನಿರ್ಧರಿಸ-
ಬೇಕೆಂದು ನಮಗೆ ತುಂಬಾ ಅಪೇಕ್ಷೆಯುಂಟು, ಎ-
ನಲಾಗಿ ಚಿಕ್ಕವರಾದ ತನ್ನ ಮಕ್ಕಳು ಬಹು ಮೃದು-
ತರವಾದಂಥ ಈ ಮಾತು ಕೇಳಿ ತಂದೆಗೆ ಎಷ್ಟು ಸಂ-
ತೋಷವಾಗಿರಬಹುದು! ಎಲಾ ನನ ಪ್ರಿಯ ಬಾಲ-
ಕರುಗಳಿರಾ, ಈಗ ನೀವು ನನ್ನ ಹತ್ತಿರ ಬಂದಿರುವ
ಕಾರಣವಂತು ತಿಳಿಯಿತು, ಯಾವ ಪಕ್ಷದಲ್ಲಿ ನೀ-

ವು ಬಂದು ಕೇವಲ ಚಮತ್ಕಾರ ನಡಿಸಿದರೋ! ಇದು
ನೋಡಿ ನನಗೆ ಬಹಳ ಆಶ್ಚರ್ಯ ವಾಗುತ್ತದೆ, ಯಾ
ಕಂದರೆ ನೀವು ನೋಡಿದರೆ ಚಿಕ್ಕವರು, ನಿಮಗೆ ಇಂ
ಥ ಬುದ್ಧಿ ಹ್ಯಾಗೆ ಬಂತೋ! ನೀವು ಯಾರನ್ನಾದರು
ಕೇಳಿ ಈ ಕೃತ್ಯ ನಡಿಸಿದರೋ! ಅಥವಾ ನೀವೇ
ನಿಮ್ಮ ಸ್ವಂತ ಬುದ್ಧಿಯಿಂದ ನಡಿಸಿದರೋ! ಇದು
ತಿಳಿಯುವದು ಆದರೂ ಚಿಂತೆ ಇಲ್ಲ. ನನಗೆ ತಿಳಿ
ದಷ್ಟು ಮಟ್ಟಿಗೆ ನಾನು ನಿಮಗೆ ಹೇಳುತ್ತೇನೆ, ಕೇಳಿ
ರಿ ಎಂದು ತನ್ನ ಇಬ್ಬರು ಮಕ್ಕಳಿಗೂ ಹೇಳಿದ್ದೇನಂ
ದರೆ — ನೀವಿಬ್ಬರು ಜತ್ತಾಗಿ ಹುಲಿಯ ಬೇಟೆಗೆ ಹೋ
ಗಿ, ನಿಮಗೆ ಎಷ್ಟು ಮಾತ್ರವು ಶ್ರಮವು ಮಾಡಿ ಕೊಂ-
ಡರೆ ಹುಲಿಯನ್ನು ಹೊಡಕೊಂಡು ಬರ ಬೇಕೆಂದು
ಅಪ್ಪಣೆ ಕೊಟ್ಟುಕೊಂಡ್ರೆ, ಅವರಿಬ್ಬರು ತಮ್ಮ ತಮ್ಮ
ಹತ್ಯಾರಸಹಿತ ಬೇಟೆಗೆ ಹೋದರು. ಅರಣ್ಯದಲ್ಲಿ ತಾ
ವು ಹೋದ ಹೊತ್ತಿನಿಂದ ಸಾಯಂಕಾಲದ ವರೆಗು ಎಲ್ಲಿ
ಯು ಒಂದು ಹುಲಿಸಹ ಅವರ ದೃಷ್ಟಿಗೆ ಬೀಳಲಿಲ್ಲವು.
ಹಾಗೆಯೇ ಸಾಯಂಕಾಲವಾದ ಬಳಿಕ ತಮ್ಮ ಮನೆ
ಗೆ ತಿರಿಗಿಬಂದು, ಮರುದಿವಸ ಪ್ರಾತಃಕಾಲಕ್ಕೆ-

ಎದ್ದು ಮತ್ತೆ ಬೇಟೆಯಾಡಲಿಕ್ಕಾಗಿ ಅಡವಿಗೆ ಹೋ-
ಗಲು ಅಲ್ಲಿ ಅಕಸ್ಮಾತವಾಗಿ ಒಂದು ಹುಲಿಯು ಇ-
ವರಿಬ್ಬರನ್ನೂ ನುಂಗಿಕೊಂಡು ತಿನ್ನಬೇಕೆಂಬ ಆಶೆಯಿಂ-
ದ ಬಂದದ್ದು ಕಂಡು ಇವರು ಮನದಲ್ಲಿ ಅಂಜಿಕೊಂ-
ಡರು. ನಮಗೂ ಇಷ್ಟೇ ಬೇಕಾಗಿತ್ತು, ಅನಾಯಾ-
ಸವಾಗಿ ತಾನೇ ಬಾಯೊಳಗ್ರಾಸದಿಂದು ಹಸಿದವರಿಗೆ ಉ-
ಣಿಸಿದ ಹಾಗೆ ಎಂಬ ಗಾದೆಯಂತೆ ಬಂದಲ್ಲಿ ಪ್ರತಿ-
ಕಾಯುತ್ತಿದ್ದರಂತು, ಅದನ್ನು ಹೊಡೆಯಬೇಕೆಂದು
ಮುಷ್ಟಿಗೆ ಯತ್ನಿಸಿ ಮಾಡಿದ್ದು ಅದು ಇವರ ವಶ-
ವಾಗದೆ ಮತ್ತೆ ಇವರ ಮೇಲೆ ಗುಡುಗಿ ಹಾರಿತು. ಇ-
ವರನ್ನು ಅಂಜಿಸಬೇಕೆಂದು ಅವರನ್ನು ಪೀಡಿಸಬ-
ಹಲಾರಂಭಿಸಿತು. ಆಗ ಇವರಿಬ್ಬರು ಕೇವಲ ಗಾಬರಿಯಾ-
ಗಿ ಹಿಂದಕ್ಕೆ ಹೋಗಹತ್ತಿದರು. ಹಿರಿಯ ಮಗನಾದ
ಭೀಮನು, ನಾನು ಶಕ್ತಿವಂತನು, ನನ್ನ ಸಾಹಸ
ಯಾರಿಗೆಂದು ತಿಳಿದು ಆ ಹುಲಿಯನ್ನು ಕೊಲ್ಲ-
ಬೇಕೆಂದು ಅದರ ಕೊರಳ ಮೇಲೆ ಕತ್ತಿಯ ಪೆಟ್ಟ-
ನ್ನು ಹಾಕಬೇಕೆಂದು ಅದರ ಮುಂದೆ ಹೋಗ-
ಹತ್ತಲಿಕ್ಕೆ ಆ ಹುಲಿಯು ಅವನನ್ನು ಹಾರ್ಲಾಲ

ಡಿಯೇ ಮುರಿದು ಕೊಂಡುಬಿಟ್ಟಿತು. ಅನಂತರ ಚಿಕ್ಕವ-
ನು ಆ ಹುಲಿಯು ತಮ್ಮಣ್ಣನನ್ನು ಕೊಂದಿತೆಂಬಸಿ-
ಟ್ಟಿನಿಂದಲೂ, ಹಾಗು ತನ್ನ ಯುಕ್ತಿ ಬಲದಿಂದಲೂ,
ಅದನ್ನು ಜೀವದಿಂದಲೇ ಹಿಡಿಯಬೇಕೆಂದು, ತಮ್ಮಣ್ಣನಂತೆ
ಮುಂದಿಂದಲೇ ಹೋಗದೆ ಪಕ್ಕದೊಳಗೆ, ಹುಲಿಯು
ಮೊದಲು ತ್ರಾಣಿ ಬಿಟ್ಟವನನ್ನು ಮುರಿದು ಕೊಂಡು ಬಿ
ಟ್ಟಿತ್ತೋ ಅದೇ ಹೇರಿಗೆ ಇವನನ್ನು ಸಹ ಕೊ
ಲ್ಲ ಬಯಸಿದ್ದು ಕೇವಲ ತನ್ನ ಬಲದಿಂದ ಅದ
ನ್ನು ಹಿಡಿಯುವಷ್ಟರಲ್ಲಿ ಅವನು ಆ ಹುಲಿಯ-
ಎರಡು ಮುಂಗಾಲಿನ ಪೊಳ್ಳಿನೊಳಗಿಂದ ತೊಟ್ಟಿ-
ಯೊಳಗೆ ಹೊಕ್ಕು, (ಹುಲಿಯ ಉಗುರುಗಳೆ ಯುಕ್ತ
ಬ್ಬದಂತೆ, ಹಾಗು ಅದರ ಸುತ್ತಿಗೆ ಬೀಳದಂತ
ಬಿಟ್ಟು) ತನ್ನ ಉತ್ತಮ ಬಾಹುಶಕ್ತಿಯಿಂದ ಹೊಟ್ಟೆ
ಯು ಹಿಂಡಿ ಕ್ಷಣಾರ್ಧದಲ್ಲಿ ಅದರ ಪ್ರಾಣವನ್ನು ತೆ-
ಗೆದುಕೊಂಡನು. ಇಷ್ಟೇ ಅಲ್ಲ, ಆ ದುಷ್ಟ ಮೃಗವನ್ನು
ನಾಲ್ಕೈದು ಜನರನ್ನು ಅಲ್ಲಿ ಕೂಡಿಸಿ ಅವರ ಸಹಾ
ಯದಿಂದ ತನ್ನ ಮನೆಗೆ ಒಯ್ದು ಕೊಂಡು ಬಂದು
ತನ್ನ ತಂದೆಯ ಮುಂದೆ ಚೆಲ್ಲಿಸಿ, ಅವನು ಕ

ಹುಲಿಯಿಂದ ಮೃತ ಹೊಂದಿದ ಸಂಗತಿಯನ್ನು ಕೇಳಲು. ತಂದೆಯು ಮೊದಲು ಮಾತ್ರ ದುಃಖಕರವಾದ ಮಾತು ಕೇಳಿ ಬಹು ಖೇದಪಟ್ಟನು. ಆದರೂ ಚಿಕ್ಕ ಮಗನು ಅದೇ ಹುಲಿಯನ್ನು ನನ್ನ ವಚನದಂತೆ ಕೊಂದು ತಂದಿದ್ದಾನೆ, ಇದು ಹೋಯಿತು ನನಗೆ ಬಹಳ ಸಂತೋಷವಾಯಿತು. ಎಂದು ಚಿಂತೆ ಬಿಡದನು. ಇದರಿಂದ ನೋಡಲಾಗಿ "(ಯುಕ್ತಿಯಿಂದಾದಷ್ಟು ಶಕ್ತಿಯಿಂದಾಗದು)" ಎಂಬ ಗಾದೆಯಂತೆ ಆ ಒಕ್ಕಲಿಗನ ಚಿಕ್ಕ ಮಗನು ತನ್ನ ಯುಕ್ತಿಯಿಂದ ಹುಲಿಯನ್ನು ಕೊಂದು, ತನ್ನ ಪ್ರಾಣವನ್ನುಳಿಸಿಕೊಂಡು ತನ್ನ ತಂದೆಗೆ ಸಂತೋಷ ಪಡಿಸಿದನೋ ಹಾಗೆಯೇ, ಪ್ರಿಯ ಶ್ರೋತೃಗಳೇ ಎಲ್ಲರೂ ಯುಕ್ತಿವಂತರಾಗಿರಿ. ಅಂದರೆ ನೀವು ಎಂಥ ಪ್ರಸಂಗ ಬಂದಿದ್ದರೂ ಪಾರಾಗುವಿರಿ. ಇದರಿಂದ ಯುಕ್ತಿಯೇ ದೊಡ್ಡದೆಂಬುದು ಸ್ಪಷ್ಟವಾಯಿತು.

(೧೫೯)
Shabdamanidarpan

ಶಬ್ದಮಣಿದರ್ಪಣಂ.

ವಿನುತಕ್ರಿಯಾರ್ಥಕಂಗಳ್
ಮೆನಿಸುವನಿಂದ್ಯತದಭಾವವಚನಂಗಳ್ಗಂ
ಯ್ದೆನಿತರ್ಕ್ಕಂ ನಿಸುತ್ರಿತ್ವಯು
ನವೆಕ್ತ್ರಿಸನಿಜನೆಬಹ್ಕುವಾರ್ಥಲ್ಲಿಂಗಂ॥

ವೃ॥ ವಿನುತಕ್ರಿಯಾರ್ಥಕಂಗಳುಂ ವಿನುತ-
ಶೋಭನವಪ್ಪ ಕ್ರಿಯಾರ್ಥಕಂಗಳುಂ ಕ್ರಿಯಾರ್ಥ
ಕಾದಿಂಗಳುಂ ಎನಿಸುವ ನಿಂದ್ಯತದ ಎನಿಸುವ ಎ
ನಿಸುವ ನಿಂದ್ಯತದ ನಿಂದ್ಯತದ ಭಾವವಚನಂಗಳುಂ
ಭಾವವಾಚಿಗಳುಂ ಅಯ್ದು ಅಯ್ದುಕೊಂಡು ಅನಿ
ತರ್ಕ್ಕಂ ಅಷ್ಟಕ್ಕೆಯುಂ ಇಸುತ್ರಿತ್ವಯುದವೆ ಇ
ಸುವಂಬ ತ್ರಿತ್ವಯುವವೆ ಕ್ರಿಯೆ ಪ್ರಿಂದುಗೆಯುಂ
ಮಾಡಿ ನಿಜನೆ ನಿಜಗೆ ಮಾಡಿ ಬಹುಲ್ಲಿಂಗಂ ಅಕ್ಷಿಂದಿ
ಹೇಳ್ದ ಬಹುಲ್ಲಿಂಗ ಬಹ್ಕಂ ವಪ್ಪುದು ಅದೆಂತೆಂದೊ
ಡೆ ಭಾವ ಭಂಗ ಭಾಗ ಭಾಗಧ್ಯಾನ ವೆಂಬಿವಾದಿಯಾ
ದ ಭಾವವಾಚಿಗಳ ಮೇಲೆ ಇಸುತ್ರಿತ್ವಯಂ ಬಕ್ಕು

ಭಾವಿಸು ಭಂಗಿಸು ಭೋಗಿಸು ಧ್ವನಿಸು ಎಂದು-
ಕನ್ನಡಕ್ಕೆ ಧಾತುವಾದಲ್ಲಿ ಅಪ್ರಾಕೃತವಾದಲ್ಲಿ ಕ್ರಿಯಾ
ಪದಂಗಳ್ಗೆ ಭೂತಭವಿಷ್ಯತ್ಕ್ರಿಯೆಗಳುಂ ಪೇೞ್ದಪೆ
ಭಕ್ತಿಗಳಸುಳ್ಳಿಂ ಪ್ರತ್ಯಕ್ಷವೆಂದರಿವುದು॥

ವೃ॥ ಕನ್ನಡಕ್ಕೆ ಕ್ರಿಯಾತ್ಮಕಂಗಳಪ್ಪ ಸಂಸ್ಕೃ
ತದ ಭಾವ ವಚನಂಗಳನಾಶ್ರು ಕೊಂಡು ಇಸು ಪ್ರ
ತ್ಯಯಮುಂ ಪತ್ರಿಸಿ ಕೃದಂತಮುಂ ಮಾಳ್ಪುದು॥ಪ್ರ॥
ಭಾವಿಸಿದಂ ಭಂಗಿಸಿದಂ ಭಾಗಿಸಿದಂ ಭೋಗಿಸಿದಂ ಕ
ಲ್ಪಿಸಿದಂ ಪ್ರೇರಿಸಿದಂ ವರ್ಣಿಸಿದಂ ಚರಿಸಿದಂ ಧರಿಸಿ
ದಂ ಚಲಯಿಸಿದಂ ಧಳಯಿಸಿದಂ॥

ಶಾಲಾಪತ್ರಿಕೆ-

ಪುಸ್ತಕ ೭ ಸಂಚಿಕೆ ೬

ಬೆಳಗಾವಿ, ಸೆಪ್ಟಂಬರ ೧೮೭೧

Natural Philosophy.

ಪದಾರ್ಥವಿಜ್ಞಾನವು.

ಪ್ರಾಣಿಗಳ ಕಿವಿಯ ಸಂಬಂಧ.

೧೩ ಹಿಂದೆ ಹೇಳಿದಂತೆ ಶಬ್ದವು ಹುಟ್ಟುವಿಕೆಗೂ, ಹಬ್ಬುವಿಕೆಗೂ, ಅದರಿಂದ ಉಂಟಾಗುವ ಬೇರೆ ಬೇರೆ ಪರಿಣಾಮಗಳ ಕಾರಣಗಳಿಗೂ ಅನುಕೂಲವಾಗಿ ರಚಿಸಲ್ಪಟ್ಟ ಭಾಗಗಳು ಮನುಷ್ಯರ ಕಿವಿಯಲ್ಲಿವುಂಟು. ಕಿವಿಯ ರಚನೆಯು ಅತಿಸೂಕ್ಷ್ಮವಾಗಿ ಇರುವಂತೆ ತೋರುತ್ತದೆ.

೧೪ ಮನುಷ್ಯರ ಕಿವಿಯಲ್ಲಿ ಮೂರು ಮುಖ್ಯ ಭಾಗಗಳುಂಟು. ಅವುಗಳಿಗೆ ಬಾಹ್ಯಕರ್ಣ, ಮಧ್ಯಕರ್ಣ, ಅಂತ್ಯಕರ್ಣವೆಂದು ಹೆಸರುಗಳನ್ನು ಕೊಡುತ್ತಾರೆ. ಬಾಹ್ಯಕರ್ಣವೆಂದರೆ ಹೊರಗೆ ಕಾಣಿಸುವ ಕಿವಿಯೂ, ಅದರ ಮಧ್ಯದಲ್ಲಿರುವ ಹೊಳ್ಳೆ-

ಇರುವ   ಈ ಕೊಳವೆಯು ಬುಡದಲ್ಲಿ ನಗಾರಿಯ-
ಚರ್ಮದಂಥಾ ಒಂದು ಪಟಲವುಂಟು; ಅದಕ್ಕೆ-
ಕಿವಿಪಟಲವೆಂದು ಹೆಸರು. ಈ ಪಟಲವು
ಬಾಹ್ಯಕರ್ಣದ ಮಿತಿಯಾಗಿರುವುದು. ಅದರ ಆಚೆಯಲ್ಲಿ
ಮಧ್ಯಕರ್ಣದ ಪೊಳ್ಳು ಪ್ರದೇಶವುಂಟು - ಈ ಪ್ರದೇಶ-
ದಿಂದ ಒಂದು ಕೊಳವೆಯು ಹೊರಟು ಬಾಯಿಯ
ಹಿಂಭಾಗದಲ್ಲಿ ತೆರೆದಿರುವ ಕಾರಣ, ಆ ಕೊಳವೆಯ-
ಮಾರ್ಗವಾಗಿ ಹವೆಯು ಮಧ್ಯಕರ್ಣದಲ್ಲಿ ತುಂ-
ಬಿ ಕೊಂಡಿರುತ್ತದೆ. ಈ ಮಧ್ಯಕರ್ಣದಲ್ಲಿ ನಾಲ್ಕು
ಎಲುಬಿನ ಚಿಕ್ಕ ತುಂಡುಗಳು ಅತಿ ಚಮತ್ಕಾರವಾ-
ಗಿ ಒಂದಕ್ಕೊಂದು ಕೂಡಿಸಿ ಇಡಲ್ಪಟ್ಟಿವೆ. ಮೊದಲ
ನೇ, ಎರಡನೇ ತುಂಡುಗಳು ಸುತ್ತಿಗೆ, ಬಡಿಗ
ಲ್ಲು ಗಳಂತಾಗಿ ಇರುವ ಕಾರಣ ಅವುಗಳಿಗೆ ಆಹೆ-
ಸರುಗಳು ಕೊಡಲ್ಪಟ್ಟಿವೆ. ಸುತ್ತಿಗೆಯು ಮೊದಲು
ಕಿವಿಪಟಲಕ್ಕಿಂತ ಸಮೀಪದಲ್ಲಿದ್ದು ಅದರ ಒಂದು
ಕೈ ಎಂಬ   ಪಟಲದ ಮಧ್ಯಭಾಗಕ್ಕೆ ಹೊಂದಿರು
ತ್ತದೆ. ಸುತ್ತಿಗೆಯ ಎಲುಬಿನ ತಲೆಗೆ ಹೊಂದಿ ಬಡಿ
ಗಲ್ಲಿನ ಎಲು—ಬಿರುತ್ತದೆ ಅದಕ್ಕೆ ಹೊಂದಿಕೊಂ

ದಿಸಾಸಿಮೆಯು ಶಾಲ್ಕಿನಷ್ಟು ಪ್ರಾಂದು ಚಿಕ್ಕ ಕಣಾವಿರು
ತ್ತದೆ, ಇದೇ ಮೂರನೇ ಎಲುಬು. ಇದರಹಿಂ
ದೆ ಹೊಂದಿರಿಕೆ (ಅಂಕೋಚಿ) ಬಂಧ್ಯಾ ಹೊಂದು
ನಾಲ್ಕನೇ ಎಲುಬುಂಟು. ಇದಲ್ಲದೆ ಹಿಂದೆ ಹೊಂದು
ಚಿಕ್ಕ ಪೊಳ್ಳು ಪ್ರದೇಶವಿದ್ದು, ಅದಕ್ಕೆ ಗಾಬಿಯ ಜೊತೆ
ಆ ನಾಲ್ಕನೇ ಎಲುಬಿನ ಬುಡವು ತುಂಬಿಕೊಂಡಿರು
ತ್ತದೆ. ಆ ಪೊಳ್ಳು ಪ್ರದೇಶ ಹೊರಗೆ ಪೊಂದು ವಿಧದ
ರಸವು ತುಂಬಿದ್ದು, ಆರಸದ ಬುಡದಲ್ಲಿ ಜ್ಞಾನ ತಂತು
ಗಳು ಹಬ್ಬಿರುತ್ತವೆ. ಇದೆಲ್ಲ ಮಧ್ಯಕರ್ಣದೊಳಗಿನ
ರಚನೆಯು. ಅಂತ್ಯಕರ್ಣವೆಂಬ ಪೊಳ್ಳು ಪ್ರದೇಶವು
ಮಧ್ಯಕರ್ಣದ ಮೇಲ್ಪದಿಯಲ್ಲುಂಟು. ಇದರೊಳಗೂ
ಮೇಲೆ ಹೇಳಿದಂಥ ರಸವು ತುಂಬಿದ್ದು, ಅದರ ಬುಡ
ದಲ್ಲಿ ನಿಕ ಜ್ಞಾನ ತಂತುಗಳು ತುಂಬಾ ಹಬ್ಬಿ, ಅಲ್ಲಿಂ
ದ ತಲೆಯೊಳಗಿನ ಮಿದುಳಿಗೆ ಹೋಗಿ ಸೇರುತ್ತವೆ.

೧೫ ಹವೆಯಲ್ಲಿ ನಾದದ ತರಂಗವುಂಟಾಗಲಾಗಿ
ಆ ತರಂಗವು ಕಿವಿಯೊಳಗೆ ಸೇರಿ ಭಿತ್ತಿಪಟಲದ
ಮೇಲೆ ಅಪ್ಪಳಿಸುತ್ತದೆ. ಅದರಿಂದ ಆ ಪಟಲ
ಕ್ಕೆ ಚಲನೆಯುಂಟಾಗಿ ಅದರ ಮಧ್ಯಭಾಗಕ್ಕೆ...

ದಿಯಲ್ಲಿ ಹೊಂದಿದ್ದ ಸುತ್ತಿನ ಯ ಉಬ್ಬಿನ ತುದಿ-
ಯು ಅಲ್ಲಾಡುವದು. ಅದರಿಂದ ಲಾಸುತ್ತಿನ
ತೆರೆಯು ಬಡಿಗಳಿನ ಮೇಲೆ ಅಪ್ಪಳಿಸಲ್ಪಡುತ್ತದೆ.
ಅದರಿಂದ ಲಾಬಡಿಗಳು ತನ್ನ ಹಿಂದಿನ ಕಣದ ಮೇ-
ಲೆಯೂ, ಆ ಕಣವು ತನ್ನ ಹಿಂದಿನ ಅಂಡಾಕೃತಿಯ ಉ-
ಬ್ಬಿನ ಮೇಲೆಯೂ ಅಪ್ಪಳಿಸಿ, ಘೋಷನಾದವನ್ನು
ಗತಿಯನ್ನೂ ಉಂಟು ಮಾಡುತ್ತವೆ. ಈ ನಾಲ್ಕೂ ಉ-
ಬ್ಬುಗಳಿರುವ ತ್ರಿದೇಶದಲ್ಲಿ (ಮಧ್ಯಕರ್ಣದಲ್ಲಿ)
ಹವೆಯು ತುಂಬಿರುತ್ತದೆಂದು ಮೇಲೆ ಹೇಳಿರುತ್ತೇವೆ.
ಈ ವಿಧವಾಗಿ ನಾದದ ಗತಿಯು ಕಿಟಿಕಿಯ ಉಬ್ಬು-
ಬಿನ ತನಕ ಮುಟ್ಟಿದ ನಂತರ ಆ ಉಬ್ಬಿನ ಕೆಳ-
ಗೆ ಬಂದ ಅದರ ಹಿಂದಿರುವ ಚಿಕ್ಕ ಹೊಳ್ಳೆ ತ್ರಿದೇ-
ಶ ದೊಳಗಿನ ರಸಕ್ಕೂ, ಅಂತ್ಯಕರ್ಣ ಹೊಳ್ಳೆಯ ರ-
ಸಕ್ಕೂ ಚಲನೆಯುಂಟಾಗಿ, ಅವುಗಳ ಬುಡ-
ದಲ್ಲಿರುವ ಜ್ಞಾನತಂತುಗಳ ದ್ವಾರದಿಂದ ಮಿದುಳಿಗೆ
ನಾದ ಜ್ಞಾನವು ಆಗುತ್ತಿರಬಹುದೆಂದು ತೋರು-
ತ್ತದೆ.

೨೪ನೇ ಅಧ್ಯಾಯ.

ನಾಡಿಚಕ್ರಾವರ್ತನವು.

೧೬. ಚಲನ ಕೋನವು, ವಿರಾವರ್ತನ ಕೋನವು— ಒಂದು ಚಂಡನ್ನು ತಿರುಗಿಸುವ ಕೋನದ ಕೋಡಿಗಳಿಗೂ ಉಪಾಧಿ ಅದು ಗೋಡೆಯ ಮೇಲೆ ಅಪ್ಪಳಿಸಿ ತಿರುಗುತ್ತದೆ. ಆ ತಿರುಗು ಕೋನಕ್ಕೆ ವಿರಾವರ್ತನವೆಂದು ಹೆಸರುಂಟು. ಇದಲ್ಲದೆ ಬೇರೆ ಯಾವುದಾದರೂ ಒಂದು ಕೋನ ಗೋಡೆಯ ಮೇಲೆ ಅಪ್ಪಳಿಸುತ್ತದೆಯೋ. ಆ ರೇಖೆಗೂ ಗೋಡೆಗೂ ನಡುವೆ ಉಂಟಾಗುವ ಕೋನಕ್ಕೆ ಚಲನ ಕೋನವೆಂದೆನ್ನುತ್ತಾರೆ. ಇದೇ ರೀತಿ ಚೆಂಡು ತಿರುಗುವಾಗಲೂ, ಗೋಡೆಗೂ ನಡುವೆ ಉಂಟಾಗುವ ಕೋನಕ್ಕೆ ವಿರಾವರ್ತನ ಕೋನವೆಂದೆನ್ನುತ್ತಾರೆ. ಈ ಸಂಬಂಧದಲ್ಲಿ [illegible] ಬದಿಗಳ ಮೇಲೆ ಅಪ್ಪಳಿಸಿ ವಿರಾವರ್ತನ ಹೊಂದುತ್ತದೆ. (ತಿರುಗುತ್ತದೆ.) ಎಂತಲೂ, ಅದರ ಚಲನ ವಿರಾವರ್ತನ ಕೋನಗಳು ಒಂದಕ್ಕೊಂದು ಸರಿಯಾಗಿರುತ್ತವೆಂತಲೂ ಮುಂದೆ ದರ್ಶನಾನುಶಾಸನಶಾಸ್ತ್ರದಲ್ಲಿ ತಿಳಿಯು

ಪದು. ಅದೇ ಮೇಳದ ನಾದವಾದರೂ ವಿಶಾ
ಲ್ತನ ಹೊಂದುತ್ತದ್ದು. ಅದರ ವಿಸ್ತರಣ ವಿಸ್ತಾರದ
ನ ಕೋನಗಳಾದರೂ ಹೊಂದಿಕೊಂಡು ಸರಿಯಾ
ಗುತ್ತವೆ. ಅಥವಾ ಸ್ವರದ ಶ್ರುತಿಗಳು ಗೋಚರಿ
ಸುತ್ತಿ ಅಷ್ಟು ಸಮೀಪದಲ್ಲಿ ಇರುವಂತೆ ಯೋಗ್ಯನಾದ
ಶ್ರುತಿಗಳಾದರೂ ಹೊಂದಿರುತ್ತವೆಂದು ಹೇಳಬಹುದು
ಈ ಹೊಂದಿರುವ ನಾದವೇ ಪ್ರತಿಧ್ವನಿ ಯು-

೧೭ ಇದರಿಂದ ಎಲ್ಲ ವಿಧದ ನಾದಕ್ಕೂ ಪ್ರತಿ
ಧ್ವನಿ ಯುಂಟೆಂಬುದು ಸ್ಪಷ್ಟವೇ. ಅದರೆ ನಾದವು
ಬಾದಾಗಿನಿಂದ ೧/೧೦ ಸೆಕೆಂಡಿನೊಳಗೆ ಪ್ರತಿಧ್ವನಿ
ಯು ನಮ್ಮ ಕಿವಿಗೆ ತಲುಪಿದರೆ, ಆ ಪ್ರತಿಧ್ವನಿ ಯು
ಬೇರೆಯಾಗಿ ನಮಗೆ ಕೇಳಿಸುವದಿಲ್ಲ, ಅಂದರೆ
ಅದು ಮೊದಲಿನ ನಾದದೊಳಗೆ ಕೂಡಿಹೋಗು
ತ್ತದೆ. ಅದರೆ ೧/೧೦ ಸೆಕೆಂಡಿನೊಳಗೆ ತಾನು
ಹೊರಟ ಸ್ಥಳಕ್ಕೆ ತಿರುಗಿ ಬರಬೇಕಾದರೆ, ಅದರ
ಅರ್ಧ ಕಾಲದಲ್ಲಿ ೧/೨೦ ಸೆಕೆಂಡಿನವರೆಗೆ ಮುಂ
ಕ್ಕೆ ಸಾಗಿ ಅಲ್ಲಿಂದ ತಿರುಗಬೇಕಾಗುತ್ತದೆಂಬುದು
ಸ್ಪಷ್ಟವೇ. ನಾದವು ಒಂದು ಸೆಕೆಂಡಿನೊ

೧೧೪) ಘೋಟು ದೂರ ಹೋಗುವಂತ್ರದೆಂದು ಹಿಂದೆ ಹೇಳಿರುತ್ತೇವೆ. ಅದರಿಂದ ಅದು ಪ್ರತಿ ಸೆಕೆಂಡಿನವರೆಗೆ ಹಾರಿದರೆ ೪೭ ಪ್ರ ಘೋಟು ದೂರ ಹೋಗುವದು. ಆಕಾರಣ ಪ್ರತಿ ಸೆಕೆಂಡಿನೊಳಗೆ ಹಿಂದಿರುಗಿ ಬಂದ ಪ್ರತಿಧ್ವನಿಯು ಬರೆ ೪೭ ಪ್ರ ಘೋಟುಗಳಿಂತ ಕಡಿಮೆ ಅಂತರದಿಂದ ಹಿಂದಿರುಗಿಬಂದ ಪ್ರತಿಧ್ವನಿಯು ಬೇರೆ ಯಾರಿಗೂ ಕೇಳುವದಿಲ್ಲವೆಂದು ತಿಳಿಯುತ್ತದೆ. ಇದಲ್ಲದೆ ನಾವು ಅಕ್ಷರಗಳನ್ನು ಎಷ್ಟು ಬೇಗ ಉಚ್ಚರಿಸಿದಾಗ್ಯೂ, ಒಂದೊಂದು ಅಕ್ಷರಕ್ಕೆ ನಿಶ್ಚಿತವಾಕ್ಷಕ್ಕೆ ಪ್ರತಿ ಸೆಕೆಂಡಿನಷ್ಟು ಕಾಲಬೇಕಾಗುವದೆಂದು ನಿಯಮವುಂಟು. ಅಂದರೆ ಒಂದು ಅಕ್ಷರವನ್ನು ಉಚ್ಚರಿಸಿದ ನಂತರ ಅದರ ನಾದವು ೧೧೨ ಘೋಟು ದೂರ ಹೋಗುವ ಪುಟ್ಟಿಗೂ-ಎರಡನೇ ಅಕ್ಷರವು ಉಚ್ಚರಿಸಲ್ಪಡುವದಿಲ್ಲಂಬ ತಾತ್ಪರ್ಯವು.

Correspondence.

ಚಿತ್ರ ವ್ಯವಹಾರವು.

ಮಹಾರಾಜ ರಾಜಶ್ರೀ ಜಿತರಾಜಮಾನ್ಯ
ರಾಜಶ್ರೀ ಕಂನಡ ಮತ ಪತ್ರಕರ್ತರಾಯವರಿಗೆ-
ಚಿಕ್ಕೋಡಿ ತಾಲೂಕ ದಲ್ಲಿ ಸಂಕೇಶ್ವರ ಗ್ರಾಮದ ಮಾ
ಸ್ತ್ರರ ಸಂಗಂದಪ್ಪಾ ಶಿವಲಿಂಗಪ್ಪಾ ಹೊಂಬಳ್ಳಿ ಇವನ ವಿ
ನಂತಿ ವಿಜ್ಞಾಪಿಸೆ. ತಾರೀಖು ೩೧ನೇ ಮಾಹೆ ಆಗಸ್ಟ
ಸನ ೧೮೩೧ ಇನೇ ದಿವಸಾ ಪ್ರಾತಃಕಾಲದ (೭) ಘಂ
ಟೆ ಸಿಗಿದು (೧೦) ಘಂಟೆವರೆಗೂ ಹುಕ್ಕೇರಿ ಮಾಹಾ
ಲ ಮ. ರಾ. ರಾವ ಸಾಹೇಬ ಭೀಮಾಜೀ ಗುರುರಾವ
ಚಿತವಣಿಸಿ ಫೌಜದಾರ ಇವರು ಈ ದಿವಸಾ ಈ
ಶಾಲೆಯಲ್ಲಿ ಬಂದು ಎಲ್ಲಾ ವರ್ಗದ ವಿದ್ಯಾರ್ಥಿ
ಗಳಂನು ಪರೀಕ್ಷಿಸಿ ಕಮಿಟಿದಾರ ವಿದ್ಯಮಾನ-
(೧) ರುಪಾಯದ ಮಿಠಾಯಿ ಹಂಚಿದರು. ಮ
ತ್ತು ಈ ಫೌಜದಾರ ಸಾಹೇಬರು ವಿದ್ಯಾಭಿವೃ
ಯಾಗುವದಕ್ಕೆ ಜನರಿಗೆ ಬಹಳ ಉಮೇದಿ ಬ
ಸ್ನ ಹುಟ್ಟಿಸುತ್ತಾರೆ. ಈ ಮೇಲೆ ಬರದ ನಾಲ್ಕು
ಪತ್ರಿಗಳಂನು ತಮ್ಮ ಸಾರನಿವಾದ ಪತ್ರಿಕ

ಕ್ಕೆ ರಚಿಸಿ ವಿಸ್ತಾರವಾಗಬೇಕೆಂದು ವಿನಯ-
ಪೂರ್ವಕ ನಂನ ಮನೋಭಯವಿರುವದಂನು
ಪೂರ್ಣಮಾಡಬೇಕೆಂದು ಬೇಡಿಕೊಳ್ಳುತ್ತೇನೆ.
ತಾರೀಖು ೫ ನೇ ಮಾಹೆ ನವೆಂಬರ ಸನ ೧೮೯೧
ಇನಿದಿ.

ಸು. ಶಿ. ಸ್ವೋ. ದ.

ರಾ॥ ರಾ॥ ವಂಶ ಪ. ಸ. ಬಾ.

ರಾಮಚಂದ್ರ ಗಂಗಾಧರ ರಾಯಬಾಗಿ
ಎಂಬವನ ವಿಷಯವಾಗಿ ಹಿಂದಿನ ಅಗಸ್ಟ ತಿಂಗಳ
ದ ಪತ್ರಿಕದಲ್ಲಿ ಓಂದೆರಡು ಮಾತುಗಳನ್ನು ಬರೆ-
ದು ತಿಳಿಸಿದ್ದೇನೆ; ಇವನಿಗೆ ಈಗ ಆಯುಷ್ಯ
ನ ತನ್ನ ಪ್ರಾಯಶ್ಚಿತ್ತವು ಸಾಗಲಿ. ಹಾಂಗೆ ಕೆಲವು
ವಾದರೂ ಶ್ರೀ ಸೂಪದಿ ಇದ್ದದ್ದನ್ನು ಕಂಡು ನಮ್ಮ-
ಲಿ ತನ್ನ ನೇಮಕ್ರಮಗಳಾದ ಹಿಂದೂ ಪ್ರಾಚೀಂತ
ನಲ್ಲಿರುವ ತಂಬಕೆ ಹೋಗುತ್ತಿದ್ದೇನೆ ಈ ಪತ್ರಿ-
ಕೆ ಸಿಮಾಹೋಂದು ತಿಂಗಳ ವಾಗ್ದಾನಬೇಕು.
ಪ್ರವಕರೂ ಅವನು ಈ ಊರ ಪತಿಯಾನ ನಡೆ

ತಡಿಯುವದಿಲ್ಲ, ನನ್ನನ್ನು ಕಲಕಲ್ಲಿಗೆ ನೇಮಿಸಿ
ಕೆಂಬ ಪದನಿಬ್ರ್ಯ, ಮೊ. ಡಿ. ಎ. ಇನಸ್ಪೆಕ್ಟರ ಜಿಲ್ಲಾ
ಸಂಗಾಪತಿ ಎಂಬುವರನಲ್ಲಿಗೆ ಒಂದೆರಡು ಜರ್ಗಳನ್ನು
ದರೂ, ಮಾಡಿದ್ದನೆಂಬ ಸುದ್ದಿಯನ್ನಾದರೂ, ನಾ
ನು ಆವನ್ನಾಗಿ ಕೇಳುತ್ತೇನೆ. ಬಹುತರವಾಗಿ ಈ ನ
ನ್ನ ಪಿಕ್ವಾರ ಪೋಲ್ಗಳ, ಒಂದಾವತಿಗೆ ಯಾವನೊಬ್ಬ
ನನ್ನ ಒಂದು ಶಿರ್ಗದಿಂದ ವಸ ಮಾಡಿದ ಬಗ್ಗೆ ನ
ಕ್ಕೆ ಆದನಿಗೆ ಆ ಕೃತ್ಯಕ್ಕೆ ಹೊರಕೀರ್ತಿಯೆಂಬುದು ಕೇ
ವಲ ಅನಂಭವದ ಮಾತು. (ಎಂದೆಂದಿಗೂ ಸೈಗಲು
ಕೃಷ್ಣಂ ಬಸ್ತಿಕ.)

ತಾ॥ ೨೨/೧೨/೩೧ } ಗೊಂ॥ ಶೈ. ಶ್ರೀಶೈಲ.
ಮುಕ್ಕಾಂ. ಗಲಗಲಿ } ಸಾಃ. ಗಲಗಲಿ.

ರಾ॥ ರಾ॥ ಬೆಳಗಾಂವಿ ಯಲ್ಲಿರುವ ಕೆಂಪ ಪ
ಸ್ವಾಲಾ ಅತ್ರಿಸದ ಏಡಿಲಗಲಿ ಮಿಸಿಸ್ತಾನಕ್ಕೆ.
ಮುದ್ರೆಬಿದ್ದಾಗ ತಾಯೂಕ ಕೈಗೆ ಕಸಿಬಾ ಹೊಂಬ
ಸಿ ಸ್ಥಾನದ ಮಾಸ್ತ್ರಿ ರಾತಿದಂಬಕೃಷ್ಣ ಬವಸ್ಥಾನವರ
ಕೃಷ್ಣನ ಬನ್ನಹ: ಎಂಬಂತೆ, ಕೆಲ್ಲಕೆ ಬಗದ ನಾಯ

ಹಾಗು ಮಹಾರಾಜರನ್ನು [illegible]
[illegible] ಹಾಗೂ [illegible]
[illegible]
[illegible] ಉಂಟು.

[illegible]
[illegible]
[illegible]
[illegible]
[illegible]
[illegible]
[illegible]
[illegible]
[illegible] ಅವರ [illegible]
[illegible] ನೋಡಿ [illegible]
[illegible]
[illegible] ರಾಜರ [illegible] ವಿಷಯಕ್ಕೆ [illegible]
ಕೊಟ್ಟರು. ಅದೇ [illegible]

ಗ್ರಾಮದೇವರಾಯ ವ ಮಹಿಮಾ ಶ್ರೇಷ್ಠ ಸ್ವಾಮಿಯ ವ ಪಲ್ಲ
ಷ್ಟಾ ಗಂಧಸುತ್ತಿ ಈ ಮೊದಲಾದವರಿಂದ ಪೂಜಾ-
ಮಾಂತ್ರಿಕಗಳನ್ನು ಗಾವ ಸಿಂಹೇಬಗಳವರು ಸಾಲಿಹುರಿಯಂ
ಸಂ ಚಿಕ್ಕಗಳ ನಿಮಿತ್ತ ಕೇಳಲು ಅದಕ್ಕವರು ಬ್ರಾ
ಹ್ಮಣರನ್ನು ಪ್ರಾಚ್ಯಗ್ರಂಥವನ್ನು ಕಟ್ಟಿಸಿರುವ ತಪತಿಜ್ಞ
ಬರೆದು ದಾಂಗು ಪಡೆದ ವರ್ಗಕ್ಕೆ ಕೊಟ್ಟಿರುವ ಬಾ
ಕಿ ಭೂಮಿ ಪರವಾರ್ಗದಿಂದ ಬೇರೆಯು ಬೆಳೆದು ಹೀ
ಗೆ ನೋಂತ ವ್ಯತ್ತಿಂದ ಸರ್ಕಾರ ಅಭಿಪ್ರಾಯವನ್ನು-
ಚಿತ್ತಕ್ಕೆ ತಂದು ಗಾವ ಸಾಹೇಬರು ದಸರಿಗೆ
ಅಲ್ಲದೆ ಆದಾಗ್ಯೂ ಆದರು ಪಿತ್ರಾರ್ಜಿತ ಪಕ್ಷ ಗಾರರ
ವರ್ಗಕ್ಕೆ ಹೊಂದಿರುವ ನಿಮಿತ್ತವಾಗಿ ಯಲ್ಲರೂ ಗಾವ
ಗ್ರಾಮ ಭೋಗಕ್ಕೆ ಹೊತ್ತು ಬಂದಿರಲು.

ಈ ಗ್ರಾಮದಲ್ಲಿ ಭೂಮಿ ಹೊಂದಿರುವ ಜನರಿ
ಗೆ ಹಣದ ನಿಮಿತ್ತ ಸಮಯ ಶೀಘ್ರ ಗ್ರಾಮಕ್ಕೆ
ಬೆಲ್ಲ ಗಾವ ಸಾಹುಕಾರರು ಮತ್ತು ಕಮಟಿದಾರ
ರು ಕ್ರಮಕ್ರಮೇಣ ಕೇರಿಗೆ ಉತ್ತಮ ಪ್ರಕಾರ ಸಾಲ
ಕೊಡುತ್ತಾ ಮಿರಾಸು ಹೊಂದಿದ ಜಮೀನುಗಳನ್ನು ತಮ್ಮ
ಸ್ವ ರುಹಾಯಕ್ಕೆ ಎರಡು ಜಾಗೆ ಸಂಪತ್ತನ್ನು

ಬಡನಿ ಕಬೂಲ ಮಾಡಿದ ಬಗ್ಗೆ ಯಾವತ್ತು ಜನರನ್ನಿ
ಕೀ ಮಾಡಿಸಿಕೊಂಡು ಮಾಮಲೇದಾರ ಸಾಹೇಬರವ
ರ ಕಡೆಗೆ ಕಳಿಸಿದ್ದಾರೆ. ಮುಂಬಯಾರ ಅನಿ ಬಂದ ನಂತರಗಾ
ವಸೂಲ ಮಾಡುವವರಿದ್ದಾರೆ. ಈ ಕಾರ್ಯದಲ್ಲಿ-
ರಾವಸಾಹೇಬ ಸುಭೇದಾರ ವರನಜರು ಯೋಗ್ಯ-
ಇದ್ದ ಕಾರಣ ಲೋಕ ಹಿತಕರ ರಾಜಿ ಯಶಸ್ವಿ ದಿವಸ ಕೊಂ
ಬೋಧರ ಗೊತ್ತಿರ ಸಾಹಾಯ ಮಾಡುತ್ತಾರೆ. ಅದರ
ಮುಂದೆ ಹೊಸ ಕಾಲಾಸ್ಪದ ಕಟ್ಟಿಸ್ಯಾಕೆ ಲನಿಸ್ಕಾರರು-
ಇವರಿಗೆ ಬರದು ಬರ ಬೇಕೆಂದು ಇಚ್ಛಿಸುತ್ತಿದೆ. ಯಾ
ಕೆಂದರೆ ಇವರು ಮಾಡಿಸುವ ಕಾಮಗಾರಿಯು ತಿವ್ರ
ಮಾಕ್ರೋಗನಿ ಪಡಲ್ಲದೆ ಉತ್ತಮ ರೀತಿಯಿಂದ ಮಾ
ಡಿಸುತ್ತಾರೆ ಇದಕ್ಕೆ ಉದಾಹರಣೆಯು:—

ಈ ತಾಲೂಕಿನಲ್ಲಿ ನಿದರ ರಾವಸಾಹೇಬ
ಮಾಮಲೇದಾರವರು ಮಾಡಿಸಿದ ಕಾರಖಾನೆಗಳು ಎ-
ಷ್ಟೋ ಉಂಟು. ಅವುಗಳಲ್ಲಿ ಮುಖ್ಯವಾದವುಗಳು ಯಾ
ವವೆಂದರೆ- ಕನಿಬಾ ನಾಲತ್ವಾಡ ಎಂಬ ಗ್ರಾಮದಲ್ಲಿ-
ಹರನ್ನಿರ್ಗದ ಜನರ ಗೋನಿರವಾನಿ ಕಟ್ಟಿಸಿದ ಧರ್ಮಶಾ
ಲಾಂಗರ(ಹವು) ಹಾಂಗು ಮೆಹ್ರಾಜೆ ತುಂಬದಿಂಬಲಿಂಬ ಊರ-

ಭಾಷೆಯು ಬಾ ಎರಡು ಕಾಮಗಾರಿಯು ಶ್ರೇರದಿಂ
ದ ಉತ್ತಮ ಪ್ರಕಾರ ಪೂರ್ಣ ಮಾಡಿಸಿದ್ದಾರೆ. ಇವೆ
ಗಳಿಂತ್ರೆ ಈ ನಮ್ಮ ಕಾಲಾಗ್ರಹವಂನು ತಿಳಿದಿಂದ-
ಸ್ಪಷ್ಟಪಡಿಸಿ ಕೀರ್ತಿಯಂನು ಪಡೆದುಕೊಳ್ಳುವ ಕೆಂಡೂ ಕೊ-
ಳುತ್ತೇನೆ. ಅದರಿಂದ ಇವರ ನಾಮಾಂಕಿತವು ಈ ಯಾ-
ವತ್ತು ಮಾತಲಬವಂನು ತಮ್ಮ ಪಿಮಾಟಾರ ನೆತ್ತಿಲೆ
ಯಲ್ಲಿ ಪ್ರಸಿದ್ಧಿಸ ಬೇಕೆಂಬೋ ಬಾಗಾದಿ ಯುಳ್ಳವನಾ-
ಗಿ ಈ ಬಿನ್ನಹ ಪತ್ರ ಬರಕೊಂಡು ಇದ್ದೇನೆ. ಕಾವಂದ
ರವರು ಬಡವನ ಪ್ರಾರ್ಥನೆ ಚಿತ್ತಕ್ಕೆ ತಂದು ಇದರಲ್ಲಿ
ಅಲ್ಪಮತಿ ಇಂದ ಇದ್ದಂಥಾ ಅಶುದ್ಧಗಳಂನು ದುರ-
ಸ್ತಿ ಮಾಡಿ ಛಾಪಿಸ ಬೇಕೆಂದು ವಿನಯಪೂರ್ವಕ
ಬೇಡಿಕೊಳ್ಳುತ್ತೇನೆ. ಇಂತಿ ವಿಜ್ಞಾಪನಾ:

ಮುಕ್ಕಾಂ ತುಂಬಸಿ
ತಾ|| ೧೦|೬|೭೧

ಬೆಂ. ಕೃ. ಪಂತೋಜಿ.

(೧೬೫)

A. Tale.

"ಸಂಸಾರ ಮಾಡುವ ಜ್ಞಾನತ ಪದ ವಿಷಯಕ್ಕೆ ತಂದೆಯಿಂದ ಮಕ್ಕಳಿಗೆ ಉಪದೇಶವಾದಬಗ್ಗೆ"

— ದಂತಕಥೆ —

ಒಂದು ಪಟ್ಟಣದಲ್ಲಿ ರಾಜಪ್ಪನೆಂಬ ಒಬ್ಬ ಶೆಟ್ಟಿ ಇರುತ್ತಿದ್ದನು. ಅವನಿಗೆ ಬಸವನೂ, ಶಿವಲಿಂಗನು ಎಂಬ ಇಬ್ಬರು ಮಕ್ಕಳಿದ್ದರು. ಶೆಟ್ಟಿಯು ಬಹಳ ಸಾವಕಾರನೂ, ಉದ್ದಿಮೆ ವ್ಯಾಪಾರದ ವಿಷಯಕ್ಕೆ ಬಹು ಜ್ಞಾನನೂ, ಇದ್ದನು; ಸ್ವಲ್ಪ ಕಾಲದ ನಂತರ ಆ ಶೆಟ್ಟಿಯು ಮೈಯಲ್ಲಿ ಯಾವದೋ ಒಂದು ರೋಗ ಹುಟ್ಟಿ ಕೇವಲ ಜ್ವರದಿಂದ ಅಶಕ್ತನಾದನು, ಹಾಗು ತಾನು ಈ ರೋಗದಿಂದ ಇನ್ನು ಉಳಿಯುವದಿಲ್ಲೆಂದು ತಿಳಿದು, ತನ್ನ ಇಬ್ಬರು ಮಕ್ಕಳನ್ನು ಹತ್ತರ ಕರೆದು ಅವರಿಗೆ ಕೆಲವು ಉಪದೇಶಗಳನ್ನು ಹೇಳಿದ್ದೇನಂದರೆ- ನಾನು ಉಳಿಯುವದಿಲ್ಲ ಆದದರಿಂದ ನನ್ನ ಹತ್ತಿದ್ದ ಸಂಪತ್ತಿನ (ದ್ರವ್ಯ). ನನ್ನ ಇಬ್ಬರಿಗಾ-

ವನಾಗಿ ಹುಟ್ಟಿ ಕೊಡುತ್ತೇನೆ. ಮತ್ತು, ನಾನು ಹೇಳಿದಂತೆ ಯೇ ನೀವು ನಿಮ್ಮ ನಿಮ್ಮ ಸಂಸಾರವನ್ನ- ಸಾಗಿಸುತ್ತ ಹೋಗಿರಿ. ನೀವು ಪ್ರತಿ ಒಂದು ಊರಲ್ಲಿ ಒಂದೊಂದು ಮನೆ ಕಟ್ಟುತ್ತ ಹೋಗಿರಿ. ಹಾಗು ಯಾರಿಗಾದರು ಕೊಟ್ಟಿರುವ ಸಾಲವನ್ನ ಮರಳಿ ಕೇಳಬೇಡಿರಿ. ಹಾಗು, ಮತ್ತೆ ಮಾಡಿಕೊಂಡು ಮಲಗಿಕೊಳ್ಳಿರಿ. ಮತ್ತು ತಮ್ಮಗೆ ಮಾಡಿಕೊಂಡಿದ್ದಾರಿ; ಎಂದು ಈ ತ್ರಿಕಾಲ ಮುಖ್ಯವಾದ ನಾಲ್ಕು ನಿಜು ಈಶ್ವರದ ಮಾತುಗಳನ್ನ ಹೇಳಿದನಂತರ ಪೈಪ ದಿವನಿದೊಳ್ಳಿಗೆ ರಾಚಪ್ಪಸೆಟ್ಟಿಯು ಮೃತ ಹೊಂದಿದನು. ಆಗಲವನ ಮಕ್ಕಳು ಬಿಟ್ಟಿರಲ್ಲಿ ಹಿರಿಯ ಮಗನಾದ ಬಸವನು, ವಿಧ್ಯಾದಕ್ಷನೂ, ಯುಕ್ತಿ ಇಲ್ಲದವನೂ, ಹಾಗು ಅವಿಚಾರಿಯೂ, ಆಗಿದ್ದನು. ಮತ್ತು ಎರಡನೇ (ಚಿಕ್ಕ) ಮಗನಾದ ಶಿವಲಿಂಗನು ಕೇವಲ ಜಾಣನೂ, ಯುಕ್ತಿವಂತನೂ, ಹಾಗು, ವಿಚಾರಶಕ್ತಿಯುಳ್ಳವನೂ, ಆಗಿದ್ದನು. ಹೀಗಿರಲು ಹಿರಿಯ ಮಗನು ತನ್ನ ತಂದೆಯು ಸಾಯುವಾಗ್ಯೆ ಹೇಳಿದನ್ನ. ಪ್ರತಿ ಒಂದು ಊರಲ್ಲಿ ಲಕ್ಷಾವಧಿ ರೂಪಾಯಿಗ

ಳು ತನಗೆ ವೈರ ಮಾಡಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿ-
ಸಲಾರಂಭಿಸಿದನು; ಹಾಗೆ ಯಾರಾದರು ತನ್ನ ಹತ್ರ
ಕೆ ಬೇಕಾದಷ್ಟು ಹಾಲವನ್ನು ಬೇಡಲಿಕ್ಕೆ ಬಂದಾಗ್ಯೂ ಅವ
ನಿಗೆ ಕೊಟ್ಟು, ಮತ್ತೆ ಅವನನ್ನು ಕೊಟ್ಟ ಹಾಲ ಕೇಳುತ್ತಿ
ದ್ದಿಲ್ಲ, ಇದರ ಅರ್ಥವೇನು ಅವನಿಗೆ ಕೊಟ್ಟ ಹಾಲವನ್ನು ಕೇ
ಳ ಬಾರದೆಂದು ತಿಳಿದಿತ್ತು. ಹಾಗೂ, ಎಷ್ಟೋ ಜನ
ವೈದ್ಯ ಮಾಡಿಗಾಡಿ [illegible] ಮುಂತಾದ ಬಹುತ್ರಯ ವೃಕ್ಷ
ಮಿತ್ರ [illegible] ಗಳನ್ನು, ದೊಡ್ಡ ಕೊ
ಟ್ಟವದಕ್ಕಾಗಿ [illegible] ಬಿಟ್ಟಿಗಳನ್ನು, ಮಾಗಿ
ಸಿಕೊಂಡು ಮಿತ್ರರಿಗೆ ಮಾಡಿಕೊಳ್ಳುತ್ತಾ ಹೋದನು,
ಇದರ ಅರ್ಥವೇನು ಅವನು ಮಿತ್ರರಿಗೆ ಮಾಡಿಕೊಳ್ಳಬೇ
ಕೆಂದು ತಿಳಿದಿದ್ದನು. ಮತ್ತು [illegible] ದಕ್ಕಾ
ನ್ನಗಳನ್ನು, ಮತ್ತು [illegible] ಗಳನ್ನು, ಕ
ತ್ತಿನಾರ [illegible] ಮಾಡಿ [illegible]
ತ್ತಿದ್ದನು, ಇದರ ಅರ್ಥವೇನು ಅವನು [illegible] ಮಾಡಿಕೊಂ
ಡು ಬಂದಿರಬೇಕೆಂದು ತಿಳಿದಿದ್ದನು. ಈ ಮೇಲಿನ
[illegible] (ಸೂಕ್ತ
[illegible]) ಎಂಬಗಾದೆ-

೧೨. ಶಿಕ್ಷೆಗೊಳಪಟ್ಟ ದಿವಾನಿಗಳ್ಳು ಮೇಲೆ ಅವರ ಸ್ವತ್ರಂತ್ರ್ಯದ
ಗ್ರಾಹಕ್ಕೆ ಹರಿದು, ಕೆಲವರು ದರಿದ್ರರಾದರು; ಈ ಪ್ರಕಾ
ರ ಕಲಿಯುವವರ ಸ್ಥಿತಿಯಾಯಿತು.

(ಮುಂದಕ್ಕೆ ಹೋಗುವದು.

Standards for Vernacular Schools in the S. Division.

ದಕ್ಷಿಣ ಭಾಗದೊಳಗಿನ ದೇಶ ಭಾಷೆಯ ಸಾಲೆಗಳ ಬಗ್ಗೆ ಸ್ಟ್ಯಾಂಡರ್ಡವು-

೧ ನೇ ಸ್ಟ್ಯಾಂಡರ್ಡವು.

ಒಟ್ಟಿಗೆ ಗುಣ

೫೦ ೧ನೇ ನಿಯಮ— ಕನ್ನಡ ಅಂಕೆ ಮೊಗ್ಗೆ ವ ಮುಂತಾದವು
(ಅಂಕ ಅಪಿ ೧೪ನೇ ಮಗ್ಗದವರೆಗೆ)

೫೦ ೨ ನೇ ನಿಯಮ— ಕನ್ನಡ ಮೂಲಾಕ್ಷರಗಳು ಒತ್ತಕ್ಷರಗಳು
ನಿಶ್ಚಿತ. ಹಲಗೆಯ ಮೇಲೆ ಅವು
ಗಳನ್ನೇ ಬರೆದು ತೋರಿಸಬೇಕು.

[illegible]

೨ ನೇ ಸ್ಕಂಧವು.

೫೦. (೧೧) ೧ನೇ ಪ್ರಶ್ನೆ— ೧ನೇ ಸ್ಕಂಧದ [illegible]
[illegible], ೧೦,೧೧ ಶ್ಲೋಕಗಳ
[illegible] ಗಳನ್ನು [illegible] ಬೇಕು.
ಹಾಗು [illegible] ಗಳನ್ನು ಓ-
ದಿ ಹೇಳಬೇಕು. ಮೂರು ಮಾತ್ರ
ಅಂಕಿಗಳುಳ್ಳ ಅಕ್ಷರಗಳನ್ನು [illegible],
[illegible], ಮೂರು ಅಂಕಿಗ-
ಳುಳ್ಳ ಅಕ್ಷರಗಳಿಗೆ ೩೦ [illegible]
[illegible] ಗಳಿಂದ [illegible], [illegible]
[illegible], [illegible]

೫೦ (೧೨) ೨ನೇ ಪ್ರಶ್ನೆ— ಮೊದಲನೇ, ಎರಡನೇ ಅಂಕ
ಗಳನ್ನು ಓದಿ ಅರ್ಥ ಹೇಳಬೇಕು.
[illegible] ಮೊದಲನೇ [illegible]
[illegible] ಗಳಿಂದ
ರೆ ಆರಂಭದ ನಾಲ್ಕು ಪಾದಗಳು
ಅರ್ಥ ವಿವರವಾಗಿ ಬರೆಯಬೇಕು.
ಆ ನಾಲ್ಕು ಪಾದಗಳಾಗಲಿ, [illegible]

[illegible]

[illegible]

[illegible] (೧) [illegible] — [illegible]

[illegible]

[illegible]

[illegible]

[illegible]

[illegible] (೨) [illegible] — [illegible]

[illegible]

[illegible]

[illegible]

[illegible]

[illegible]

[illegible]

[illegible] (೧) [illegible] — [illegible]

[illegible]

[illegible]

[illegible]

ಆಯುವಮೂಕ, ಅಳತೆ ಮುಂತಾ
ದವುಗಳ (ದಾಹಾಂತರ) ಚಿಹ್ನ ಸಂಬಂ
ಧವಾದ ಕೋಷ್ಟಕಗಳು. ಕುಲಭೂಪ
ದ ಬಾಯಿರೇಕ್ಷಗಳು.

ನಂ (೧೧) ೨ನೇ ನಿದರ್ಶ— ಮೂರನೆ ಬುಕ್ಕು ಯಾವತ್ತು ಓದಿ,
ಶಬ್ದಾರ್ಥಗಳನ್ನೂ, ಭಾವಾರ್ಥವನ್ನೂ
ಹೇಳಬೇಕು. ನಾಮ, ಸರ್ವನಾಮ,
ಮುಂತಾದವುಗಳನ್ನು ಗುರ್ತಿಸಬೇ
ಕು. ಕನ್ನಡ ಕವಿತೆಯ ಮೊದಲನೇ
ಬುಕ್ಕಿನೊಳಗಿನ [illegible] ಪದ್ಯಗಳಿಂ
ದಶಿ ೧ ೫ ನೇ ಪಾಠದಿಂದ ೧೦ ನೇ ಪಾ
ಠದವರೆಗೆ ಅರ್ಥಸಹಿತವಾಗಿ ಬರೆ
ಬೇಕು. ಅವುಗಳ ಅರ್ಥ [illegible]
ಪಾಠ ಬರೆಬೇಕು.

ನಂ (೧೨) ೩ನೇ ನಿದರ್ಶ— ಓದಿದ ಬುಕ್ಕಿನೊಳಗಿನ ಎರಡು
ಮೂರು ವಾಕ್ಯಗಳನ್ನು ನೋಡಿ ಅಕ್ಷ
ರಗಳಿಂದ ಶುದ್ಧವಾಗಿ ಬರೆಯಬೇಕು.
ಸ್ವ ಬರೆಯದ ಬುಕ್ಕ ತೋರಿಸಬೇಕು.

(ಮಿಶ್ರಬಾಷ್ಪ)

೫೦ (೩) ೪ನೇ ಸಿದರ — ಭೂಗೋಳಶಾಸ್ತ್ರಜ್ಞರನ್ನು,
ಮುಂಬರುವ ಹವಾಮಾನವನ್ನು
ಯನ್ನು ತಿಳಿಯಬೇಕು. ಕ್ರಾಂತಿಗ
ಳನ್ನು, ಜನಗಣತಿಗಳನ್ನು, ಕಾಲ
ಗಳನ್ನು, ವಿಜ್ಞಾನಗಳನ್ನು,
ವಿಷಯಗಳನ್ನು, ಬಂದರಗಳನ್ನು
ಸಂಸ್ಥಾನಗಳನ್ನು ನಕ್ಷೆಯ ಮೇ
ಲಿಂದ ತೋರಿಸಬೇಕು.

೪ನೇ ಸ್ವಾತಂತ್ರ್ಯ.

(ಈ ಸ್ವಾತಂತ್ರ್ಯವನ್ನು ಕಲಿತ ವಿದ್ಯಾರ್ಥಿಗಳು ಇಂ
ಗ್ಲಿಷ್ ಕಲಿಯುವದಕ್ಕೆ ಯೋಗ್ಯರು.)

೧೧ (೧೦) ೧ನೇದರ — ಮೂರನೇ ಸ್ವಾತಂತ್ರ್ಯದಂತೆ ಕಲ
ತದ್ದಕ್ಕೆ ಹೊರತು, ಇಂಗ್ಲಿಷ್ ಶಾ
ಸ್ತ್ರಗಳನ್ನು, ವ್ಯವಹಾರಿಕ ಶಿ
ಕ್ಷಣವನ್ನು, ಕ್ರೀಡೆ
ಗಳ ಮೂಲಕ ಶಿಕ್ಷಣಗಳನ್ನು
ಬಾಬುತಿಗಳನ್ನು ಕಲಿಯಬೇ

೧೦೨ (೧೧) ಎರಡನೇ ವರ್ಷ – ನಾಲ್ಕನೇ ಬುಕ್ಕಿಸಂಪೂರ್ಣ

ಶ್ಲೋಕ, ಶಬ್ದಾರ್ಥಗಳನ್ನು, ಭಾ
ವಾರ್ಥಗಳನ್ನು, ಹೇಳಬೇಕು.
ಗ್ರಂಥದ ಮೇಲಿಂದ ಸಿದ್ಧಾಂತಗಳನ್ನಾ
-ಗಿ ವ್ಯಾಕರಣ ಮಾಡಬೇಕು. ಇನ್ನೇ
ಸ್ರೋಂತ ಪರ್ದಂತಿ ವ್ಯಾಕರಣ ಕಲಿತ-
ದ್ದನ್ನೇ, ಪಿನ್ನ ವ್ಯಾಕರಣ ಪಂತ್ರಿಕೆ-
ಭಾಷೆಗಳಿಂದ ನಡಿಸಬೇಕು.

ವ್ಯಾಕರಣ – ಪಿನ್ನ ವ್ಯಾಕರಣದ್ಯಂ ಪಾಠಗಳ
ಕಲೆ—

ಕವಿತಾ – ಕಂಠಪಾಠ ಕವಿತೆಯ ಮೊದಲನೇ-
ಬುಕ್ಕಿ ನೋಡಿಗೆ ೧೧ನೇ ಪಾಠದಿಂ
ದ ೨೦ನೇ ಪಾಠದವರೆಗೆ, ಅಂದರೆ-
ಕಲ್ಪಿತಚಿತ್ರಗಳು – ಇವುಗಳಲ್ಲಿ
ಬಾಯಿಪಾಠ ಕಲಿಯಬೇಕು. ಶಿಕ್ಷ
ಕರು ಕಂದಂಥ ಚಿತ್ರಗಳ ಅಕ್ಷರ-
ಗಳನ್ನು ಬರಹದ ಚಿತ್ರಗಳನ್ನು ತಿ
ದಬೇಕು.

೧೦೭ (೯) ೭ನೇ ಚಿತ್ರ— ಓಡುವ ಬುಕ್ಕಿ ಸೊಳ್ಳೆಗಳನ್ನು

ಪ್ರಿಗಳನ್ನು ಮಧ್ಯಮ ತರದವು

ರಗಳಿಂದ ಕೂಡ್ದವಾಗಿ ಬೆಳೆಯುತ್ತೇ

ವೆ. ಸಿಂಗಾ ಪ್ರತ್ತೆಗಳಿಂದ ಬೆಳೆದ

ಕ್ರೈ ಬರಹದ ಬುಕ್ಕನ್ನು ತೋರಿ-

ಸಿ ಚೇಲೆ. (ಮೊಸ್ಪ್ರಯ ಬುಕ್ಕು)

೫೦ (೪) ೪ನೇ ಚಿತ್ರ— (ಅ) ಕನಾರ್ಟಕದ ನಾತಿಕಾರಿ-

(ಬ) ಮೂರನೇ ಸ್ಥಾಂತರದಂತೆ

ಕಲತದ್ದರ ಹೊರ್ಮಟ್ಟಿಂದು

ಸ್ಥಾನದನರ್ಕ್ಷ, ಮೂರನೇ

ಸ್ಥಾಂತರದಲ್ಲಿ ಹೇಳಿದ ಮಾ

ಹಿತಿ ಸಿಕ್ಕಿತವಾಗಿ, ಕೊಳ್ಳೆಗಳ

ಉಗಮ, ದಬ್ಬಣ, ಸೂಗ

ನೆರೆ ನಾಮ ಗಳ ಸಿರಿಮೆ ಮು

ಖ್ಯಾಂಶಗಳನ್ನು ಸಾಕ್ಷರವೆ

ತ್ರ ತೋರಿಸಿ ಚೇಲೆ.

೫. ನೇ ಸ್ಥಾಂತರವು—

೧೦೦ (೮) ೧ನೇ ಚಿತ್ರ— ಮೇಲಿನ ಸ್ಥಾಂತರದಂತೆ.

ಕಲಿತಪ್ಪರ ಶ್ಲೋಕಗಳ, ಪದ್ಯಾಂತ್ರ, ಪಂಚ
ತಂತ್ರ, ಸರಳ ವ್ಯಾಜ. ಬಾಯಿಪಾಠ
ಗಳು—

೧೦೦(೧೧) ೨ ನೇ ವರ್ಗ— ಐದನೇ ಬುಕ್ಕಿನ ಸಂಪೂರ್ಣ, ಐದ
ರಲ್ಲಿಯ ಪದ್ಯಗಳವರೆಗೆ, ಶಬ್ದಾರ್ಥ,
ಭಾವಾರ್ಥಗಳನ್ನು ಹೇಳಬೇಕು. ಗ್ರಂ
ಥದ ಮೇಲಿಂದ ಬನ್ನಾನಿ ವ್ಯಾಕರ-
ಣ ಮಾಡಬೇಕು. ಕ್ರಿಯಾಪದದ
ವರೆಗೆ ವ್ಯಾಕರಣ (ಕಿಂಚಿತ್ ವ್ಯಾಕರಣ
ದ ಸೂತ್ರಗಳವರೆಗೆ) ಸಹಿತ ಧಾ-
ತುಗಳ ವ್ಯುತ್ಪತ್ತಿ. ಪರೀಕ್ಷಾರ್ಥಂ
ದಂಥ ಕ್ಲಿಷ್ಟ ಪದದ ಚಿತ್ರಗಳನ್ನು ಓ
ದಬೇಕು. ಸಪ್ತಮ ಸಮಿತಿಯ ಪರ-
ದೇಶೀ ಬುಕ್ಕಿನ ವನೋಪಲನೇ ಭಾಗಸಂ
ಪೂರ್ಣ (ಶ್ರೀ. ಪದ್ಯಗಳು.) ಅ-
ರ್ಥವಿಶಿಷ್ಟವಾಕ್ಯ, ಶಬ್ದಗಳ ಅರ್ಥ—
ಬಾಯಿಪಾಠ ಬರಬೇಕು. ಇಲ್ಲವೇ
ಇಷ್ಟೇ ನಾಯಕನ ಪದ್ಯಗಳು,

ಬಿಸಿಸ ಮಿಶ್ರಣಾವಸ್ತುಗಳು, ಇವು
ಗಳಿಗೆ ಸರಿಯಾದ ಬೇರೆ ಯಾವದಾ
ದರು ಗ್ರಂಥವಸ್ತುಗಳ ಕಲಿಯಬೇಕು.

೧೦೦ (೮) ಪ್ರಶ್ನೇನಿದಕ — ಓದಿದ ಬುಕ್ಕಿನಸ್ವಾಗನಿನ ಅಕ್ಷರ
ಗಳನ್ನು ಶುದ್ಧವಾಗಿ ಬರೆಯಬೇಕು.
ಕ್ರಿಬಕಕ್ಕದಿಂದ ತುಂಬಿದ ಬುಕ್ಕನ್ನು
[illegible]ಸಬೇಕು.

೫೦ (೬) ನೇನಿದಕ — (ಅ) ಕುಂದುಸ್ವ್ಥನದ ಇತ್ಯಾದಿ ಸಂ
ಪೂರ್ಣ, ಮಾರಿನ ಸಾಹೇಬನ
ಬಾಗಲು, ಅಂಥಾದಿ ಸುತ್ತ್ರಾಂಗಾ
ಗಳು.

(ಬ) ಮೇಲಿನ ಸ್ಟ್ಯಾಂಡರ್ಡಗಳಂತೆ ಕಲಿತ
ದ್ರಾಯಿಂಗ್, ಎಸಿಲ್ಲು, ಯಾ
ಕೋಲಿ ಬಂತ ಕಸ್ತನಕ್ಕೆ, ಇನೇ
ಕನೇ ಸ್ಟ್ಯಾಂಡರ್ಡಗಳ್ಳಿ ಹಿನಿ
ನಿದ ಮಾಡಿದ್ದನ್ನು ಸರಿಯಾಗಿ
ಬರಬೇಕು:—

೬ ನೇ ಸ್ಟ್ಯಾಂಡರ್ಡು:—

(ನಿರಕ್ಷರಿಯು [illegible] ಜನರು [illegible] ಎರಡನೆಯ [illegible] [illegible])

೪೦ (೮) [illegible] — (೧) ಅಂಕಗಣಿತ ಸಂಪೂರ್ಣ

೩೦ (೨) ಸಿದ್ಧಾಂತದ ಮೊದಲನೆಯ ಪುಸ್ತಕ.

೩೦ (೩) [illegible] ಪರಿಚ್ಛೇದಗಳು—

೧೦೦ (೨) [illegible] — (೧) ಆರನೆಯ ಪುಸ್ತಕ ಸಂಪೂರ್ಣ, ಓದಿದ ವಿಷಯದ ಜ್ಞಾನವಿರಬೇಕು.

ವ್ಯಾಕರಣ — ಸಣ್ಣ ವ್ಯಾಕರಣ ಸಂಪೂರ್ಣ, (೬೦ ಪುಟ)

ಕವಿತಾ — ಕನ್ನಡ ಕವಿತೆಯು ಎರಡನೆಯ ಪುಸ್ತಕ ಎರಡನೆಯ ಭಾಗ ಸಂಪೂರ್ಣವು (೬೦ ಪದ್ಯ) ಅರ್ಥಸಹಿತವಾಗಿ ಬರಬೇಕು; [illegible], ಅಥವಾ [illegible]

ಅಕ್ಷರ ಬಾಯಿಪಾಠವಾಗಿ ಕಲಿಯಬೇಕು.

೫೦ (ಬ) ಕಡೇಪಕ್ಷ ನಾಟಕದ ಗ್ರಂಥವನ್ನಾದರೂ ಓದಬೇಕು. (ಬಹುಶಃ ಅಕ್ಷರ ಗ್ರಂಥದಿಂದ ಪರೀಕ್ಷಕರು ಕೇಳಬಹುದು. ಪ್ರಶ್ನೆ ಹಾಕಬಹುದು.)

೧೦೦ (ಆ) ೩ನೇ ಇಯತ್ತೆ— ಪರೀಕ್ಷಕರು ಹೇಳುವ ಗ್ರಂಥ ಸಂಗತಿ ಯನ್ನಾಗಲಿ, ಅಭ್ಯಾಸವನ್ನಾಗಲಿ, ಚಿತ್ರವನ್ನಾಗಲಿ, ಕಥೆಯನ್ನಾಗಲಿ ಚೆನ್ನಾಗಿ ಬರೆಯಬೇಕು—

೬೫(?) (ಆ) ೪ನೇ ಇಯತ್ತೆ— (ಅ) ಹಿಂದುಸ್ಥಾನದ ಇತಿಹಾಸದಿಂದ ಶಿವಾಜಿ, ರಾಣಾಪ್ರತಾಪ ಸಿಂಹ ಮುಂತಾದವರ. ಕನ್ನಡ ದೇಶದ ಚರಿತ್ರೆಯ ಇತಿಹಾಸ.

೬೫(?) (ಬ) ಮೈಸೂರಿನ ಸಂಸ್ಥಾನದ [illegible] ತ್ತೆ ಕಲಿತದ್ದರ ಬಗ್ಗೆ, [illegible] [illegible] [illegible]

ವಿಷುವದ್ವೃತ್ತ, ಧ್ರುವಗಳು-
ಅಯನವೃತ್ತಗಳು, ಅಕ್ಷ
ವೃತ್ತಗಳು, ಯಾಮ್ಯೋತ್ತ
ರವೃತ್ತಗಳು; ವಿಷುವತ್ತು
ಗಳು, ಹಗಲು, ರಾತ್ರಿಗಳು,
ಋತುಗಳು, ಸಮುದ್ರದ
ಏರಿಳಿವುಗಳು, ಹವೆ, ಮ
ಳೆ, ಇಬ್ಬನಿ ಮುಂತಾದವು
ಗಳಿಗೆ ನಿಶ್ಚಿತವಾದ. ಕ್ಷೇಮ
ಸ್ಥಾನದ ಸಹಾಯದಲ್ಲಿ ಪರಿ
ಕ್ಷೇತ್ರದಲ್ಲಿ ದಿಂತನಿಂ ಸ್ಥಾನ,
ಇಲಾಖೆ, ಪರಿಣತ, ಹೊ
ರೆ, ವಿಷ್ಣುಗನಿಶ್ಚಿತವಾದ-
ತಿಳಿಯಬೇಕು.

೫ ನೇ, ೬ ನೇ ಸ್ಟ್ಯಾಂಡರ್ಡುಗಳಲ್ಲಿಗಿನ ಪಾ
ಠ್ಯದ ಮಿಶ್ರಿತಗಳ ಅರ್ಥಕ್ಕೆ ಬದಲಾಗಿ ಇನ್ನಷ್ಟು
ಹೊಸ ಕಿಶಗಳ ಖಾಸಿಂಸ್ಕೃತ ಅಗ್ರಸಾ ಹಿಂದಕ್ಕೆ ತಂತ್ರ
ದಿಂದ ಭೂಗೋಳವನ್ನು ಅವುಗಳಿಗೆ ತಿಳಿಯಿಸಬೇಕು

ಸಿಬಹುದು.—

Notice

ನೋಟೀಸು—

ಧಾರವಾಡ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ ತಿಳಿಸುವದೇನಂದರೆ— ಬರುವ ದಿಸೆಂಬರ ತಿಂಗಳಲ್ಲಿ ಖಾನೇಸುಮಾರಿ ಆಗುವದದೆ. ಆದಕಾರಣ ನೀವೆಲ್ಲರೂ ನಿಂಮ ನಿಂಮ ತಾಲೂಕಿನ ಮಾಮಲೇದಾರರು ನಿಮಗೆ ಹುಕುಮು ಮಾಡುವಂತೆ ನಡಕೊಳ್ಳಬೇಕು. ಮತ್ತು ಅವರಿಗೆ ನಿಂಮಿಂದಾದಷ್ಟು ಆಶ್ರಯಿಸಿದಲ್ಲಿ ನಿಮ್ಮ ಸಹಾಯ ಮಾಡಬೇಕು. ಈ ಖಾನೇಸುಮಾರಿ ಬಹಳ ಮಾಡಿ ತಾರೀಖು ೧೩ನೇ ದಿಸೆಂಬರದಿಂದ ತಾರೀಖು ೧೭ ಅಥವಾ ೧೮ನೇ ದಿಸೆಂಬರ ತನಕಾ (೫) ದಿವಸದ ತನಕಾ ಆಗುವದು.

(Signed) C. B. Dharwar

ಡಿಪೋಟಿ ಎಜ್ಯುಕೇಶನಲ್ ಇ
ನಸ್ಪೆಕ್ಟರ ಜಿಲ್ಹಾ ಧಾರವಾಡ.

ಪ್ರಕಟನೆಯು-

"ಸವಾಯಿ ಮಾಧವರಾಯನ ನಾಟಕವು"

"ನಡತೆನವು"

ಇವೆರಡೂ ಪುಸ್ತಕಗಳನ್ನು ನಾವು ಮಹಾರಾಷ್ಟ್ರ ಭಾಷೆಯಲ್ಲಿ ರಚಿಸಿ ಬೆಳಗಾಂವಿಯ ಸಮಾಚಾರ ಛಾಪಖಾನೆಯಲ್ಲಿ ಸುಂದರವಾದ ಮೊಳೆಗಳಿಂದ ಮುದ್ರಿಸಿ ಮಾರಾಟಕ್ಕೆ ಸಿದ್ಧಪಡಿಸಿರುತ್ತೇವೆ.

ನಾಟಕದಲ್ಲಿ — ಪೇಶವೆ ಸವಾಯಿ ಮಾಧವರಾವ ಭಾಗ್ಯವಂತರ ಬಾಲಪಣದಿಂದ ಹೆಚ್ಚು ಯುವತಿಯರ ಸಂಗದ ಪ್ರಾಕ್ರಮದಿಂದ ಮರಣ ಹೊಂದುವ ವಿಚಾರಗಳು, ಶಕ್ತಿಯೂ, ಕ್ರೀಡಾದಿಗಳು, ಬಾಲಮಿತ್ರನ ಮೋಹ ಮಾಡಿದ್ದು, ನಾಚಿಕೆ ಉತ್ಸಾಹ, ಶೌರ್ಯ ಮುಂತಾದವುಗಳೆಲ್ಲ ಹೇಳಿದ ಹಾಗೆ, ಸಿಂಹಾಸನ, ಪಾಲನೆ ಕ್ರಮದ ಕಾರ್ಯಗಳು, ಹೆಚ್ಚಿಯುವರ ಮಕ್ಕಳು ಈ ಪುಸ್ತಕವು ಓದುವವರಿಗೆ ಬಹಳ ಉಪಯುಕ್ತವೆಂದು ಸುಂದರ ಭಾಷೆಯಿಂದ ವರ್ಣಿಸಲ್ಪಟ್ಟಿದೆ.

ನಡತೆನವುದಿನಲ್ಲಿ— ತಂದೆ, ತಾಯಿ, ಹೆಂಡತಿ, ಹಿರಿಯರು ಗಳೊಂದಿಗೆ ಅವರವರ, ಶ್ರದ್ಧೆ, ಭಕ್ತಿ, ಕರ್ತವ್ಯ-

ನಿ ಸ್ವಾಮ್ಯ, ಜ್ಞಾನತಂತು, ಕಿಂಚೇಂದ್ರಿಯಮುಂ ತಾದವ್ಯಗಳ ರಚನೆಯೂ, ಪ್ರಾಹಾರವೂ, ಕಾಹಿಲು ನಿದ್ರೆ, ಸಾವು, ಮನುಷ್ಯನ ವಿಲಕ್ಷಣ ಗುಣಗಳೂ ನಿ: ಲಘು ಭಾಷೆಯಿಂದ ಸ್ಪಷ್ಟವಾಗಿ ವರ್ಣಿಸಲ್ಪಟ್ಟಿವೆ.

ನಾಟಕದಕ್ರಮ ೧ ರೂಪಾಯಿ; ಸರಳತನುವಿನ-ಕ್ರಮ ೧೦ ಆಣೆ- ಚಿತ್ರಗಳಿಂದಿಯುಕ್ತವಾಗಿರುವ ಅಚ್ಚು ಕಾಗದ ಮುದ್ರಣ ಜನರ ಹೆಸರೇಕ್ರಮ ನಿಶ್ಚಿತವಾಗಿ ಹೊಸ್ಪಷ್ಟ ಚಿತ್ರಗಳನ್ನು ಕಳುಹಿಸಿದವರಿಗೆ ಈ ಮಾ-ಸ್ತ್ರಕಗಳು ದೊರೆಯುವವು. ಟಿಕೇಟುಗಳನ್ನು ಕಳುಹಿ-ಸುವವರು ದಶಪೊಂದು ರೂಪಾಯಿಗೆ ಅರ್ಧ ಆಣೆ-ಯಂತೆ ಕಳುಹಿಸಬೇಕು. ಕ್ರಿಟ್ಟಿಗೆ ಪ್ರತಿಗಳನ್ನು ಕೊಳ್ಳುವವರಿಗೆ ನೂರಕ್ಕೆ ೮ ರೂಪಾಯಿಯಂತೆ ಕಮಿ-ಶನ ದೊರೆಯುವದು. ಒಂದು ಪ್ರತಿಗೆ ಒಂದು ಆ-ಣೆ ಟಾಂಗಿಹಾಶಿಲು ಬೀಳುವದು.

ಶಾಲಾಪತ್ರಕವು.

ಪುಸ್ತಕ ೭] [ಸಂಚಿಕೆ ೭.

ಬೆಳಗಾವಿ, ಮಾಹೆ ಆಕ್ಟೋಬರ ೧೮೭೯.

Natural Philosophy.

ಪದಾರ್ಥ ವಿಜ್ಞಾನವು.

೨೧ ಹ್ರೈನಹೊಳೆಯಧಡದಲ್ಲಿ ಲರ್ಲೀಯೆಂಬ ಗ್ರಾಮಕ್ಕೆ ಸಮೀಪವಾಗಿ ವೊಂದು ಅತಿಚಮತ್ಕಾರವಾದ ಪ್ರತಿಧ್ವನಿಯ ಸ್ಥಾನವುಂಟು. ಇಲ್ಲಿ ಹೊಳೆಯ ಯೆರಡೂಬದಿಗಳಲ್ಲಿ ಮುಂದಕ್ಕೆ ಹಾಯ್ದ ಬಂಡೆಗಳಿಂದ ಪ್ರತಿಧ್ವನಿಯು ಬಹುಸರಸಾಗಿ ಹುಟ್ಟುತ್ತದೆ. ಇಲ್ಲಿ ವೊಂದು ಪಿಸ್ತೂಲನ್ನು ಹಾರಿಸಲಾಗಿ, ಯೆಂಟು ವೊಂಬತ್ತು ಪ್ರತಿನಾದಗಳು ಅತಿ ಸ್ಪಷ್ಟವಾಗಿ ಕೇಳಬರುವದಲ್ಲದೆ, ಬೇರೆ ಯೆಷ್ಟೋಮಂದ ಧ್ವನಿಗಳು ಕಡೆಯಲ್ಲಿ ಕೇಳಿಸುತ್ತವೆ. ತಾತ್ಪರ್ಯ ವೇನಂದರೆ ಪ್ರತಿಧ್ವನಿಯನ್ನುಂಟು ಮಾಡತಕ್ಕಂಥ ವಸ್ತುಗಳು ಯೆರಡೂ ಬದಿಗಳ ಗುಡ್ಡಗಳ ಪಾರ್ಶ್ವಗಳಲ್ಲಿ ಯೆಷ್ಟುಂಟೋ, ಅಷ್ಟು ಪ್ರತಿಧ್ವನಿಗಳು ಹುಟ್ಟುತ್ತವೆ.

೨೨ ಬಟ್ಟಲಿನಂತೆ ತಗ್ಗಾದವಸ್ತುಗಳಿಂದ ಪರಾವರ್ತನ

ಹೊಂದಿದ ನಾದದ ತೆರೆಗಳು ಹಿಂದಿರುಗಿದ ನಂತರ ವೊಂದು ಬಿಂದುವಿನಲ್ಲಿ ವೊಟ್ಟುಗೂಡುತ್ತವೆ. ಆ ಬಿಂದುವಿಗೆ ಆಗೋಲಾಂತರ ಪೃಷ್ಠಭಾಗದ (ಬಟ್ಟಲಿನಂಥವೈಯು) ಕೇಂದ್ರವೆಂದೆನ್ನುತ್ತಾರೆಂದು ಮುಂದೆ ದರ್ಶನಾನುಶಾಸನಶಾಸ್ತ್ರದಲ್ಲಿ ತಿಳಿಯುವದು. ಈ ಕೇಂದ್ರಸ್ಥಾನದಲ್ಲಿ ವೊಟ್ಟುಗೂಡಿದ ನಾದದಿಂದ ಅನೇಕ ಚಮತ್ಕಾರಗಳುಂಟಾಗುತ್ತವೆ. ದೀರ್ಘವರ್ತುಲಾಕಾರವಾದ ಕೋಣೆಗಳ ಯೆದುರುಬದುರಿನ ಯೆರಡು ಗೋಡೆಗಳು ಕಂಸಾಕಾರವಾಗಿ (ಬಟ್ಟಲಿನಂತೆ ತಗ್ಗಾಗಿ) ಇರುತ್ತವಷ್ಟೇ. ಅವುಗಳೊಂದರ ಕೇಂದ್ರದಲ್ಲಿ (ಈ ಕೇಂದ್ರವನ್ನು ನಿಶ್ಚೈಸುವ ರೀತಿಯನ್ನು ಮುಂದೆ ಹೇಳುವ) ನಿಂತು ಪ್ರೌಢ ಮನುಷ್ಯನು ಯೆಷ್ಟು ಮೆಲ್ಲಗೆ ಮಾತಾಡಿದಾಗ್ಯೂ, ಅವನ ಮಾತುಗಳೆಲ್ಲ ಯೆದುರಿನ ಗೋಡೆಯ ಕೇಂದ್ರದಲ್ಲಿ ನಿಂತವನಿಗೆ ಅತಿಸ್ಪಷ್ಟವಾಗಿ ಕೇಳಿಸುವವು. ಅಷ್ಟು ಸ್ಪಷ್ಟವಾಗಿ ಆ ಮಾತಾಡುವವನ ಸಮೀಪಕ್ಕೆ ನಿಂತವರಿಗೆ ಸಹ ಕೇಳಿಸುವದಿಲ್ಲ. ಒಂದು ವರ್ತುಲಾಕಾರವಾದ ಗುಮ್ಮಟದೊಳವೈಯಲ್ಲಿ ಗೋಡೆಗೆ ನಿಂತು ಯಾರಾದರೂ ಮಾತಾಡಿದರೆ, ಅವರಿಗೆ ತೀರ ಯೆದುರಾಗಿ ಗೋಡೆಗೆ ಹೊಂದಿ ನಿಂತವರಿಗೆ ಆ ಮಾತು ಕೇಳಬಂದಷ್ಟು ಸ್ಪಷ್ಟವಾಗಿ ಮತ್ತೆಲ್ಲಿಯೂ ನಿಂತವರಿಗೆ ಕೇಳಬರುವದಿಲ್ಲ. ಯಾಕಂದರೆ ಮಾತಾಡುವವನ ಮುಖದಿಂದ ಹೊರಟ ನಾದತರಂಗಗಳು ಯೆಲ್ಲದಿಕ್ಕುಗಳಲ್ಲಿ ಹಬ್ಬಿ, ಗುಮ್ಮಟದ ಬೇರೆ ಬೇರೆ ಪ್ರದೇಶಗಳಲ್ಲಿ ವೊಂದಾಗಲಿ, ಹೆಚ್ಚಾಗಲಿ ಪರಾವರ್ತನಗಳನ್ನು ಹೊಂದಿ, ಕಡೆಯ

ಲ್ಲಿ ಆ ಮಾತಾಡುವವನ ಯೆದುರಿನ ಬಿಂದುವಿನಲ್ಲಿ ಹೋಗಿ ವೊಟ್ಟುಗೂಡುತ್ತವೆ. ಪರಾವರ್ತನದಲ್ಲಿ ಪತನಕೋನವೂ, ಪರಾವರ್ತನ ಕೋನವೂ ಸರಿಯಾಗಿರುತ್ತವೆಂಬ ನಿಯಮದಿಂದ ಹೀಗಾಗುತ್ತದೆ.

೬೩ ವಿಜಾಪುರದ ಇಬ್ರಾಹಿಮರೋಜಾ, ಅಥವಾ ವಾಡಿಕೆಯಾಗಿ ಬೋಳಗುಮುಟವೆಂಬ ಹೆಸರಿನ ಮಶೀದಿಯ ಗುಮುಟದಷ್ಟು ದೊಡ್ಡ ಗುಮುಟವು ಈ ದೇಶದಲ್ಲಿ ಯೆಲ್ಲಿಯೂ ಇಲ್ಲ. ಆ ಗುಮುಟದಲ್ಲಿ ಹೀಗೇ ಆಗುತ್ತದೆ; ಅಂದರೆ ವೊಂದುಕಡೆಯಲ್ಲಿ ಗೋಡೆಗೆನಿಂತು ವೊಬ್ಬನು ತೀರ ಹಗುರಾಗಿ ಮಾತಾಡಿದಾಗ್ಯೂ, ಅವನ ಯೆದುರಿಗೆ (ಮಾತಾಡುವ ಮನುಷ್ಯನು ನಿಂತಲ್ಲಿಂದ ಹೊರಡುವವ್ಯಾಸದ ಯೆರಡನೇ ತುದಿಯಲ್ಲಿ) ಗೋಡೆಗೆ ಹೊಂದಿನಿಂತವನಿಗೆ ಆ ಮಾತು ಅತಿಸ್ಪಷ್ಟವಾಗಿ ಕೇಳಬರುತ್ತದೆ. ಇದಲ್ಲದೆ ಆ ಗುಮುಟದೊಳಗೆ ನಿಂತು ಚಪ್ಪಾಳೆಯಹೊಡೆದರೆ, ಹತ್ತು ಹನ್ನೆರಡು ಅದರ ಪ್ರತಿಧ್ವನಿಗಳು ವೊಂದರಹಿಂದೊಂದು ಹುಟ್ಟುತ್ತವೆ.

೬೪ ಸ್ಪೀಕಿಂಗ್‌ಟ್ರಂಪೆಟ (ಮಾತಾಡುವನಗಾರಿ) ಯೆಂಬದೊಂದು ಕೊಳವೆಯ ಯಂತ್ರವುಂಟು. ಈ ಕೊಳವೆಯ ಸಹಾಯದಿಂದ ಧ್ವನಿಯನ್ನು ಬಹು ದೂರವೊಯ್ದಾಗ್ಯೂ, ಅದರ ಉಚ್ಚತ್ವವು ಅತಿಸ್ವಲ್ಪ ಕಡಿಮೆಯಾಗುವದು. ಬೈಲಲ್ಲಿ ಹುಟ್ಟಿದನಾದದ ತರಂಗಗಳು ಯೆಲ್ಲ ದಿಕ್ಕುಗಳಲ್ಲಿ ಹಬ್ಬುತ್ತಹೋಗುವಕಾರಣ ಹೆಚ್ಚು ಹೆಚ್ಚು ದೂರಕ್ಕೋದಹಾಗೆ ನಾದದಲುಚ್ಚತ್ವವು ಕಡಿಮೆಯಾಗುತ್ತದೆ. ಆದರೆ ಕೊಳವೆಯ

ಳಗೆ ಹುಟ್ಟಿಸಲ್ಪಟ್ಟನಾದದ ತರಂಗಗಳು ಹೆಚ್ಚುವಿಸ್ತಾರವಾ
ಗಿ ಹಬ್ಬದೆ ಕೊಳವೆಯೊಳಗೇ ಉಳಿದು ಮುಂದಕ್ಕೆ ಸಾಗಿ
ಹೋಗುವಕಾರಣ, ಆ ಕೊಳವೆಯ ಯೆರಡನೇ ತುದಿಯಲ್ಲಿ,
ಬಹುತರವಾಗಿ ಮೊದಲಿನ ತುದಿಯಲ್ಲಿಯೆಷ್ಟೇಉಚ್ಚತ್ವ
ವುಳ್ಳದ್ದಾಗಿ ನಾದವು ಹೊರಬೀಳುವದು. ಯುರೋಪುಖಂ
ಡದಲ್ಲಿ ದೊಡ್ಡಮನೆಗಳಲ್ಲಿ ವೊಂದುಕೋಣೆಯೊಳಗಿಂದ
ಮತ್ತೊಂದು ದೂರಾದಕೋಣೆಗೆ ಇಂಥಾಕೊಳವೆಗಳು ವೊ
ಯ್ಯಲ್ಪಟ್ಟಿರುತ್ತವೆ. ಇವುಗಳಸಹಾಯದಿಂದ ಆ ಯೆರಡು
ಕೋಣೆಗಳಲ್ಲಿದ್ದ ಮನುಷ್ಯರು ವೊಬ್ಬರಹತ್ತಿರೊಬ್ಬರು ಕೂ
ತು ಮಾತಾಡಿದಹಾಗೆ ಪರಸ್ಪರಮಾತಾಡುವರು.

೨೧ ಕಂಸಾಕಾರವಾದ ಪೃಷ್ಠಭಾಗವುಳ್ಳ ಪದಾರ್ಥಗಳ
ಸಹಾಯದಿಂದಲೂ, ಕೊಳವೆಗಳ ಸಹಾಯದಿಂದಲೂ ನಾದದ
ಲ್ಲಿ ಅನೇಕ ಚಮತ್ಕಾರಗಳನ್ನು ಉಂಟುಮಾಡಬಹುದು. ಅ
ದೃಶ್ಯಕುಮಾರಿಕೆಯೆಂಬದೊಂದು ಯಂತ್ರವುಂಟು. ಅದು
ಹ್ಯಾಗೆಂದರೆ, ವೊಂದು ಮಂಚದ ಮಧ್ಯಭಾಗದಲ್ಲಿ ವೊಂದು
ಪೊಳ್ಳುಗೋಲನ್ನು ತೂಗಕಟ್ಟುತ್ತಾರೆ; ಮೇಲೆ ಹೇಳಿದಂಥ
ಸ್ಪೀಕಿಂಗಟ್ರಂಪೆಟ್ಟದ್ದೊಂದು ಕೊಳವೆಯನ್ನು ಯಾರಿಗೂ
ಕಾಣಿಸದಹಾಗೆ ತಂದು ಆ ಗೋಲಿಗೆ ಹಚ್ಚಿ ಅದರ ಕೆಳವ್ಯಾ
ಯಲ್ಲಿ ವೊಂದು ಸಣ್ಣಛಿದ್ರವನ್ನು ಬಿಟ್ಟಿರುತ್ತಾರೆ. ಆ
ಕೊಳವೆಯಯೆರಡನೇ ತುದಿಯು ಮತ್ತೊಂದು ದೂರಾದ
ಕೋಣೆಯಲ್ಲಿರುತ್ತದೆ. ಆ ತುದಿಗೆ ಬಾಯಿಯಹೊಂದಿಸಿ
ಯಾರಾದರೂ ಮಾತಾಡಿದರೆ, ಗೋಲಿನ ಕೆಳಬದಿಯಲ್ಲಿದ್ದ

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಛಿದ್ರದೊಳಗಿಂದ ಮಾತಾಡುವ ಧ್ವನಿಯು ಹೊರಟು ಆಶ್ಚರ್ಯತೋರುತ್ತದೆ.

ನಮ್ಮ ದೇಶದಲ್ಲಿ ಕೆಲದೇವಸ್ಥಾನಗಳಲ್ಲಿ (ವಿಶೇಷವಾಗಿ ಕೊಂಕಣದೊಳಗೆ) ಇಂಥಾಧ್ವನಿಯು ಕಾಲಕಾಲಕ್ಕೆ ಹೊರಡುತ್ತಿರುತ್ತದೆಂದು ಕೇಳುತ್ತೇವೆ. ಅದರ ಕಾರಣವಾದರೂ ಹೀಗೇಯೇನಾದರೂ ಇರಬಹುದು. ಧ್ವನಿಹೊರಡುವ ಛಿದ್ರವು ದೂರವರೆಗೆ ಕೊಳವೆಯಂತೆ ಪೊಳ್ಳಾಗಿದ್ದು ಯೆರಡನೇ ಕಡೆಯಲ್ಲಿ ಯೆಲ್ಲಾದರೂ ಆ ಪೊಳ್ಳಿನೊಳಗೆ ಹವೆಯು ಶೇರುವಹಾಗೆ ಮಾರ್ಗವಿದ್ದರೆ, ಆ ಮಾರ್ಗದಿಂದ ಹವೆಯು ವೊಳಗೆ ಶೇರಿ, ಮುಂದಕ್ಕೆ ಸಾಗಿ, ನಾದ ಹೊರಡುವ ಛಿದ್ರದೊಳಗಿಂದ ಹೊರಬೀಳಹತ್ತಿತೆಂದರೆ, ಅದೇ ನಾದವನ್ನುಂಟುಮಾಡುವದು. ಇದೇವಿಧದಯುಕ್ತಿಯಿಂದ ನಾದದ ಕಾರಂಜಿಗಳನ್ನು ಕಟ್ಟಬಹುದು. ಅವುಗಳಲ್ಲಿ ನೀರುಹಾರುವದಕ್ಕೆ ಮುಂಚೆ ಕೆಲವೇಳೆ ನಾದಹೊರಡುವದು.

೨೪ನೇ ಅಧ್ಯಾಯ.

ತರಂಗಗಳಿಗೂ, ನಾದಕ್ಕೂ ಸಂಬಂಧವೂ, ಬೇರೆಬೇರೆವಿಧವ ನಾದಗಳಪರಸ್ಪರಸಂಬಂಧವೂ, ಸ್ವರಮಾಧುರ್ಯವೂ, ಸ್ವರೈಕ್ಯವೂ, ಇತ್ಯಾದಿ.

೨೧ ನಿಯಮಿತಕಾಲದಲ್ಲಿ ಹುಟ್ಟುವ ನಾದತರಂಗಗಳ ಸಂಖ್ಯೆಯು ಹೆಚ್ಚುಕಡಿಮೆಯಿದ್ದಂತೆ ಉಚ್ಚಸ್ವರಗಳೂ, ನೀಚ ಸ್ವರಗಳೂ ಹುಟ್ಟುವವು.

೨೨ ತಂತುಗಳು ಹಗುರಾಗಿಯೂ, ಬಿಗಿಯಾಗಿಯೂ ಕಿರಿದಾ

ಗಿಯೂ ಇದ್ದಂತೆ ಅವುಗಳಲ್ಲಿ ನಾದತರಂಗಗಳು ನಿಯಮಿತಕಾಲ
ದಲ್ಲಿ ಹೆಚ್ಚು ಹೆಚ್ಚು ಹುಟ್ಟುತ್ತಹೋಗುವವು. ಯಾಕಂದರೆ ಬಾರಿ
ಸತಕ್ಕ ತಂತುವು ಬಹಳ ಉದ್ದಾಗಿಯೂ, ಭಾರವುಳ್ಳದ್ದಾಗಿ
ಯೂ ಇದ್ದರೆ ಅದರಲ್ಲಿ ಪ್ರಕೃತ್ಯಂಶಗಳು (ಪರಮಾಣುಗ
ಳು) ಬಹಳವಿದ್ದಕಾರಣ ಅದನ್ನು ಅಲ್ಲಾಡಿಸುವದಕ್ಕೆ ಬಹ
ಳಬಲವೂ, ಬಹಳಕಾಲವೂಬೇಕೆಂಬದು ಸ್ಪಷ್ಟವೇ. ಆದದ
ರಿಂದ ಅದರಲ್ಲಿ ನಾದತರಂತಗಗಳು ಸ್ವಲ್ಪಹುಟ್ಟುವವೇಸ
ರಿ. ಇದೇಪರಿಗೆ ಆ ತಂತುವು ಸಡಿಲಾಗಿದ್ದರೆ, ಅದರ
ಲ್ಲಿ ಸ್ಥಿತಿಸ್ಥಾಪಕಗುಣವು ಕಡಿಮೆಯಿರುವದು. ಅಂದರೆ
ಬಾರಿಸುವವರಿಂದ ಅದರಸರಲತ್ವವು ನಷ್ಟಪಡಿಸಲಾಗಿ ಪುನಃ
ತನ್ನ ಸ್ವಂತಬಲದಿಂದ ಸರಲವಾಗುವಗುಣವು ಅದರಲ್ಲಿ ಕಡಿಮೆ
ಯಿರುವದು. ಒಂದುಬೇಕಾದಂಥ ತಂತಿಯನ್ನು ತೆಗೆದು
ಕೊಂಡು, ಕೆಲಮಟ್ಟಿಗೆ ಅದನ್ನು ಬಿಗಿದು ಬಾರಿಸಲಾಗಿ ಅ
ದರಲ್ಲಿ ಒಂದು ಸೇಕಂಡಿನಲ್ಲಿ ಯೆಷ್ಟುನಾದತರಂಗಗಳು
ಹುಟ್ಟುವವೋ, ಅಷ್ಟರಇಂಮಡಿಯಾಗಿ ನಾದತರಂಗಗಳು ಅ
ದಕ್ಕಿಂತ ನಾಲ್ಕುಪಾಲು ಬಿಗಿಯಾಗಿ, ಅಥವಾನಾಲ್ಕನೇಪಾಲು
ಭಾರವುಳ್ಳದ್ದಾಗಿ, ಅಥವಾ ಅದರ ಅರ್ಧದಷ್ಟು ಉದ್ದವಾಗಿ
ಇದ್ದ ತಂತುವಿನಿಂದ ಹುಟ್ಟುತ್ತವೆಂದು ತಿಳಿದುಬಂದದೆ. ಅಂ
ದರೆ ಯೆರಡು ತಂತುಗಳು ಸರಿಯಾಗಿ ಭಾರವೂ, ಬಿಗಿಯೂ
ವುಳ್ಳವುಗಳಿದ್ದು, ಒಂದರಅರ್ಧದಷ್ಟು ಯೆರಡನೇದು ಉದ್ದ
ವಿದ್ದರೆ, ಹೆಚ್ಚು ಉದ್ದವಿದ್ದದ್ದರೊಳಗಿಂದ ಹೊರಡುವನಾದ
ದ ಇಂಮಡಿ ಉಚ್ಚನಾದನಾದವು ಚಿಕ್ಕತಂತುವಿನಿಂದ ಹೊರ

ಡುವದು. ಇದೇ ಮೇರಿಗೆ ಬಿಗಿಯೂ, ಉದ್ದಳತೆಯೂ ಸರಿಯಾಗಿದ್ದು ಮೇಲೆ ಹೇಳಿದಂತೆ ಭಾರದಲ್ಲಿ ಹೆಚ್ಚು ಕಡಿಮೆಯಿದ್ದರೆ, ಅಥವಾ ಭಾರವೂ, ಉದ್ದಳತೆಯೂ ಸರಿಯಾಗಿದ್ದು ಬಿಗಿಯಲ್ಲಿ ಮೇಲೆಹೇಳಿದಂತೆ ಹೆಚ್ಚು ಕಡಿಮೆಯಿದ್ದರೆ, ಒಂದರ ಇಮ್ಮಡಿಯಷ್ಟು ನಾವು ಮತ್ತೊಂದರಿಂದ ಹೊರಡುವದು.

—o*o—

Extracts from Rajashekhara.

ರಾಜಶೇಖರದೊಳಗಿನ ಶ್ಲೋಕಗಳು

ಕುದುರೆಯವರ್ಣನೆ.

॥ವಾರ್ಧಕಷಟ್ಪದಿ॥

ಚತುರ ಪದಗತಿಯು ಸರಸ ಧ್ವನಿಯು ವರ್ಣಶೋ|
ಭಿತದಲಂಕಾರದ ಸುಲಕ್ಷಣದ ಲಾಲಿತ|
ಶ್ರುತಿರಂಜನದ ವಿಶೇಷಾರ್ಥ ಸಂಚಿತದ ವಿಸ್ತಾರದಿಂ
ಪೊಸತೆನಿಸುವ॥
ನುತಸತ್ಕವಿ ಪ್ರೌಢ ತರಸುಪ್ರಬಂಧದಂ|
ತತಿ ಮನೋಹರವಾದ ವಾಜಿಯಂ ಕಂಡುಹ|
ರ್ಷಿತನಾಗಿ ನೋಡುತಿರ್ದಂ ಕಲಾವಿದನಪ್ಪ ಮಾರುತಿ ಮ
ಹೋತ್ಸವದೊಳು॥೧॥

ಈ ಪದ್ಯದಲ್ಲಿ ಕುದುರೆಯ ಪರವೂ, ಕಾವ್ಯಪರವೂ ಹೀಗೆ ಎರಡು ಅರ್ಥಗಳಿದ್ದದರಿಂದ ಕೌಂಸದೊಳಗೆ ಕಾವ್ಯಪರವು ಬರಿಯಲ್ಪಟ್ಟಿದೆ.

ಅರ್ಥ—ನಾಲ್ಕು ಪಾದಗಳ ಗಮನವುಳ್ಳ(ನಾಲ್ಕು ಚರಣಗಳುಳ್ಳ) ಒಳ್ಳೇಧ್ವನಿಯುಳ್ಳ(ಶೃಂಗಾರಾದಿರಸಗಳೂ, ಧ್ವನ್ಯರ್ಥವೂವುಳ್ಳ), ಬಣ್ಣದಿಂದ ಒಪ್ಪುವ(ಅಕ್ಷರಗಳಿಂದ ಒಪ್ಪುವ), ಆಭರಣಗಳುಳ್ಳ(ಪ್ರತಿಮಾ, ಉಪಮಾ ಮೊದಲಾದ ಅಲಂಕಾರಗಳುಳ್ಳ), ದೇವಮಣಿ, ಕಂಠಾಭರಣಮುಂತಾದ ಒಳ್ಳೇಲಕ್ಷಣವುಳ್ಳ(ಕವಿತಾ ಲಕ್ಷಣದಿಂದ ಮೇಲಾದ), ಸುಂದರವಾದ ಕಿವಿಯಿಂದ ಶೋಭಿಸುವ(ಕಿವಿಗೆ ಇಂಪಾದ), ಬಹಳ ಹಣಬಾಳುವಂಥ(ವಿಶೇಷವಾದ ಅರ್ಥಗಳುಳ್ಳ), ದೊಡ್ಡದಾದ(ವಿಸ್ತಾರವಾದ), ತರುಣವಾದ(ನೂತನವಾದ) ಕಾವ್ಯದಂತೆ ಮನೋಹರವಾದ ಕುದುರೆಯನ್ನು ಕಂಡು ಕಲಾವಿದನಾದ ಭೀಮನು ಸಂತೋಷಪಟ್ಟು, ನೋಡುತ್ತಿದ್ದನು.

ಎಮ್ಮೆ ಕೋಣಗಳ ವರ್ಣನೆ.

||ಮಹಾಸ್ರಗ್ಧರಾವೃತ್ತ||

ಪೊಳೆವುಲ್ಲಂ ಮೇದು ಮಧ್ಯಂದಿನದ ಬಿರುಬಿಸಿಲ್ಗಾಗೆ ಬೆ
ಸ್ನಂಭರಂಗೊಂ|
ಡೆಳಸುತ್ತಂ ಪಲ್ವಲಾಂಭಃಪ್ಲವದಿಮುಳುಗಿತತ್ಕರ್ದಮಂ
ಪತ್ತೆನಿಂದ||
ವ್ವಳಸುತ್ತೆತ್ತಂದೊಂದರೊಳ್ಕೋಡಿಡುತೆ ಮಗುಳ್ದು ಮೆ
ಲ್ಕಾಡುತಂ ಕಾಡೊಳೊಪ್ಪಂ|
ದಳೆದಿರ್ದತ್ತಭ್ರಕಾಯಂ ಪೃಥು ಮಹಿಷನಿಕಾಯಂ ಕರಂ
ಪ್ರೋತ್ಸಕಾಯಂ||೨||

ಅರ್ಥ—ಮೋಡದಹಾಗೆ ಕಪ್ಪುಶರೀರವುಳ್ಳಂಥ, ಒಳ್ಳೆ ಸೊಗ

ಸುಳ್ಳ ಎಮ್ಮೆಕೋಣಗಳು ಮೊಳಕೆ ಹುಲ್ಲನ್ನು ಮೇದು, ಮಧ್ಯಾಹ್ನದ ಉಗ್ರವಾದಬಿಸಿಲು ಬೆನ್ನಿಗೆ ತಾಕಲಾಗಿ, ತಾಳಲಾರದೆ ಓಡುತ್ತಬಂದು ಕೆರೆಯನೀರೊಳಗೆ ಮುಳುಗಿ, ಕೆಸರೊಳಗೆ ಉರುಳ್ಯಾಡಿ, ಮೈಗೆಲ್ಲ ಕೆಸರು ಹಚ್ಚಿಕೊಂಡು, ಹಾರ್ಯಾಡಿ ಒಂದಕ್ಕೊಂದು ಕಾದಾಡುತ್ತ ಮೆಲ್ಕಾಡಿಸುತ್ತ ಅಡವಿಯಲ್ಲಿ ಒಪ್ಪಿದವು.

ನಾಯಿಯವರ್ಣನೆ

ಕಂದ॥ ನೆಗೆದ ಕುಡಿವಾಲ ಮುಣ್ಕ್ರವ।
ಬಗೆಬಳ್ಕುವ ನಡುವಗುರ್ವಿಪ ಪಾವನ ಮಿರೆತ॥
ಮೃಗಮಂಬಳಿ ವಿಡಿದಟ್ಟು।
ತ್ತಗಲದೆ ಪಿಡಿದತ್ತು ಜಾಯಿಲಂತದ್ವನದೊಳ್॥೨॥

ಅರ್ಥ—ಎತ್ತಿದ ಕುಡಿಬಾಲವೂ, ಉಬ್ಬುವ ಮನಸೂ, ಬಳ್ಕುವನಡುವೂ, ಹೆದರಿಸುವ ಮೋರೆಯೂವುಳ್ಳ ನಾಯಿಯು ಅಡವಿಯಲ್ಲಿ ಎರಳೆಯು ಬೆನ್ನಹತ್ತಿಬಿಡದೆ ಅದನ್ನು ಹಿಡಿಯಿತು.

ಆನೆಯವರ್ಣನೆ.

॥ಮತ್ತೇಭವಿಕ್ರೀಡಿತವೃತ್ತ॥

ಕರಿನೀಲಾಚಲದಗ್ರದೋಳ್ಕರೆಯೆ ಬಲ್ಪಿಂಕಾಲಮೇಘಂ ಶರೋ।
ತ್ಕರಮಂ ಗರ್ಜಿಸಿ ಜಿಷ್ಣು ಚಾಪಮನದಂ ಕೈಕೊಂಡು ತದ್ಧಾತುಸಿ॥
ಘ್ಘರ ಪೂಗಳ್ಸರಿವಂತೆ ರಕ್ತ ರಸಪೂರಂ ಸೂಸೆಮುತ್ತ್ಲಿಸಿ।

ಶರಮೆತ್ತಂ ಸಿಡಿವಂತೆ ತಳ್ತುಸಿಡಿದತ್ತು ರಕ್ತ ಮುಕ್ತಾ
ಫಳಂ ॥೪॥

ಇದರಲ್ಲಿ ಶ್ಲೇಷಾಲಂಕಾರ ಇದ್ದದರಿಂದ ಕೌಸದೊಳಗೆ ಶ್ಲೇಷಾರ್ಥವು ಬರೆಯಲ್ಪಟ್ಟಿದೆ.

ಅರ್ಥ—ಆನೆಯೆಂಬ ಕರೀಪರ್ವತದ ಮೇಲೆ ಕಾಲಮೇಘನೆಂಬ ಬೇಡನು(ಮಳೆಗಾಲದ ಮೋಡವು), ಗೆಲೆಯುವ ಬಿಲ್ಲನ್ನು ತೆಕೊಂಡು(ಇಂದ್ರ ಧನುಸ್ಸನ್ನು ಅಂಗೀಕರಿಸಿ),ಕೂಗಿ(ಗುಡುಗವನುಂಟುಮಾಡಿ), ಬಾಣಗಳನ್ನು(ಮಳೆಯನ್ನು)ಕಸುವಿನಿಂದ ಸುರಿಸಲಾಗಿ, ಆ ಪರ್ವತದ ಧಾತುಗಳೊಳಗಿಂದ ಹರಿಯುವ ಜಲಪ್ರವಾಹದಂತೆ ಆನೆಯ ಮೈಯೊಳಗಿಂದ ರಕ್ತವು ಸೋರಿತು, ಹನಿಗಳು ಸಿಡಿಯುವಂತೆ ರಕ್ತಹತ್ತಿದ ಮುತ್ತುಗಳು ಅವರ ತಲೆಯೊಳಗಿಂದ ಸಿಡಿದು ಬಿದ್ದವು.

ಸಿಂಹವರ್ಣನೆ.

॥ಚಂಪಕಮಾಲಾವೃತ್ತ॥

ಪಡಿನೆಳಲಂ ಮೃಗೇಂದ್ರ ಸುರಚಂದ್ರ ಶಿಲಾತಳದಲ್ಲಿ
ಕಂಡುಕಾ।
ಪ್ಪಡರಲಿದಿರ್ಚಿಮತ್ತದು ಮಿಱಿರ್ಚಿರೆ ಗರ್ಜಿಸೆ ಮೇಘ
ನಾದದಿಂ॥
ಬೊಡನದು ಗರ್ಜಿಸುತ್ತಿರೆಪಳಂಚೆವಿಲಂಘಿಸಿ ಪಾಯ್ದು
ಪೊಯ್ದುತಾ।
ಮಡಿದುದು ಶುಷ್ಕರಲ್ಲಿ ನಿಜಮೋಷಮನೊಂದಿಸೆ ಕೆಟ್ಟು
ಪೋಂಗರೇ॥೫॥

ಅರ್ಥ—ಒಂದು ಸಿಂಹವು ಚಂದ್ರಕಾಂತ ಶಿಲೆಯಲ್ಲಿ ತನ್ನ ಪ್ರತಿಛಾಯವನ್ನು ಕಂಡು, ಇದು ಎರಡನೆ ಸಿಂಹವೆಂದು ತಿಳು ಕೊಂಡು ಸಿಟ್ಟಿನಿಂದ ಅದಕ್ಕೆ ಇದಿರಾಯಿತು, ಅದೂ ಇದರಂತೇ ಇದಿರಾಯಿತು, ಇದುಗರ್ಜಿಸಿದ ಕೂಡಲೇ ಅದೂಗರ್ಜಿಸಿತು, ಇದುಕ್ರೋಧಾವೇಶದಿಂದ ಹಾರಿಅದಕ್ಕೆ ಹಾಯಲಾಗಿ ಆ ಕಲ್ಲುತಾಕಿ ತಲೆಯೊಡದು ಸತ್ತುಹೋಯಿತು, ಶುದ್ಧಾತ್ಮರಲ್ಲಿ ಇಲ್ಲದದೋಷವನ್ನು ಕಲ್ಪಿಸಿದರೆ ಈ ಬಗೆಯಿಂದ ನಾಶ ಹೊಂದುವರು.

ಹುಲಿಯವರ್ಣನೆ

॥ಚಂಪಕಮಾಲಾವೃತ್ತ॥

ಕುಸಿದಪರಾಂಗ ಮುಜ್ವಳಿತ ಪಿಂಗಳಲೋಚನ ಮುಗ್ರ
ದಂಷ್ಟ್ರಮಾ।
ಪೆರ್ಚಿಸಿದಮನಂ ಧರಿತ್ರಿಯೊಳ್ ಚಾಲಿಪಬಾಲ ಮಗುರ್ವಿ
ಪಾನನಂ॥
ನಸುನೆಗೆದಿರ್ದ ತ್ರೋರತಲೆ ಮುಂಗಡೆ ಸಾರ್ಚಿದ ಕಾಲರ
ಲ್ದಮೂ।
ಗೆಸೆಯೆತರಕ್ಷುದಂಶ ಶತಸಂವೃತ ವಿರ್ಮದದೊಂದು
ತಾಣದೊಳ್॥೬॥

ಅರ್ಥ—ಕುಗ್ಗಿದ ಪೃಷ್ಠಭಾಗದಿಂದಲೂ, ಪ್ರಕಾಶಿಸುವ ಪಿಂಗಳ ವರ್ಣದ ಕಣ್ಣುಗಳಿಂದಲೂ, ಭಯಂಕರದ ಕೋರೆದಾಡೆಗಳಿಂದಲೂ, ಮನಸಿನ ಸಾಮರ್ಥ್ಯದಿಂದಲೂ, ನೆಲದಮೇಲೆ ಅಡಿಸುವ ಬಾಲದಿಂದಲೂ, ಹೆದರಿಸುವ ಮೋರೆಯಿಂದಲೂ,

ಮೇಲಕ್ಕೆ ತುಸುವೆತ್ತಿದ ದೊಡ್ಡ ತಲೆಯಿಂದಲೂ, ಮುಂಗಡೆ ಚಾಚಿದ ಕಾಲುಗಳಿಂದಲೂ, ಹಿಗ್ಗಿಸಿದ ಮೂಗಿನಹೊರಳೆಗಳಿಂದಲೂ ಒಪ್ಪುವ ಹುಲಿಯು ಒಂದುಸ್ಥಳದಲ್ಲಿ ಇತ್ತು.

—o*o—

A Prize Essay.

ನಿಬಂಧವು.

ಶ್ರೀಗುರು

ತೀರ್ಥಸ್ವರೂಪ ರಾದಾ ರಾಜಮಾನ್ಯರಾ

ಜೀಶ್ರೀ ಹುಬ್ಬಳ್ಳಿ ಸವಸಿ ಗುರುಶಿದ್ಧಪ್ಪ

ಅಪ್ಪನವರ ಪಾದಪದ್ಮಂಗಳಿಗೆ

ನಿಮ್ಮ ಚಿರಂಜೀವಿಯಾದ ಚನ್ನವ್ವನು ಮಾಡುವ ಶಿರಸಾಷ್ಟಾಂಗನಮಸ್ಕಾರವು ಆದಾಗಿ ಈಗ ತಾರೀಖು ೨೧ ಮಾಹೆ ಸಪ್ಟಂಬರ ಸನ್ನ ೧೮೭೧ಇಸಿವಿ ತರುವಾಯ ಈಗ ನಾನು ಹೋದ ವರ್ಷದ ಪಂಚಮಿ ವಿಷಯವಾಗಿ ನಿಮಗೆ ಪತ್ರ ಬರಿಕೇನಿ ತಮಗ ತಿಳದಿರ ಬೇಕು ಮತ್ತು ಆ ಪಂಚಮಿಯು ಆಷಾಢಮಾಸಗಳಲ್ಲಿ ಆಗುತ್ತದೆ. ಆ ಹಬ್ಬದಲ್ಲಿ ಜನರು ತಮ್ಮ ತಮ್ಮ ಮನಿಗಳನ್ನು ಸಾರಿಸಿ ಮನಿಯಲ್ಲಿದ್ದ ಅರಿಬಿಯನ್ನು ತಕ್ಕೊಂಡು ಹಳ್ಳಕ್ಕೆ ಒಗಿಯಲಿಕ್ಕೆ ಹೋಗುತ್ತಾರೆ ಹಾಂಗು ಮನಿಗೆ ಬಂದಮೇಲೆ ತಂಬಿಟ್ಟು ಯಳ ಚಿಗಳೀಕಡ್ಲಿ ತಂಬಿಟ್ಟು ಮೊದಲಾದ ಸಾಮಾನಗಳನ್ನು ಮಾಡುತ್ತಾರೆ ಹಾಂಗು ಕೊಟ್ಟ ಪಂಚಮಿಯಂತ ಯಾವತ್ತು ಜನರು ೪ದಿನಸದ ಕಾಯಿಪಲ್ಯಾ ಎರಡುತರದ ರೊಟಮುಂತಾದವುಗಳ

ನ್ನು ಮಾಡಿ ಮರುದಿವಸದಲ್ಲಿ ಪಂಚಮಿಯೆಂಬ ಹಬ್ಬವನ್ನು ಮಾಡುತ್ತಾರೆ ಅವತ್ತಿನ ದಿವಸ ಮುಕ್ತೊಂಪೆ ಸಾರಿಸಿ ತಂಬಿಟ್ಟು ಯಳ್ಳ ಚಿಗಳಿ ಗಡ್ಡೆ ತಂಬಿಟ್ಟು ಮತ್ತು ಯಲಿ ಜೆಬಡಿಕಿ ಹಾಂಗು ಬಾಳಿಹಣ್ಣು ನೆನಗಡ್ಲೆ ಉತ್ತತ್ತಿ ಕೊಬ್ಬರಿಬಟ್ಲು ಮೊದಲಾದ ಸಾಮಾನಗಳನ್ನು ತಕ್ಕೊಂಡು ನಾಗಪ್ಪನನ್ನು ಪೂಜೆ ಮಾಡುವ ದಳಿಯಿಂದ ಒಯ್ಯುವರು ಹಾಂಗು ತಾವು ಶಿರಿಉಟ್ಟು ಬಸ್ತ ಮೊದಲಾದವುಗಳನ್ನು ಇಟ್ಟುಕೊಳ್ಳುವರುಮತ್ತು ಕೊರಳಲ್ಲಿ ಹಂಗನೂಲು ಹಾಕಿಕೊಳ್ಳುವರು ಯಾವತ್ತು ಜನರು ಶ್ರಿಂಗಾರವಾದಮೇಲೆ ನಾಗಪ್ಪಗ ಹಾಲು ಹೊಯ್ಯುವವರ ದಳಿಯಿಂದ ಹೋಗುವಾಗ್ಯೆ ಪಾತ್ರಿಯಲ್ಲಿ ಹಾಲು ಹಾಕಿಕೊಂಡು ಹೋಗಿ ತಮ್ಮ ತಾಯಿತಂದೆ ಗುರು ಅಣ್ಣತಂಗಿ ಅಕ್ಕ ಮೊದಲಾದವರ ಹೆಸರು ಅಂದು ಹಾಲು ಹೊಯ್ಯುವರು ಹೊಯಿದು ಮನಿಗೆ ಬಂದಮೇಲೆ ಊಟಾ ಮಾಡಿ ಜೋಕಾಲಿ ಬೋಳ ಜೀಕವನ್ನು ಆಡಲಿಕ್ಕೆ ತಮ್ಮ ಗೆಳತಿಯರನ್ನು ಕರಕೊಂಡು ಆಡಲಿಕ್ಕೆ ಹೋಗುವರು ಮತ್ತು ಆರೇರು ಮುಂತಾದಜನರು ತಮ್ಮ ಗೆಳತಿಯರನ್ನು ಕರಕೊಂಡು ಮಮುಂದೆ ಹಾಡಿಕೊಂತ ಕೂಡ್ರುವರು ಮರುದಿವಸದಲ್ಲಿ ಕಬುಪ್ಪಣ್ಣವ ಹಬ್ಬವನ್ನು ಮಾಡುವರು ಆ ದಿವಸದಲ್ಲಿ ಹುದಮಣ್ಣು ತಂದು ನಾಗಪ್ಪನ ಆಕಾರ ಮಾಡಿ ಅವನ್ನು ಸಮಾಳದಲ್ಲಿ ಇಟ್ಟು ಕಡಬು ಮಾಡಿ ಅದಕ್ಕೆ ಯಡೆಹಿಡಿಯುವರು ಮತ್ತು ಆ ದಿವಸದಲ್ಲಿ ಸಹ ಹಂಗ ನೂಲು ಹಾಕಿಕೊಳುವರು ೩ನೇ ದಿವಸದಲ್ಲಿ ಕೆರೆಅಂಬಲಿಯೆಂಬ ಹ

ಬ್ಬ ಬರುವದು ಆವತ್ತು ತಮ್ಮ ಬೀಗರು ಮತ್ತು ತಮ್ಮ ರ
ಣಾನುಬಂಧಸ್ತರ ಮನಿಗೆ ತಾವು ಮಾಡಿದ ಸಾಮಾನಗಳನ್ನು
ಒಬ್ಬರ ಮನಿಗೆ ಒಬ್ಬರು ಕೊಡುವರು ಹಾಂಗು ಆ ಹಬ್ಬದ
ದಶಿಯಿಂದ ಗಂಡನ ಮನಿಯಲ್ಲಿದ್ದ ಹೆಣ್ಣು ಮಕ್ಕಳನ್ನು ಸ
ಹ ಕರದುಕೊಂಡು ಬರುತ್ತಾರೆ ಮತ್ತು ಗುಳಕವ್ವಯೆಂಬ
ದೇವರನ್ನು ಇಟ್ಟು ಅವಕ್ಕೆ ಬ್ಯಾಗಡಿ ಮುಂತಾದವುಗಳನ್ನು ಹ
ಚ್ಚಿ ಚಂದ ಮಾಡುವರು ಅವನ್ನು ನೋಡುವದರ ವಶಿಯಿಂದ ಒಬ್ಬ
ರ ಮನಿಗೆ ಒಬ್ಬರು ಹೋಗುವರು ಈ ಹಬ್ಬದಲ್ಲಿ ಯಾವತ್ತು
ಜನರು ಈ ಪ್ರಕಾರ ಆಚರಿಸುತ್ತಾರೆ—

ಚನ್ನವ್ವ ಸವಟಿ ದಸ್ತೂರ ಖುದ್ದ
ಮೊದಲನೇ ವರ್ಗ

—o*o—

Notices.

ನೋಟೀಸು. ನಂಬರ ೧೨೯.

ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ.

ಉದಾರಗುಣವುಳ್ಳ ರಸೆಲ್‌ಥೊರೆಗಳು ಬ್ಯಾಂಕಿನಲ್ಲಿ ಒ
ದು೧೦೦೦ಸಾವಿರ ರೂಪಾಯಿಗಳನ್ನು ಇಟ್ಟಿದ್ದಾರೆ. ಈ ಹಣ
ದ ಬಡ್ಡಿ ವರ್ಷಕ್ಕೆ ೪೦ರೂಪಾಯಿ ಬರುವದು. ಮೇಹರ್ಬಾನ
ಎಜ್ಯುಕೇಶನಲ್ ಇನಸ್ಪೇಕ್ಟರಸಾಹೇಬ ಬಹದ್ದೂರರವರ
ಪ್ರತಿವರ್ಷ ಬೆಳಗಾವಿಯಲ್ಲ್ಯಾಗಲಿ, ಧಾರವಾಡದಲ್ಲ್ಯಾಗಲಿ
ನ್ನಡಭಾಷೆಯ ಪರೀಕ್ಷೆ ತೆಗೆದುಕೊಳ್ಳುವರು. ಆ ಪರಿ
ಯಲ್ಲಿ ಉತ್ಕೃಷ್ಟನಾದವನಿಗೆ ಸದರ ೪೦ರೂಪಾಯಿಗಳ

ಇನಾಮು ಕೊಡುವರು. ಈ ಪರೀಕ್ಷೆಯು ನಿಯಮಗಳೂ, ವಿಷಯಗಳೂ ಯಾವವೆಂದರೆ—

೧ ಪರೀಕ್ಷೆ ಕೊಡಲಿಚ್ಛಿಸುವ ವಿದ್ಯಾರ್ಥಿಗಳು ೧೮ ರಿಂದ ೨೫ವರ್ಷದ ವಯಸ್ಸಿನವರಿರಬೇಕು.

೨ ಈ ಪರೀಕ್ಷೆಗೆ ಬರುವವರು ಪ್ರೇಸಿಂಗಕಾಲೇಜದಲ್ಲ್ಯಾಗಲಿ, ಹೈಸ್ಕೂಲಿನಲ್ಲ್ಯಾಗಲಿ, ಪಾದ್ರಿಸಾಲಿಗಳಲ್ಲ್ಯಾಗಲಿ, ಊರ ಸಾಲೆಗಳಲ್ಲ್ಯಾಗಲಿ, ಮನೆಯೊಳ್ಯಾಗಲಿ, ಕಲಿತವರಿರಬೇಕು.

೩ ಹಳೆಗನ್ನಡ, ಹೊಸಗನ್ನಡ ಭಾಷೆಯಲ್ಲಿ ತುಂಬಾ ಜ್ಞಾನವಿರಬೇಕು.

೪ ಜರ್ಮನ ಪಾದ್ರಿಗಳಾದ ಮೆಕರ್ಬರ್ನ ವರ್ಥಸಾಹೇಬರು ಸಂಗ್ರಹಮಾಡಿದ ಪ್ರಾಕ್ಕಾವ್ಯಮಾಲಾ ಎಂಬ ಗ್ರಂಥವನ್ನು ಸಂಪೂರ್ಣವಾಗಿ ಚೆನ್ನಾಗಿ ಕಲಿಯದವರು ಈ ಪರೀಕ್ಷೆಗೆಯೋಗ್ಯರಾಗರು.

೫ ಕನ್ನಡ ಗದ್ಯಪದ್ಯಾತ್ಮಕ ಗ್ರಂಥಗಳ ಅರ್ಥಜ್ಞಾನವೂ, ಅವುಗಳನ್ನು ಟೀಕಿಸುವ ಯೋಗ್ಯತೆಯೂ, ನಿಬಂಧ ಬರಿಯುವ ಜ್ಞಾನವೂ, ಪದ್ಯಗಳನ್ನು ರಚಿಸುವ ಕವಿತಾಶಕ್ತಿಯೂ ಚೆನ್ನಾಗಿರಬೇಕು.

೬ ಈ ಇನಾಮಿಗೆ ವರ್ಥಸಾಹೇಬರ ಇನಾಮು ಎಂಬ ಹೆಸರುಂಟು.

೭ ಈ ಪರೀಕ್ಷೆ ಜರಗುವದಕ್ಕಿಂತ ಒಂದು ವರ್ಷದ ಪೂರ್ವದಲ್ಲಿಯೇ ಬೆಳಗಾವಿಸಮಾಚಾರದಲ್ಲಿಯೂ ಕನ್ನಡ ಶಾಲಾಪತ್ರಿಕೆಯಲ್ಲಿಯೂ ನೋಟೀಸ ಕೊಡಲಾದೀತು.

೮ ಒಂದೊಂದು ವಿಷಯದ ಗುಣಗಳಲ್ಲಿ ಕನಿಷ್ಟ ಪಕ್ಷಕ್ಕೆ ನೂರಕ್ಕೆ ೩೫ ಗುಣಗಳನ್ನು ಪಡೆಕೊಳ್ಳದವರು ಇನಾಮು ತೆಗೆದುಕೊಳ್ಳಲಿಕ್ಕೆ ಪಾತ್ರರಾಗರು.

೯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಇನಾಮು ಪಡೆಯುವವನ ಇಚ್ಛೆಯಿದ್ದಂತೆ ೪೦ ರೂಪಾಯಿ ಬೆಲೆಯುಳ್ಳ ಪುಸ್ತಕಗಳನ್ನಾಗಲಿ, ವಸ್ತ್ರಗಳನ್ನಾಗಲಿ, ರೋಖರೂಪಾಯಿಗಳನ್ನಾಗಲಿ, ಕೊಡಲಾದೀತು.

ಸದರೀ ಪರೀಕ್ಷೆಯು ಇಂಥಾ ಸ್ಥಳದಲ್ಲಿ ಇಂಥಾದಿವಸ ಆಗುವದೆಂದು ಮುಕ್ಕಟ್ಟಾಗಿ ತಿಳಿಸಲಾದೀತು.

ಮುಕ್ಕಾಮ ಬೆಳಗಾವಿ ತಾ||೧೮|೧೦|೩೧.

(Signed) R. E. CANDY.

ಆಗಟೆಂಗ ಎಜ್ಯುಕೇಶನಲ ಇ. ದಕ್ಷಿಣಭಾಗ.

—o*o—

ಜನರಿಗೆ ತಿಳಿಯದ ಶಬ್ದಗಳನ್ನು ಹಾಕಿ ಬರೆಯುವದೊಂದು ಪಾಂಡಿತ್ಯವೆಂದು ತಿಳಕೊಂಡು ಕೆಲವರು ಸಾಧಾರಣ ಶಬ್ದಗಳನ್ನು ಬಿಟ್ಟುಕೊಟ್ಟು ಜನರಿಗೆ ತಿಳಿಯದ ಶಬ್ದಗಳ ಉಪಯೋಗವನ್ನು ಮಾಡುತ್ತಾರೆ.

ಈ ಕೆಳಗೆ ಬರದಿರುವ ಪತ್ರವು ಈ ಮಾಸಲೇದ್ದು. ಇದನ್ನು ಓದಿದಾಕ್ಷಣವೆ ನಮಗೆ ನಗೆ ಬಂತು, ಮತ್ತು ಪರೀಕ್ಷಕ್ಕೆ ಹೋದಸಮಯದಲ್ಲಿ ಈ ಮಾಸ್ತರರಿಗೆ ನಾವು ಛೀ ಹಾಕುವವರಿದ್ದೇವೆ.

ಮಹಾರಾಜ ರಾಜಶ್ರೀ ಮಾಮಲೇದಾರ ತಾಲೂಕ........

ಇವರ ಸನ್ನಿಧಾನಕ್ಕೆ.

ಸೇವಕ.......................ಹೆಡ್ಡ ಮಾಸ್ತರ.......................

ಇವರ ವಿಜ್ಞಾಪನಾ ತಾರೀಖು ೧೦ನೇ ಅಕಟೋಂಬರ ಸನ್ನ ೧೮೭೦ ಇಸವಿ ತರುವಾಯಾ. ಬಿಟ್ಟುಗಳಿಂದ ಕಟ್ಟಳೆಯು ಪ್ರಕಾರಕ್ಕೆ ಬರುವ ಹಣ ಈ ತಿಂಗಳಲ್ಲಿ ವಸೂಲ ಬಂದ ಮುದ್ರಿಕೆಗಳು (೧೦—೬) ತಮ್ಮ ಬೊಕ್ಕಸಕ್ಕೆ ಸಲ್ಲಿಸುವದಕ್ಕಾಗಿ ಭೃತಕನಾದ ಇವನ ಕೂಡಾ ಕಳುಹಿಸಿ ಇದ್ದೇನೆ. ಕೋಶಕ್ಕೆ ಸೇರಿಸುವದಕ್ಕೆ ಆಜ್ಞೆಯಾಗಿ ತಲ್ಪಿದ್ದಕ್ಕೆ ಉತ್ತರಭಾಗ ದೊರಿಯಬೇಕೆಂದು ಅಪೇಕ್ಷಿಸುತ್ತೇನೆ. ಸದರ ರುಪಾಯಿಗಳಪೈಕಿ ನೋಟು ರುಪಾಯಿ ಹಾಗೂ ರೊಕ್ಕಾ ಕೂಡಿ ಹತ್ತು ರುಪಾಯಿ ೧೦—೬ ಅಣೆಗಳು ಇರುತ್ತವೆ. ಇಂತಿ ವಿಜ್ಞಾಪನಾ.

(ಮಾಸ್ತರನ ಸಹಿ).

(Signed) Chanbussappa B. Dharwar.

ಡಿ. ಎ. ಯಿ. ಜಿಲ್ಲಾ ಧಾರವಾಡ.

—೦*೦—

ನೋಟೀಸ ನಂಬರ ೫೮೯.

ಕಾರವಾರ ತಾಲ್ಲೂಕಪೈಕಿ ಬಾಡ ಸ್ಕೂಲ ಮಾಸ್ತರರು ೭ ದಿವಸಗಳ ಹಜರಿ ಛಪ್ಪೈಸದೆ ಯಿದ್ದಕಾರಣಾ ಮೆಹರ್ಬಾನ ಎಜ್ಯುಕೆಶನಲ ಇನಸ್ಪೆಕ್ಟರಸಾಹೇಬ ಬಹಾದೂರ ದಕ್ಷಿಣಭಾಗ ಯಿವರು ಸದ್ರಿ ಮಾಸ್ತರರಿಗೆ ೫ ರೂಪಾಯಿ ದಂಡ ಮಾಡಿದಾರೆ. ಯಿ ಉದಾಹರಣೆಗೆ ಯೆಲ್ಲ ಮಾಸ್ತರಜನರು ಚೆನ್ನಾಗಿ ಲಕ್ಷಕೊಟ್ಟು ತಮ್ಮತಮ್ಮ ಸ್ಕೂಲ ಹಜರಿ ಛಪ್ಪೈಸುವದ

ರಲ್ಲಿ ಮತ್ತು ಕಾಗದಪತ್ರಗಳೂ ಶಿಸ್ತು ಯಿಡುವದ್ರಲ್ಲಿ ಸಾಹಾ ಜಾಗ್ರತೆಯಿಂದ ನಡಿಯಬೆಕಾಗಿ ಅಪೇಕ್ಷಿಸುತ್ತೇವೆ ತಾರೀಖು ೧೪ನೇ ಅಕಟಂಬರ ೧೮೭೧ನೇ ಇಸವಿ ಕಾರವಾರ.

(Signed) Appajee Baboorao.
ಡಿ. ಎ. ಇ. ಜಿಲ್ಹಾ ಕಾರವಾಡ.

—೦✱೦—

ನೋಟಿಸು.

ಧಾರವಾಡ ಜಿಲ್ಹೆದೊಳಗಿನ ಮಾಸ್ತರರಿಗೆ ತಿಳಿಸುವದೆನಂದರೆ-ಖಾನೆಸುಮಾರಿ ದಿಸಂಬರ ತಿಂಗಳದಲ್ಲಿ ಆಗುವದಿಲ್ಲ ಆದರೆ ೧೮೭೨ನೇ ಇಸವಿ ಫೆಬರವಾರಿ ತಿಂಗಳದಲ್ಲಿ ಆಗುವದು. ತಾರೀಖು ೩೧ ನೇ ಅಗಟಂಬರ ೧೮೭೧ ಧಾರವಾಡ.

(Signed) Chanbussappa B. Dharwar
ಡಿ. ಎ. ಇ. ಜಿಲ್ಹಾ ಧಾರವಾಡ.

—೦✱೦—

Correspondence.

ಪತ್ರವ್ಯವಹಾರವು

ಮಹಾರಾಜ ರಾಜಪೂಜಿತ ರಾಜಮಾನ್ಯ ರಾಜೆಶ್ರೀ ಕನಡ ಮಿತ್ರಪತ್ರದ ಕರ್ತರ ಸನ್ನಿಧಾನಕ್ಕೆ

ಶೇವಕನಾದಾ ಧೊಂಡೊ ನರಸಿಹ್ವ ಮುಳಬಾಗಲಕರ ಸ್ಕೂಲ ಮಾಸ್ತರ ಶಾಳಾ ಕಸಬಾಯಿಟಗಿ ತಾಲೂಕ ಬೀಡಿ ಬರಕೊಂಡ ವಿಜ್ಞಾಪನೆ ಹ್ಯಾಗಂದರೆ.

॥ಕಂದ॥

ಆರಡಿಗುಣವಾಘ್ರಾಣಿಸಿ।
ದೂರದಕೇತಕಿಗೆತಾನೆಪೋಪಂತಿರಲುಂ॥
ದೂರದಿಗುಣಗಳ್ ತದ್ಗುಣ।
ವಾರಂಬಾರತ್ರೆಯುಗ್ಗೈವೃದನ್ಯರತರಲುಂ॥೧॥
ಪದ್ಮಾಕರವೇ ಹಂಸಗೆ।
ಸದ್ಮಂ ತತ್ಪ್ರಾಂತಕ್ಕೈದುಗುಂ ತದ್ವಿಹಗಂ॥
ಇಧ್ಮಾಕರಕೇಂಪ್ರೋಕಾವೆ?।
ಛದ್ಮಾಂಕಿತಘೂಕಕಾಕಬಕಕುತ್ರರುಗಂ॥೨॥
ಬುಧವಧುವಲ್ಲಿಗಳಂಗಿ।
ಲ್ಲದಿರಾಧಾರಂವಿರಾಜಿಸವುಮಾಣಿಕ್ಯಂ॥
ಇದಮೂಲ್ಯಮುವಿರದಿರಹೇ।
ಮುದಪಗರಿನೊಳದಕಿರುವಪೆ?ಯಧಿಕಾಧಿಕ್ಯಂ॥೩॥

ಈ ಕಾರಣದಿಂದಾ ನಾನುಬರೆದ ನಾಲ್ಕು ಪಂಕ್ತಿಗಳಿಗೆ ತಂಮ ಚಿತ್ತಾನುಸಾರವಾಗಿ ಆಶ್ರಯವಂನು ಯಿತ್ತರೆ ಅವು ಒಪ್ಪ್ಯಾವು ಎಂದು ಕೋರುತ್ತೇನೆ.

॥ಆರ್ಯಾ॥

ಮೊದಲೊಳ್ ಶಿವಾಜಿಯಿಂದಾ।
ದುದುರಾಜ್ಯಸ್ಥಾಪನಂಮರಾಠೇರ॥
ಅನಯಾಳುಯವನಸರಕಾ।
ರದಿಸಹಖಂಡಣಿಯುಕೊಂಡನಾಥೇರ॥೧॥
ನೆರೆವರ್ಣನಾರ್ಹವಾತನ।

ಚರಿತ್ರೆಯಿದಂನೋಡಲಾಗಿಬಹುತರವಿ।।
ಸ್ತರಿಸದೆಸಂಕ್ಷೇಪದಿನಾ।
ನಿರೂಪಿಪೆನಖಿಲಕಥೆಯಾಖ್ಯಾನವಂನೆರವಿ।೨।।
ಅಖ್ಯಾತನಭಿಸಂಸರೆಯಂ।
ದಾಖ್ಯಾತಮುಮುಖ್ಯಮುಖ್ಯಸಂಭವರ।।
ಮುಖ್ಯಂಮೊದಲೊಳ್ಕೇರಾ।
ಶಾಖ್ಯಗ್ರಾಮಂನಿವಾಸವಿಸ್ತರರ।।೩।।

।।ಸ್ರಗ್ಧರ।।

ದೌಲತ್ತಾಬಾದಿಗಾಸಂಪದೊಳಿರುವಮುಸುಕ್ಷೇತ್ರವಿಖ್ಯಾತ
ವಾವೇ।
ರೂಳುಪ್ರಸ್ತುಯ್ಯರ್ಚಿತ್ರಂಗಳನಖಿಳಮಹಾರಾಷ್ಟ್ರದಲ್ಲ
ಲ್ಲಿ ಇದರ್ಂ।।
ಮಾಲೋಜೀಭೋಸಲಾಎಂಬನನಪರವಪ್ರಾದುರ್ಭೂತನಾದಂ
ಶಹಾಜೀ।
ಪೇಲಾದಾತಂಗೆಪುತ್ರಂಅವರವರಕುಲೋದ್ಧಾರಕರ್ತರ್ಂ
ಶಿವಾಜೀ।।೪।।

।।ಆರ್ಯಾ।।

ಹಿಂದುಸ್ಥಾನದೊಳಾಸ್ಥದಿ।
ಬಂದರಪರದಿಕ್ಕಿನಿಂಪೌಗಲಣಟರು।।
ಹಿಂದುಸ್ಥಾನವಿಸಿಸಮರದ।
ಬಂದರಪರದಿಕ್ಕಿಗಟ್ಟಿದರಭಟರು।।೫।।

।।ದ್ವಿಪದ।।

ಗೆಲ್ದರವರೀದೇಶದವರಂಸಮರದಿಂ।
ಬುದ್ಧತಪರಾಕ್ರಮದಿನಾಗಸತ್ವರದಿಂ॥೬॥

॥ಆರ್ಯಾ॥

ದಿಲ್ಲಿಯರಾಜಪೃಥ್ವಳನೆಂ।
ದಿಲ್ಲಿಯರಾಜ್ಯಕ್ಕೈದೂಜಿಗರ್ವದಲಿ॥
ಅಲ್ಲಿರ್ದರಾಯಿಂತೆಂದಿಯು।
ವೆಲ್ಲಾಸ್ವಕರಗತವೆನುತಚಿತ್ತದಲಿ॥೭॥
ಅವರಸ್ವಯದೊಳ್ಮುಂದು।
ದ್ಭವಿಸಿದಸುತರೊಳ್ಷಹಾಜಹಾನಂಗೆ॥
ಅವನಿಪನಪದವುಪಲಕ್ಷಿಸಿ।
ತವರಂಗ್ಜೇಬಾಖ್ಯಯುಕ್ತಿಮಾನಂಗ॥೮॥
ಅವಗುಣಯುಧೀರವೀರಂ।
ಅವಗಣಿಸದನಯದಿಧರೆಯಪಾಲಿಸಿದಂ॥
ಅವನಿಪಗಗ್ರಬಲದಿನರಿ।
ಅವನಿಪರುರಪ್ರೋಳ್ಫಲೋಷುಕೀಲಿಸಿದಂ॥೯॥
ಜಾತ್ಯಾಸ್ವಜಾತಿಧರ್ಮಗ।
ಳತ್ಯಕ್ಷಿಸಾಸಿಯುಪರಂಗನಂಪುತದಾ॥
ಸಿತ್ಯದ್ವೇಷಿಯೆಅವುಗಳೂ।
ಳತ್ಯಧಿಕವಿರೋಧಿಂದುಮತಪತದಾ॥೧೦॥
ತದಾತ್ರ್ಯಯುದಿಬಹುಕೂರಸ।
ರದಾತರುಗುಣ್ಣಜನೆಂದುಸುಗುಣಿಗಳು॥
ಸದಾತ್ರ್ಯಯುಸಿರುವಮುಸುಮ।

ರ್ಗದಾಶ್ರಯದಿಕೊಡುವಂತೆಸುಮಣಿಗಳು॥೧೧॥
ಅಂದಿದ್ದಾ ಸರದಾರರ।
ಸಂಮೋಹದಪೂರ್ವಉಕ್ತಮಾಲೋಜೀ।
ಸಂದಿರ್ದಂಸಾತ್ವಿಕತನ।
ದಿಂದಸ್ವಸ್ವಾಮಿದಾಸ್ಯಕಪರಾಜೀ॥೧೨॥
ಮೊದಲೀ ಶಹಾಜಿಹಾನಗ।
ಪದರಿನವನವಂನಮಾಧಿಕಾರಗಳ॥
ಪದವಿಗಳತ್ತಲ್ಪನವರ।
ಪಡಕೊಯಿದಂದಾನವಿಂತುದಾರಿಗಳ॥೧೩॥

ಶಹಾಜಿಯು (ಮಾಲೋಜೀಮಗನ) ವಿವಾಹದವರ್ತಮಾನವು.

॥ಮತ್ತೀಭ॥

ಪದಿನಾನೂರರೊಳೊಂದುಸ್ಪೊದರುಳವಿಶ್ವೀಸಂನೊಳು
ಜೊಂದುಹ।
ಬ್ದದಿಪಂಚಾಬ್ದಗಳಾದಶಾಹಜೀಯುತೋರಲ್ವಾಧವಂಗೆಂದು
ಮೋ॥
ಹದಪುತ್ರಿನಪಸಲ್ಲಿಗಾಗಿಕರೆತಂದಂರೊಪರೀಖಾಪ್ರಕಾ।
ಶದಿಸಾಕ್ಷಾತ್‌ಸ್ಮರತಂನಉತ್ಸವಕೆಬಂದಂಬಾಲನಾಗಿಂದೆ
ನೆ॥೧೪॥

॥ಪೃಥ್ವಿ॥

ಶಿವಾಪ್ರಿಯನನಂಗತಾಂಸತತಕಾಮುಕಾವರನು।
ಶಿವಾನ್ವಿತಸದಂಗನೀತನಿಗೆಸಾಪ್ಯನೀಪೂರನು॥

ನಿಮಾಸಿಯುಬಲೌಘವೋಳ್ ಸ್ಮರವಿಯೋಗಿತಾಪಾವಹಂ।
ನಿವಾಸಿನಿಬಲೌಘವೋಳ್ಗವವಿಯೋಗಿತಾಪಾವಹಂ
॥೧೫॥

॥ಇಂದ್ರವಜ್ರ॥

ಆದಿವ್ಯರೂಪಾಂಕಿತನಾದಬಾಲಂ।
ನೇದಿಷ್ಟಗೋಷ್ಟೀಕ್ಷಿಸಿಜಾಭವಂಪ್ರ॥
ಮೋದಾಬ್ಧಿಯೊಳ್ ಬದ್ಧನುಗಾದಿಯಿಂಸ।
ಮಾಧಾಸದಿಂಬಾಯೆನುತಾಗುಸುವರ್ಣಂ॥೧೬॥

॥ವ. ತಿ॥

ಆಗಿರ್ದಳಂಕದಿತದಾತ್ಮಜೆಸುಂದರಾಂಗಿ।
ಆಗಬ್ಬವಿಲ್ ಸತಿಮತಿಸ್ಥಿತಿಸಂಹರಾಂಗಿ॥
ಆಗಸ್ಕರಳ್ ರತಿಯತಿಪ್ರತಿರಕ್ಷರಕ್ಷೇ।
ಶಾಘಾತಿಗಿಷ್ಟಳವಕೀಮತಿನಾಶಶಿಕ್ಷೆ॥೧೭॥

॥ಶಾ. ವಿ॥

ಆಗಾತಂಕರದಾಕುಮಾರನಸವಿಮಾವಕ್ತ್ರಜಾತಳ್ಗೆತೋ।
ರೀಗೌರಾಂಗನುಕಾಂತನಾಗನಿನಗೊಪ್ಯಾನೀನುಜ್ಯಾಗೆಂದು
ಮ॥
ತ್ತಾಗಲ್ಲಿರ್ದರನೆಂತುಕಾಣಿಸುವದೀಜೋಡೆಂದುನೋಹಾ
ಧಕಂ।
ಆಗಲ್ ಕೇಳ್ದನುತಾಂವಿನೋದದಿಭವಿಷ್ಯದ್ ವೃತ್ತವೆಂಬೆಂ
ನವೆ॥೧೮॥

ಉತ್ಸಂಗಸ್ಥೆಕುಮಾರಿಯುಂಕುವನನುಂ।

ಒದೋಽವರ್ನರಂನೀಃಕ್ಷಿಸಾ॥

ತ್ರ್ಯುತ್ರ್ನಾ ಹಾನ್ವಿತರಾಗಿಬಾಲ್ಯಕ್ಯುತಿಂಯಿಂದತ್ರಿಸ್ತಸುತ್ರ್ಯಾಡು ತ್ರಾ।

ತತ್ರ್ನಾನಿಹಾಸ್ಯವತ್ರಾಪಿವಲ್ಲಿಯಾಗುಲಾಲ್ಬ್ಬಕ್ಕಿಟ್ಟ್ಬಗಳ್ಕೊಂ ಡಾಜ॥

ಲ್ಲುಕ್ರೆಸ್ಲಿಂಗೆಸಮುತ್ತ್ರರಂಸರಿಯಿದೆಂಬೋಽಲಾಙದರ್ ಬಾ ಲಕ್ಕರ್॥೧೯॥

(ಮುಂದೆ ಸಾಗಿರುತ್ತದೆ).

ತಾರೀಖು ೧೭ನೇ ಮಾಹೆಅಗಟುಂಬರ ೧೮೭೧ ಇಸವಿ.

ಶಾಲಾಪತ್ರಕವು.

———ooo———

ಪುಸ್ತಕ ೭] [ಸಂಚಿಕೆ ೮.

ಬೆಳಗಾವಿ, ಮಾಹೆ ನವಂಬರ ೧೮೭೧.

Natural Philosophy.

ಪದಾರ್ಥ ವಿಜ್ಞಾನವು.

೧೮ ಯೆರಡು ಬೇರೆಬೇರೆ ಪದಾರ್ಥಗಳಲ್ಲಿ ನಾದಹೊರಡುತ್ತಿದ್ದು, ವೊಂದರೊಳಗಿನ ನಾದಕ್ಕೆ ಕೆಲವೊಂದು ನಿಯಮಿತಕಾಲದೊಳಗೆ ಆಗುವ ಪ್ರೇರಣೆಗಳ ೧, ೨, ೩ಪಾಲು, ಇತ್ಯಾದಿ ಸರಲಪ್ರಮಾಣದಿಂದ ಮತ್ತೊಂದರೊಳಗಿನ ನಾದಕ್ಕೆ ಪ್ರೇರಣೆಗಳಾಗುತ್ತಿದ್ದರೆ, ಆಯೆರಡೂಸ್ವರಗಳನ್ನು ಕೂಡಿಯಾಗಲಿ, ವೊಂದರಹಿಂದೊಂದಾಗಲಿ ಕೇಳಲಾಗಿ, ಕಿವಿಗೆರಂಜನವಾಗುತ್ತದೆ. ಹೀಗಿದ್ದ ಸ್ವರಗಳಿಗೆ ಗಾಯನಸ್ವರಗಳು, ಅಥವಾ ಸುಸ್ವರಗಳೆಂದು ಅನ್ನುವರು. ಇಂಥಾಸರಲಪ್ರಮಾಣವಿಲ್ಲದಂಥ ಸ್ವರಗಳಿಗೆಲ್ಲ ಅಪಸ್ವರಗಳೆಂದೆನ್ನತಕ್ಕದ್ದು.

೧೯ ಇದಕ್ಕೆ ಉದಾಹರಣೆ ಹ್ಯಾಗಂದರೆ, ಯೆರಡುಸ್ವರಗಳಲ್ಲಿ ವೊಂದು ಪ್ರತಿಸೇಕೆಂಡಿನಲ್ಲಿ ೧೦ರಂತೆ ಪ್ರೇರಣೆಗಳಿಂದ ವುಂಟಾಗುತ್ತಿದ್ದರೆ ಅವೆರಡುಸುಸ್ವರಗಳೆಂದೆನಿಸುವ

ಪ್ರ. ಯಾಕಂದರೆ ವೊಂದರ ೭ಪಾಲು, ಪ್ರೇರಣೆಗಳು ಮತ್ತೊಂದಕ್ಕೆ ವುಂಟು; ಅಂದರೆ, ಅವುಗಳಲ್ಲಿ ಮಂದಸ್ವರದ ಪ್ರೇರಣೆಗಳೆಲ್ಲ ಉಚ್ಚಸ್ವರದ ಪ್ರತಿಯೆರಡನೇ ಪ್ರೇರಣೆಯ ಸಂಗಡ ಆಗುತ್ತ ಹೋಗುತ್ತವೆ. ಇದೇ ಮೇರಿಗೆ ವೊಂದರ ಪ್ರೇರಣೆಗಳು ೩೦, ಮತ್ತೊಂದರವು ೭೦ ಇದ್ದರೆ, ಉಚ್ಚಸ್ವರದಪ್ರತಿ ೩ನೇಪ್ರೇರಣೆಯು ಮಂದಸ್ವರದಪ್ರೇರಣೆಗಳೊಳಗೆ ಕೂಡಿ ಹೋಗುತ್ತದೆ. ಈ ಮೇರಿಗೆ ಸ್ವರಗಳ ಪ್ರಮಾಣಗಳನ್ನು ತಿಳಿದು ಕೊಳ್ಳತಕ್ಕದ್ದು. ಇಂಥಾಪ್ರಮಾಣಗಳುಳ್ಳ ಸ್ವರಗಳೆಲ್ಲ ಕಿವಿಗೆ ಬಹು ಇಂಪಾಗಿರುತ್ತವೆ. ಯಾರಾಗಲಿ, ಹಚ್ಚಿಗಲಿ ಸ್ವರಗಳ ಪ್ರೇರಣೆಗಳು ಏಕಕಾಲಕ್ಕೆ ಆದರೆ, ಅದಕ್ಕೆ ಪ್ರೇರಣೈಕ್ಯವೆಂದು ಹೆಸರು ಕೊಡುವ, ಇಂಥಾ ಪ್ರೇರಣೈಕ್ಯವನ್ನು ಬೇಗಬೇಗ ಮಾಡುತ್ತಹೋಗುವಸ್ವರಗಳೆಲ್ಲ ಸುಸ್ವರಗಳೆಂತಲೂ, ಹೆಚ್ಚು ತಡವಾಗಿ ಮಾಡುತ್ತಹೋಗುವಸ್ವರಗಳೆಲ್ಲ ಅಪಸ್ವರಗಳೆಂತಲೂ ಸಾಧಾರಣವಾಗಿ ತಿಳಿಯತಕ್ಕದ್ದು.

ಈ ಮೇಲಿನಪ್ರಮಾಣಗಳಂತೆ ನಾದಗಳನ್ನು ಕೊಡುವ ತಂತಿಗಳುಳ್ಳ ವಾದ್ಯಗಳಲ್ಲಿ ವೊಂದುತಂತಿಯನ್ನು ಬಾರಿಸಲಾಗಿ, ಉಳಿದ ತಂತಿಗಳನ್ನು ಬಾರಿಸದೆ ಇದ್ದಾಗ್ಯೂ, ಅವುಗಳಿಂದ ನಾದಪೂರಣಹತ್ತುತ್ತದೆ. ವೀಣೆಯಲ್ಲಾಗಲಿ, ಸತಾರದಲ್ಲಾಗಲಿ ತಂತಿಗಳನ್ನು ಕೂಡಿಸಿದನಂತರ ವೊಂದು ತಂತಿಯನ್ನು ಬಾರಿಸಿ ಸಂಗಡಲೆ ಅದಕ್ಕೆ ಕೈಹಚ್ಚಿ ಅದರ ನಾದವನ್ನು ನಿ

ಲ್ಲಿಸಲಾಗಿ, ಉಳಿದ ತಂತಿಗಳಿಂದ ತಮಗೆ ತಾವೇ ಧ್ವನಿಸುವ ನಾದಗಳು ಸ್ಪಷ್ಟವಾಗಿ ಕೇಳಬರುತ್ತವೆ. ಆದದರಿಂದ ಈ ವಾದ್ಯಗಳ ತಂತಿಗಳು ಕೂಡಿದವೋ, ಇಲ್ಲವೋ, ಎಂದು ನೋಡಬೇಕಾದರೆ ಈ ಬಗೆಯಾಗಿ ಪರೀಕ್ಷಿಸಬಹುದು. ಎರಡು ಘಡಿಯಾಲಗಳು ಒಂದರಿಂದೊಂದು ದೂರ ಇರುವಾಗ ಅವುಗಳ ಆಂದೋಲಕಗಳು ಬೇರೆಬೇರೆ ಯಾಗಿ ನಡೆಯುತ್ತಿದ್ದಾಗ್ಯೂ, ಆ ಎರಡು ಘಡಿಯಾಲಗಳನ್ನು ಒಂದಕ್ಕೊಂದು ಹೊಂದಿಸಿ ಇಟ್ಟನಂತರ ಸ್ವಲ್ಪಕಾಲದೊಳಗೆ ಅವುಗಳ ಆಂದೋಲಕಗಳು ಕೂಡಿನಡೆಯುಹತ್ತುವವು. ಒಂದು ಘಡಿಯಾಲದ ಆಂದೋಲಕವನ್ನು ಮತ್ತೊಂದರ ಆಂದೋಲಕವು ನಿಲ್ಲಿಸಬಹುದೆಂತಲೂ, ಆ ನಿಂತ ಆಂದೋಲಕವು ಕೆಲ ಕಾಲದನಂತರ ಪುನಃ ನಡೆಯುತ್ತ, ತನ್ನನ್ನು ನಿಲ್ಲಿಸಿದ ಆಂದೋಲಕವನ್ನು ನಿಲ್ಲಿಸಬಹುದೆಂತಲೂ ಈಲಿಯೊಟ್ಟನೆಂಬ ವಿದ್ವಾಂಸನು ಹೇಳಿರುತ್ತಾನೆ. ಈ ಚಮತ್ಕಾರಗಳೆಲ್ಲ ಪ್ರೇರಣೈಕ್ಯದಿಂದ ಆಗುತ್ತವೆ.

೪೧ ಮೇಲೆ ಹೇಳಿದಂತೆ ಪ್ರಮಾಣಗಳುಳ್ಳ ಸ್ವರಗಳು ಒಂದರಹಿಂದೊಂದು ಹೊರಡುತ್ತಿದರೆ, ಸ್ವರಮಾಧುರ್ಯವೆಂತಲೂ, ಅಂಥಾಸ್ವರಗಳು ಒಂದೇಸಲಕ್ಕೆ ಹೊರಡುತ್ತಿದ್ದರೆ ಸ್ವರೈಕ್ಯವೆಂತಲೂ ಅನ್ನುವರು.

೪೨ ಹಿಂದುಸ್ಥಾನದೇಶದ ಗಾಯನದಲ್ಲಿ ಸ್ವರಗಳಲ್ಲಿ ಮೂರುಗ್ರಾಮಗಳೆಂದರೆ, ಉಚ್ಚ, ಮಧ್ಯಮ, ನೀಚ, ಎಂದು ಮೂರುಮುಖ್ಯವರ್ಗಗಳುಂಟು. ಪ್ರತಿಯೊಂದುಗ್ರಾಮದಲ್ಲಿ ನಿಷಾದ,

ಋಷಭ, ಗಾಂಧಾರ, ಷಡ್ಜ, ಮಧ್ಯಮ, ದೈವತ, ಯೆಂದು ಯೇಳೇಳುಸ್ವರಗಳುಂಟು. ಈ ಸ್ವರಗಳಲ್ಲಿ ಬೇರೆಬೇರೆ ಬಗೆಯಕ್ರಮಗಳನ್ನು ಯೋಜಿಸಿದಂತೆ ಬೇರೆಬೇರೆರಾಗಗಳು ಹುಟ್ಟುತ್ತವೆ.

—o*o—

ದರ್ಶನಾನುಶಾಸನವು.

೨೬ನೇ ಅಧ್ಯಾಯ.

ಪ್ರಕಾಶದ ಉತ್ಪತ್ತಿಯೂ, ಅದರ ಸಿದ್ಧತೆಯೂ— ಪ್ರಕಾಶವು ವೊಂದು ವಿಧದ ಪರಿಣಾಮವು; ಅದರ ಗತಿಯು.

೧ ಪ್ರಕಾಶದಬಗ್ಗೆ, ನೋಟದಬಗ್ಗೆ, ನಿಯಮಗಳನ್ನು ಹೇಳುವ ಶಾಸ್ತ್ರಕ್ಕೆ ದರ್ಶನಾನುಶಾಸನವೆಂದೆನ್ನುತ್ತಾರೆ. ಇದರಲ್ಲಿ ವಕ್ರೀಭವನ ಪ್ರಕರಣ, ಪರಾವರ್ತನ ಪ್ರಕರಣ, ಚಿತ್ರಲೇಖನ, ಯೆಂದು ಮೂರು ಭಾಗಗಳುಂಟು. ಮೊದಲಿನ ಪ್ರಕರಣದಲ್ಲಿ ವಕ್ರೀಭವನಹೊಂದಿದ ಪ್ರಕಾಶದಬಗ್ಗೆ ನಿಯಮಗಳುಂಟು; ಯೆರಡನೇ ಭಾಗದಲ್ಲಿ ಪರಾವೃತ್ತವಾದ, ಅಂದರೆ ಹಿಂದಿರುಗಿದ ಪ್ರಕಾಶದಬಗ್ಗೆ ನಿಯಮಗಳುಂಟು; ಮೂರನೇ ದರಲ್ಲಿ ಘನಪದಾರ್ಥಗಳ ಆಕೃತಿಗಳನ್ನು ಹ್ಯಾಗೆ ಬರೆಯಬೇಕೆಂಬದರಬಗ್ಗೆ ನಿಯಮಗಳುಂಟು.

೨ ಪ್ರಕಾಶದ ಉತ್ಪತ್ತಿಯು—ಈಗವಿದ್ವಾಂಸರು ಪ್ರಕಾಶಕ್ಕೆ ಯೆರಡುಬಗೆಯ ಸಿದ್ಧತೆಯನ್ನು ಹೇಳುತ್ತಾರೆ. ಒಂದೊಂದನ್ನು ಹೇಳುವ ಜನರು ತಮ್ಮತಮ್ಮ ಮತಕ್ಕೆ ಅನೇ

ಕ ಸಾಧಕ ಪ್ರಮಾಣಗಳನ್ನು ತೋರಿಸುತ್ತಾರೆ. ಇವುಗಳಲ್ಲಿ ವೊಂದಕ್ಕೆ ನ್ಯೂಟನ್ನನ ಸಿದ್ಧತೆಯೆಂತಲೂ, ಮತ್ತೊಂದಕ್ಕೆ ಹೈಜೆನ್ನನ ಸಿದ್ಧತೆಯೆಂತಲೂ ಹೆಸರುಂಟು. ಈ ಯೆರಡೂ ಸಿದ್ಧತೆಗಳು ಅತಿಕೌಶಲ್ಯದಿಂದಲೂ, ಬಹು ಮನೋಹರವಾಗಿಯೂ ರಚಿಸಲ್ಪಟ್ಟವೆ. ಈ ಯೆರಡುಗಳಿಗೂ ಗಣಿತಶಾಸ್ತ್ರದಲ್ಲಿ ಅತ್ಯುತ್ತಮ ವಿದ್ವಾಂಸರೆಂದೆನಿಸಿಕೊಂಡವರ ಆಶ್ರಯವುಂಟು.

೧ ಪ್ರಕಾಶದಸಿದ್ಧತೆಯು—ನ್ಯೂಟನ್ನನ ಸಿದ್ಧತೆಗೆ ಪರಮಾಣುಸಿದ್ಧತೆಯೆಂದು ಹೆಸರುಂಟು. ಇದರಲ್ಲಿ ಸ್ವಪ್ರಕಾಶಕವಾದ ಪದಾರ್ಥಗಳ ವೈಯಿಂದ ಯಾವಾಗಲೂ ಹೊರಡುತ್ತಿರುವ ಮನುಷ್ಯರ ಇಂದ್ರಿಯಗಳಿಗೆ ಕೇವಲ ಅಗೋಚರವಾದ ಅತಿಸೂಕ್ಷ್ಮಪರಮಾಣುಗಳ ಸಮುದಾಯವೇ ಪ್ರಕಾಶವೆಂದು ಹೇಳಲ್ಪಟ್ಟದೆ. ಹೈಜೆನನೆಂಬ ವಿದ್ವಾಂಸನು ಪ್ರತಿಪಾದಿಸಿದ ಕ್ರಮವು ಹ್ಯಾಗಂದರೆ, ಸೃಷ್ಟಿಯಲ್ಲಿ ವೊಂದು ಅತಿಸೂಕ್ಷ್ಮವೂ, ಪರಮಾವಧಿಯ ಸ್ಥಿತಿಸ್ಥಾಪಕ ಧರ್ಮವುಳ್ಳದ್ದೂ ಆದಪ್ರವಾಹಿಯು ಯೆಲ್ಲಕಡೆಯೂ, ಯೆಲ್ಲವಸ್ತುಗಳಲ್ಲಿಯೂ, ವ್ಯಾಪ್ತವಾಗಿರುತ್ತದೆ; ಅದರಲ್ಲಿ ಸ್ವಪ್ರಕಾಶಕವಾದ ಪದಾರ್ಥಗಳಿಂದ, ನೀರೊಳಗೆ ಚಲ್ಲಿದಕಲ್ಲುಗಳಿಂದ ಹುಟ್ಟಿದಂತೆ, ತೆರೆಗಳು ಯಾವಾಗಲೂ ಹುಟ್ಟುತ್ತಿರುತ್ತವೆ; ಅವೇತೆರೆಗಳೇ ಪ್ರಕಾಶವು. ಈ ಯೆರಡನೇ ಸಿದ್ಧತೆಯು ಬಹುಜನ ದರ್ಶನಾನು ಶಾಸನಶಾಸ್ತ್ರಜ್ಞರಾದ ವಿದ್ವಾಂಸರಿಂದ ಸ್ವೀಕರಿಸಲ್ಪಟ್ಟದೆ.

ಳ ಅವುಗಳಲ್ಲಿ ಯಾವಸಿದ್ಧತೆಯನ್ನು ಸ್ವೀಕರಿಸಿದಾಗ್ಯೂ ಪ್ರಕಾಶವು ಸೂರ್ಯಮೊದಲಾದ ಸ್ವಪ್ರಕಾಶಕ ಪದಾರ್ಥಗಳಿಂದ ಹೊರಟು, ನಮ್ಮ ಕಣ್ಣುಗಳಲ್ಲಿ ಸೇರಿ, ಆ ಪದಾರ್ಥಗಳು ನಮಗೆ ಕಾಣಿಸುವಹಾಗೆ ಮಾಡುತ್ತದೆಂಬುದು ನಿಜವು. ಪ್ರಕಾಶದ ಅಭಾವವೇ ಕತ್ತಲೆಯು. ಪ್ರಕಾಶದ ಗತಿಯು ಅತಿ ವೇಗವುಳ್ಳದ್ದು; ಅದು ಅಡ್ಡಿಯಾಗುವ ವಸ್ತುಗಳು ಸರಳ ರೇಖೆಯಿಂದ ಎಡೆಬಿಡದೆ ಹೋಗುತ್ತಿರುತ್ತದೆ. ಅವಕ್ಕೆ ಅಡ್ಡಿಯುಮಾಡುವ ಪದಾರ್ಥದಿಂದ ನೆರಳುವುಂಟಾಗುತ್ತದೆ. ಅದು ಕೆಲವು ಪದಾರ್ಥಗಳ ಮಧ್ಯದೊಳಗಿಂದ ಬಹುವೇಗವಾರಾಗಿ ಹೋಗುತ್ತದೆ. ಹೀಗೆ ಪ್ರಕಾಶಕ್ಕೆ ತಮ್ಮೊಳಗಿಂದ ಮಾರ್ಗಕೊಡುವ ವಡವೆಗಳಿಗೆ ಪಾರದರ್ಶಕಗಳೆಂದು ಹೆಸರುಂಟು. ಪಾರದರ್ಶಕ ಪದಾರ್ಥಗಳ ಮಧ್ಯದೊಳಗಿಂದ ಪ್ರಕಾಶವು ವಕ್ರರೇಖೆಯಿಂದ ಹೊರಡುತ್ತಿದ್ದರೆ, ಅದು ತನ್ನ ಮೊದಲಿನ ದಿಕ್ಕನ್ನು ಬಿಟ್ಟು, ವಕ್ರತ್ವವು ಹೆಚ್ಚು ಕಡಿಮೆ ಯಿದ್ದಂತೆ ಹೆಚ್ಚುಕಡಿಮೆಯಾಗಿ ಮಣಿಯುತ್ತದೆ. ಈ ಮಣಿತಕ್ಕೆ ವಕ್ರೀಭವನ ವೆಂದೆನ್ನುತ್ತಾರೆ. ಆದರೆ ಶುಭ್ರಪ್ರಕಾಶದ್ದೊಂದು ಕಿರಣಘಟಿಯು (ಅನೇಕಕಿರಣಗಳ ಜೋಡೆಯು) ಮಣಿದಾಗ ಅದರೊಳಗಿನ ಕಿರಣಗಳೆಲ್ಲ ಸರಿಯಾಗಿ ಮಣಿಯುವದಿಲ್ಲ. ಆರೇಳು ಬೇರೆ ಬೇರೆ ಬಣ್ಣಗಳ ಕಿರಣಗಳು ಕೂಡಿ ಶುಭ್ರಪ್ರಕಾಶ ವುಂಟಾಗಿರುತ್ತದೆ. ಆದದರಿಂದ ಆ ಕಿರಣಘಟಿಯು ಮಣಿಯುವಾಗ ಈ ಬೇರೆ ಬೇರೆ ಬಣ್ಣಗಳ ಕಿರಣಗಳು ಬೇರೆ ಬೇರೆ ಯಾಗುತ್ತವೆ. ಈ ವರ್ಣಕ

ರ್ಣಗಳು ಪುನಃ ಕೂಡಿದವೆಂದರೆ, ಮತ್ತೆ ಬಿಳಿವರ್ಣದ ಪ್ರಕಾಶವುಂಟಾಗುತ್ತದೆ. ಇದರಿಂದ ತಿಳಿಯುವದೇನಂದರೆ, ಶುಭ್ರವರ್ಣವು ಶುದ್ಧ ವರ್ಣವಲ್ಲ, ಮಿಶ್ರವರ್ಣವು. ಅರಿಶಿನ, ಕಪ್ಪು ಬಣ್ಣಗಳು ಕೂಡಿ ಹಸರು ಬಣ್ಣ ಹುಟ್ಟುವಂತೆಯೇ ಏಳು ಭಿನ್ನ ಭಿನ್ನ ಮೂಲವರ್ಣಗಳು ಕೂಡಿ ಶುಭ್ರವರ್ಣವುಂಟಾಗುತ್ತದೆ.

—೦*೦—

Extracts from Rajashekhara.

ರಾಜಶೇಖರದೊಳಗಿನ ಶ್ಲೋಕಗಳು.

ಕರಡಿಯ ವರ್ಣನೆ.

॥ಚಂಪಕಮಾಲಾವೃತ್ತ॥

ಕಡುಪಸಿವೆತ್ತು ಪುತ್ತಿನೆಡೆಯೊಳ್ಮೃಗ ಮಿಕ್ಕು ತಿರುಂಬಿಗೆಂಡುಮು।
ತ್ತಿಡೆವಿಡದೂಡು ತಿರ್ಬನಸುಬೊಂದು ಮಹೋರಗ ಮಾನನಾಗ್ರಮಂ॥
ಬಿಡದಡರ್ದಲ್ಲಿ ನೇಲುತಿರೆ ಸುಂಡಿಲ ಪೋಲ್ವರೆ ಪಾಯೆ ಪಲ್ಗಳಂ।
ತ್ತೊಡನೆ ಸೆದತ್ತು ಬಳ್ಗರಡಿ ಕಾನನದೊಳ್ಕರಿ ಪೋತದಂತೆವೋಲ್॥೭॥

ಅರ್ಥ—ಒಂದು ದೊಡ್ಡ ಕರಡಿಯು ಅರಣ್ಯದಲ್ಲಿ ಬಹಳ ಹಸಿದು, ಇರುವಿಗಳನ್ನು ತಿನ್ನಬೇಕೆಂದು ಹುತ್ತಿನೊಳಗೆ ಮೋರೆಯನ್ನು ಇಟ್ಟು ಎಡೆಬಿಡದೆ ಊದುತ್ತಿರಲಾಗಿ, ಆ ಹು

ತ್ತಿನೊಳಗಿನ ದೊಂದು ದೊಡ್ಡ ಹಾವು ಅದರಮುಖವನ್ನು ಹಿ
ಡಿದುಕೊಂಡು ಸುಂಡಿಲದಂತೆ ಜೋತಾಡಹತ್ತಿತು; ಆ ಕರಡಿ
ಯು ಬಾಯೊಳಗಿಂದ ಹೊರಟನೊರೆಯು ಕೋರೆಯಹಾಗೆ
ತೋರಿತು; ಆ ಕರಡಿಯು ಆನೆಯ ಮರಿಯಹಾಗೆ ಒಪ್ಪಿತು.

ಕವಿತೆಯಬಗ್ಗೆ

ಕಂದ॥ ಕಿರಿಯಕೃತಿ ಪಿರಿದೆನಿಕ್ಕುಂ।
ಪೆರರರ್ಥಕೆ ಕೈದುಡಂಕದಿರೆ ಸತ್ಕವಿಗಂ॥
ಕಿರಿಯಸಿರಿ ಪಿರಿದೆನಿಕುಂ।
ಪೆರರರ್ಥಕೆ ಕೈದುಡುಂಕದಿರೆ ಮನುಜಂಗಂ॥೧॥

ಅರ್ಥ—ಅನ್ಯರ ದ್ರವ್ಯವನ್ನು ಅಪಹರಿಸದೆ ತನ್ನ ಕಷ್ಟದಿಂ
ದ ಸಂಗ್ರಹಿಸಿದ ಮನುಷ್ಯನ ಸಂಪತ್ತು ತುಸುವಿದ್ದಾಗ್ಯೂ ಹ್ಯಾ
ಗೆ ಬಹಳೆನಿಸುವದೋ, ಹಾಗೆ ಅನ್ಯಕವಿಗಳ ಅರ್ಥಗಳನ್ನು ತ
ಕ್ಕೊಳ್ಳದೆ ಸ್ವಕಪೋಲ ಕಲ್ಪನೆಯಿಂದ ರಚಿಸಿದ ಸತ್ಕವಿಯು
ಕಾವ್ಯವು ಸಣ್ಣದಿದ್ದರೂ ದೊಡ್ಡದೆನಿಸುವದು.

॥ಚಂಪಕಮಾಲಾವೃತ್ತ॥

ಮೊದಲ ಕವೀಂದ್ರರೊಲೆದ್ದೊರೆದ ಸತ್ಕೃತಿ ಸಂಚಯು
ಮಾಧರಿತ್ರಿಯೋ।
ಳ್ಪುದಿದಿರೆ ನೋಡಿ ತುಷ್ಟಿವಡಲೊಲ್ಲದೆ ಕಬ್ಬಿಗರೇಕೆ
ಕಬ್ಬಮಂ॥
ಗದಿಪರೊ ಬೇರೆನುತ್ತನುಡಿವಳ್ಕ ಜಗಾರನವಂಗೆ ಪುತ್ರ
ಸಂ।
ಪದವೊದವ್ಯಾಕೆ ಬೇರೆ ಪರಪುತ್ರರನೀಕ್ಷಿಪ ತುಷ್ಟಿಸಾ

ಲವೇ?॥೧॥

ಅರ್ಥ—ಮೊದಲಿನ ಕವಿಗಳು ರಚಿಸಿದ ಅನೇಕ ಸತ್ಕಾವ್ಯಗಳು ಭೂಮಿಯಲ್ಲಿ ತುಂಬಿರಲಾಗಿ, ಅವುಗಳನ್ನು ಓದಿ ತೃಪ್ತಿಪಡದೆ, ಕವಿಗಳು ಬೇರೆ ಯಾಕೆ ಕಾವ್ಯಗಳನ್ನು ರಚಿಸುತಾರೆ ಎಂದು ನುಡಿವ ಹೊಟ್ಟೆಕಿಚ್ಚನವರಿಗೆ ಹೇಳುವದೇನಂದರೆ, ಹೆರವರ ಮಕ್ಕಳನ್ನು ನೋಡಿ ಸಂತೋಷಪಟ್ಟರೆ ತೀರಿತು, ತನ್ನಹೊಟ್ಟೆಲಿ ಮಕ್ಕಳು ಹುಟ್ಟಬೇಕೆಂಬುವ ಕಾಂಕ್ಷೆ ಆತಗ್ಯಾಕೆ?

॥ಚಂಪಕಮಾಲಾವೃತ್ತ॥

ಎರವಿನ ಪೆಚ್ಚಮಂ ತಳೆದಿದಕ್ಕೆಣೆ ಮಾರದಿದೆಂದುಲೋಗರಾ।
ಭರಣಮನೇಳಿಪಂತೆ ತನಗಿಲ್ಲದೆ ಸಾರಕವಿತ್ವಮನ್ಯಕಾ॥
ವ್ಯರುಚಿರ ಪದ್ಯಮಂ ಪಠಿಸಿ ಸತ್ಕವಿ ನಿರ್ಮಿತ ಪದ್ಯಮಿಂತಿದ।
ಕ್ಕೊರೆಯೆಂಪಿನುತ್ತಿಕಾಳ್ಗೆಡೆವನಂ ನಗದಿರ್ಪರೆ ಬಲ್ಲಕಬ್ಬಿಗರ್॥೨॥

ಅರ್ಥ—ಎರವಿನ ಆಭರಣವನ್ನು ಧರಿಸಿಕೊಂಡು ಇದಕ್ಕೆ ಸರಿಯಲ್ಲೆಂದು ಮುಂದಿಯ ಆಭರಣವನ್ನು ಹಳಿಯುವಂತೆ, ತಾನು ಕವಿತೆಯನ್ನು ರಚಿಸದೆ ಅನ್ಯಕವಿಯ ಕಾವ್ಯದೊಳಗಿನ ಸುಂದರವಾದ ಪದ್ಯವನ್ನು ಪಾಠಮಾಡಿ ಸತ್ಕವಿ ರಚಿಸಿದ ಪದ್ಯವು ಇದಕ್ಕೆ ಸರಿಯೇ ಎಂದು ನಿಂದಿಸುವವನನ್ನು ನೋಡಿ ಬಲ್ಲಂಥ ಕವಿಗಳು ನಗುವರು.

||ಚಂಪಕಮಾಲಾವೃತ್ತ||

ಬರೆಯೆ ಸುವರ್ಣರೇಖೆ ಬಿಗಿಬಾರದೊಡಂ ಪೊಸಚೆನ್ನದಂತಿಕಂ|
ಬಿರಸಿದೊಡಿಕ್ಷು ಕಾಂಡಮನೆ ಸೀಯ್ಯನೆ ಸದ್ರಸ ಮುಣ್ಮದಿರ್ದೊಡಂ||
ಸರಗೊಳಿಸುತ್ತೆ ತಾಳೆಮಣಿ ಮಾಲಿಕೆಯಂತೆ ಕೊರಲ್ಗೆ ಕಾಂತಿಯಾಂ|
ನೆರಪದೊಡಂ ರಸಜ್ಞ ಸುಮನೋಜ್ಞಮೆ ಕಾವ್ಯಮದುಂ ಧರಿತ್ರಿಯೊಳ್||೪||

(ಇದರಲ್ಲಿ ಶ್ಲೇಷಾರ್ಥವುಂಟು)

ಅರ್ಥ–ಬರೆಹಾಕುತ್ತಿರಲಾಗಿ ಹೊಸಚಿನ್ನದ ಸುಂದರವಾದ ಗೆರೆಯು ಹ್ಯಾಗೆ ಮೂಡುತ್ತದೋ, ಹಾಗೆ ಹೇಳುವಾಗ ಛಂದಸ್ಸ ಶಾಸ್ತ್ರದ ಕಟ್ಟಳೆಗೆ ಸರಿಯಾಗಿ ಅಕ್ಷರಗಳು ಬಾರದಿದ್ದರೆ, ಕಬ್ಬು ಕಡಿಯುತ್ತಿರಲಾಗಿ ಸವಿರಸವು ಹ್ಯಾಗೆ ಹೊರಡುತ್ತದೋ ಹಾಗೆ ಖಂಡಾನ್ವಯ ಮಾಡಲಾಗಿ ಶೃಂಗಾರಾದಿರಸವು ಹೊರಡದಿದ್ದರೆ, ಸರಗೊಳಿಸಿ ರತ್ನಮಾಲೆಯನ್ನು ಹಾಕಿಕೊಂಡರೆ ಹ್ಯಾಗೆ ಕೊರಳಿಗೆ ಶೋಭೆಯನ್ನುಂಟು ಮಾಡುತ್ತದೋ ಹಾಗೆ ಪದ್ಯಗಳನ್ನು ಓದುವಾಗ ಕೊರಳಿಗೆ ಅಂದವಾಗದಿದ್ದರೆ ಆ ಕಾವ್ಯವು ಭೂಮಿಯಲ್ಲಿ ರಸಿಕರ ಮನಸಿಗೆ ಮನೋಹರವಾದೀತೇ? ಆಗದು.

ಕಂದ||ಅಂಗದ ಲೋಡಣಾಡಿಯೊಡನೆ
ಅಂಗಳ ಗೋಚರಮಾ ಸುದತಿ ಯಧರಾಮೃತದಿಂ||

ಬಿಂಗಿದುಗುರುವೋ ಸುಧಾರಸ।

ಮಂಗಿಲ್ದಂಕವೊ ಭವದ್ವಚ ಸ್ಸಮುದಯವೋ॥೫॥

ಅರ್ಥ–(ಪಂಡಿತರು ಷಡಕ್ಷರಿಕವಿಯ ಮಾತುಗಳಿಗೆ ಅಂದದ್ದು)ನಿನ್ನ ವಚನಗಳು, ಕ್ಷೀರಸಾಗರದ ಸಂಗಡಿಗಳೋ, ಚಂದ್ರನ ಒಡಹುಟ್ಟಿದವುಗಳೋ, ರಮಣಿಯರ ತುಟಿಯೊಳಗಿನ ಅಮೃತಕ್ಕೆ ಇಂಪನ್ನು ಕಲಿಸುವ ಗುರುಗಳೋ, ಅಮೃತವನ್ನು ಸೋಲಿಸಿದ ಗುರ್ತುಗಳೋ ಅನ್ನುವಹಾಗೆ ಇಂಪಾಗಿ ಒಪ್ಪಿದವು.

॥ಚಂಪಕಮಾಲಾವೃತ್ತ॥

ಬರೆಬರೆದಂತದಂತೊಡೆದು ತಿಟ್ಟನೆನಿಟ್ಟಿಸಿ ಮೆಲ್ಲನೊಂ
ದುಮಂ।
ಸರಸಪದಾರ್ಥಮಂತುಡುಕಿಕಾಣದೆಕಳ್ಳ ಪರೋಕ್ತ್ಯು
ಕ್ತಿಯಂ
ವಿರಚಿಸುತಂತು ಮಿಂತುಮುಳಿ ಗರ್ಬಮನಾಗಿಸಿ ಕೇಳಿಸು
ತ್ತಕಾ।
ಉರಿಚರತೋರ್ಪ ದುಷ್ಕವಿಮಹಾ ಕವಿಮಧ್ಯದೊಳೊಪ್ಪ
ಲಾಪನೇ?॥೬॥

ಅರ್ಥ–ಬರೆಬರೆದು ಅದನ್ನು ದಿಟ್ಟಿಸಿನೋಡಿ; ಅದರಲ್ಲಿ ಯುಕ್ತಿಯನ್ನು ಕಾಣದೆ ಅದನ್ನು ಪುನಃ ಅಳಿಸಿ, ಮೆಲ್ಲನೆ ಅನ್ಯಕವಿಗಳ ಗ್ರಂಥದೊಳಗಿನ ಯುಕ್ತಿಯನ್ನೂ, ಸರಸಪದಾರ್ಥಗಳನ್ನೂ ಕದ್ದುತಕ್ಕೊಂಡು ಹಾಗೂ ಹೀಗೂ ಒಂದುಬಗೆ ಕಾವ್ಯವನ್ನು ರಚಿಸಿ, ಪಾಮರರ ಮುಂದೆ ಓದಿಹರಟಿಸುವ ದು

ಷ್ಕವಿಯು ಮಹಾಕವಿಗಳ ನಡುವೆ ಒಪ್ಪುವನೇ? (ಒಪ್ಪಲಾರ ನೆಂಬರ್ಥ).

ಕಂದ|| ಅಳಿಗರ್ಬಿಗ ನೋರ್ವರ್ಣಮುಂ|
ಜುಳಯುಕ್ತಿಯನೊಂದ ನೊಂದಿಸರಿವರ್ಪನೆಯ|
ಗರ್ಳಕವಿಗೆರನ್ನವೊಂದಂ|
ತಳೆದಹಿರತ್ನಾಕರಕ್ಕೆ ಸರಿವಂದಪುದೇ?||೭||

ಅರ್ಥ—ಒಂದು ರತ್ನವನ್ನು ಧರಿಸಿದ ಸರ್ಪವು ಅನೇಕ ರತ್ನಗಳಿಗೆ ಸ್ಥಾನವಾದ ಸಮುದ್ರಕ್ಕೆ ಹ್ಯಾಗೆ ಸರಿಯಾಗದೋ, ಹಾಗೆ ಒಂದು ಮಂಜುಳವಾದ ಯುಕ್ತಿಯನ್ನು ರಚಿಸಿದ ಬಡಕವಿಯು ಅನೇಕ ಯುಕ್ತಿಗಳನ್ನು ರಚಿಸಬಲ್ಲಂಥ ಮಹಾಕವಿಗೆ ಸರಿಯಾಗನು.

ಕಂದ|| ಸಕಳಕಳಾನಿಧಿನಿಕಟದೆ|
ಸುಕರರಸಪ್ರಕಟಕಾವ್ಯವೆಂಬಮೃತಪಯೋ||
ಧಿಕರಂಪೆರ್ಚುಗುಮಲ್ಲದೆ|
ಕುಕವಿಬುಧಪ್ರಭೃತಿಯಿದಿರೊಳೇಂಪೆರ್ಚುಗುಮೋ||೮||

ಇದರಲ್ಲಿ ಶ್ಲೇಷಾರ್ಥವುಂಟು.

ಅರ್ಥ—ಶೃಂಗಾರಾದಿ ರಸಗಳಿಂದ ಪೂರ್ಣವಾದ ಕಾವ್ಯವೆಂಬ ಕ್ಷೀರಸಾಗರವು ಯಾವತ್ತು ಕಲೆಗಳನ್ನು ಬಲ್ಲಂಥ ಪಂಡಿತನೆಂಬ ಚಂದ್ರನಿಂದ ವರ್ಧನವಾಗುವದಲ್ಲದೆ, ಕುಕವಿ, ಕುಪಂಡಿತರೆಂಬ ಶುಕ್ರ, ಬುಧಗ್ರಹಗಳಿಂದ ವರ್ಧನವಾಗದು.

ಕಂದ|| ಕೃತಿಕೃತಕೃತಿಯಂ ಕ್ಷಿತಿಯೊಳ್|
ಕ್ಷ್ಮಿತಿರಹಿತರ್ಗಳಿಯರೆಂದುವಳಿಯೋಂಮುಳಿಯೋಂ||

ರತಿಲಾಲಸರಮಣೀಗಮು।
ರತಿಯಂಕ್ಲೀಬರ್ಕಳಿಂತುಮೇನರಿದಪರೇ॥೯॥

ಅರ್ಥ—ಕ್ರೀಡಾಪೇಕ್ಷೆ ಯುಳ್ಳಂಥ ಸುಂದರಿಯು ಸಮರತಿಯ ಸುಖವನ್ನು ಅನುಭೋಗಿಸಲಾರದ ನಪುಂಸಕರನ್ನು ಹಳಿಯುವದುಹ್ಯಾಗೆ ನಿಷ್ಫಲವೋ, ಹಾಗೆ ಭೂಮಿಯಲ್ಲಿ ರಸವತ್ಕಾವ್ಯದ ರಸವನ್ನು ತಿಳುಕೊಳ್ಳಲಾರದ ದಡ್ಡರನ್ನು ಹಳಿಯುವದು ನಿಷ್ಫಲವು.

—೦*೦—

Notice.

ನೋಟಿಸು.

ದಕ್ಷಿಣಭಾಗದೊಳಗಿನ ಯಾವತ್ತು ಮಾಸ್ತರ ಜನರಿಗೆ ತಿಳಿಸುವದೇನಂದರೆ—ಕೆಳಗೆ ಬರೆದ ಎರಡು ಬಣ್ಣದ ಚಲನಗಳನ್ನು ಡೆಪ್ಯುಟಿ ಇನಸ್ಪೆಕ್ಟರರು ತಮ್ಮ ಜಿಲ್ಲೆಯೊಳಗಿರುವ ಪಂತೋಜಿಗಳಿಗೆ ಕಳುಹಿಸುವರು. ಅವುಗಳ ಉಪಯೋಗವನ್ನು ಕೆಳಗೆ ಬರೆದಂತೆ ಮಾಡಬೇಕು:

ಕೆಂಪು ಚಲನಗಳು:—ತಿಜೋರಿಗೆ ಸರಕಾರೀ ಹಣವನ್ನು ಭರಣಾ ಮಾಡುವ ಕಾಲಕ್ಕೆ ಚಲನಗಳಮೇಲೆ ಬರೆದಪ್ರಕಾರ ಕಾರಣಮುಂತಾದವುಗಳನ್ನು ಚನ್ನಾಗಿ ತೋರಿಸಿ ಹಣವನ್ನು ತಿಜೋರಿಗೆ ಕಳುಹಿಸುವ ಕಾಲಕ್ಕೆ ಈ ಚಲನಗಳ ಉಪಯೋಗವನ್ನು ಮಾಡಬೇಕು.—

ಹಳದಿ ಚಲನಗಳು:—ಸರಕಾರೀ ಮತ್ತು ಲೋಕಲ್‌ಫಂಡಪ ಹಣದೊಳಗಿಂದಲೇ ಯಾವ ಸಾಲಿಗಳಿಗೆ ಸಂಬಳ ಮು

ಟ್ಟುತ್ತದೋ ಅಂಥಾ ಸಾಲಿಗಳಮಾಸ್ತರರಾಗಲಿ ಶಿಕ್ಷಕರಾಗ ತಮ್ಮ ಸಾಲೀ ಫೀ, ಮತ್ತು ಮುರುಕ ಸಾಮಾನುಗಳನ್ನು ಮಾರಿದ ಹಣವನ್ನು ತಾಲೂಕ ಅಥವಾ ಜಿಲ್ಲೆಯ ತಿಜೋ ಗೆ ಭರಣಾ ಮಾಡುವ ಕಾಲಕ್ಕೆ ಈ ಚಲನಗಳನ್ನು ಉಪ ಯೋಗಿಸ ಬೇಕು.

(Signed) R. E. CANDY.
ಅ. ಎ. ಇ. ದ. ಭಾಗ.

—o*o—

Remarks on the Prize Essay published in the last No.

ಹಿಂದಿನ ಪತ್ರಿಕೆಯಲ್ಲಿ ಛಾಪಿಸಿದ ನಿಬಂಧದ ವಿವರಣ.

ಕಳೆದ ತಿಂಗಳಿನ ಶಾಲಾಪತ್ರಿಕೆಯಲ್ಲಿ "ಚನ್ನವ್ವ ಸವಸಿ" ಯೆಂಬಸಹಿಯಿಂದ ಪತ್ರರೂಪವಾಗಿ ಬರಿದದ್ದೊಂದು ನಿಬಂಧವು ಛಾಪಿಲ್ಪಟ್ಟದೆ. ಈ ಚನ್ನವ್ವ ಸವಸಿ ಯೆಂಬವಳು ರಾಯರ ಪುಬ್ಬಳಿಯೊಳಗಿನ ಹೆಣ್ಣು ಹುಡುಗಿಯರ ಶಾಲೆಯ ವಿದ್ಯಾರ್ಥಿಗಳಲ್ಲಿ ಒಬ್ಬಳು. ಮೊಹೆಬೂಬಾನ್ ಇನ್‌ಸ್ಪೆಕ್ಟರ ಧೊರೆಗಳು ಕಳೆದ ತಿಂಗಳಲ್ಲಿ ಪುಬ್ಬಳಿಗೆ ಹೋದಾಗ ಈ ಶಾಲೆಯ ಪರೀಕ್ಷೆಯ ಸಮಯದಲ್ಲಿ ನಾಗಪಂಚಮಿಯಬಗ್ಗೆ ಸರಸಾದ ನಿಬಂಧವನ್ನು ಬರಿದವಳಿಗೆ ೧ ರೂಪಾಯಿ ಇನಾಮು ಸಿಕ್ಕುವದೆಂದು ಹೇಳಿದರಿಂದ ಯೆಲ್ಲ ವಿದ್ಯಾರ್ಥಿಗಳು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಬರಿದು ಒದಿದ ನಿಬಂಧಗಳಲ್ಲಿ ಇದನ್ನು ಸ್ವೀಕರಿಸಿ, ಇನ್‌ಸ್ಪೆಕ್ಟರ ಧೊರೆಗಳು

ಚನ್ನಪ್ಪನಿಗೆ ೧೦ರೂಪಾಯಿ ಇನಾಮು ಕೊಟ್ಟರು. ಈ ನಿಬಂಧವನ್ನು ಚನ್ನಪ್ಪನು ಬರೆದಹಾಗೇ ಛಾಪಿಸುತ್ತೇವೆ. ಇದರಲ್ಲಿ ಭಾಷೆಯ ತಪ್ಪುಗಳು ಕೆಲವುಂಟು. ಆದಾಗ್ಯೂ ವಿಷಯದ ರಚನೆಯನ್ನೂ, ವರ್ಣನೆಯನ್ನೂ ನೋಡಲಾಗಿ ಚನ್ನಪ್ಪನ ಯತ್ನವು ಪ್ರೌಢವಾಗಿ ಸಫಲವಾಗಿರುತ್ತದೆಂದು ಹೇಳಬಹುದು. ಇದು ಅತಿ ಸಂತೋಷಕರವಾದ ಸಂಗತಿಯೆಂದು ನಾವು ಹೇಳಬೇಕಾಗಿಲ್ಲ. ಈ ಉದಾಹರಣೆಯನ್ನು ನೋಡಿ ಬೇರೆ ಹೆಣ್ಣು ಹುಡುಗಿಯರ ಶಾಲೆಗಳ ಮಾಸ್ತರರೂ, ವಿದ್ಯಾರ್ಥಿಗಳೂ ಉತ್ಸಾಹಪಟ್ಟು, ಅಭ್ಯಾಸ ನಡಿಸಿ, ತಮ್ಮ ತಮ್ಮ ಯೋಗ್ಯತೆಯನ್ನು ಬೈಲಿಗೆ ತರುವರೆಂತಲೂ, ಅಂಥವರ ಶ್ರಮವನ್ನು ಪರೀಕ್ಷಿಸಿ, ದಯಾಪರರಾದ ನಮ್ಮ ಇನ್‌ಸ್ಪೆಕ್ಟರ ಧೊರೆಗಳಾದರೂ ಇದೇ ಮೇರಿಗೆ ಅವರನ್ನು ಉಲ್ಹಾಸಪಡಿಸುವರೆಂತಲೂ ನಾವು ಮನಃಪೂರ್ವಕವಾಗಿ ಕೋರುತ್ತೇವೆ.

ಪ. ಕೆ.

—೦*೦—

A Fiction.

ದಂತಕಥೆ.

ಒಬ್ಬ ಅಂತ್ಯಜನು ಬ್ರಾಹ್ಮಣನ ವೇಷವನ್ನು ಧರಿಸಿ ಮಗಾರ್ದೇವಿಯನ್ನು ಲಗ್ನ ಮಾಡಿಕೊಂಡದ್ದು.

ಒಂದು ಗ್ರಾಮದಲ್ಲಿ ಹಣಮಂತಪ್ಪನೆಂಬೊಬ್ಬ ಕುಲಕರ್ಣಿಯು ಇರುತ್ತಿದ್ದನು, ಅವನಿಗೆ ಮಗಾರ್ಎಂಬ ಹೆಸರಿನ

ಳೊಬ್ಬ ಮಗಳಿದ್ದಳು. ಅವಳು ಬಹಳ ರೂಪವತಿಯೂ, ಗುಣವಂತಿಯೂ, ಆಗಿದ್ದಳು. ಅವರ ಮನಿಯಲ್ಲಿ "ಧರ್ಮ್ಯಾ"ಎಂಬೊಬ್ಬ ಅಲ್ಲೇ ಸಮೀಪದ ಹಳ್ಳಿಯ ಹೊಲೇರ ಹುಡುಗನು ದನ ಕರಗಳ ಹೆಂಡೀ ಕಸ ಮಾಡುವದಕ್ಕಾಗಿ ಜೀತನಿಂತಿದ್ದನು. ಆವನಾದರೂ ಬಹಳ ಚುರುಕು ಬುದ್ಧಿಯುಳ್ಳವನೂ, ಜಾಣನೂ ಆಗಿದ್ದನು. ಹೀಗಿರುವಲ್ಲಿ. ಆ ಹುಡಿಗಿಯಮೇಲೆ, ಅವನ ಪೂರಾ ಇಚ್ಛೆಯಾಗಿ ಆಲೋಚನೆ ಮಾಡತೊಡಗಿದ್ದೇನಂದರೆ, ಅವಳನ್ನು ನಾನು ಲಗ್ನವಾಗಬೇಕು, ಅವಳು ನೋಡಿದರೆ ಬ್ರಾಹ್ಮಣರಕನ್ನಿಕೆ, ನಾನು ಹೊಲೆಯರವನು, ಅವಳು ನನಗೆ ಹ್ಯಾಗೆ ಗಂಟುಬಿದ್ದಾಳು! ಯಾವ ರೀತಿಯಿಂದ ಸ್ವೀಕರಿಸಲಿ! ಎಂದು ಚಿಂತಿಸುತ್ತಿರಲು, ಅವನಿಗೊಂದು ತಕ್ಕ ಉಪಾಯ ತೋಚಿತಲ್ಲಾ, ನಾನು ಬ್ರಾಹ್ಮಣನಾಗಬೇಕು, ಅದರ ಹೊರ್ತು ಅವಳು ದೊರಿಯಲಿಕ್ಕಿಲ್ಲ. ಹೀಗೆಂದು ಅವರ ಮನಿಯನ್ನು ಬಿಟ್ಟು, ಆಮೇಲೆ ದೇಶಾಂತರಕ್ಕೆ ಹೊರಟು ಹೋಗುತ್ತಾ ಇರಲಾಗಿ, ಒಂದು ದೊಡ್ಡ ಪಟ್ಟಣ ಹತ್ತಲು, ಆ ಪಟ್ಟಣದೊಳಗಿರುವ ಪಂಡಿತರ ಮನಿಗಳಲ್ಲಿ, ಒಂದು ಮನಿಗೆ ಹೋಗಿ ಆ ಪಂಡಿತನಿಗೆ ಹೇಳಿ ಕೊಳ್ಳಲಾರಂಭಿಸಿದ್ದನ್ನು ಕಂಡು ಪಂಡಿತನು ಕೇಳುತ್ತಾನೆ, ಹ್ಯಾಗಂದರೆ— ಪಂಡಿತನು—ಎಲಾ ಹೊಲಿಯನೇ ನೀನು ಯಾವಊರವ, ಇಷ್ಟು ದೂರ ವ್ಯಾಕೆ ಬಂದಿ, ನಿನಗ್ಯಾರು ತಾಯಿತಂದೆಗಳಿದ್ದಾರೋ ಹ್ಯಾಗೆ? ಎಂದು ಕೇಳಲು—

ಹೊ.ಹುಡು.—ತಂದೆ, ಆ ನಾಪಾಗ ವಸಕ್ಕಿ ಅಂತ ಒಂವ

ಸಣ್ಣ ಅಳ್ಳಿ ಐತಿ ಅಲ್ಲಿ ಇರತ್ಯಾನ, ಈ ನಾಡಾ ಯಾಂಗ್ಯೈತಿ ನೋಡಾಕ ಬಂದ ದೀನ, ನಮ್ಮ ಯವ್ವ ಯಪ್ಪಗೋಳದಾರ ದ್ಯಾವರು. ಈ ಮಾತು ಕೇಳಿ—

ಪಂಡಿತನು—ಏನೋ ಹೊಲಿಯಾ, ಯಂದ ನಿಮ್ಮೂರಿಗೆ ಮರಳಿ ಹೋಗತಿ? ಅನ್ನಲಾಗಿ—

ಹೊ.ಹುಡು.—ಯಪ್ಪಾ ನಾ ಹೋಗಾಕಬಂದಿಲ್ಲ, ನಿಮ್ಮದಸ್ಯಾರಂತ್ಯಾಕ ಯಾವದರೆ ಪಗದಾ ಮಾಡಿಕೊಂಡಸ್ಯಾಸ ಇರಾಕಬಂದೀನ ಅದರಕಡಸಿಂದ ಕಾವಂದರು ಕಿರಪಾಮಾಡಿ ಇಟಗೊಂಡ್ರ ಪಾಡಾಗತತ್ತಿ, ನಾಬಡವ ನನ್ನ ತಂದಿ.

ಈ ಪ್ರಕಾರ ಆ ಹೊಲಿಯನ ಮಾತು ಕೇಳಿ ಪಂಡಿತನು ಅವನನ್ನು ತನ್ನ ಮನಿಯಲ್ಲಿ ಜೀತ ಇಟಕೊಂಡನು. ಆ ಪಂಡಿತನ ಮನಿಯಲ್ಲಿ ನಿತ್ಯ ಓದತಕ್ಕ ವಿದ್ಯಾರ್ಥಿಗಳು ಬಹಳ ಜನರಿದ್ದದರಿಂದ, ಪಾಠೋದ್ಯೋಗವು ಬಹಳಚನ್ನಾಗಿ ನಡಿಯುತ್ತಿತ್ತು. ಹೊಲಿಯನು ತನ್ನ ಹೆಂಡೀಕಸವನ್ನು ಮಾಡುತ್ತಾಮಾಡುತ್ತಾ, ಆ ವಿದ್ಯಾರ್ಥಿಗಳು ಓದುವದನ್ನು ಕಿವಿಕುಟಿಕಿಯಿಂದಲೇ ಕೇಳಿ ಕಲಿಯುತ್ತಿದ್ದನು. ಇದೇ ಮೇರಿಗೆ ನಾಲ್ಕಾರುವರ್ಷಗಳವರಿಗೆ ಅವನು ಆ ಪಂಡಿತನಮನಿಯೊಳಗಿರಲು, ಯಾವತ್ತು ಮಂತ್ರಸ್ತೋತ್ರಾದಿಗಳನ್ನು ಕಲಿತು ಕೊಂಡು ಪೂರ್ಣಜ್ಞಾನಿಯಾದಬಳಿಕವನು ತನ್ನ ಯಜಮಾನನಿಗ್ಹೇಳಿ ಆ ಪಟ್ಟಣವನ್ನು ಬಿಟ್ಟು ತಮ್ಮೂರಿಗೆ ಹೋಗಬೇಕೆಂದು ಹೊರಟು, ಬರುವಾಗ್ಯೆ ಮಾರ್ಗದಲ್ಲಿ ಬ್ರಾಹ್ಮರವೇಷಧರಿಸಿಕೊಂಡು, (ಚಲೋ ಆಚಾರ್ಯನಾಗಿ) ತನ್ನ ಅಪೇಕ್ಷೆಯಾದ ಕನ್ಯಾ

ಇದ್ದ ಊರಿಗೆಹೋಗಿ, ಆ ಗೃಹಸ್ಥನಮನೆಯಲ್ಲಿಳಕೊಂಡು, ತನ್ನ ದೇವತಾರ್ಚನೆಯ ಪೆಟ್ಟಿಗಿ, ಕೃಷ್ಣಪಾಳ, ಪೂಜೆ, ಗಂಧಗಳನೆಲ್ಲ ಹೊರಗೆತೆಗೆದಿಟ್ಟು, ಆ ಮೇಲೆ ಸ್ನಾನವನ್ನುಮಾಡಿ, ...ದಹುತ್ತಾಸುಗಳವರಿಗೆ ಆಹ್ನಿಕ ನಡಿಸಿದನಂತರ ಭೋಜನ ...ಯಿತು. ಮನಿಯುವರು, ಈ ಆಚಾರ್ಯರು ತಮ್ಮನಿಗೆ ...ರದಕಿಂತ ಪೂರ್ವದಲ್ಲಿ ಎಷ್ಟೋಸ್ಥಳದಲ್ಲಿವರ ನೋಡಿದಾ...ಶ್ಯ, ಎಲ್ಲಿಯೂ ಅವರ ಮನಸಿನತಕ್ಕವರ ದೊರೆಯದೆ ಇ...ದರಿಂದ ಅವರು ಬಹಳಬೇಸತ್ತಿದ್ದರು; ಮತ್ತು, ಕನ್ಯ...ೋಡಿದರೆ ಹನ್ನೆರಡುವರುಷದವಳಾಗಿದ್ದಳು, ಈಗ ಅನಾ...ಯಾಸವಾಗಿ ದೊಡ್ಡ ಆಚಾರ್ಯರೇ ಮನಿಗೆಬಂದಿದ್ದಾರೆ, ಇವ...ನ್ನು ಬಿಟ್ಟು ಎರಡನೆಯವರಿಗೆ ಕೊಡುವದು ವಿಹಿತವಾಗಿ ...ತೋರುವದಿಲ್ಲ, ಮತ್ತು, ಹುಡಕುತ್ತಹೋದರೆ ಇವರಂಥ ...ಯೋಗ್ಯರು ಶಿಗಲಿಕ್ಕೇಇಲ್ಲ, ಯಾಕಂದರೆ ಇವರು ವಿದ್ಯದ...ಲ್ಲಿ ನಿಪುಣರಿದ್ದಾರೆ; ಆದದರಿಂದ ಇವರಿಗೇ ಕೊಡಬೇಕೆಂದು ಮನಿಯುವರು ತಮ್ಮತಮ್ಮೊಳಗೆ ಮಾತಾಡಿಕೊಂಡು, ತಡಿಗೆ ಇವರಿಗೇ ಕೊಡಬೇಕೆಂದು ನಿಶ್ಚೈಸಿ ಲಗ್ನಮಾಡಿ ಕೊಟ್ಟಮೇಲೆ, ಮೊದಲು ಸಾರಿಮನಿತುಂಬಿಸಿಕೊಳ್ಳುವದು, ಆದ ಕಾರಣದಿಂದ ಈ ಬ್ರಾಹ್ಮನಿಗೆ ಆಲೋಚನೆಬಿದ್ದದ್ದೇನಂದರೆ, ನಾನಂತು ಬ್ರಾಹ್ಮಣನಾಗಿ ಮನಸ್ಸಿನಲ್ಲಿದ್ದವಳನ್ನೇ ಲಗ್ನ ಮಾಡಿಕೊಂಡೆ, ನಮ್ಮಮನಿಯುವರೆಲ್ಲರು ಹೊಲೇರಿದ್ದದರಿಂದ ಈ ನನ್ನ ಸಂಗತಿಯನ್ನೆಲ್ಲ ಅವರಿಗೆ ತಿಳಿಸಿ, ಅವರಿಗೂ ನೀವು ಬ್ರಾಹ್ಮಣರಂತೆಯೇ ಪಾತವಿಡಿರೆಂದು ಸ್ಪಷ್ಟಹೇಳಿ

ಹೊಲ್ಲಿಗಿ, ಆ ಮೇಲೆ ತನ್ನ ಹೆಂಡತಿಯನ್ನು ಮನಿತುಂಬಿಸಿಕೊಂಬುವ ಕೆಲಸತೀರಿಸಿದನು; ಒಂದುಸಾರಿ ಅಂಥ ತನ್ನ ಕುಟುಂಬದೊಳಗಿಂದ ಒಂದು ಕಾರ್ಯಮಾಡಿಕೊಂಡು ಗೆದ್ದನು. ಇನ್ನೂ "ಮುದಕೀ ನಿನ್ನಾಟಮುಂದದೆ" ಎಂಬಗಾದಿಯಂತೆ, ಮುಂದೆ ಕಾರ್ಯಗಳು ಎಷ್ಟೋ ಅಗತಕ್ಕವು ಉಳದಿದ್ದವು. ಆದರೆ ಕೆಲವು ದಿವಸದಲ್ಲಿ ಆವನತಂದೆ ತೀರಿದನು; ಆಗ್ಯೆ ವಿಧಾನಪೂರ್ವಕ ಯಾವತ್ತು ಕರ್ಮವನ್ನು ಮುಗಿಸಿದನು. ಅಷ್ಟರಲ್ಲಿ ಅವನ ಕುಟುಂಬಕ್ಕೆ ರಜೋದರ್ಶನಪ್ರಾಪ್ತಿಯಾಗಿ, ಮುಂದೆ ಸ್ವಲ್ಪದಿವಸದಲ್ಲಿ ಒಂದು ಮಗಹುಟ್ಟಿತು. ಶ್ರಾದ್ಧಪಕ್ಷಾದಿಕಾರ್ಯಗಳಂತು ನಡದೇ ಇದ್ದವು. ವರ್ಷಕ್ಕೊಂದರ ಪ್ರಕಾರ ಆ ಹೆಣ್ಣುಮಗಳು ನಾಲ್ಕು ಮಕ್ಕಳನ್ನು ಹೆತ್ತಳು. ಆ ಮೇಲೆ ಐದನೇವರ್ಷದಲ್ಲಿ ಅವನ ಹಿರೇರ ಶ್ರಾದ್ಧಬರಲು;

(ಮುಂದಕ್ಕೆ ಸಾಗುವದು)

—o*o—

Correspondence.

ಪತ್ರವ್ಯವಹಾರವು

ರಾ|| ರಾ|| ಶಾಳಾಪತ್ರ ಕರ್ತರಿಗೆ

ವಿಂ ವಿಂ ನಾನು ದೇಶ ಸಂಚಾರ ಮಾಡುವದರಲ್ಲಿ ಕೆಲವು ಗ್ರಾಮಗಳಲ್ಲಿದ್ದ ಶಾಲೆಗಳಂನು ಸಹನೋಡಲಿಕ್ಕೆ ಹೋದಲ್ಲಿ ಕೇಳಿದ ಮಜಕೂರು ತಂಮಕಡಿಗೆ ಕಳುಹಿಸದೆ ಇರಲಾರದೆ ಬರೆದ ಕೆಳಗಿನ ಮಜಕೂರಿಗೆ ತಂಮ ಅಂದವಾದ ಪತ್ರದಲ್ಲಿ ಸ್ಥಳದೊರಿಯುವದೆಂದು ಆಶಿಸುತ್ತೇನೆ—

ದಕ್ಷಿಣಭಾಗದ ಕೆಲವು ಮಾಸ್ತರಜನರು ಅಂಬುವದೇನಂದರೆ" ನಮಗೆ ಅಭ್ಯಾಸ ಮಾಡಿಸುವದಕ್ಕೆ ಬೇಕಾದ ಪುಸ್ತಕಗಳ ದೆಶೆಯಿಂದಾ ನಮ್ಮ ವರಿಷ್ಟರ ಕಡೆಗೆ ವರ್ಷದ ಆಖೈರ (ಮಾರ್ಚ ತಿಂಗಳ) ಲೆಖ್ಖದಲ್ಲಿ ಬರದರೆ ಅವರು ಆಗಿಂದಾಗ್ಗೆ ಕಳಿಸದೆ ಸುಸ್ತಿಯಿಂದಾ(ಬರದ ಆರೇಳು ತಿಂಗಳಗಳು ಆದಿಂದ) ಕಳುಹಿಸುವದರಿಂದ ಬಹಳ ಅಡಚಣಿ ಯಾಗುತ್ತದೆಂದೂ; ಒಂದು ತಿಂಗಳಪಗಾರ ಎರಡನೇ ತಿಂಗಳ ಎಲ್ಲಿ ಸಿಗುವ ದೊರಿಯುವದು ದುರ್ಲಭವಾಗಿ ಮೂರನೆ ತಿಂಗಳಅಖೈರಿಗೆವದರಿಂದ ಖರ್ಚಿಗೆ ಬಹಳ ತಾಪತ್ರಯ ಆಗುತ್ತದೆಂತಲೂ; ಅಂದದ್ದು ಕೇಳಿ ನನಗೆ ಬಹಳವ್ಯಸನವಾಗಿ ಈ ಮಜಕೂರು ತಮ್ಮ ಕಡೆಗೆ ಕಳುಹಿಸಿದ್ದೇನೆ, ಆದರೆ ತಮ್ಮ ಪತ್ರದ್ವಾರದಿಂದ– ಅವರ ವರಿಷ್ಟರಿಗೆ ತಿಳಿಸುವಿರಿ, ಮತ್ತು ಅವರು ಸದರಮಜಕೂರು ಖರೆ ಇದ್ದರೆ ಈ ವಿಷಯಕ್ಕೆ ಚೆನ್ನಾಗಿ ನಜರಕೊಟ್ಟು, ಅಪ್ರೊಮತ್ತು ಇಂಥಾತರಹೇದ ಅನೇಕ ಆಪತ್ತುಗಳೂ ಮಾಸ್ತರಜನರಿಗೆ ಆಗದಂತೆ ಮಾಡುವರು ಎಂದು ಆಶಿಸುತ್ತೇನೆ ವಿ.

ಒಬ್ಬ ಹಿತ ಅಪೇಕ್ಷಿಸುವವನು

—೦*೦—

ಮಹಾರಾಜ ರಾ॥ ರಾ॥ ದಕ್ಷಿಣಭಾಗದ ಶಾಲಾಪತ್ರಕರ್ತರಿಗೆ. ತಾಲೂಕ ಸಂಪಗಾವ ಕಸಬಾ ಹುಣಶೀಕಟ್ಟಿ ಮಾಸ್ತರನ ವಿನಯ ಪೂರ್ವಕ ವಿನಂತಿ ಏನಂದರೆ—ಈ ಕೆಳಗೆ ಬರದಿರುವ ನಾಲ್ಕು ಓಳಿಗಳನ್ನು ತಮ್ಮ ಅಂದವಾದ ಪತ್ರಕದ ದ್ವಾ

ರದಿಂದ ಪ್ರಸಿದ್ಧ ಮಾಡಬೇಕೆಂಬ ಅಪೇಕ್ಷೆಯಿಂದ ಬರದಿದ್ದೇನೆ. ನಂನ ಅಪೇಕ್ಷೆಯನ್ನು ಉಪೇಕ್ಷೆ ಮಾಡದೆ ಕೊನೆಗಾಣಿಸುವಲ್ಲಿ ಅಧ್ಯಕ್ಷರೇ ಇರುತ್ತೀರಿ. ನಮ್ಮ ಪೃಥ್ವಿಗೆ ಉಪಗ್ರಹನಾಗಿರುವ ಚಂದ್ರನನ್ನು ಕುರಿತು ನನ್ನ ಅಲ್ಪ ಬುದ್ಧಿಗೆ ತಿಳಿದಷ್ಟು ಬರಿಯುತ್ತೇನೆ. ಈ ಚಂದ್ರನಿಗೆ ಸ್ವ ಪ್ರಕಾಶವು ಇರದೆ ಸೂರ್ಯಕಿರಣ ಯೋಗದಿಂದ ನಮಗೆ ಪ್ರಕಾಶವುಳ್ಳನ ಸೋಪಾದಿಯಲ್ಲಿ ಕಾಣುತ್ತಾನೆ. ಇದು ಇರಲಿ—ಆದರೆ ಚಂದ್ರನಲ್ಲಿ ಕುರಂಗದೋಪಾದಿ ಕಪ್ಪು ಆಕೃತಿ ಕಾಣುತ್ತದಲ್ಲಾ ಅದಕ್ಕೆ ಹಿಂದುಜನರು ನಿಜಕುರಂಗವೆಂದು ತಿಳಿಯುತ್ತಾರೆ; ಮತ್ತು ಏಷ್ಟೋ ವಿದ್ವಾಂಸರು ಪರ್ವತವೆಂದು ಬರೆಯುತ್ತಾರೆ. ಆದರೆ ಅದು ಕುರಂಗವೂ ಪರ್ವತವೂ ಇರದೇ ನೆಲವದೆಂದು ಕಾಣುತ್ತದೆ. ಹ್ಯಾಗಂದರೆ ಈ ಪೃಥ್ವಿಯ ಮೇಲೆ ನೆಲವೂ ನೀರುಎಂದು ಎರಡು ಭಾಗಗಳಿರುವ ಪ್ರಕಾರವೇ ಅಲ್ಲ್ಯಾದರು ಇದ್ದು ಕಪ್ಪು ಕಾಣುವಂಥಾದು ನೆಲವೆಂತಲೂ ಬೆಳ್ಳಗೆ ಕಾಣುವದು ನೀರುವೆಂತಲೂ ನನ್ನ ಬುದ್ಧಿಗೆ ತೋರುತ್ತದೆ. ಮತ್ತು ವಿಶೇಷ ವಿಚಾರ ಮಾಡಿ ನೋಡಿದರೆ ಕುರಂಗದಂತೆ ಕಾಣುವ ಆಕೃತಿಯು ಮುಖದ ಹತ್ತರ ಒಂದೆರಡು ದೊಡ್ಡ ದೊಡ್ಡ ನಡುಗಡ್ಡೆಗಳು ಇರುವಂತೆ ನಿಶ್ಚಯವಾಗುತ್ತದೆ.

ಸೂರ್ಯನ ಕಿರಣಗಳು ಉಷ್ಣ ಇದ್ದು ಸೂರ್ಯನ ಕಿರಣಯೋಗದಿಂದ ನಮಗೆ ಪ್ರಕಾಶವನ್ನು ಉಂಟು ಮಾಡುವ ಚಂದ್ರನ ಕಿರಣಗಳು ತಂಪು ಏನಕಾರಣ ಇರುತ್ತವೆ ಮೊದ

ಲಾದ ವಿಷಯಗಳನ್ನು ಬರೆಯುವದದೆ ಪತ್ರ ವಿಸ್ತಾರವಾಯಿತ್ತು, ಕ್ಷಮಾ ಇರಬೇಕು ಮುಂದಕ್ಕೆ ಸಾಗುವದು.

ಸಹಿ ಮಲ್ಲಪ್ಪಾ ಕೆಂಚಪ್ಪಾ ಕವದಿ ಮಾಸ್ತರ ಹುಣಶೀಕಟ್ಟಿ

ತಾರೀಖು ೨೦। ೧೦।೭೧ ಇಸವಿ.

ಈ ಪತ್ರವನ್ನು ನೋಡಿ ನಾವು ಬಹಳೆ ಸಂತೋಷಪಟ್ಟೆವು. ಇದರಂತೇ ಉಳಕೀ ಮಾಸ್ತರರು ಉಪಯುಕ್ತವಾದ ವಿಷಯಗಳನ್ನು ಕುರಿತು ಪತ್ರವ್ಯವಹಾರವನ್ನು ನಡಿಸಿದರೆ ಭಾಷಾಸುಧಾರಿಸುವದಕ್ಕೂ, ವಿದ್ಯಾಭಿವೃದ್ಧಿಗೂ ಬಹಳೇ ಸಾಧನೀಭೂತವಾಗುವದು.

ಕನ್ನಡಶಾಲಾಪತ್ರಕರ್ತರು.

—೦*೦—

ಮೇಹೆರ್ಬಾನ ಮಾಜೀಮಾಮಲೇದಾರಸಾಹೇಬ ತಾಲೂಕ ಅಥಣಿ ಯಂಬವರಾದವಿರುಪಾಕ್ಷ ಧೋಂಡದೇವ ನುಗ್ಗಾನಟ್ಟಿ ಇವರು ಬಹಳ ಚಲೋಮನುಷ್ಯರಿದ್ದು, ಅಥಣಿಪ್ರಾರಲ್ಲಿ ಸುಮಾರು ಒಂದುವರುಷದವರಿಗೆ ಮಾಮಲೇದ ಕೆಲಸದಮೇಲೆ ಇದ್ದಾಗ್ಯೆ ಅಲ್ಲಿರುವ ಸರಕಾರೀಶಾಲಿಗೆ ಎಷ್ಟೋ ಹಿತಮಾಡಿದರೆಂದು ಕೇಳುತ್ತೇನೆ. ಬಹುತರ ಇವರದೃಷ್ಟಿಯು ಶಾಲೆಗಳಮೇಲೆ ವಿಶೇಷಉಂಟೆಂಬದಕ್ಕೇನು ಸಂದೇಹವಿಲ್ಲ. ಇವರಹೊರ್ತು ಇವರು ತಮ್ಮ ಸ್ವತಃ ಕೆಲಸದಲ್ಲಿ ಸಹ ಬಹುಜಾಗ್ರತೆಯುಳ್ಳವರಾಗಿಯೂ, ಬಡಬಗ್ಗರಮೇಲೆ ದಯದಾಕ್ಷಿಣ್ಯವುಳ್ಳವರಾಗಿಯೂ, ಇದ್ದಾರೆ. ಹೀಗಿದ್ದು ಯಾವದೋ ಒಂದು ಕಾರಣೋದ್ದಿಶ್ಯವಾಗಿ, ಸುಮ್ಮ

ರು ಆರುತಿಂಗಳೊಳಗೆ ಕಮಿಶ್ನಷೇರಿಯಾಗಿ, ಈಗ್ಯೆ ಬಾಗಲ
ಕೋಟತಾಲೂಕ ಬೀಳಗೀಮಾಹಲಕ್ಕಧಿಪತಿಯಾಗಿ ಮೂರು
ತಿಂಗಳಾಗುತ್ತಾ ಬಂತು. ಆದರೆ ಇಂಥವರಿಗೆ ಈ ಸ್ಥಿತಿ
ಪ್ರಾಪ್ತಿಯಾದದ್ದು ಬಹುಕೆಟ್ಟ ಮಾತು. ಹೀಗಾಗಬಾರದು.
ಆದರೂ, ಹಾಲಿದ್ದಷ್ಟು ಹಾಲೇ, ನೀರಿದ್ದದ್ದು ನೀರೇ,, ಎಂಬಗಾ
ದಿಯಂತೆ, ಇವರೂ ಕೆಲಕಾಲ ಪ್ರಯತ್ನಮಾಡದ ಪ್ರಯು
ಕ್ತ ಪುನಃ ಇವರಕೆಲಸ ಇವರಿಗೆ ಬಹುಶೀಘ್ರವೇ ದೊರಕುವಂ
ತೆ ಶೇರಾ ಶಿಕ್ಕಿರುತ್ತದೆ. ಇದೊಂದು ಬಹುಸಂತೋಷಕರ
ವಾದಮಾತು. ಇವರಿಗೆ ಪೂರ್ವದಕೆಲಸ ಬಲುಬೇಗದೊರಿ
ಯಬೇಕೆಂಬಾಶೆ ನಮ್ಮ ಯಾವತ್ತರಿಗೂ ಪೂರ್ಣಉಂಟು.

ಗೋ. ಕೇ. ಜೋ. ಸ್ಕೂ. ಮಾ. ಗಲಗಲಿ.

ಮುಕ್ಕಾ ಮಗಲಗಲಿ ತಾ|| ೧೦|೧೦|೨೧.

—೦*೦—

ಪ್ರಕಟನೆಯು.—

“ಸವಾಯಿಮಾಧವರಾಯನನಾಟಕವೂ”

“ನರತನುವೂ”

ಇವೆರಡೂ ಪುಸ್ತಕಗಳನ್ನು ನಾವು ಮಹಾರಾಷ್ಟ್ರಭಾಷೆಯ
ಲ್ಲಿ ರಚಿಸಿ ಬೆಳಗಾವಿಯ ಸಮಾಚಾರದ ಅಚ್ಚು ಕೂಟದಲ್ಲಿ
ಸುಂದರವಾದ ಮೊಳೆಗಳಿಂದ ಮುದ್ರಿಸಿ ಮಾರಾಟಕ್ಕೆ ಸಿದ್ಧ
ಪಡಿಸಿರುತ್ತೇವೆ.

ನಾಟಕದಲ್ಲಿ—ತಾನೇ ಸದಾಶಿವರಾವಭಾವು ಯೆಂಬ ಕಪಟ
ದಿಂದ ಪೇಶ್ವೆಯವರ ಸಂಗಡ ವ್ಯಾಜ್ಯ ಹೂಡಿದ ಸದೋಬಾ

ಯೆಂಬವನ ವಿಚಾರಣೆಯೂ, ಶಿಕ್ಷೆಯೂ, ತಳೇಗಾಂವದ ಕಾಳಗ, ಟೀಪುಸುಲ್ತಾನನ ಮೇಲೆ ಮಾಡಿದದಾಳಿ, ನಾಲಜೀ ಉತ್ಸಾಹ, ವಕೀಲಮುತಲಖ ವೆಂಬಪದವಿಯ ಸನದು, ಸಿಂಧ್ಯನಮರಣ, ಖರಡೀಗ್ರಾಮದ ಕಾಳಗ, ಪೇಶ್ವೆಯವರ ಮರಣ ಈ ವಿಷಯಗಳು ಮನಸಿನೊಳಗೆ ಚನ್ನಾಗಿ ನಿಲ್ಲುವಂತೆ ಸುಲಭಭಾಷೆಯಿಂದ ವರ್ಣಿಸಲ್ಪಟ್ಟವೆ.

ನರತನುವಿನಲ್ಲಿ—ತಲೆ, ಎದೆ, ಹೊಟ್ಟೆ, ಕಿಪ್ಪೊಟ್ಟೆಗಳೊಳಗಿನ ಅವಯವಗಳು, ಅಸ್ಥಿ, ರಕ್ತ, ರಕ್ತವಾಹಿನೀ, ಸ್ನಾಯು, ಜ್ಞಾನತಂತು, ಪಂಚೇಂದ್ರಿಯಮುಂತಾದವುಗಳರಚನೆಯೂ, ವ್ಯಾಪಾರವೂ, ಕೂಡಲು, ನಿದ್ರೆ, ಸಾವು, ಮನುಷ್ಯನ ವಿಲಕ್ಷಣ ಗುಣಗಳು ಸುಲಭ ಭಾಷೆಯಿಂದ ಸ್ವಲ್ಪದರಲ್ಲಿ ಚನ್ನಾಗಿ ವರ್ಣಿಸಲ್ಪಟ್ಟವೆ.

ನಾಟಕದಕ್ರಯ ೧ರೂಪಾಯಿ, ನರತನುವಿನ ಕ್ರಯ ೧೦ ಆಣೆ-ಬೆಳಗಾವ ಸಮಾಚಾರ ಅಚ್ಚುಕೂಟದ ವ್ಯಾನೆಜರರ ಹೆಸರಲ್ಲಿ ಕ್ರಯ ಸಹಿತವಾಗಿ ಪೋಸ್ಟಪೇಡ ಪತ್ರಗಳನ್ನು ಕಳುಹಿಸಿದವರಿಗೆ ಈ ಪುಸ್ತಕಗಳು ದೊರೆಯುವವು. ಟಿಕೀಟುಗಳನ್ನು ಕಳುಹಿಸುವವರು ದರವೊಂದು ರುಪಾಯಿಗೆ ಅರ್ಧಆಣೆ ಯಂತೆಹೆಚ್ಚು ಕಳುಹಿಸಬೇಕು. ಹೆಚ್ಚಿಗೆ ಪ್ರತಿಗಳನ್ನು ಕೊಳ್ಳುವವರಿಗೆ ನೂರಕ್ಕೆ ೮ರುಪಾಯಿಯಂತೆ ಕಮಿಶನ್ ದೊರೆಯುವದು. ಒಂದು ಪ್ರತಿಗೆ ಒಂದು ಅಣೆ ಟಾಂಗಿ ಹಾಸಲು ಬೀಳುವದು.

ವೆಂಕಟ ರಂಗೋ ಕಟ್ಟಿ.

ಶಾಲಾಪತ್ರಕವು.

ಪುಸ್ತಕ ೬] [ಸಂಚಿಕೆ ೯.

ಬೆಳಗಾವಿ, ಪೂಷ ಡಿಸೆಂಬರ ೧೮೬೧.

Natural Philosophy.

ಪದಾರ್ಥವಿಜ್ಞಾನವು.

೪ ಪ್ರಕಾಶವು ವೊಂದು ವಿಧದ ಪರಿಣಾಮವು—ಈ ಮೇರಿಗೆ ಪ್ರಕಾಶದ ಪರಿಣಾಮಗಳೇ ಹೊರ್ತು ಸ್ವತಃ ಪ್ರಕಾಶದಬಗ್ಗೆ ನಮಗೆ ಬಹುಸ್ವಲ್ಪ ಮಾತ್ರ ತಿಳಿದದೆ. ಒಂದು ಮಧ್ಯಪ್ರದೇಶದಿಂದ ಹೊರಡುವ ಯೆಲ್ಲ ವಿಧದ ಪ್ರೇರಣೆಗಳ ನಿಯಮಗಳಂತೆಯೇ ಪ್ರಕಾಶದ ನಿಯಮಗಳಾದರೂ ಉಂಟು. ಪ್ರಕಾಶವು ತನ್ನ ಮೂಲಸ್ಥಾನದಿಂದ ಮುಂದಕ್ಕೆ ಹೋದಹಾಗೆ ಅದರ ಅಂತರದ ವರ್ಗದಂತೆ ಕಡಿಮೆಯಾಗುತ್ತದೆ. ಅಂದರೆ, ವೊಂದು ದೀಪದಿಂದ ವೊಂದು ಯಾರ್ಡನಮೇಲೆ ಬೀಳುವ ಪ್ರಕಾಶದ ನಾಲ್ಕನೇ ಪಾಲಿನಷ್ಟು ಬೆಳಕು ಯೆರಡು ಯಾರ್ಡುಗಳ ಅಂತರದ ಮೇಲೆ ಬೀಳುವದು.

೬ ಪ್ರಕಾಶದ ಕಿರಣಗಳು—ಪ್ರಕಾಶದಲ್ಲಿ ಕಿರಣಗಳೆಂಬ ಭಾಗಗಳಿರುತ್ತವೆ. ಅವುಗಳಲ್ಲಿ ವೊಂದಕ್ಕೊಂದು ಸಂಬಂ

ಥವಿಲ್ಲ. ಕಿರಣಗಳು ಸ್ವಪ್ರಕಾಶಕ ಪದಾರ್ಥದಿಂದ ಸರಲವಾಗಿ ಮುಂದಕ್ಕೆ ಹೋಗುತ್ತವೆ. ಮೋಡಗಳೊಳಗಿಂದಾಗಲಿ, ಧೂಳಿಯೊಳಗಿಂದಾಗಲಿ ಸೂರ್ಯಕಿರಣಗಳು ಹೊರಡುವಾಗ ಈ ಸರಳಗತಿಯು ಸ್ಪಷ್ಟವಾಗಿ ಕಾಣಿಸುತ್ತದೆ. ಮಣಿನಕೊಳವಿಯೊಳಗಿಂದ ಪದಾರ್ಥಗಳು ನಮಗೆ ಕಾಣಿಸುವದಿಲ್ಲವೆಂಬದಂತು ಯೆಲ್ಲರಿಗೂ ಗೊತ್ತಾದದ್ದೇ. ಕತ್ತಲಕೋಣೆಯೊಳಗೆ ವೊಂದು ಛಿದ್ರದೊಳಗಿಂದ ಪ್ರಕಾಶಕ್ಕೆ ಮಾರ್ಗಕೊಟ್ಟರೆ, ಅದು ನೆಟ್ಟಗೆ ಆ ಛಿದ್ರದೆದುರಿನಲ್ಲಿ ಬೀಳುತ್ತದೆ. ಈ ಮೇರಿಗೆ ಅತಿಸೂಕ್ಷ್ಮ ಛಿದ್ರದೊಳಗಿಂದ ಬರುವ ಪ್ರಕಾಶದಭಾಗಕ್ಕೆ ಕಿರಣವೆಂದೆನ್ನುತ್ತಾರೆ. ಇಂಥಾ ಅನೇಕ ಸಮಾಂತರ ಕಿರಣಗಳ ಸಮುದಾಯಕ್ಕೆ ಕಿರಣಛಟೆಯೆಂದು ಹೆಸರುಂಟು. ಪ್ರಕಾಶದ ಘಟಕತತ್ವಗಳಾದ ಮೂಲವರ್ಣಗಳು ಬೇರೆ ಬೇರೆ ಬಿದ್ದರೆ, ಆಗ "ಸಜಾತೀಯಪ್ರಕಾಶ"ವೆಂತಲೂ, ಯೆಲ್ಲ ಕೂಡಿ ಬಿಳೇಬಣ್ಣದ ಪ್ರಕಾಶಬಿದ್ದರೆ ಅದಕ್ಕೆ "ವಿಜಾತೀಯ ಪ್ರಕಾಶ" ವೆಂತಲೂ ಹೆಸರುಂಟು. ಹೆಚ್ಚಿಗೆ ದೂರುದೂರಾಗುತ್ತ, ಇಲ್ಲವೆ ಹೆಚ್ಚಿಗೆ ದಟ್ಟವಾಗುತ್ತ ಹೋಗುವ ಕಿರಣಗಳಿಗೆ "ಕಿರಣಶಂಕು" ವೆಂಬು ಹೆಸರುಂಟು. ಹೆಚ್ಚಿಗೆ ದಟ್ಟವಾಗುತ್ತ ಹೋಗುವ ಕಿರಣಗಳೆಲ್ಲ ಯಾವಬಿಂದುವಿನಲ್ಲಿ ವೊಟ್ಟುಗೂಡುತ್ತವೆಯೋ ಅದಕ್ಕೆ "ಕೇಂದ್ರ"ವೆಂದು ಹೆಸರುಂಟು.

೭ ಪ್ರಕಾಶದ ಗತಿಯು—ಪ್ರಕಾಶದ ಪರಮಾಣುಗಳು, ಅಂದರೆ ಅದರ ತೆರೆಗಳು ವೊಂದು ಮಿನಿಟಿನಲ್ಲಿ ೧—೦೦೦೦೦೦೦

ಮೈಲು ದೂರಹೋಗುತ್ತವೆ. ಆದದರಿಂದ ಸೂರ್ಯನಿಂದ ಪ್ರಕಾಶವು ಭೂಮಿಯಮೇಲೆ ಬರಬೇಕಾದರೆ ಯೆಂಟು ಮಿನಿಟುಗಳು ಬೇಕಾಗುತ್ತವೆ. ಪ್ರಕಾಶದ ವೇಗವನ್ನು ರೋಮರನೆಂಬವನು ಮೊದಲು ಗೊತ್ತುಹಚ್ಚಿದನು. ಅವನು ಗೊತ್ತುಹಚ್ಚಿದ್ದು ಹ್ಯಾಗಂದರೆ, ನಾವಿಕರು ಬೃಹಸ್ಪತಿಯ ಗ್ರಹಣಗಳನ್ನು ಆಗಾಗ್ಗೆ ನೋಡುತ್ತಿರುತ್ತಾರೆ; ಗಣಿತದಿಂದ ಹೊರಟವೇಳೆಗೂ, ಈ ಗ್ರಹಣಗಳು ಪ್ರತ್ಯಕ್ಷವಾಗಿ ಕಾಣಿಸುವ ವೇಳೆಗೂ ಕೆಲವು ಅಂತರ ವಿರುತ್ತದೆ; ಈ ಅಂತರವು ಭೂಮಿಯು ಬೃಹಸ್ಪತಿಗೆ ಅತಿದೂರವಿದ್ದಾಗ ೧೬ ಮಿನಿಟು ಹೆಚ್ಚಿರುತ್ತದೆಂದು ರೋಮರನು ನೋಡಿದನು. ಭೂಮಿಯಕಕ್ಷೆಯವ್ಯಾಸವು ೧೯ಕೋಟಿ ಮೈಲು ಉದ್ದಾದ್ದೆಂದು ಮೊದಲೇ ಗೊತ್ತಾಗಿತ್ತು. ಆದದರಿಂದ ಪ್ರಕಾಶಕ್ಕೆ ೧೯ಕೋಟಿ ಮೈಲುಗಳನ್ನು ದಾಟುವದಕ್ಕೆ ೧೬ ಮಿನಿಟುಗಳು ಬೇಕಾಗುತ್ತವೆಂದು ಸ್ಪಷ್ಟವಾಯಿತು.

೮ ಪ್ರಕಾಶವು ಅನೇಕವಿಧದ ಕಾರಣಗಳಿಂದ ಹುಟ್ಟುತ್ತದೆ—ಸೂರ್ಯ ಮೊದಲಾದ ಸ್ವಪ್ರಕಾಶಕ ಪದಾರ್ಥಗಳಿಂದ ಪ್ರಕಾಶವು ಹೊರಡುವದಲ್ಲದೆ, ಬೇರೆ ಯೆಷ್ಟೋಬಗೆಯಾಗಿ ಪ್ರಕಟವಾಗುತ್ತದೆ. ಘರ್ಷಣದಿಂದ ಪ್ರಕಾಶವು ಹುಟ್ಟುತ್ತದೆ; ಭಾಸ್ಫರಸವೆಂಬ ಖನಿಜದಿಂದ ಹುಟ್ಟುತ್ತದೆ. ಇದಲ್ಲದೆ ಬರ್ಫ, ವಜ್ರ, ಬಲೋಗ್ನಾಪಟ್ಟಣದ ಕಲ್ಲು ಮುಂತಾದ ಕೆಲಪದಾರ್ಥಗಳು ಸೂರ್ಯಪ್ರಕಾಶವನ್ನು ಹೀರಿಕೊಂಡು ಪುನಃ ಹೊರಗೆ ಬಿಡುತ್ತವೆಂದು ತೋರುತ್ತದೆ.

ಕೆಲವು ರಸಾಯನಮಿಶ್ರಣಗಳಿಂದಲೂ ಪ್ರಕಾಶ ಹುಟ್ಟುತ್ತದೆ. ಕೆಲವು ವನಸ್ಪತಿಗಳು ಮಿಂಚುತ್ತಿರುತ್ತವೆ. ಕತ್ತಲೆಯಲ್ಲಿ ಕಲ್ಲುಗಳನ್ನು ತಿಕ್ಕಲಾಗಿ ಮಿಣುಕು ಹುಟ್ಟುತ್ತದೆ. ಇದೇಮೇರೆಗೆ ಸ್ಫಟಿಕೀಭವನದ ವ್ಯಾಪಾರದಲ್ಲಿಯೂ ಮಿಂಚು ಹೊರಡುವದುಂಟು.

ಈ ಸ್ವತಃ ಪ್ರಕಾಶವನ್ನು ಹಬ್ಬಿಸುವಂಥ ಸೂರ್ಯನಕ್ಷತ್ರ ಮುಂತಾದಪದಾರ್ಥಗಳಿಗೆ ಸ್ವಪ್ರಕಾಶಕ ವೆಂದೆನ್ನುತ್ತಾರೆ. ತಮ್ಮೊಳಗಿಂದ ಪ್ರಕಾಶಕ್ಕೆ ಮಾರ್ಗ ಕೊಡುವಂಥ ಕನ್ನಡಿ, ನೀರು, ಹವೆ ಮುಂತಾದ ಒಡವೆಗಳಿಗೆ ಪಾರದರ್ಶಕವೆಂದು ಹೆಸರುಂಟು. ತಮ್ಮೊಳಗಿಂದ ಪ್ರಕಾಶಕ್ಕೆ ಮಾರ್ಗ ಕೊಡದಂಥ ಒಡವೆಗಳಿಗೆ ಅಪಾರದರ್ಶಕವೆಂದು ಹೇಳುವದುಂಟು.

Extracts from Rajashekhara.

ರಾಜಶೇಖರದೊಳಗಿನ ಪದ್ಯಗಳು

॥ಚಂಪಕಮಾಲಾವೃತ್ತ॥

ಭುವನದೆ ಭೋಜರಾಜನ ಮಹಾಸಭೆಯೊಳ್ಬಹು ಶಾಸ್ತ್ರ
ಕೋವಿದ|
ರ್ಕವಿಸತ್ಪ್ರಯೋಗ್ಮ ಮಾಡುವವರೇ ನಿರರೇತಗಿ ಕಾಳಿದಾಸ
ಮುಖ್ಯವಿವಿಧ ಸತ್ಕವೀಂದ್ರರ ಜಸಂಬಿಡದಿನ್ನು ಮಿರುತ್ತಿ
ತೋರ್ಪವೋ|
ಲವರಜಸಂ ವಿರಾಜಿಸುವದೆ ಸತ್ಕವೀಶ್ವರರ ವರ್ಣನಾವ

ನೋ॥ ೧೦॥

ಅರ್ಥ–ಭೋಜರಾಜನ ಸಭೆಯೊಳಗೆ ಬಂದ ಶಾಸ್ತ್ರಗಳನ್ನು ಬಲ್ಲಂಥ ಪಂಡಿತರೂ ಇಂಪಾಗಿ ಹಾಡುವ ಗಾಯಕರೂ ಏನು ಇದ್ದಿಲ್ಲವೇ? ಅನೇಕ ಜನರಿದ್ದರು. ಆದಾಗ್ಯೂ ಕಾಳಿದಾಸ ಮುಂತಾದ ಹಲವು ಕವಿಗಳ ಕೀರ್ತಿಯು ಇಂದಿನವರಿಗೂ ಶೋಭಿಸಿದಹಾಗೆ ಆ ಶಾಸ್ತ್ರಜ್ಞರ ಕೀರ್ತಿಯೂ ಗಾಯಕರ ಕೀರ್ತಿಯೂ ಶೋಭಿಸಲಿಲ್ಲ. ಆದದ್ದರಿಂದ ಭೂಮಿಯಲ್ಲಿ ಸತ್ಕವಿಗೆ ಯಾರೂ ಸರಿಯಿಲ್ಲವು.

ಕಂದ॥ ಕೃತಿಕಾದಂಬಿನಿ ರಸಮಂ।
ಕ್ಷಿತಿಪಸಭಾಕ್ಷಿತಿಗೆ ಸುರಿ ವಸಮಯದೊಳ್ ಖಲಗ॥
ಜರ್ತಘನಗರ್ಜಿತಮೊದವಿದೊ।
ದತಿರಸವಿಸರ ಪ್ರಸಾರ ಕಾರಣಮಲ್ತೇ॥೧೧॥

ಅರ್ಥ–ರಾಜನ ಸಭೆಯೆಂಬ ಭೂಮಿಯಲ್ಲಿ ಕಾವ್ಯವೆಂಬ ಮೋಡವು ಶೃಂಗಾರಾದಿನವ ರಸವೆಂಬ ಮಳೆಯನ್ನು ಸುರಿಸುವಾಗ, ದುರ್ಜನನ ಗರ್ಜನೆಯೆಂಬ ಗುಡುಗು ಒದಗಿದರೆ, ಹೆಚ್ಚಿಗೆ ಮಳೆಯಾಗುವದಕ್ಕೆ ಕಾರಣವಲ್ಲವೇ?

ಕಂದ॥ ಅಜನಗರ ಗತದಿಂದ।
ಭ್ರಜಶಿಖಿರವ ದಿಂಪೆಪ್ಪಳಿಯು ಕಾಯ್ಪಿಂನಿಸಿದಂ॥
ವೃಜಿನ ಘನಕುಜನ ಜನಮಂ।
ಸೃಜಿಸಿದ ನಲ್ಲದೊಡವಂಗೆ ಜಗಮಂಜುವನೇ॥೧೨॥

ಅರ್ಥ–ಬ್ರಹ್ಮನು ಹೆಬ್ಬಾವಿನ ವಿಷದಿಂದಲೂ, ಸಿಡ್ಲಿನ ಧ್ವನಿಯಿಂದಲೂ, ಹುಲಿಯ ಸಿಟ್ಟಿನಿಂದಲೂ ಪಾಪದಿಂದ ಘನವಾ

ಡ ದುರ್ಜನನನ್ನು ಹುಟ್ಟಿಸಿದನು. ಹೀಗಾಗದಿದ್ದರೆ ಆ ದು ರ್ಜನನಿಗೆ ಲೋಕವ್ಯಾಕೆ ಅಂಜೀತು.

ಕಂದ॥ಸ್ಥಿತಿಯೊಳ್ಸುಜನಂ ಸುಖದಂ।
ಮೃತಿಯೊಳ್ಖಳಜನಂ ಜಗಜ್ಜನಸೌಖ್ಯಕ್ಕಾದ್ಯಂ॥
ಮೃತಿಯೊಳ್ದುಃಖದ ಸಂತ್ಯಂ।
ಸ್ಥಿತಿಯೊಳ್ಪರಿಕಿಸೆ ಪೊಗೀರ್ವರುಂಸರಿಯಲ್ತೇ॥೧೪॥

ಅರ್ಥ—ಸತ್ಪುರುಷನು ಜೀವದಿಂದಿರುವಾಗ ಜನರಿಗೆ ಸು ಖವನ್ನು ಕೊಡುತ್ತಾನೆ, ದುರ್ಜನ ಸತ್ತಬಳಿಕ ಸುಖವನ್ನು ಕೊಡುತ್ತಾನೆ; ಸತ್ಪುರುಷನು ಸತ್ತಬಳಿಕ ಜನರಿಗೆ ದುಃಖ ವನ್ನು ಕೊಡುತ್ತಾನೆ, ದುರ್ಜನನು ಇರುವಾಗ ದುಃಖವನ್ನು ಕೊಡುತ್ತಾನೆ; ಪರೀಕ್ಷೆಮಾಡಿ ನೋಡಲಾಗಿ ಇಬ್ಬರೂ ಸರಿ ಯೆಂಬ ಹಾಗೆ ತೋರುವದು.

॥ಚಂಪಕ ಮಾಲಾವೃತ್ತ॥

ಪರಪರಿವಾದಮಂ ನೆಗಳ್ವುದೇ ಜಪಮನ್ಯಮನಃಪ್ರಸೂ
ನಮಂ।
ಕೊರಗಿಪುದೇ ತಪಂ ಪೆರರಜೀವಿತಮಂ ಪರಿದಿಕ್ಕುವಂದ
ಮೇ॥
ಪ್ರತರಶೀಲಮಾ ದರಿಸಿಲೋಗರ ಮರ್ಮಮನೆಯ್ದೆ
ಭೇದಿಸೊಂ।
ದಿರವೆಪೊದಳ್ವ ಜಾನವೆನೆದುರ್ಜನ ತಾಪಸನೇಂಕೃತಾ
ರ್ಥನೋ॥೧೫॥

ಅರ್ಥ—ಅನ್ಯರಕೂಡ ವಾದಿಸುವದೇ ದುರ್ಜನನಿಗೆ ಜಪ

ವು; ಪರರವರ ಮನಸ್ಸೆಂಬ ಹೂವನ್ನು ಬಾಡಿಸುವದೇ ಅವರಿಗೆ ತಪವು; ಮುಂದಿಯ ಉಪಜೀವನವನ್ನು ಕೆಡಿಸುವದೇ ಆತನಿಗೆ ಒಳ್ಳೇ ಸ್ವಭಾವವು; ಪರರಮರ್ಮವನ್ನು ತಿಳುಕೊಳ್ಳುವದೇ ಆತನಿಗೆ ಧ್ಯಾನವು; ಇಂಥಾ ದುರ್ಜನ ತಪಸ್ವಿಯು ಎಂಥಾ ಪುಣ್ಯಾವಂತನೋ!!!

ಕಂದ॥ತಿಳಿದತನನುಭವಿಪಿನೆರೆ।
ತಿಳಿಯದುದಂತಿಳಿದರಿಂದೆತಿಳಿವುದುಕೃತಿಯೊಳ್॥
ಪೊಳೆವರ್ಥಮನದನೆಖಿಳಂ।
ತಿಳಿಯದೆತ್ತಾಂಪಳಿಯೆಪಳಗೆವಕ್ಕಾ ಗಿರನೇ?॥೧೮॥

ಅರ್ಥ—ತಿಳಿದಷ್ಟನ್ನು ಅನುಭವಿಸಿ, ಚಿನ್ನಾಗಿ ತಿಳಿಯದ್ದನ್ನು ಬಲ್ಲವರಿಂದ ತಿಳಿದುಕೊಳ್ಳಬೇಕು; ಹೀಗೆಮಾಡದೆ ದುರ್ಜನನು ಕಾವ್ಯದಲ್ಲಿ ಹೊಳೆಯುವಅರ್ಥಗಳನ್ನು ತಿಳುಕೊಳ್ಳದೆ ಗ್ರಂಥಕರ್ತನನ್ನು ಹಳಿದರೆ ತಾನೇ ದೂಷಣೆಗೆ ಪಾತ್ರನಾಗುವನು.

ಕಂದ॥ಪಳಿಯಲ್ಪಲ್ಲಂನೆಗಳ।
ಲ್ಪಳನೇಂಬಲ್ಲನೆನವೀನಕಾವ್ಯಮನಿಳೆಯೊಳ್॥
ತೊಳಗುವರವಿಯುಂಮುಸುಳಿಪ।
ಬಳಧರಮದರಂತೆಜಗಮನೇಂಬೆಳಗುಗುಮೋ॥೧೯॥

ಅರ್ಥ—ಪ್ರಕಾಶಿಸುವಂಥ ಸೂರ್ಯನನ್ನು ಮೋಡವು ಆಚ್ಛಾದಿಸಿ ಕಾಂತಿಗುಂದಿಸುವದಲ್ಲದೆ, ಆ ಸೂರ್ಯನಹಾಗೆ ಜಗತ್ತಿನಲ್ಲಿ ಬೆಳಕವನ್ನು ಉಂಟು ಮಾಡಲಾರದು; ಇದರಂತೆ ದುರ್ಜನನು ಕಾವ್ಯವನ್ನು ರಚಿಸಲಾರನು.

ಕಂದ॥ಕವಿವಿಬುಧರ ಕಿವಿಯೊಳ್ಳು।
ಸುವನವರಸ ವಿಳದುಕ್ತಿವಿತನುವಂ ಮನವಂ॥
ಕವಿದುಪ್ಪೊರ ಸೂಸಿತ್ರೆನೆಪ್ಪೊ।
ಣ್ಮಿಪ ಸುಖಬಾಷ್ಪಂತುಳುಂಕೆ ಪೇಳ್ವುದು ಕೃತಿಯಂ ॥೧೩॥

ಅರ್ಥ—ಕವಿಗಳ ಕಿವಿಯೊಳಗೂ ಪಂಡಿತರ ಕಿವಿಯೊಳಗೂ ನವರಸಗಳುಳ್ಳುದು ಅವರ ಶರೀರದೊಳಗೂ ಮನಸಿನೊಳಗೂ ತುಂಬಿ ಹೊರ ಸ ಸಿತ್ರೋ ಏನೋ, ಅಸ್ಸುವಹಾಗೆ ಕೇಳಗೊಡಲೇ ಅವರ ಸುಖಬಾಷ್ಪೋದಕವು ತುಳುಕಿ ಹೊರ ಸೂಸುವಂತೆ ಕಾವ್ಯವನ್ನು ರಚಿಸಬೇಕು.

ಕಂದ॥ಮೊದಲೊರೆದ ಕೃತಿಗಳರೆಪೇ।
ಳ್ವುದುಮೆಯುದಿದೆನ್ನದಿರ್ಕೆವಿಬುಧರ್ಮೊದಲು।
ಗ್ಗದಸಕ್ಕದ ವಿರೆಕನ್ನದ।
ಮುದಯಿಸಿರಂಜಿಸದೆಕರ್ಣಕಮನೀಯತೆಯಿಂ॥೧೪॥

ಅರ್ಥ—ಮೊದಲು ರಚಿಸಲ್ಪಟ್ಟ ಹೆಚ್ಚಿನ ಕಾವ್ಯಗಳತಲಾಗಿ, ಇನ್ನು ಮೇಲೆ ಹೊಸದಾಗಿ ರಚಿಸುವ ಕಾವ್ಯವು ರಂಜಿನೆಯಾಗಲಾರದೆಂದು ಪಂಡಿತರು ಅನ್ನದೆ ಇರಲಿ; ಕಾರಣವೇನಂದರೆ, ಮೊದಲಿನ ಕಾವ್ಯಗಳೆಲ್ಲ ಸಂಸ್ಕೃತ ಭಾಷೆಯಲ್ಲಿರುವವು, ಹೊಸದಾಗಿ ಕನ್ನಡ ಭಾಷೆಯಲ್ಲಿ ರಚಿಸಲ್ಪಡುವ ಕಾವ್ಯವು ಕಿವಿಗೆ ಇಂಪಾಗಿ ರಂಜಿಸದೋ?(ರಂಜಿಸುವದೆಂಬರ್ಥ).

ಸಮುದ್ರ ವರ್ಣನೆ

ಕಂದ॥ಯಮುನಾನದಿ ದೋಮಾವಳಿವೋ।

ಲಮೊಲೆಮಹೀರಮಣಿ ನಿಜಮಹೀಧರಜಘನ॥
ಕ್ಕೆ ಮುದದಿಂ ನಿರಿಗೆ ತೆಗೆದುಟ್ಟವೊ।
ಲೆಮನೋಜ್ಞಾಂಬರಮೆನೆಸೆದುದಂಬುನಿಧಾನಂ॥೧॥

ಅರ್ಥ—ಯಮುನಾ ನದಿಯೆಂಬ ರೋಮಗಳ ಸಾಲುಳ್ಳ, ಭೂಮಿಯೆಂಬ ಸ್ತ್ರೀಯು ಪರ್ವತಗಳೆಂಬ ತನ್ನ ಕಟಿಪಶ್ಚಾದ್ಭಾಗಕ್ಕೆ ಸಂತೋಷದಿಂದ ಉಟ್ಟುಕೊಂಡ ಮಂಜುಳವಾದ ಸೀರೆಯಹಾಗೆ ಸಮುದ್ರವು ಶೋಭಿಸಿತು.

ಕಂ॥ ತನುಜನ ತೇಜಮನಪಹರಿ।
ಸನಿವನೆನುತ್ತಬ್ಧಿ ಮುಳಿದು ಸಂಧ್ಯಾರುಣಸೂ॥
ರ್ಯನಕಿರಣಮನುರೆ ಸೆರೆವಿಡಿ।
ದನೆನೆ ವಿರಾಜಿಪುದು ವಿದ್ರುಮಂ ಸದ್ರುಚಿಯಿಂ॥೨॥

ಅರ್ಥ—ತನ್ನ ಮಗನಾದ ಚಂದ್ರನ ತೇಜವನ್ನು ಸೂರ್ಯನು ಅಪಹರಿಸುತ್ತಾನೆಂದು ಸಮುದ್ರವು ಸಿಟ್ಟಾಗಿ ಸಾಯಂಕಾಲದ ಸೂರ್ಯನ ಕಿರಣಗಳನ್ನು ಸೆರೆಹಿಡಿದು ಹಾಕಿತೋ ಏನೋ, ಅನ್ನುವಹಾಗೆ ಸಮುದ್ರದಲ್ಲಿ ಒಳ್ಳೇ ಪ್ರಕಾಶದಿಂದ ಹವಳಗಳು ಶೋಭಿಸಿದವು.

ಕಂ॥ ಜಲನಿಧಿ ಜಲಮಂ ಜಲಭೃ।
ತ್ಕುಲಕ್ಕೆ ನಲಿದಿತ್ತು ದತ್ತಮಿತ್ತನದೀಶಿ॥
ಮಲಸಲಿಲಂ ದೊರೆದುದುಗಡ।
ನೆಲಪೊಳ್ಕೊಟ್ಟಂಗೆ ಬಡತನಂ ಬಂದಪುದೇ?॥೩॥

ಅರ್ಥ—ಸಮುದ್ರವು ಅತ್ತ ಮೋಡಗಳಿಗೆ ಸಂತೋಷದಿಂದ ನೀರ ಕೊಟ್ಟಿತು, ಇತ್ತ ಸಮುದ್ರಕ್ಕೆ ನದಿಗಳ ಮುಖ

ದಿಂದ ನಿರ್ಮಲವಾದ ನೀರು ವೊರೆದವು, ಭೂಮಿಯಲ್ಲಿ ಕೊಟ್ಟವನಿಗೆ ಬಡತನವು ಬರುವದೇ?

||ಚಂಪಕ ಮಾಲಾವೃತ್ತ||

ಜಲನಿಧಿ ಜಂಭವೈರಿಗರಿಯಂ ಗಿರಿಯಂ ಬಿಡುಬೇಗಮೆಂ
ದುಬಂ||
ಮುಳಿವವೊಲೊಪ್ಪೆ ಸುಸ್ತನಿತ ಮುಜ್ವತಟಿತ್ಕರ ವಾಳ
ನಾಂತುತ|
ಜ್ವಲದಭಟಂಗದಂ ಕೊಡದೆತನ್ನಯ ಜೀವನಮಿತ್ತುದ
ಬ್ಧಿ ಭೂ|
ತಳದೊಳಸತ್ವ ಶಾಲಿಪಗೆಗೇಂ ಮರೆವೊಕ್ಕನ ನೀಯ
ಲಾರ್ಪನೇ?||೪||

ಅರ್ಥ—ಎಲೈ ಸಮುದ್ರವೇ, ಇಂದ್ರನ ವೈರಿಯಾದ ಮೈನಾಕ ಪರ್ವತವು ನಿನ್ನಲ್ಲಿ ಮರೆ ಹೊಕ್ಕಿದೆ, ಅದನ್ನು ಇಂದ್ರನಿಗೆ ಬೇಗನೇ ಬಿಟ್ಟು ಕೊಡೆಂದು ಗುಡುಗೆಂಬ ಧ್ವನಿಯಿಂದಲೂ, ಮಿಂಚೆಂಬ ಖಡ್ಗದಿಂದಲೂ ಹೆದರಿಸುವ ಮೋಡವೆಂಬ ಭಟನಿಗೆ ಸಮುದ್ರವು ತನ್ನ ಜೀವನವನ್ನು(ನೀರನ್ನು) ಕೊಟ್ಟಿತಲ್ಲದೆ, ಆ ಪರ್ವತವನ್ನು ಕೊಡಲಿಲ್ಲ. ಭೂಮಿಯಲ್ಲಿ ಸಮರ್ಥರು ಬೆನ್ನು ಬಿದ್ದವರನ್ನು ಹಿಡಿದು ಅವರ ವೈರಿಗಳ ಕೈಯೊಳಗೆ ಕೊಡಲಾರರು.

Rules for the supply of books to the Educational Department, Bombay.

ಮುಂಬಯಿ ಇಲಾಖೆಯೊಳಗಿನ ಎಜ್ಯುಕೇಶನಲ

ಡಿಪಾರ್ಟಮೆಂಟಿಗೆ ಪುಸ್ತಕಗಳನ್ನು ಈಡು ಮಾಡತಕ್ಕ ನಿಯಮಗಳು.

೧ ಮುಂಬಯಿಯಲ್ಲಿರುವ ಸೆಂಟ್ರಲ ಬೂಕ ಡಿಪೋದ ಕ್ಯೂರೇಟರರಿಗೆ ಎಜ್ಯುಕೇಶನಲ ಡಿಪಾರ್ಟಮೆಂಟಿಗೆ ಎಲ್ಲ ವಿಧದ ಪುಸ್ತಕಗಳನ್ನೂ ನಕಾಶೆಗಳನ್ನೂ ಈಡು ಮಾಡತಕ್ಕ ಅಧಿಕಾರವು ಕೊಡಲ್ಪಟ್ಟದೆ.

೨ ಎಜ್ಯುಕೇಶನಲ ಡಿಪಾರ್ಟಮೆಂಟಿನಲ್ಲಿ ಉಪಯೋಗಿಸಲಿಕ್ಕೆ ಸ್ಯಾಂಕ್ಷನ್ನವಾದ ಪುಸ್ತಕಗಳನ್ನೂ ನಕಾಶೆಗಳನ್ನೂ ಕೊರತೆ ಬೀಳದಂತೆ ಈಡು ಮಾಡುವಬಗ್ಗೆ ಸೆಂಟ್ರಲ ಬೂಕ ಡಿಪೋದ ಕ್ಯುರೇಟರರು ಜವಾಬದಾರರಿದ್ದಾರೆ.

೩ ಎರಡನೇ ವಿಧದ ಪುಸ್ತಕಗಳನ್ನೂ ನಕಾಶೆಗಳನ್ನೂ ಆಫೀಸರರು ಬೇಡಿದರೆ, ಅವರ ಜವಾಬದಾರಿಯಿಂದ ಕ್ಯುರೇಟರರು ಅಂಥಾ ಪುಸ್ತಕಗಳನ್ನೂ ನಕಾಶೆಗಳನ್ನೂ ಕೊಳ್ಳುವರು.

ಬ್ರ್ಯಾಂಚ ಬುಕಡೀಪೋಗಳು.

೪ ಪ್ರತಿ ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳಲ್ಲಿ ಬ್ರ್ಯಾಂಚ ಬುಕಡೀಪೋಗಳುಂಟು. ಡಿಸ್ಟ್ರಿಕ್ಟ ಡೀಪೋಕೀಪರರಿಗೆ ಕಮಿಶನ ಕೊಡುವ ಕಟ್ಟಳೆ ಹ್ಯಾಗಂದರೆ—ಅವರು ತಾವೇ ಮಾರಾಟ ಮಾಡಿ ಜಮೆ ಮಾಡಿದ ಹಣದಲ್ಲಿ ನೂರಕ್ಕೆ ೧ರೂಪಾಯಿಯಂತೆ, ತಮ್ಮ ಕೈಕೆಳಗಿನ ತಾಲೂಕದ ಡೀಪೋಕೀಪರರ ಕಡೆಯಿಂದ ಮಾರಾಟ ಮಾಡಿಸಿದ ಹಣದಲ್ಲಿ ನೂರಕ್ಕೆ ½ರೂಪಾಯಿಯಂತೆ ಕಮಿಶನ ಕೊಡಲಾದೀತು.

೫ ಡಿಸ್ಟ್ರಿಕ್ಟಡೀಪೋಕೀಪರರನು ಬರುವಅಕ್ಟೋಬರತಿಂ

ಗಳದಿಂದ ಮುಂದೆ ಒಂದು ವರ್ಷದವರೆಗೆ ಬೇಕಾಗುವಷ್ಟು ಪುಸ್ತಕಗಳನ್ನು ನಕಾಶೆಗಳನ್ನು ಬೇಡುವಬಗ್ಗೆ ಅಜಮಾಸು ಮಾಡಿ ಕೆಳಗೆ ಜೋಡಿಸುವ ಅನಮೂನೆಯಂತೆ ಒಂದು ಇಂಡೆಂಟವನ್ನು (ಯಾದಿ) ವರ್ಷಕ್ಕೊಮ್ಮೆ ಅಪ್ರಿಲತಿಂಗಳಲ್ಲಿ ೧೫ನೇ ತಾರೀಖಿನೊಳಗೆ ಕಳಿಸಬೇಕು. ಈ ಡೀಪೋಕೀಪರನು ಜಿಲ್ಲೆಯ ಡಿಪ್ಯುಟೀ ಇನಸ್ಪೆಕ್ಟರರನ್ನು ವಿಚಾರಿಸಿ ಆ ಇಂಡೆಂಟವನ್ನು ತಯಾರ ಮಾಡಿ ಅವರ ಕೆಳಗೆ ಅವರ ರುಜು ತಕ್ಕೊಂಡು ಕಳಿಸತಕ್ಕದ್ದು. ಕ್ಯುರೇಟರ ಕ್ಯಾಟಲಾಗ (ಅನುಕ್ರಮದ ಯಾದಿ) ದಲ್ಲಿ ನಮೂದವಿಲ್ಲಂಥ ಪುಸ್ತಕಗಳನ್ನು ನಕಾಶೆಗಳನ್ನು ಆ ಇಂಡೆಂಟಿನಲ್ಲಿ ಬೇಡಕೂಡದು. ಬೇಕಾಗತಕ್ಕಷ್ಟೇ ಅಜಮಾಸು ಮಾಡಿ ಯಾದೀ ಮಾಡಿರುತ್ತದೆಂಬ ಬಗ್ಗೆ ಡಿಪ್ಯುಟೀ ಇನಸ್ಪೆಕ್ಟರರು ಜವಾಬದಾರರಿದ್ದಾರೆ, ಅಜಮಾಸಕ್ಕಿಂತಲು ಹೆಚ್ಚಿಗೆ ಶಿಲ್ಕು ಉಳಿಯುವಬಗ್ಗೆ ಡಿಸ್ಟ್ರಿಕ್ಟ ಡೀಪೋಕೀಪರನು ಜವಾಬದಾರನಿದ್ದಾನೆ.

೬ ಅಪ್ರಿಲತಿಂಗಳಲ್ಲಿ ಕಳಿಸಿದ ಇಂಡೆಂಟಿನಲ್ಲಿ ಯಾವದಾದರೊಂದು ರೀತಿಯಿಂದ ಕೊರತೆ ಕಂಡು ಬಂದರೆ ಡಿಪ್ಯುಟೀ ಇನಸ್ಪೆಕ್ಟರರು ಡಿಸ್ಟ್ರಿಕ್ಟ ಡೀಪೋಕೀಪರನಿಗೆ ಹೇಳಿ ಅವನ ಕೈಯಿಂದ ಸಪ್ಲಮೆಂಟರಿ ಇಂಡೆಂಟ (ಪುರವಣೀ ಯಾದಿ) ವನ್ನು ಅನಮೂನೆಯಂತೆ ತಯಾರ ಮಾಡಿಸಿ ಅಕ್ಟೋಬರತಿಂಗಳಲ್ಲಿ ಕಳಿಸತಕ್ಕದ್ದು; ಆ ಸಪ್ಲಮೆಂಟರಿ ಇಂಡೆಂಟಿನ ಕೆಳಗೆ ಡಿಪ್ಯುಟೀ ಇನಸ್ಪೆಕ್ಟರರು ಕಾರಣಗಳನ್ನು ತೋರಿಸಿ ರುಜು ಮಾಡಬೇಕು.

೭ ಯಾವ ಇಂಡೆಂಟುಗಳ ಬಗ್ಗೆ ಡಿಪ್ಯುಟೀ ಇನಸ್ಪೆಕ್ಟರರು ಜವಾಬದಾರರಿದ್ದಾರೋ ಆ ಇಂಡೆಂಟುಗಳಲ್ಲಿ ಕಾಲೇಜುಗಳಿಗೂ, ಹೈಸ್ಕೂಲುಗಳಿಗೂ, ಫಸ್ಟ್‌ಗ್ರೇಡ ಅಂಗ್ಲೋವರ್ನ್ಯಾಕ್ಯುಲರ ಸ್ಕೂಲುಗಳಿಗೂ ಬೇಕಾದ ಪುಸ್ತಕಗಳು ನಮೂದ ಇರಬಾರದು.

೮ ಕ್ಯುರೇಟರರ ಕ್ಯಾಟಲಾಗದಲ್ಲಿಲ್ಲದ ಪುಸ್ತಕಗಳು ಒಂದು ವೇಳೆ ಡಿಪ್ಯುಟೀ ಇನಸ್ಪೆಕ್ಟರರಿಗೆ ಬೇಕಾದರೆ, ಅವರು ಕೆಳಗೆ ಜೋಡಿಸಿದ ಯಾದಿ ನಮೂನೆಯಂತೆ ಬೇರೆ ಒಂದು ಇಂಡೆಂಟಿನಲ್ಲಿ ಆ ಪುಸ್ತಕಗಳನ್ನು ನಮೂದ ಮಾಡಿ, ಆ ಯಾದಿಯನ್ನು ಎಜ್ಯುಕೇಶನಲ ಇನಸ್ಪೆಕ್ಟರರಿಗೆ ಕಳಿಸತಕ್ಕದ್ದು. ಆ ಯಾದಿಯು ಯೋಗ್ಯವಾಗಿ ತೋರಿದರೆ ಅವರು ಅದರ ಕೆಳಗೆ ರುಜು ಮಾಡಿ ಅದನ್ನು ಕ್ಯುರೇಟರರಿಗೆ ಕಳಿಸಬೇಕು. ಬಳಿಕ ಎಜ್ಯುಕೇಶನಲ ಇನಸ್ಪೆಕ್ಟರರು ೧೧ನೇ ನಿಯಮದಂತೆ ಪುಸ್ತಕಗಳನ್ನು ಬೇಡುವ ಅಧಿಕಾರಿಗಳೆಂದು ಲೆಕ್ಕಿಸಲ್ಪಡುವರು.

೯ ಅಪ್ರಿಲದ ಇಂಡೆಂಟಿನಲ್ಲಿಯೂ, ಅಕ್ಟೋಬರದ ಸಪ್ಲಿಮೆಂಟರಿ ಇಂಡೆಂಟಿನಲ್ಲಿಯೂ ಬೇಡಿದ ಬುಕ್ಕುಗಳ ಮುಕ್ತಾಲು ಒಂದು ವರ್ಷದೊಳಗೆ ಮಾರಾಟವಾಗಬೇಕೆಂಬ ಬಗ್ಗೆ ಡಿಪ್ಯುಟೀ ಇನಸ್ಪೆಕ್ಟರರು ಜವಾಬದಾರರಿದ್ದಾರೆ.

೧೦ ಅಪ್ರಿಲತಿಂಗಳದ ಇಂಡೆಂಟಿನಲ್ಲಿ ಬೇಡಿದಪುಸ್ತಕಗಳು ಅಕ್ಟೋಬರತಿಂಗಳಲ್ಲಿ ಬಂದು ತಲ್ಪುವವು, ಸಪ್ಲಿಮೆಂಟರಿ ಇಂಡೆಂಟಿನಲ್ಲಿ ಬೇಡಿದ ಪುಸ್ತಕಗಳು ಆದಷ್ಟು ತೀವ್ರ

ವಾಗಿ ಬಂದು ತಲ್ಪುವವು.

ಡಿಸ್ಟ್ರಿಕ್ಟ ಡಿಪೋಕೀಪರನ ಲೆಖ್ಖಗಳು.

೧೧ ಡಿಸ್ಟ್ರಿಕ್ಟ ಡಿಪೋಕೀಪರನು ಪ್ರತಿ ತಿಂಗಳ೧೦ನೇ ತಾರೀಖಿನೊಳಗೆ ಕಳೆದ ತಿಂಗಳ ಲೆಕ್ಖವನ್ನು ಕೆಳಗೆ ಜೋಡಿಸಿದ ಬನಮೂನೆಯಂತೆ ಕ್ಯೂರಟರರಿಗೆ ಕಳಿಸತಕ್ಕದ್ದು, ಆದರ ಕೂಡ ಆ ತಿಂಗಳಲ್ಲಿ ಮಾರಾಟವಾದ ಪುಸ್ತಕಗಳ ಯಾದಿಯನ್ನೂ ತನ್ನ ಮಾಹೆವಾರ ಕಮಿಶನದ ಬಿಲ್ಲನ್ನೂ ಸಾದಿಲವಾರದ ಬಿಲ್ಲನ್ನೂ ಕಳಿಸತಕ್ಕದ್ದು.

೧೨ ಡಿಸ್ಟ್ರಿಕ್ಟ ಡೀಪೋಕೀಪರನು ಜೂನತಿಂಗಳಕೊನೆಗೆ ಶಿಲ್ಕು ಉಳಿದ ಪುಸ್ತಕಗಳ ಯಾದಿಯನ್ನು ಜುಲೈತಿಂಗಳ ೧ನೇ ತಾರೀಖಿನಲ್ಲಿ, ಸಪ್ಟೆಂಬರತಿಂಗಳಕೊನೆಗೆ ಶಿಲ್ಕು ಉಳಿದ ಪುಸ್ತಕದ ಯಾದಿಯನ್ನು ಅಕ್ಟೋಬರತಿಂಗಳ ೧ನೇ ತಾರೀಖಿನಲ್ಲಿ; ಡಿಸೆಂಬರತಿಂಗಳಕೊನೆಗೆ ಶಿಲ್ಕು ಉಳಿದ ಪುಸ್ತಕಗಳ ಯಾದಿಯನ್ನು ಜಾನೆವಾರಿತಿಂಗಳ ೧ನೇ ತಾರೀಖಿನಲ್ಲಿ ಕ್ಯೂರೇಟರರಿಗೆ ಕಳಿಸಬೇಕು.

೧೩ ಡಿಸ್ಟ್ರಿಕ್ಟ ಡೀಪೋಕೀಪರನು ಅಪ್ರಿಲತಿಂಗಳ ೧೫ನೇ ತಾರೀಖಿನೊಳಗೆ-(೧) ಕೆಳಗೆ ತೋರಿಸಿದ ಬ ನಮೂನೆಯಂತೆ ವಾರ್ಷಿಕ ಲೆಕ್ಖವನ್ನೂ, ಅದರಕೂಡ-(೨) ಕೆಳಗೆ ತೋರಿಸಿದ ಕ ನಮೂನೆಯಂತೆ ಪತ್ರಕವನ್ನೂ,-(೩) ಡೇಡಸ್ಟಾಕ ಸಾಮಾನದ ಯಾದಿಯನ್ನೂ,-(೪)ತನ್ನ ಕೈಕೆಳಗಿನ ತಾಲೂಕ ಡೀಪೋಗಳ ಯಾದಿಯನ್ನೂ ಕ್ಯೂರೇಟರರಿಗೆ ಕಳಿಸ ಬೇಕು.

೧೪ ಡಿಸ್ಟ್ರಿಕ್ಟ ಡೀಪೋಕೀಪರನು ಪುಸ್ತಕಗಳ ಮಾರಾಟದಿಂದ ಬಂದ ಹಣವನ್ನು ಸರಕಾರೀ ತಿಜೋರಿಯಲ್ಲಿ ಭರಣಾ ಮಾಡಿ ಡ್ರಾಫ್ಟ (ಹುಂಡಿ)ಗಳನ್ನು ತಕ್ಕೊಂಡು ಕ್ಯುರೇಟರರಿಗೆ ಕಳಿಸಬೇಕು. ಡಿಸ್ಟ್ರಿಕ್ಟ ಡೀಪೋಕೀಪರನು ೫೦ ರೂಪಾಯಿಗಳಿಗಿಂತ ಹೆಚ್ಚು ತನ್ನ ಬಳಿಯಲ್ಲಿ ಇಟ್ಟುಕೊಳ್ಳಬಾರದು, ತಾಲೂಕದ ಡೀಪೋಕೀಪರನು ೧೦ ರೂಪಾಯಿಗಳಗಿಂತ ಹೆಚ್ಚಿಗೆ ಇಟ್ಟುಕೊಳ್ಳಬಾರದು, ಇಬ್ಬರೂ ಪ್ರತಿತಿಂಗಳ ಕೊನೆಗೆ ತಂತಮ್ಮಲ್ಲಿ ಬಂದ ಮಾರಾಟದ ಹಣವನ್ನೆಲ್ಲ, ಭರಣಾ ಮಾಡಬೇಕು.

೧೫ ಡಿಸ್ಟ್ರಿಕ್ಟ ಡೀಪೋಕೀಪರನ ದುರ್ಲಕ್ಷದಿಂದಾಗಲಿ, ಸೋಮಾರಿತನದಿಂದಾಗಲಿ ಪುಸ್ತಕಗಳೂ, ನಕಾಶೆಗಳೂ ಕೆಟ್ಟರೆ, ಇಲ್ಲವೆ ಕಳೆಯಲ್ಪಟ್ಟರೆ ಅವನು ದಂಡಕ್ಕೆ ಪಾತ್ರನಾಗುವನು.

ಡೀಪೋಗಳನ್ನು ತಪಾಸ ಮಾಡತಕ್ಕ ವಿವರ.

೧೬ ಕ್ಯುರೇಟರರು ಎರಡುವರ್ಷಗಳೊಳಗೊಮ್ಮೆ ಡಿಸ್ಟ್ರಿಕ್ಟ ಡೀಪೋಗಳನ್ನು ತಪಾಸಿಸಬೇಕು, ಪ್ರತಿವರ್ಷದ ಅಗಷ್ಟ ತಿಂಗಳಲ್ಲಿ ಡಿಪುಟೀ ಎಜ್ಯುಕೇಶನಲ ಇನಸ್ಪೇಕ್ಟರರು ತಪಾಸಮಾಡಿ ಆ ಡಿಸ್ಟ್ರಿಕ್ಟ ಡೀಪೋದ ಸ್ಥಿತಿಯಬಗ್ಗೆ ಇನಸ್ಪೇಕ್ಟರರ ವಿದ್ಯಮಾನದಿಂದ ಕ್ಯುರೇಟರರಿಗೆ ರಿಪೋರ್ಟ ಮಾಡಬೇಕು.

೧೭ ತಾಲೂಕದ ಡೀಪೋಗಳನ್ನು ಪ್ರತಿವರ್ಷವಲ್ಲಿ ಡಿಪುಟೀ ಎಜ್ಯುಕೇಶನಲ ಇನಸ್ಪೆಕ್ಟರರು ತಪಾಸ ಮಾಡಿ, ಅವಶ್ಯವಾಗಿ

ತೋರಿದರೆ ರಿಪೋರ್ಟವನ್ನಾಗಲಿ ಸೂಚನೆಯನ್ನಾಗಲಿ ಇನಸ್ಪೆಕ್ಟರರ ದ್ವಾರದಿಂದ ಕ್ಯೂರೇಟರರಿಗೆ ಕಳಿಸತಕ್ಕದ್ದು.

ಸೆಂಟ್ರಲಬುಕಡಿಪೋಕ್ಕೆ ಕಳಿಸತಕ್ಕ ಇಂಡೆಂಟುಗಳು.

೧೮ ಕಾಲೇಜಗಳ ಪ್ರಿನ್ಸಿಪಾಲರೂ, ಹೈಸ್ಕೂಲ, ಅಗ್ಸಿಲರಿ (ಸಹಾಯಶಾಲೆ), ಫಸ್ಟ ಗ್ರೇಡ ಅಂಗ್ಲೋವರ್ನ್ಯಾಕ್ಯುಲರ ಸ್ಕೂಲಗಳ ಹೆಡ್ಡ ಮಾಸ್ತರರೂ, ಇನಸ್ಪೆಕ್ಟರರೂ, ಪುಸ್ತಕಗಳ ಸಲುವಾಗಿ ಸೆಂಟ್ರಲಬುಕಡಿಪೋದ ಕ್ಯೂರೇಟರರ ಕಡೆಗೆ ಪರಭಾರೆ ಇಂಡೆಂಟುಗಳನ್ನು ಕಳಿಸಲಧಿಕಾರವುಳ್ಳವರಿದ್ದಾರೆ.

೧೯ ಕೆಳಗೆ ತೋರಿಸಿದ ಡ ನಮೂನೆಯ ಇಂಡೆಂಟಿನಲ್ಲಿ ವರ್ಷದ ತನಕ ಶಾಲೆಗಳಿಗೂ, ಕಾಲೇಜಗಳಿಗೂ ಬೇಕಾಗುವಷ್ಟು ಅಂದಾಜು ಮಾಡಿದ ಸಾಂಕ್ಷನ್ಡ ಬುಕ್ಕುಗಳನ್ನು, ನಕಾಶೆಗಳನ್ನು ನಮೂದ ಮಾಡಬೇಕು. ಢ ನಮೂನೆಯ ಇಂಡೆಂಟಿನಲ್ಲಿ ಎರಡನೆ ತರದ ಪುಸ್ತಕಗಳನ್ನು ಸಾಮಾನುಗಳನ್ನು ನಮೂದ ಮಾಡಬೇಕು.

೨೦ ಡ ನಮೂನೆಯ ಇಂಡೇಂಟನ್ನು ಅಪ್ರಿಲತಿಂಗಳ ೧೫ನೇ ತಾರೀಖಿನೊಳಗೆ ಕಳಿಸಬೇಕು, ಒಂದು ವೇಳೆ ಆ ಅಂದಾಜು ಕೊರತೆಯಾಗುವಂತೆ ಕಂಡು ಬಂದರೆ ಸಪ್ಲಿಮೆಂಟರಿ ಡ ನಮೂನೆಯ ಇಂಡೇಂಟನ್ನು ತಯಾರಮಾಡಿ ಅಕ್ಟೋಬರ ತಿಂಗಳಲ್ಲಿ ಕಳಿಸಬೇಕು. ಢ ನಮೂನೆಯಂತೆಯೂ, ಸಪ್ಲಿಮೆಂಟರಿ ಡ ನಮೂನೆಯಂತೆಯೂ ಬೇಡಿದಂಥ ಪುಸ್ತಕನಕಾಶೆಗಳ ಮುಕ್ಕಾಲು ಒಂದು ವರ್ಷದಲ್ಲಿ ಮಾರಾಟವಾಗುವ

ಬಗ್ಗೆ ಇಂಡೆಂಟು ಮಾಡಿದ ಆಫೀಸರರು ಜವಾಬದಾರರಿದ್ದಾರೆ.

೧೧ ಕ್ಯಾಟಲಾಗನಲ್ಲಿಲ್ಲದಂಥ ಪುಸ್ತಕಗಳನ್ನು ಇನಾಮಿನ ಬಗ್ಗೆ ಅಥವಾ ಲೈಬ್ರರಿಯ ಬಗ್ಗೆ ಬೇಡಿ ೮ ನಮೂನೆಯಂತೆ ಬೇಕಾದಾಗ ಇಂಡೆಂಟು ಮಾಡಿ ಕಳಿಸಬಹುದು, ಈ ಇಂಡೆಂಟಿನ ಸಂಗಡವೇ ಹಣವನ್ನು ಕಳಿಸಬೇಕು, ಇಲ್ಲವೆ ಆ ವರ್ಷದಲ್ಲಿ ಇಂಥಾ ತಾರೀಖಿನ ದಿವಸ ಹಣವನ್ನು ಕಳಿಸುವೆವೆಂದು ಬರೆಯಬೇಕು. ೮ ನಮೂನೆಯಂತೆ ಇಂಡೆಂಟು ಮಾಡಿ ಪುಸ್ತಕಗಳನ್ನು ತರಿಸಿಕೊಂಡ ಆಫೀಸರರು ಆ ಪುಸ್ತಕಗಳ ಹಣವನ್ನು ಆ ವರ್ಷದೊಳಗೆ ಮುಟ್ಟಿಸುವ ಬಗ್ಗೆ ಜವಾಬದಾರರಿದ್ದಾರೆ.

೧೨ ಕ್ವೇಟರರು ಅಪ್ರಿಲ ತಿಂಗಳ ಇಂಡೆಂಟಿನ ಪುಸ್ತಕಗಳನ್ನು ಬರುವ ಅಕ್ಟೋಬರ ತಿಂಗಳಲ್ಲಿ, ಸಪ್ಟಂಬರ ಇಂಡೆಂಟಿನ ಪುಸ್ತಕಗಳನ್ನು ಬರುವ ಮಾರ್ಚ ತಿಂಗಳ ೩೧ ನೇ ತಾರೀಖಿನೊಳಗೆ, ೮ ನಮೂನೆಯಂತೆ ಬೇಡಿದ ಪುಸ್ತಕಗಳನ್ನು ತಕ್ಕ ವೇಳೆಯಲ್ಲಿ ಈಸು ಮಾಡಬೇಕು. ಆದರೆ ಇಂಗ್ಲಂಡದಿಂದ ತರಿಸತಕ್ಕ ಪುಸ್ತಕಗಳೆಲ್ಲ ಈಗ ಇಂಡಿಯಾ ಆಫೀಸದ ಮುಖಾಂತರವಾಗಿ ತರಿಸಬೇಕಾಗುತ್ತವೆಂಬ ಸಂಗತಿಯನ್ನು ಇಂಡೆಂಟು ಕಳಿಸುವ ಆಫೀಸರರಿಗೆ ನಾವು ಸೂಚಿಸುತ್ತೇವೆ. "ತ್ವರೆ" ಎಂಬ ಗುರ್ತಿನಲ್ಲಿ ಇಂಡೆಂಟುಗಳ ಪುಸ್ತಕಗಳು ಸಂಗ್ರಹದಲ್ಲಿದ್ದರೆ ಅವು ತತ್ಕಾಲವೇ ಕಳಿಸಲ್ಪಡುವವು.

(Signed) J. B. PEILE,

ಡೈರೆಕ್ಟರ ಆಫ್ ಪಬ್ಲಿಕ ಇನಸ್ಟ್ರಕ್ಶನ್

ತಾ॥೧೭ ಅಕ್ಟೋಬರ ೧೮೭೧
(ಕೆಳಗೆ ತೋರಿಸತಕ್ಕ ನಮೂನೆಗಳನ್ನು ಮುಂದೆ ಸಮಯಾನುಸಾರವಾಗಿ ಬರೆಯುವೆವು).

Circular.

ಸೆರಕ್ಯುಲ್ಲರು

ಮೊಚ್ಚೆಗಳನ್ನು ಹಾಕಿ ಕೊಳ್ಳುವದರಲ್ಲಿ ಮಾಸ್ತರರೂ, ವಿದ್ಯಾರ್ಥಿಗಳೂ ಯೇನು ನಿರ್ಬಂಧವಿಲ್ಲದೆ ವರ್ತಿಸುತಾರೆಂದು ನೋಡಿ ನಮಗೆ ಖೇದ ವಾಗುತ್ತದೆ.

ಇಂಗ್ಲಂಡದಲ್ಲಿ ಹುಡುಗರು ತಲೆಗೆ ಟೊಪ್ಪಿಗೆಯುಹಾಕಿಕೊಂಡು ಶಾಲೆಯೊಳಗೆ ಯೆಂದೂ ಹೋಗುವದಿಲ್ಲ, ಯೋಗ್ಯರಾದ ಮಾಸ್ತರರು ಶಾಲೆಯೊಳಗೆ ಕೆಲಸನಡಿದಿರಲಾಗಿ ಹುಡುಗರ ಕಣ್ಣೆದುರಿಗೆ ಟೊಪ್ಪಿಗೆಯುಹಾಕಿ ಕೊಳ್ಳಬೇಕೆಂದು ಯೆಂದಿಗೂ ಆಲೋಚಿಸಲಿಕ್ಕಿಲ್ಲ.

ಹಿಂದುದೇಶದಲ್ಲಿ ಪುರಾತನ ಕಾಲದಿಂದ ಮೊಚ್ಚೆಗಳನ್ನು ತೆಗೆಯುವದು ಮಾನ ತೋರಿಸುವ ಕುರುಹಾಗಿರುತ್ತದೆ. ಆದರೆ ಸರಕಾರೀ ಶಾಲೆಗಳೊಳಗಿನಮಾಸ್ತರರೂ ವಿದ್ಯಾರ್ಥಿಗಳೂ ಇಂಥಾ ಪ್ರತಿಬಂಧಗಳು ತಮಗೆಸಂಬಂಧಿಸುವದಿಲ್ಲವೆಂತಲೂ, ಪೊಳ್ಳೀ ನಡತೆಯು ಕಟ್ಟಳೆಗಳಿಗೆ ತಾವು ವೊಳಗಾದವರಲ್ಲವೆಂತಲೂ ತಿಳಿಧು ಕೊಳ್ಳುವಹಾಗೆ ತೋರುತ್ತದೆ. ಈ ಬೆಳಗಾವಿಯು ಗ್ರಾಮದಲ್ಲಿ ಮಾಸ್ತರರೂ, ವಿದ್ಯಾರ್ಥಿಗಳೂ ಮೊಚ್ಚೆಯುಹಾಕಿಕೊಂಡೇಶಾಲೆಯಲ್ಲಿ ಕೂಡ್ರುತ್ತಾರೆಂದು ತೋ

ರುತ್ತದೆ. ಇದರಿಂದ ವೊಬ್ಬರಿಗೊಬ್ಬರು ಯೇನೂ ಮಾನತೋರಿಸುವದಿಲ್ಲ ವೆಂದುತಿಳಿಯುತ್ತದೆ.

ಆದದರಿಂದ ನಾವು ಅಪ್ಪಣೆಯಮಾಡುವದೇನಂದರೆ, ಯಾರಾದರೂ ಯುರೋಪಿಯನ್ನು ಉದ್ಯೋಗಸ್ಥರು ಶಾಲೆಯೊಳಗೆ ಬಂದಾಗ ಈ ದಕ್ಷಿಣಭಾಗದೊಳಗಿನ ಯೆಲ್ಲ ಮಾಸ್ತರರೂ, ವಿದ್ಯಾರ್ಥಿಗಳೂ ವೊಳ್ಳೇ ನಡತೆಗೆ ತಕ್ಕ ಮಾನತೋರಿಸಿ, ಮೊಚ್ಚೆಗಳನ್ನು ತೆಗೆಯತಕ್ಕದ್ದು. ಇಂಗ್ಲಿಶ ಬೂಟುಗಳನ್ನು ಹಾಕಿಕೊಳ್ಳುವ ರೂಢಿಯುಳ್ಳ ನೇಟೀವಜನರಿಗೆ ಈ ಅಪ್ಪಣೆಯು ಸಂಬಂಧಿಸುದಿಲ್ಲ.

(Signed) R. E. CANDY,
ಇ. ಇನಸ್ಪೆಕ್ಟರ ದಕ್ಷಿಣಭಾಗ.

☞ ಇನಸ್ಪೆಕ್ಟರ ಧೊರೆಗಳು ಮೊಚ್ಚೆಗಳನ್ನು ತೆಗೆಯುವದು ಬಹುಕಾಲದಿಂದ ಈ ದೇಶದಲ್ಲಿ ಸನ್ಮಾನ ತೋರಿಸುವದರಕುರುಹಾಗಿರುತ್ತದೆಂತಲೂ, ಶಾಲೆಗಳಲ್ಲಿ ಮಾಸ್ತರರೂ ವಿದ್ಯಾರ್ಥಿಗಳೂ ಮೊಚ್ಚೆಗಳನ್ನು ತೆಗಿದು ಪರಸ್ಪರರಿಗೆಮಾನ ತೋರಿಸುವದಿಲ್ಲ ವೆಂನಲೂ ಹೇಳಿ, ಕಡೆಯಲ್ಲಿ ಯುರೋಪಿಯನ್ ಜನರು ಶಾಲೆಯಲ್ಲಿ ಬಂದಾಗ ಮೊಚ್ಚೆಗಳನ್ನು ತೆಗೆಯತಕ್ಕದ್ದೆಂದು ಅಪ್ಪಣೆಯಕೊಡುತ್ತಾರೆ. ಇದರಿಂದ ಉಳಿದ ವೇಳೆಯಲ್ಲಿ, ಅಂದರೆ ಯುರೋಪಿಯನ್ ಅಧಿಕಾರಸ್ಥರು ಬರದೆಇದ್ದಾಗ, ಶಾಲೆಯೊಳಗೆ ಮೊಚ್ಚೆಗಳನ್ನು ಹಾಕಿಕೊಂಡಿರಬಹುದೆಂದು ಯಾರಾದರೂ ಯೆಣಿಸಿದರೆ ಅದು ದೊಡ್ಡ ತಪ್ಪಾಗುವದೆಂದು ನಾವು ಸೂಚಿಸುತ್ತೇವೆ. ದೇಶಭಾಷೆಯ ಶಾಲೆಗ

ಳಗಿಂತ ಇಂಗ್ಲಿಶ ಶಾಲೆಗಳಲ್ಲಿ ಈ ಸುವರ್ದತ್ತೆಯು ಬಹಳ ಪ್ರಂಟು.

ಎಡಿಟರ.

ಸನ್ ೧೮೭೧ರ ಡಿಸೆಂಬರ ತಿಂಗಳಲ್ಲಿ ಕಲಾದಗಿಜಿಲ್ಲೆಯೊಳಗಿನ ನೇಮಣೂಕಗಳು.

೧ ವೀರಯ್ಯಾ ಬಿನ್ನ ಶಿವರುದ್ರಯ್ಯಾ ಅಶಿಷ್ಟಂಟ ಗುರು ವರಗುದ್ದ ಯಿವರಿಗೆ ೧೨ರೂ॥ ಸಂಬಳ ಯಿದ್ದದ್ದು ೧೫ರೂ॥ ಸಂಬಳವುಳ್ಳ ನಿಡಗುಂದ ಸಾಲಿಯು ಅಗಟಿಂಗ ಹೆಡ್ಡಮಾಸ್ತರ ನೇಮಿಸುತ್ತದೆ—

೨ ಗೋವಿಂದಾಳ ಖಂಡೊ ಹೆಡ್ಡಮಾಸ್ತರ ನಿಡಗುಂದಿ ಯಿವರಿ ೧೫ರೂ॥ ಸಂಬಳ ಯಿದ್ದು ಅಷ್ಟೇ ಸಂಬಳವುಳ್ಳ ಕಲಾದಗಿ ೨ನೇ ನಂಬರ ಸಾಲೆಯು ಅಗಟಿಂಗ ಹೆಡ್ಡಮಾಸ್ತರ ನೇಮಿಸಿದೆ.

(Signe) Hanmant Ramchandra,
ಡಿ. ಎ. ಇನಸ್ಪೆಕ್ಟರ.

ನೋಟೀಸು

ಧಾರವಾಡ ಜಿಲ್ಲೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—ಈ ನೋಟೀಸಿನಿಂದ ತಿಳಿಯು ಪಡಿಸುವದೇನಂದರೆ—ಮಾಸ್ತರಜನರು ತಮ್ಮ ಸಾಲಿಯು ಹುಡುಗರ ಕಡಿಂದಾ ತಂಮ ಮನಿಯು ಕೆಲಸಗಳನ್ನು ಮಾಡಿಸುತ್ತಿರುತ್ತಾರೆ; ಹುಸು

ಗರನ ಪ್ಯಾಟೆಗೆ ಕರಕೊಂಡು ಹೋಗಿ ಅವರಮೇಲೆ ಕಾಳು ಕಡಿ ಹೊರಿಸಿಕೊಂಡು ಬರುತ್ತಾರೆ; ಮನೆಯಲ್ಲಿ ನೀರು ತರಿಸುತ್ತಾರೆ; ಹಾಗು ಧೋತ್ರ ಮುಂತಾದವುಗಳನ್ನು ಒಗಿಸುತ್ತಾರೆ; ಇದು ಬಹಳ ಕೆಟ್ಟದ್ದು. ಇಂಥಾ ತಪ್ಪನ್ನು ಯಜಮಾನ ಮಾಸ್ತರರು ಮಾಡಿದ್ದು ನಾವು ಕೇಳಿದರೆ ಅವರಿಗೆ ಶಿಕ್ಷೆ ಮಾಡುವೆವು. ತಿಳಿಯುವದು ತಾರೀಖು ೧೨ನೇ ಡಿಶೆಂಬರ ೧೮೭೧೪. ಧಾರವಾಡ.

ಡಿ. ಎ. ಇನಸ್ಪೆಕ್ಟರ ಜಿಲ್ಲಾ ಧಾರವಾಡ.

(Signed) Chanbussappa B. Dharwar.

Correspondence

"ಪತ್ರವ್ಯವಹಾರವು."

ಭಾಗ ೨ನೇದು (ಭೂಗೋಲನಿರೂಪಣವಿಷಯಕ್ಕೆ.)

ಚಿಕ್ಕದೊಂದು ಗುಂಡಾಗಲಿ, ಚೆಂಡಾಗಲಿ, ದೀವಿಗೆಯ ಎದುರಿಗೆ ಹಿಡಿದರೆ ಅದರದೊಂದು ಕಡೆಯಮಗ್ಗಲು ಬೆಳಕು ಬೀಳುವದು ನಾವು ನೋಡುತ್ತೇವೆ, ಹಾಂಗು, ಮತ್ತೊಂದು ಮಗ್ಗಲಿಗೆ ಕತ್ತಲು ಬೀಳುವದನ್ನು ನೋಡುತ್ತೇವೆ. ಒಂದು ವೇಳೆ ಅದನ್ನು ತಿರಿವಿದರೆ ಕ್ರಮಕ್ರಮಾನುಸಾರವಾಗಿ ಒಂದು ಮಗ್ಗಲಿಗೆ ಬೆಳಕೂ, ಮತ್ತೊಂದು ಮಗ್ಗಲಿಗೆ ಕತ್ತಲೂ, ಬೀಳುವದು.

ನಿತ್ಯದ ಭೂಮಾನ ಗತಿಯಿಂದಲೂ ಸಹ ಅದರಂತೇಯಾಗುವದು; ಪೃಥ್ವಿಯು ಇದೊಂದು ಗೋಲವದೆ, ಮತ್ತು, ಅದು ಸೂರ್ಯನಸುತ್ತಲು ತಿರುಗಬೇಕಾದರೆ, ತನ್ನ ಆಸನದ ಸು

ವಿಮಾನವೇ ಮೇಲಕ್ಕೆ ಹೋಗುತ್ತದೆಂದು ಕಾಣಿಸತಕ್ಕದ್ದು, ಹಾಗೆ ಕಾಣಿಸದೆ, ಕುಳಿತವರಿಗೆ, ನಾವು ಸ್ಥಿರವಾಗಿದ್ದು, ಪೃಥ್ವಿಯೇ ಕೆಳಗಿಳಿಯುತ್ತದೆಂದು ತೋರುತ್ತದೆ.

ಭೂಮಿಯು ತನ್ನ ಮೈಸುತ್ತಲು (ಅಚ್ಚಿನಸುತ್ತಲು) ತಿರುಗುತ್ತಿದ್ದು, ಸೂರ್ಯನೂ, ನಕ್ಷತ್ರಗಳೂ, ಸ್ಥಿರವಾಗಿದ್ದಾಗ್ಯೂ, ಭೂಮಿಯೇ ಸ್ಥಿರವಿದೆ, ಮತ್ತು, ಅದರ ಸುತ್ತುಮುತ್ತಲು, ಸೂರ್ಯನೂ, ನಕ್ಷತ್ರಗಳೂ, ತಿರುಗುವಂತೆ ಕಾಣುತ್ತವೆ.

(ಮುಂದಕ್ಕೆ ಸಾಗುವದು)

ತಾ॥೧೧-೪-೨೧ } ಗೋ. ಕೇ. ಜೋ. ಶ್ರೀ.
ಮು. ಗಲಗಲಿ. } ಸ್ಕೂ. ಮಾ. ಗಲಗಲಿ.

ಸ್ಥಾಪನೆ : ೧೮೭೨

ಸಂಸ್ಥಾಪಕರ

1872

ಜೀವನ ಶಿಕ್ಷಣ ಪತ್ರಿಕೆಯ

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೯೭

ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೯೭ ರಿಂದ)
ವರ್ಷ 1872

ಶ್ರೀ ಚೆನ್ನಬಸಪ್ಪನವರ
(೧೮೩೩-೧೮೮೧)

೭-೮ ನೇಯ ಸಂಚಿಕೆ

ಕನ್ನಡ ಶಾಲಾ ಪತ್ರಿಕೆ

ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚೆನ್ನಬಸಪ್ಪ ವೃತ್ತ. ರೊಡ್ಡ ರಸ್ತೆ. ಧಾರವಾಡ - ೮

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಶಾಲಾಪತ್ರಕವು.

ಪುಸ್ತಕ ೩] [ಸಂಚಿಕೆ ೧೦.

ಬೆಳಗಾವಿ, ಮಾಹೆ ಜ್ಯಾನೆವರಿ ೧೮೬೭.

Natural Philosophy.

ಪದಾರ್ಥವಿಜ್ಞಾನವು.

ಪಾರಗತಿ.

೨೩ನೇ ಅಧ್ಯಾಯು.

ವಕ್ರೀಭವನವೂ, ವಕ್ರೀಕರಣಶಕ್ತಿಯೂ, ಬಹು ರೂಪ ದರ್ಪಣವೂ.

೧. ಪಾರಗತಿಯಂದರೆ ಕೆಲವೊಂದು ಪದಾರ್ಥದೊಳಗಿಂದ ಪಾರಾಗಿ ಹೋಗುವಗುಣವು. ಆದದರಿಂದ ಈ ಭಾಗದಲ್ಲಿ ಕಿರಣಗಳು ಬೇರೆ ಬೇರೆ ವಿಧದ ಪಾರದರ್ಶಕ ಪದಾರ್ಥಗಳೊಳಗಿಂದ ಪಾರಾಗಿ ಹೋಗುವ ಸಂಗತಿಯು ವರ್ಣಿಸಲ್ಪಡುವದು.

ಪರಾವರ್ತನವು—ಪಾರದರ್ಶಕ ಪದಾರ್ಥಗಳೊಳಗಿಂದ ಕಿರಣಗಳು ಪಾರಾಗಿ ಹೋಗುವಾಗ ಅವುಗಳ ಮೊದಲಿನ ದಿಕ್ಕು ಬದಲಾಗುತ್ತದೆ, ಅಂದರೆ ಅವು ವಕ್ರವಾಗುತ್ತವೆ.

ಈ ವಕ್ರತ್ವಕ್ಕೇ ವಕ್ರೀಭವನವೆಂದು ಹೆಸರುಂಟು—(೧೯ನೇ ಆಕೃತಿಯು ನೋಡು)ಬಸ್ಥಳದಿಂದ ಬರುವ ಕಿರಣವು ಗಲಕನ್ನಡಿಯೊಳಗಿಂದ ಪಾರಾಗಿ ಹೋಗುವಾಗ ಬಿಂದುಗಳಿಂದ ತೋರಿಸಲ್ಪಟ್ಟ ರೇಖೆಯಂತೆ ಹೋಗುವದಕ್ಕೆ ಬದಲಾಗಿ ಕಬಿಂದುವಿನಲ್ಲಿ ಆಕೃತಿಯೊಳಗೆ ತೋರಿಸಿದಹಾಗೆ ವಕ್ರವಾಗುವದು. ಆದರೆ ಕಿರಣವು ಘ ಕ ರೇಖೆಯಂತೆ ಬಂದು ಕನ್ನಡಿಯ ಮೇಲೆ ಲಂಬವಾಗಿ ಬಿದ್ದರೆ, ಅದರೊಳಗಿಂದ ಪಾರಾಗುವಾಗ ವಕ್ರವಾಗದೆ ಕ ಖ ರೇಖೆಯಂತೆ ನೆಟ್ಟಗೆ ಪಾರಾಗಿ ಹೋಗುವದು. ಆದದರಿಂದ ಪಾರದರ್ಶಕ ಪದಾರ್ಥಗಳ ಮೇಲೆ ಕಿರಣಗಳು ವಾರೆಯಾಗಿಬಿದ್ದರೆ ಮಾತ್ರ ಅವು ಪರಾವರ್ತನ ಹೊಂದುತ್ತವೆಂತಲೂ, ಲಂಬವಾಗಿ ಬಿದ್ದರೆ ಹೊಂದುವದಿಲ್ಲವೆಂತಲೂ ತಿಳಿಯತಕ್ಕದ್ದು.

೧೧ ಮೇಲೆ ಹೇಳಿದಹಾಗೆ ಪಾರದರ್ಶಕ ಪದಾರ್ಥಗಳೊಳಗೆ ಸೇರುವಾಗ ಕಿರಣಗಳು ವಕ್ರವಾದಂತೆ, ಪುನಃ ಆ ಪದಾರ್ಥವನ್ನು ಬಿಟ್ಟು ಹೊರಗೆ ಬರುವಾಗ ಮತ್ತೊಮ್ಮೆ ಮೊದಲಿನ ವಕ್ರತೆಗೆ ವಿರುದ್ಧವಾಗಿ ವಕ್ರವಾಗುವವು. ಅಂದರೆ ಅವು ಮೊದಲು ಸೇರುವಾಗ ಯಾವ ದಿಕ್ಕಿನಲ್ಲಿ ಯೆಷ್ಟು ವಕ್ರವಾಗುತ್ತವೆಯೋ, ಅಷ್ಟೇ ಹೊರಗೆ ಬರುವಾಗ ಆ ದಿಕ್ಕಿಗೆ ವಿರುದ್ಧವಾಗಿ ವಕ್ರವಾಗುವವು. ಆದದರಿಂದ ಆಕೃತಿಯಲ್ಲಿ ತೋರಿಸಿದಂತೆ ಹೊರಬಿದ್ದನಂತರ ಪುಂಜಾಗುವ ಗತಿಯು (ನರ)ವೊಳಗೆ ಸೇರುವ ಪೂರ್ವದಲ್ಲಿದ್ದ ಗತಿಗೆ (ಕಹ)ಸಮಾಂತರವಾಗಿರುವದು.

೧೨ (೨ನೇ ಆಕೃತಿಯು ನೋಡು). ಬ ಕ ಆಕೃತಿಯಂತೆ ತ್ರಿಕೋಣ ರೂಪವಾಗಿದ್ದ ಕಾಜಿನೊಳಗಿಂದ ಕಿರಣಗಳು ಪಾರಾಗುವಾಗ ಅವುಗಳ ವಕ್ರೀಭವನವು ಸುಲಭವಾಗಿ ತಿಳಿಯುತ್ತದೆ. ಇಂಥಾ ಕಾಜಿಗೆ "ಪ್ರಿಝಂ" ಯೆಂದು ಹೆಸರುಂಟು. ಅ ಸ್ಥಳದಿಂದ ಬರುವ ಕಿರಣವು ಕಾಜಿನ ಮೇಲೆ ಬ ಸ್ಥಳದಲ್ಲಿ ಬೀಳಲಾಗಿ ಅದು ಪ್ರೊಳವ್ಯೆಯಲ್ಲಿ ಲಂಬದ ಕಡೆಗೆ ಹೊರಳಿ ಕ ಸ್ಥಳಕ್ಕೆ ಬಂದು ಮುಟ್ಟುವದು. ಅಲ್ಲಿಂದ ಹೊರಬೀಳುವಾಗ ಹೊರವ್ಯೆಯಲ್ಲಿ ತೋರಿಸಿದ ಲಂಬದಿಂದ ಹೆಚ್ಚಿಗೆ ದೂರ ಹೊರಳಿ ಡ ದಿಕ್ಕಿಗೆ ಹೋಗುವದು. ಅಂದರೆ ಈ ಕಾಜಿನಿಂದ ಕಿರಣಗಳು ವೊಂದೇ ದಿಕ್ಕಿನಲ್ಲಿ ಯೆರಡು ಸಾರಿ ಹೊರಳುತ್ತವೆ.

೧೩ (೩ನೇ ಆಕೃತಿಯು ನೋಡು) ಆಕೃತಿಯಲ್ಲಿ ತೋರಿಸಿದಂಥ ಪಾತ್ರೆಯು ಬುಡದಲ್ಲಿ ವೊಂದು ನಾಣ್ಯವಿಟ್ಟು, ಆ ಪಾತ್ರೆಯು ಅಂಚಿನಿಂದ ಅದು ಮರೆಯಾಗುವಷ್ಟು ದೂರ ಹೋಗಿ, ಮತ್ತೊಬ್ಬನ ಕೈಯಿಂದ ಪಾತ್ರೆಯೊಳಗೆ ಮೆಲ್ಲಗೆ ನೀರ ಹನಿಸುತ್ತ ಹೋದರೆ, ಆ ದೂರ ಹೋದವನಿಗೆ ಪಾತ್ರೆಯೊಳಗಿನ ನೀರು ಕಾಣಿಸ ಹತ್ತಿದಕ್ಷಣವೇ ನಾಣ್ಯವಾದರೂ ಕಾಣಿಸುವದು. ಅದನ್ನು ಮೊದಲು ವೊಂದು ಬದಿಯಲ್ಲಿ ಇಟ್ಟಿದ್ದರೆ, ನೀರ ತುಂಬಿದನಂತರ ಅದು ಪಾತ್ರೆಯು ಮಧ್ಯ ಭಾಗದಲ್ಲಿ ಬಂದ ಹಾಗೆ ಕಾಣಿಸುವದು.

೧೪ ಈ ಸಂಗತಿಗಳಿಂದ ದರ್ಶನಾನುಶಾಸನ ಶಾಸ್ತ್ರದ ವೊಂದು ಗೌರವವುಳ್ಳ ನಿಯಮವು ಹೊರಡುತ್ತದೆ. ಆ

ದೇನಂದರೆ, ಕೆಲವೊಂದುಪದಾರ್ಥದಿಂದ ನಮ್ಮ ಕಣ್ಣುಗಳಲ್ಲಿ ಕಿರಣಗಳು ಯಾವದಿಕ್ಕಿನಿಂದ ಬರುತ್ತವೆಯೋ ಅದೇ ದಿಕ್ಕಿನಿಂದ ಆ ಪದಾರ್ಥವನ್ನು ನಾವು ನೋಡುತ್ತೇವೆ; ಪಸ್ತುತಃ ಆ ಪದಾರ್ಥವು ಬೇರೆ ದಿಕ್ಕಿನಲ್ಲಿ ಇದ್ದರೂ ಚಿಂತೆಯಿಲ್ಲ. ಆದರೆ ಸೂರ್ಯೋದಯವಾಗುವದಕ್ಕೆ ಮುಂಚೆ ಸ್ವಲ್ಪ ಹೊತ್ತಿನಿಂದ ಸೂರ್ಯನು ನಮಗೆ ಕಾಣಿಸಹತ್ತುತ್ತಾನೆ; ಇದೇ ಮೇರಿಗೆ ಸೂರ್ಯಾಸ್ತದನಂತರವೂ ಕೆಲವು ಕಾಲ ಸೂರ್ಯನನ್ನು ನಾವು ನೋಡುತ್ತೇವೆ. ಇದರಕಾರಣವೇನಂದರೆ, ಸೂರ್ಯನು ಕ್ಷಿತಿಜದ ಕೆಳಗಿರುವಾಗ ಅವನ ಕಿರಣಗಳು ವಾತಾವರಣದಲ್ಲಿ ಭೂಮಿಯಿಂದ ಸುಮಾರು ೪೫ ಮೈಲು ದೂರವಾಗಿ ವಕ್ರೀಭವನ ಹೊಂದಿ ಕೆಳಗಡೆಯಲ್ಲಿ ಮಣಿದು ನಮ್ಮ ಕಣ್ಣುಗಳಲ್ಲಿ ಬರುತ್ತವೆ. (೪ನೇ ಆಕೃತಿಯ ನೋಡು) ಸೂರ್ಯನು ಕ್ಷಿತಿಜದಕೆಳಗೆ ಕ ಸ್ಥಾನದಲ್ಲಿರುವಾಗ ಅವನ ಕಿರಣಗಳು ವಾತಾವರಣದಮೇಲೆ ಬ ಸ್ಥಾನದಲ್ಲಿ ಬಿದ್ದು, ಹಿಂದಿನಂತೆ ಸರಲಮಾರ್ಗದಿಂದ ಮುಂದಕ್ಕೆ ಹೋಗದೆ, ಮಣಿದು ಆ ಸ್ಥಾನಕ್ಕೆ ಬರುತ್ತವೆ. ಆದದರಿಂದ ಬ ಸ್ಥಳದಿಂದ ಕ್ಷಿತಿಜಕ್ಕೆ ಸಮಾಂತರವಾಗಿ ಆ ಸ್ಥಳಕ್ಕೆ ಕಿರಣಗಳು ಬರುತ್ತಿದ್ದಕಾರಣ ಅವುಗಳ ದಿಕ್ಕಿನಲ್ಲಿಯೋ, ಅಂದರೆ ಡ ಸ್ಥಳದಲ್ಲಿ ಸೂರ್ಯನಿದ್ದ ಆ ಸ್ಥಳದಲ್ಲಿ ನಿಂತ ಮನುಷ್ಯನಿಗೆ ಕಾಣಿಸುವದು. ವಸ್ತು ಆಗ ಸೂರ್ಯನು ಕೆಳಗೆ ಕ ಸ್ಥಳದಲ್ಲಿರುತ್ತಾನೆ.

೧೫ ಪಾರದರ್ಶಕಪದಾರ್ಥಗಳ ವಕ್ರೀಕರಣ

ರು—ಈ ಶಕ್ತಿಯಬಗ್ಗೆ ವೊಂದು ಸಾಧಾರಣನಿಯಮವೇ ಂದರೆ, ಇದು ಪಾರದರ್ಶಕಪದಾರ್ಥಗಳ ಘನತ್ವಕ್ಕೆ ಪ್ರ ಮಾಣವಾಗಿರುತ್ತದೆ; ಅಂದರೆ ಅತಿಘನವಾದ ಪಾರದರ್ಶಕದ ಲ್ಲಿ ವಕ್ರೀಕರಣಶಕ್ತಿಯು ಅತಿಶಯವಿರುತ್ತದೆ. ಕಿರಣವು ಹವೆಯೊಳಗಿಂದ ನೀರೊಳಗೆ ಹೋಗುವಾಗ ೪ಕ್ಕೆ ೩ರಂ ತೆ ವಕ್ರೀಭವನವಾಗುತ್ತದೆ. ಆದರೆ ಹವೆಯೊಳಗಿಂದ ಕಾಜಿ ನೊಳಗೆ ಹೋಗುವಾಗ ೩ಕ್ಕೆ ೨ರಂತೆ ವಕ್ರೀಭವನವಿರುತ್ತ ದೆ. ಈ ಯೆರಡು ಪ್ರಮಾಣಗಳಲ್ಲಿ ಯೆರಡನೇದು ದೊ ಡ್ಡದೆಂದು ಗಣಿತದಿಂದ ತಿಳಿಯುವದು.

೧೬ ಆದದರಿಂದ ಪೂರ್ಣವಾಗಿ ನಿರ್ವಾತವಾದ ಪ್ರದೇ ಶ ಕಿರಣಗಳು ಹೊರಟು, ಹವೆ, ಶೀನೀರು, ಉಪ್ಪು ನೀರು, ಕಾಜು ಮುಂತಾದವುಗಳಲ್ಲಿ, ಶೇರಿದಹಾಗೆ ವಕ್ರೀಭವನವು ಹೆಚ್ಚಾಗುತ್ತದೆ. ವಜ್ರಗಳಲ್ಲಿಯೂ, ನೀರಿನಲ್ಲಿಯೂ ವ ಕ್ರೀಕರಣ ಶಕ್ತಿಯು ಬಹಳವಿದ್ದ ಕಾರಣ ಅವುಗಳಲ್ಲಿ ಅಗ್ನಿ ಗ್ರಾಹಕಪದಾರ್ಥಗಳುಂಟೆಂದು ನ್ಯೂಟನ್ನನು ಶೋಧ ಹಚ್ಚಿದನು. ಆ ಪದಾರ್ಥಗಳು ನೀರಿನಲ್ಲಿ ಹೈಡ್ರೋಜನ ವೂ, ವಜ್ರದಲ್ಲಿ ಕಾರ್ಬನ್ನವೂವುಂಟೆಂದು ಇತ್ತಲಾಗಿ ರಸಾ ಯನ ಶಾಸ್ತ್ರದಿಂದ ತಿಳಿದದೆ.

೧೭ ಬಹು ರೂಪ ಕನ್ನಡಿಯೊಳಗಿಂದ ನೋಡುವಾಗ ಸಹ ವಕ್ರೀಭವನದ ವ್ಯಾಪಾರವು ನಡಿಯುತ್ತದೆ. (ಸನೇ ಆಕೃ ೯ಯು ನೋಡು) ದ ಸ್ಥಳದಲ್ಲಿ ನೊಣವನ್ನಾಗಲಿ. ಬೇ ರೊಂದು ಚಿಕ್ಕ ಪದಾರ್ಥವನ್ನಾಗಲಿ ಇಟ್ಟು ಈ ಕನ್ನಡಿ

ಯೊಳಗಿಂದ ಇ ಸ್ಥಳದಲ್ಲಿ ಕಣ್ಣು ಹಚ್ಚಿ ನೋಡಲಾಗಿ, ಕನ್ನಡಿಯು ಯೆರಡನೇ ಮೈಯಲ್ಲಿ ಯೆಷ್ಟು ಮೂಲೆಗಳುಂಟೋ, ಅಷ್ಟು ರೂಪಗಳು ಕಾಣುವವು. ಯಾಕಂದರೆ, ಮೊದಲು ಡ ಅ ಕಿರಣವು ಕನ್ನಡಿಯು ಮೇಲೆ ಲಂಬವಾಗಿ ಬರುವಕಾರಣ ಅದು ವಕ್ರವಾಗದೆ ಸರಳವಾಗಿ ಕಣ್ಣಿನಲ್ಲಿ ಬರುವದು. ಆದರೆ ಡ ಬ, ಡ ಕ ಕಿರಣಗಳು ಕನ್ನಡಿಯು ಬೇರೆ ಬೇರೆ ಮೈಗಳ ಮೇಲೆ ವಾರೆಯಾಗಿ ಬರುವಕಾರಣ, ಅವು ವಕ್ರವಾಗಿ ಬ ಇ, ಕ ಇ ರೇಖೆಗಳಂತೆ ಬೇರೆ ಬೇರೆ ದಿಕ್ಕುಗಳಿಂದ ಕಣ್ಣಿನೊಳಗೆ ಬರುತ್ತವೆ. ಆ ಕಾರಣ ಈ ಯೆರಡು ಕಿರಣಗಳಿಂದ ಬ ಇ ದಿಕ್ಕಿನಲ್ಲಿ ವೊಂದು, ಕ ಇ ದಿಕ್ಕಿನಲ್ಲಿ ಮತ್ತೊಂದು ರೂಪವು ಕಾಣಿಸುವದು. ಇದೇ ಮೇರಿಗೆ ಆ ಕನ್ನಡಿಯು ಬೇರೆ ಬೇರೆ ಮೈಗಳ ಮೇಲಿಂದ ಬರುವ ಕಿರಣಗಳಿಂದ ಬೇರೆ ಬೇರೆ ರೂಪಗಳು ಕಾಣಿಸುವವು.

Extracts from Rajashekhara.

ರಾಜಶೇಖರದೊಳಗಿನ ಪದ್ಯಗಳು.

॥ಶಾರ್ದೂಲವಿಕ್ರೀಡಿತವೃತ್ತ॥

ಎನ್ನೊಳ್ಪುಟ್ಟಿದ ಚಂದ್ರನಿಂದೆಪಡೆಗುಂ ಸಸ್ಯಾಳಿಸಂಪತ್ತನಂ
ತನ್ನೊಳ್ಪುಟ್ಟಿದ ಲಕ್ಷ್ಮಿಯಿಂದೆಪಡೆಗುಂ ಸೌಭಾಗ್ಯಮಂ ಧಾತ್ರಿ ಮೇ॥

ಣೆನ್ನೊಳ್ಪುಟ್ಟಿದ ವಸ್ತುವಿಂದೆಪಡೆವಂ ಸರ್ವಾರ್ಥಮಂ
ಜಿಷ್ಣುತಾ।
ನೆನ್ನೊಳ್ಪೇಳ್ಸರಿ ಯಾವನೆಂದುಱಿವವೋಲು ಪೆರ್ಚೀಪಿ
ಕ್ಕಾಂಸಾಗರಂ॥೫॥

ಅರ್ಥ—ನನ್ನಲ್ಲಿ ಹುಟ್ಟಿದ ಚಂದ್ರನಿಂದ ಸಸಿಗಳು ಬೆಳೆಯುತ್ತವೆ; ನನ್ನಲ್ಲಿ ಹುಟ್ಟಿದಲಕ್ಷ್ಮಿಯಿಂದ ಭೂಮಿಯು ಸೌಭಾಗ್ಯವನ್ನು ಪಡೆಯುವದು; ನನ್ನಲ್ಲಿ ಹುಟ್ಟಿದ ಕಾಮಧೇನು, ಕಲ್ಪವೃಕ್ಷ,ಚಿಂತಾರತ್ನಗಳಿಂದ ಇಂದ್ರನಿಗೆ ಸಕಲೈಶ್ವರ್ಯವು ಪ್ರಾಪ್ತವಾಯಿತು;ನನಗೆ ಯಾರುಸರಿಗೊಂಡು ಸಮುದ್ರವು ಕೂಗುತ್ತದೋ ಏನೋ ಅನ್ನುವಹಾಗೆಅದರಲ್ಲಿ ಮಹಾಘೋಷವು ಹುಟ್ಟಿರುವದು.

॥ಮಹಾಸ್ರಗ್ಧರಾವೃತ್ತ॥

ಅಳಿಯಂಪೂಗಣ್ಣ ನೆನ್ನೀಮಗಳೆಚಪಳೆಪುತ್ರಂಕರಂರಾಜ
ಯಕ್ಷ್ಮಾ।
ಕುಳನೆನ್ನೈಶ್ವರ್ಯಮಂ ನಿರ್ಜರರೆಕವರ್ದರೆನ್ನೊಳ್ಪೆ
ಸಂಪುಟ್ಟಿತೆನ್ನಂ॥
ಕಳಶಪ್ರೋದ್ಭೂತನಂ ದೀಂಟಿದನಕಟಮಹಾಭಂಗಮಂ
ತಾಳ್ದನೆಂದಂ।
ದೊಳಗಂಭೋರಾಶಿಚಿಂತಾಗ್ನಿ ಯನೆತಳೆವವೋಲೌರ್ವನಂತ
ಸ್ಥವಿಕ್ರಂ॥೬॥

ಅರ್ಥ—ತನ್ನ ಅಳಿಯನಾದ ನಾರಾಯಣನ ಕಣ್ಣೊಳಗೆ ಹೂವು ಬಿತ್ತಂತಲೂ (ಕಮಲ ನೇತ್ರ), ತನ್ನ ಮಗಳಾದ ಲ

ಕ್ಷ್ಮಿಯು ಒತ್ತಟ್ಟಗಿರದೆ ಚಂಚಲೆಯಾದಳೆಂತಲೂ, ತನ್ನ ಮಗನಾದ ಚಂದ್ರನು ಯಕ್ಷ್ಮರೋಗದಿಂದ ಯುಕ್ತನಾದನೆಂತಲೂ, ಮಥನಮಾಡಿ ದೇವತೆಗಳು ತನ್ನ ಐಶ್ವರ್ಯವನ್ನೆಲ್ಲ ಕಸಕೊಂಡರೆಂತಲೂ, ತನ್ನಲ್ಲಿ ವಿಷ ಹುಟ್ಟಿತೆಂತಲೂ, ಹಿಂದಕ್ಕೆ ತನ್ನನ್ನು ಅಗಸ್ತ್ಯಋಷಿಯು ಒಕ್ಕುಡತೆಮಾಡಿ ಕುಡಿದನೆಂತಲೂ, ಸಮುದ್ರವು ಚಿಂತಾಗ್ನಿಯನ್ನೇ ಧರಿಸಿರುವದೋ ಏನೋ ಅನ್ನುವಹಾಗೆ ಸಮುದ್ರದೊಳಗೆ ವಡಬಾಗ್ನಿಯು ಇರುವದು.

॥ಮತ್ತೇಭವಿಕ್ರೀಡಿತವೃತ್ತ॥

ಘನಲಾವಣ್ಯರಸಾನ್ವಿತಂಗೆ ನವರತ್ನಾಲಂಕೃತಾಂಗಂಗೆ ಜೀ।
ವನವೊಂದಾಗಿರೆ ಕೂಡಿಮುಚ್ಚಿಸಿದ ಪಾರಾವಾರಕಾಂತಂಗೆ ಸೋ॥
ಲ್ತುನದೀನಾರಿಯರಿತ್ತ ಸುಗ್ಗುರುಳಿವೆಂಬಂತಂಗುಳಿವ್ರಾತಮೊಂ।
ಬಿನೆಗಂತೀರದ ನೀರದಂಗಳೆಸೆಗುಂ ಸದ್ವಿದ್ರುಮಾಗ್ರಂಗಳುಂ॥೭॥

(ಇದರಲ್ಲಿ ಶ್ಲೇಷಾರ್ಥವುಂಟು)

ಅರ್ಥ—ಅಧಿಕವಾದ ಸೌಂದರ್ಯ (ಉಪ್ಪು ನೀರು) ವುಳ್ಳಂಥ, ನವರತ್ನಗಳಿಂದ ಅಲಂಕೃತವಾದಂಥ, ಜೀವನ (ನೀರು) ವೊಂದಾಗಿ ಕೂಡಿ ಮುಚ್ಚಿಸಿದ ಸಮುದ್ರವೆಂಬ ಗಂಡನಿಗೆ ಹೊಳೆಗಳೆಂಬ ಸ್ತ್ರೀಯರು ಮನಸುಸೋತು, ಕೊಟ್ಟಂಥ

ಮುಣ್ಪಳ್ಳ ಕೂದಲುಗಳೂ ಬೆರಳುಗಳೂ ಎಂಬುವಹಾಗೆ ಸಮುದ್ರ ತೀರದಲ್ಲಿರುವ ಮೋಡಗಳೂ ಹವಳದ ಕುಡಿಗಳೂ ಶೋಭಿಸಿದವು.

ಕಂದ॥ ಪಡೆದುದುಗಡಮೊದಲಿಂದುವ।
ಕ್ಕಡಲಿದು ಮೇಣಿಂದುಪಡೆದುದುಡುವಿತತಿಯನೆಂ॥
ಬಿಡೆಗೆಡೆಯಾದುದುಜಡನಿಧಿ।
ಪಿಡಿದೆಡೆವಿಡದಿಡಿದವಾರಿಕಣಗಣದಿಂದಂ॥೮॥

ಅರ್ಥ—ಸಮುದ್ರವು ಹಿಂದಕ್ಕೆ ಚಂದ್ರನನ್ನು ಪಡೆದಿತ್ತು; ಈಗ ನಕ್ಷತ್ರಗಳನ್ನು ಹಡೆಯಿತೋ ಏನೋ, ಅನ್ನುವಹಾಗೆ ಸಮುದ್ರದೊಳಗಿಂದ ಗಾಳಿಯ ಹೊಡೆತಕ್ಕೆ ಸಿಡಿವ ನೀರಹನಿಗಳು ಶೋಭಿಸಿದವು.

॥ಮೇರುಗಿರಿಯ ವರ್ಣನೆ॥

॥ಮತ್ತೇಭವಿಕ್ರೀಡಿತವೃತ್ತ॥

ಪರಿತಂದಾಗಿರಲೊಂದು ತಪ್ಪಲೆಳೆವುಲ್ಲಂ ಮೇದುಮೆಯ್ಪೆ
ಪೆರ್ಚನಿ।
ಜರರಕ್ತಾಂತ್ರಾನನ ಚಂದ್ರನಿಂಬೊಸದ ಚಂದ್ರಾಶ್ಮಾಂಬು
ಪಂಪೀದೂರ್ಣತಿ॥
ಸ್ವರಗೀತಕ್ಕೆ ಕಡಂಗಿ ಕಾಮದುಘಮುದ್ಯತ್ ಕ್ಷೀರಮಂ
ಕ್ಕೋಷ್ಟಿಂ।
ಸುರಿಯಲ್ತಳ್ತು ಸುಧಾಂಗನಾದನದ ಚೋಕ್ಶಾಂಬಿಂದು
ಹೇನೆಂದೇಂ॥೧॥

ಅರ್ಥ—ಆ ಮೇರುಗಿರಿಯ ಒಂದು ತಪ್ಪಲಕ್ಕೆ ಕಾಮಧೇ

ನು ಓಡಿ ಹೋಗಿ ಅಲ್ಲಿರುವ ಎಳೆಹುಲ್ಲನ್ನು ಮೇದು, ದೇವಾಂಗನೆಯರ ಮುಖಚಂದ್ರನಿಗೆ ಒಸರುವ ಚಂದ್ರಕಾಂತದ ನೀರನ್ನು ಕುಡಿದು, ಕಿನ್ನರ ದೇವತೆಗಳ ಗಾನವನ್ನು ಕೇಳಿ ಆನಂದಪಟ್ಟು, ಕೆಚ್ಚಲು ತೊರೆದು ಹಾಲನ್ನು ಸುರಿಸುವದು. ಆ ಹಾಲೊಳಗೆ ಚಂದ್ರನು ಸ್ನಾನಮಾಡಿ ಸುಧಾಂಗನಾಗಿರಬಹುದು.

||ಚಂಪಕಮಾಲಾವೃತ್ತ||

ಚರಿಪನಿಳಿಂಪಕಾಂತೆಯರ ಪಚ್ಚದಪಚ್ಚೆಯ ಕಾಂತಿಕಣ್ಗೆ
ಮುಂ
ಬರಿಯೆ ಕರುಂಕೆಗೆತ್ತೆಳಸಿ ಚಂದ್ರನ ಪುಲ್ಲೆ ತುಡುಂಕಲೆಂ
ದುನಿಂ||
ದಿರೆಪರಿವಜ್ಝರಂಬಿಡಿದು ಪುಟ್ಟಿದಪುಲ್ಗಳನೀವರಲ್ಲಿ ತ|
ತ್ತರುಣಿಯರಂದದಕ್ಕೆ ನಿಜನೇತ್ರಪನೇತ್ರದೆ ಪೋಲ್ತನ
ಣ್ಪಿನಿಂ||೧||

ಅರ್ಥ—ಆ ಮೇರುಗಿರಿಯಲ್ಲಿ ಸಂಚರಿಸುವ ದೇವಾಂಗನೆಯರ ಪಚ್ಚೆರತ್ನದ ಆಭರಣಗಳ ಹಸುರಕಾಂತಿಯನ್ನು ಕಂಡು ಕರಿಕೆಯೆಂದು ತಿಳುಕೊಂಡು ಅದನ್ನು ಹಿಡಿದು ತಿನಬೇಕೆಂದು ನಿಂತಂಥ ಚಂದ್ರನ ಎರಳೆಗೆ ಆ ಸ್ತ್ರೀಯರು ಅಲ್ಲಿಯ ಜಲಪ್ರವಾಹದ ಸುತ್ತುಮುತ್ತು ಹುಟ್ಟಿದ ಕರಿಕೆಯನ್ನು ಕಿತ್ತು ತಮ್ಮ ಕಣ್ಣುಗಳಿಗೆ ಸಮಾನವಾದ ಕಣ್ಣುಗಳುಳ್ಳ ಆ ಎರಳೆಗೆ ಪ್ರೀತಿಯಿಂದ ತಿನಿಸುವರು.

||ಮತ್ತೇಭವಿಕ್ರೀಡಿತವೃತ್ತ||

ಗಿರಿಶೃಂಗಾಗ್ರದೆ ನಿಂದುನೆಟ್ಟಿದಿರೊಳ್ತೋರ್ಪಿಂದು
ವಂನೋಡಿಪಂ।
ಕೇರುಹಂತಪ್ಪದಿದೆಂದು ಮಧ್ಯದಕಳಂಕಂಕಂಡುಮತ್ತಾ
ಳಿಯಿಂ॥
ದುರಣತ್ಕಂಕಣ ಹಸ್ತಮಂನೆಗಪಿ ಸೋವುತ್ತಿರ್ಪಗಂಧ
ರ್ವಸುಂ।
ದರಿಯಂಕಿನ್ನರಿಯರ್ಕರಂ ನಗುವರಾಸ್ವರ್ಣಾಚಳಪ್ರಾಂ
ತದೊಳ್॥೨॥

ಅರ್ಥ—ಮೇರುಗಿರಿಯ ಕೋಡುಗಲ್ಲಿನ ತುದಿಯಮೇಲೆ ನಿಂತುಕೊಂಡು ಇದುರಿಗೆ ತೋರುವ ಚಂದ್ರನನ್ನು ನೋಡಿ ಇದು ಕಮಲವೆಂದು ನಿಶ್ಚಯಿಸಿ, ನಡುವಿನ ಕಲಂಕವನ್ನು ಕಂಡು ಸೊಕ್ಕಿದ ಗುಂಗೀಹುಳವೆಂದು ತಿಳುಕೊಂಡು, ಅದನ್ನು ಝಣತ್ಕಾರ ಧ್ವನಿಮಾಡುವ ಕಂಕಣವುಳ್ಳ ಕೈಯನ್ನು ಎತ್ತಿ ಹೊಡೆಯುತ್ತಿರುವ ಗಂಧರ್ವ ಸ್ತ್ರೀಯಳ ಭ್ರಾಂತಿಗೆ ಕಿನ್ನರಾಂಗನೆಯರು ನಗುವರು.

॥ಕಂದ॥ಗುರುತರತರುತಳದೊಳ್ಕಂ।
ನರಿಯುರಸರಕೆಳಸಿಬಳಸದಿರೆನಿಜಹರಿಣಂ॥
ಹರಿಣಾಂಕಂಸಲೆಸಿಲೆತ।
ತರುಣಿಯರಿದುಸುಕರಮುಕರವೆಂದೀಕ್ಷಿಸುವರ್।೪॥

ಅರ್ಥ—ಒಂದು ದೊಡ್ಡ ವೃಕ್ಷದಕೆಳಗೆ ಕೂತುಕೊಂಡು ಹಾಡುವ ಕ್ಕಿನ್ನರಾಂಗನೆಯರ ಇಂಪಾದ ಸ್ವರವನ್ನು ಆಲಿಸಿ ಚಂದ್ರನ ಎರಳೆಯು ಮುಂದಕ್ಕೆ ಹೋಗದೇ ಅಲ್ಲಿಯೇ

ನಿಂತುಕೊಂಡ ಕೂಡಲೆ ಆ ಎರಳೆಯ ಮೇಲೆ ಕೂತಿದ್ದ ಚಂದ್ರನನ್ನು ಕಂಡು ಆ ಸ್ತ್ರೀಯರು ಕನ್ನಡಿಯೆಂದು ತಿಳಿದು ನೋಡಹತ್ತಿದರು.

॥ಕಂದ॥ಮುಗಿಲಿಂದೆ ತಟಿಲ್ಲತೆಮಿಗೆ।
ಜಿಗಿದೊಗೆವಂದದೊಳೆಸೆಗೆವ ಖಚರಿಯಮುಡಿಯಿಂ॥
ದುಗುವಲರ್ಗಳ್ಕರಮೆಸೆಗುಂ।
ಮುಗಿಲಿಂಮುಗಿಲೊಗೆದುಕಳೆವಕರಕಂಗಳವೋಲ್॥೫॥

ಅರ್ಥ—ಮೋಡದೊಳಗಿಂದ ಮಿಂಚುಹುಟ್ಟುವಂತೆ ಹಾರುವ ದೇವತಾ ಸ್ತ್ರೀಯಳ ತುರುಬಿನಿಂದ ಬೀಳುವ ಹೂವುಗಳು, ಮೋಡದಿಂದ ಬಂದುಸಣ್ಣ ಮೋಡಹುಟ್ಟಿ ಆಣೆಕಲ್ಲುಗಳನ್ನು ಸುರಿಸುತ್ತವೋ ಏನೋ ಅನ್ನುವಹಾಗೆ ಶೋಭಿಸಿದವು.

॥ಚಂಪಕಮಾಲಾವೃತ್ತ॥

ಸುಮಮಕರಂದದಿಂದೆ ಕಬಿಕ್ಕೈದೊಳೆದಾದ್ರುಮ ಪತ್ರ
ಪಾತ್ರೆಯುಂ।
ಸಮೆದಪರಲ್ಲಿ ತುಂಬಿತುಳಿತೊಂದದ ಪೂಗಳನ್ನೈದೆ ತುಂ
ಬಿಕೊಂ।
ಢಮರ್ಮದರ್ಗಂತೆತ್ತೋರ್ಪ ಗಿಳಿಮುಟ್ಟದವಣ್ಗೆನೆ
ಯಾಂತುಬಂದುಸಂ॥
ಯಮಿಗಳಮುಂದೆನಿಂದೆರಗಿಕಾಣ್ಕೆಯ ನಿತ್ತುದತೀಭಕ್ತಿ
ಯಿಂ॥೬॥

ಅರ್ಥ—ಬಂದು ಮಂಗವು ಪುಷ್ಪಗಳ ಮಕರಂದ ರಸದಿಂ

ದ ಕೈತ್ರೊಳಕೊಂಡು ಆ ವೃಕ್ಷದ ಎಲೆಗಳ ಪಾತ್ರ್ರಯನ್ನು ಮಾಡಿ, ಅವರೊಳಗೆ ಭ್ರಮರಗಳು ತುಳಯುವಂಥ ಹೂವುಗ ಳನು, ಚನ್ನಾಗಿ ತುಂಬಿಕೊಂಡು, ಗಿಳಿಗಳು ಮುಟ್ಟದಂಥ ಹ ಣ್ಣಿನ ಗೊನೆಗಳನ್ನು ತಕ್ಕೊಂಡು, ತನ್ನ ಮೈಗೆ ಸೋಂಕದ ಹಾಗೆ ಹಿಡಿದುಕೊಂಡು ಬಂದು ಯತಿಗಳ ಮುಂದೆನಿಂತು ಅ ವರಿಗೆ ನಮುಸ್ಕಾರಮಾಡಿ ಬಹು ಭಕ್ತಿಯಿಂದ ಕಾಣಿಕೆ ಕೊ ಟ್ಟತು.

Notice.

ಟ್ರೇನಿಂಗಕಾಲೇಜದ ಸರಟೀಫಿಕೇಟಪರೀಕ್ಷೆ—

ಬೆಳಗಾಂವೀ ಟ್ರೇನಿಂಗಕಾಲೇಜದಲ್ಲಿ ಕಳೆದ ಅ ಕ್ಟೋಬರತಿಂಗಳಲ್ಲಿ ಆದ ಸರಟೀಫಿಕೇಟ ಪರೀಕ್ಷೆಯಲ್ಲಿ ೧೮೭೧ ಪಡೆದಗುಣಗಳ ಕ್ರಮವನ್ನು ಅನುಸರಿಸಿ ಪಾಸಾದವರ ಹೆಸ ರುಗಳ ಪಟ್ಟಿ—

ನಂಬರು	ಹೆಸರುಗಳು—	೭೯೦ರಲ್ಲಿ ಪಾಸ ಆದಗುಣಗಳು.	೬೦೦ಕ್ಕೆ ಪಾಸಆದಗುಣಗಳು	ಯಷ್ಟು ರೂಪಾಯಿದ ಲಾಯಖೀ ಸರಟೀಫಿಕೇಟು ದೊರೆಯಿತು.
	ಎರಡನೇವರ್ಷದ ಅಭ್ಯಾಸದವರು ಫಸ್ಟ್ ಕ್ಲಾಸಸರಟೀಫಿಕೇಟವನ್ನು ಪಡಕೊಂಡವರು			

೧ ಶಿವನಪ್ಪಾ ಶಿವಮೂರ್ತೆಪ್ಪಾ
ದೇಸಾಯಿ. ೬೧೭ ೮೩ ೪/೧೫ ೨೫

೨ ಸೀತಾರಾಮ ಭುಜಂಗಫ
ಡಕೆ— ೫೯೧ ೧/೨ ೭೮ ೧೩/೧೫ ,,

೩ ಅದೃಸ್ಯಪ್ಪಾ ಅಪ್ಪಯೆಪ್ಪಾ
ಮಾಂತಶೆಟ್ಟಿ— ೫೮೪ ೧/೪ ೭೭ ೯/೧೦ ,,

೪ ನಾರಾಯಣ ಜಿವಾಜಿ ಕುಲ
ಕರ್ಣಿ— ೫೭೩ ೭೬ ೨/೫ ,,

೫ ದತ್ತಾತ್ರಯ ಶ್ರೀಪಾದ ವಡ
ಣಗೀಕರ— ೫೨೫ ೧/೪ ೭೦ ೧/೨೦ ,,
ಸೇಕಂಡಕ್ಲಾಸ ಸರಟೀಫಿ
ಕೇಟವನ್ನು ಪಡಕೊಂಡವರು

೬ ರಂಗೋ ಬಾಳಾಜಿಕುಲ
ಕರ್ಣಿ— ೫೧೦ ೧/೪ ೬೮ ೧/೨೦ ೨೮

೭ ಬಾಳಾಜಿ ರಾಮಚಂದ್ರ ನರೇ
ಗಲ್ಲ— ೪೯೭ ೧/೪ ೬೬ ೩/೧೦

೮ ಬಾಳಾಜಿ ಸಖಾರಾಮ ಶೇಗು
ಣಶಿ— ೪೫೫ ೩/೪ ೬೦ ೩/೨೦
ಮೊದಲನೇ ವರುಷದ ಅ
ಭ್ಯಾಸದವರು.
ಫಸ್ಟ್ ಕ್ಲಾಸ ಸರಟೀಫಿಕೇಟ
ವನ್ನು ಪಡಕೊಂಡವರು.

೧ ಸೀಲಪ್ಪಾ ಗುರಲಿಂಗಪ್ಪಾ ಗೋಲಗೇರಿ—	೫೯೪	೭೯ ೧/೫	೧೫ಕ್ಕೆ
೨ ಅಡಿವೆಪ್ಪಾ ವಿರುಪಾಕ್ಷಪ್ಪಾ ಕೆತ್ತಿ—	೫೮೮ ೩/೪	೭೮ ೧/೨	,,
೩ ಸ್ವಾಮಿ ಶ್ರೀನಿವಾಸ ಸೇಗಿನಹಾಳ—	೫೮೫ ೩/೪	೭೮ ೧/೧೦	,,
೪ ಭೀಮಾಜಿ ವಿರುಪಾಕ್ಷ ಹೊಸವಾಡ—	೫೭೩ ೧/೪	೭೬ ೧೩/೩೦	,,
೫ ಗೋವಿಂದ ಮಹಾದೇವ ಜೋಸಿ—	೫೭೧ ೧/೨	೭೬ ೧/೫	,,
೬ ವೀರಪ್ಪಾ ಬಶೆಟ್ಟೆಪ್ಪಾ ನಾಲಿ—	೫೭೧	೭೬ ೨/೧೫	,,
೭ ಶೇಷೋ ಸುಬ್ಬರಾವ ಬನವಶಿ—	೫೪೮	೭೩ ೧/೧೫	,,
೮ ಮಲ್ಲಪ್ಪಾ ದುಂಡಪ್ಪಾ ಜತ್ತಿ	೫೪೭ ೩/೪	೭೩ ೧/೩೦	,,
೯ ಮಂಗೇಶ ರಾಮಚಂದ್ರ ಕಂಟಕ—	೫೪೧	೭೨ ೨/೧೫	,,
೧೦ ಅಡಿವೆಪ್ಪಾ ಬಸಲಿಂಗಪ್ಪಾ ಹೂಲಿ—	೫೪೦ ೧/೨	೭೨ ೧/೧೫	,,
೧೧ ಹಣಮಂತ ವಿರುಪಾಕ್ಷ ಕುಲಕರ್ಣಿ—	೫೩೮ ೩/೪	೭೧ ೫/೬	,,
೧೨ ಚನವೀರಪ್ಪಾ ಮಡಿವಾಳ			

ಪ್ಪಾ ಮೋದಿಗಿ— ೫೩೧ $\frac{೧}{೨}$ ೬೦ $\frac{೧೧}{೩೫}$,,

೧೩ ಗೋಮಾಳ ಶ್ರೀನಿವಾಸಕು

ಲಕರ್ಣಿ— ೫೨೯ $\frac{೩}{೪}$ ೬೦ $\frac{೧೯}{೩೧}$,,

೧೪ ಹೀರು ಅನಂದಪ್ಪಾ ನಾಮ

ದೇವ— ೫೨೫ ೬೦ ,,

ನೀಕೆಂಡಕ್ಲಾಸಸರಟೀಫಿಕೇ

ಟರನ್ನು ಪಡಕೊಂಡವರು.

೧೫ ಶಿದ್ದವೀರಯ್ಯಾ ವೀರಯ್ಯಾ

ವಿಭೂತಿ— ೫೧೯ $\frac{೩}{೪}$ ೬೯ $\frac{೩}{೧೦}$ ೧೨

೧೬ ಚಳ್ಳಪ್ಪಾ ಪ್ರಭಪ್ಪಾ ಹಳ್ಳೀ

ಕೇರಿ— ೫೧೧ $\frac{೧}{೨}$ ೬೮ $\frac{೧}{೫}$,,

೧೭ ಪ್ರೇಕ್ಷಯ್ಯಾ ಶಾಂತವೀರ

ಯ್ಯಾ ಪ್ರೇಕ್ಷರಾಚಯ್ಯನವರ. ೫೦೩ $\frac{೧}{೨}$ ೬೬ $\frac{೧}{೯}$,,

೧೮ ರಾಮಚಂದ್ರ ಅಣ್ಣಾಜಿ ರಾಯ

ಬಾಗ— ೫೦೦ $\frac{೧}{೨}$ ೬೬ $\frac{೧೧}{೧೫}$,,

೧೯ ಷಣ್ಮುಖಯ್ಯಾ ಬಸಲಿಂಗ

ಯ್ಯಾ ಷಣ್ಮುಖಯ್ಯನವರ— ೪೯೮ $\frac{೧}{೨}$ ೬೬ $\frac{೬}{೧೫}$,,

೨೦ ನಾರಾಯಣ ಮಹಾದೇವ ಅರ

ವಲೆ— ೪೯೮ $\frac{೧}{೪}$ ೬೬ $\frac{೨೩}{೩೦}$,,

೨೧ ನಾರಾಯಣ ಸುಬ್ಬರಾವ

ಗೋಕರ್ಣ— ೪೯೬ $\frac{೩}{೪}$ ೬೬ $\frac{೬}{೩೦}$,,

೨೨ ಪುಟ್ಟಾಜಿ ಅನಂತ ಮನಸಾಲಿ— ೪೯೨ $\frac{೩}{೪}$ ೬೫ $\frac{೬}{೧೦}$,,

೨೩ ಶಿವಾಜಿ ಕೃಷ್ಣ ಕೇಳಕರ— ೪೯೨ ೬೫ $\frac{೩}{೫}$,,

೨೪ ಕೃಷ್ಣಾಜಿ ಶೇಷೋ ಬದನ
ಗೋಡ— ೪೯೧ $\frac{೧}{೨}$ ೬೫ $\frac{೮}{೧೫}$,,

೨೫ ಭೀಮಾಜಿ ರಾಮಚಂದ್ರ ಗು
ಡಿ— ೪೮೨ $\frac{೧}{೨}$ ೬೪ $\frac{೧}{೩}$,,

೨೬ ಶಿದರಾಮ ಮಡಿವಾಳಪ್ಪ ಕೌ
ಜಲಗಿ— ೪೮೨ $\frac{೧}{೨}$ ೬೪ $\frac{೧}{೩}$,,

೨೭ ಫಕೀರಪ್ಪ ರಾಯಪ್ಪ ಸೋ
ಮಣ್ಣನವರ— ೪೨೬ $\frac{೧}{೨}$ ೬೩ $\frac{೮}{೧೫}$,,

೨೮ ರಂಗಸ್ವಾಮಿ ಕೊಪಸ್ವಾಮಿ ಬ
ಳ್ಳಾರಿ— ೪೨೨ ೬೨ $\frac{೧೪}{೧೫}$,,

೨೯ ನಾರಾಯಣ ಬಾಳಕೃಷ್ಣ
ಜಲಾಲಪೂರ— ೪೬೮ $\frac{೧}{೪}$ ೬೨ $\frac{೧೩}{೨೦}$ ೧೨

೩೦ ಶಿವಬಸಪ್ಪಾ ಚನಬಸಪ್ಪಾ ಕು
ಪ್ಪಸದ— ೪೩೨ $\frac{೧}{೪}$ ೫೮ $\frac{೩}{೧೦}$,,

೩೧ ಬಸಲಿಂಗಪ್ಪಾ ಬಸಪ್ಪಾ ಕುರ
ಡಗೇರಿ— ೪೩೪ $\frac{೩}{೪}$ ೫೨ $\frac{೨೯}{೨೦}$,,

೩೨ ಅಣ್ಣಾಜಿ ವಿನಾಯಕ ಜೋ
ಗಳೇಕರ— ೪೧೯ $\frac{೧}{೪}$ ೪೫ $\frac{೯}{೧೦}$,,

೩೩ ಪಾಂಡುರಂಗ ನರಸಿಂಹ ಜಂ
ಬಿಗಿ—ಇವನು ಮುಧೋಳ ೪೮೧೪ $\frac{೧}{೪}$ ೫೫ $\frac{೨}{೨೦}$,,
ವಿದ್ಯಾರ್ಥಿಯು.

೩೪ ಶಿವಯೋಗಿ ಬಸಲಿಂಗಪ್ಪಾ
ನಾಗಲಾಪುರ— ೩೮೮ ೩/೪ ೫೧ ೫/೬ ,,

ಅನ್‌ಟ್ರೇಂಡಮಾಸ್ತರರುಮತ್ತು ಅಸಿಸ್ಟೇಂಟಮಾಸ ರರು
ಸಂಸ್ಕೃತವನ್ನು ಕಲಿತವರು.

೧ ಬಸಪ್ಪಾ ತೋಟಪ್ಪಾ ಅವಟಿ— ೫೪೭ ೧/೨ ೭೨ ೧೫
೨ ದಾವುದಖಾನ ವಲ್ಲಪ ವಿಜಾರಾ
ಖಾನ ಪಂತೋಜಿ— ೫೩೧ ೧/೨ ೭೦ ೧೩/೧೫ ,,
೩ ಅಡಿವೆಯ್ಯಾ ರಾಚಯ್ಯಾ ಸಾಲಿ- ೫೩೧ ೧/೨ ೭೦ ೧೩/೧೫ ,,
೪ ಭೀಮಾಜಿ ಹಣಮಂತ ಪ
ವಾರ್ತಿ— ೫೦೭ ೭೦ ೪/೧೫ ,,
೫ ವೆಂಕಟೇಶ ರಾಮಚಂದ್ರ
ಜೋಸಿ— ೫೨೨ ೧/೨ ೬೯ ೨/೩ ೧೨
೬ ಕೃಷ್ಣಾ ನಾಗಾಭಟ್ಟ ಗೋಕ
ರ್ಣ— ೫೧೫ ೩/೪ ೬೮ ೨೩/೩೦ ,,
೭ ಜಿವಾಜಿ ರಾಮಚಂದ್ರ ಕಲ್ಲೂ
ರ— ೪೩೪ ೫೭ ೧೩/೧೫ ,,

ಸಂಸ್ಕೃತವನ್ನು ಕಲಿಯದ ಅನ್‌ಟ್ರೇಂಡ ಮಾಸ್ತರರು ಮತ್ತು ಅಸಿಸ್ಟೇಂಟಮಾಸ್ತರರು.

೧ ರಾಮಚಂದ್ರ ಹಣಮಂತ

ತೋಳಖಂಡೆ—	೫೭೫	೭೯ ೯/೨೯	೧೫
೨ ಜಯರಾಮರಾಮಚಂದ್ರ ಬೀಳಗಿ—ಮುಧೋಳವಿದ್ಯಾರ್ಥಿಯು	೫೪೩ ೧/೨	೭೪ ೨೮/೨೯	,,
೩ ಜಗನ್ನಾಥ ಶ್ರೀಧರಗೋಖಲೆ—	೫೩೦ ೧/೪	೭೩ ೩/೨೯	,,
೪ ಮಹಾದೇವ ಗಣೇಶಜೋಗಳೇಕರ—	೫೮೮ ೩/೪	೭೨ ೨೭/೨೯	,,
೫ ದತ್ತೋ ನಾರಾಯಣ ಕುರಬೆಟ್ಟ—	೫೧೪ ೩/೪	೭೧	,,
೬ ಗಂಗಾಧರ ಧೋಂಡದೇವ ಮಾಯಣಕರ—	೪೯೩	೬೮	೧೨
೭ ಅಯ್ಯಾಪ್ಪಾ ನರಸಪ್ಪಾ ಅಂಬಲಗಿ—	೪೮೯ ೧/೪	೬೭ ೧೪/೨೯	,,
೮ ಶ್ರೀನಿವಾಸ ವಿರುಪಾಕ್ಷಚಿಟಣೀಸ—	೪೭೬ ೩/೪	೬೫ ೨೨/೨೯	,,
೯ ಬಾಳಕೃಷ್ಣ ಸದಾಶಿವ ಚಿತಳೆ—	೪೬೪ ೩/೪	೬೪ ೩/೨೯	,,
೧೦ ಗುರವಯ್ಯಾ ಶಿವಲಿಂಗಯ್ಯಾ ಕಲ್ಲೊಳ್ಳಿ—	೪೪೦ ೧/೪	೬೦ ೨೧/೨೯	,,
೧೧ ಶ್ರೀಧರ ಗೋವಿಂದ ಸಾತು—	೪೧೫	೫೭ ೭/೨೯	,,
೧೨ ಕೃಷ್ಣಾಜಿ ರಘುನಾಥ			

ದೇಶಪಾಂಡೆ— ೪೧೧ ೫೬ ೩೦/೨೯ ,,

೧೪ ಶಂಕರ ಗೋವಿಂದಅಪಟೆ— ೩೯೧ ೧/೨ ೫೪ ೧೭

ಹೊರಗಿಂದ ಬಂದವನು.

೧ ರಾಮಚಂದ್ರ ಕಾಶಿನಾಥ

ಪಟವರ್ಧನ— ೪೩೫ ೩/೪ ೬೦ ೩/೨೯ ,,

ಟ್ರೇನಿಂಗಕಾಲೇಜ ಬೆಳಗಾಂವಿ
ತಾರೀಖು ೯ನೇ ಜಾನ್ಯುಆರಿ
೧೮೭೨ ಇ.

(Signed) Bhujangrao Krishna H.
ಪ್ರಿನ್ಸಿಪಾಲ ಟ್ರೇನಿಂಗಕಾಲೇಜ ಬೆಳಗಾಂವಿ

ನೋಟೀಸು.

ಇದರಿಂದ ತಿಳಿಯಪಡಿಸುವದೇನಂದರೆ ಮೊಹೆರ್ಬಾನ್ ಜಾಡಾರ್ಯಿನ ಧೊರೆಗಳ ಹೆಸರಿನಿಂದ ಕೊಡತಕ್ಕ ೪೦ರೂಪಾಯಿಗಳ ಇನಾಮಿನ ಸಲುವಾಗಿ ಪರೀಕ್ಷೆಯು ಮುಂದಿನ ಸಪಟಂಬರ ತಿಂಗಳನಲ್ಲಿ ಧಾರವಾಡದೊಳಗೆ ಮೊಹೆರ್ಬಾನವು ಜುಕೇಶನಲ ಇನಸ್ಪೆಕ್ಟರ ಧೊರೆಗಳವರ ವಿದ್ಯಮಾನದಲ್ಲಿ ಆಗುವದು. ಈ ಪರೀಕ್ಷೆಗೆ ಧಾರವಾಡದ ಸ್ತ್ರೀಶಾಲೆಗಳ ವಿದ್ಯಾರ್ಥಿಗಳು ಬರತಕ್ಕವರೆಂಬದಂತು ಸರಿಯೇ. ಇದಲ್ಲದೆ ಹುಬ್ಬಳ್ಳಿಯೊಳಗಿನ ಸ್ತ್ರೀ ಶಾಲೆಗಳ ವಿದ್ಯಾರ್ಥಿಗಳು ಸಹ ಬರ ಬಹುದೆಂದು ಜಾಡಾರ್ಯಿನ ಧೊರೆಗಳವರು ಅಪ್ಪಣೆಯ ಕೊಟ್ಟಿರುತ್ತಾರೆ.

(Signed) R. E. CANDY.

ತಾ. ೨೬ನೇ ದಿಜಂಬರ ೧೮೭೧ } ಇ. ಇನಸ್ಪೆಕ್ಟರ. ದ.

ಕಲಾದಗಿಜಿಲ್ಲೆಯೊಳಗಿನ

ಸ್ಕೂಲಮಾಸ್ತರ ಇವರಿಗೆ.

ಸರಕ್ಯೂರಲರಹ್ಕ್ಯಂ—ನಂಬರು

೮೩೭

ಈಗ್ಗೆ ಸಾಲಿಯಲ್ಲಿ ಬುಕ್ಕಗಳ ರಜಿಷ್ಟರವನ್ನೂ ಮಾಸ್ತರರು ಯಿಟ್ಟಿರುತ್ತಾರಷ್ಠೆ ಅದರಲ್ಲಿ ಕನ್ನಡು, ಮರಾಠಿ, ಇಂಗ್ರಜಿ, ಮುಂತಾದ ಭಾಷೆಗಳ ಪುಸ್ತಕಗಳ ಹೆಸರುಗಳು ಕೆಲವರು ಬೇರೆ ಬೇರೆ ಸ್ಪಷ್ಠವಾಗಿ ತಿಳಿಯೋ ಹಾಗೆ ಬರದಿರುವದಿಲ್ಲಾದ್ದರಿಂದ ನಾವು ಪರೀಕ್ಷೆಗೆ ಹೋದಕಾಲಕ್ಕೆ ಪ್ರತ್ಯೇಕ ಭಾಷೆಯ ಪುಸ್ತಕಗಳ ಪಟ್ಟ ಸಂಖ್ಯಾ ಕೇಳಿದರೆ, ಅವರಿಗೆ ತೀವ್ರ ಹೇಳಲಿಕ್ಕೆ ಬಾರದೆ ರಜಿಷ್ಠರದಲ್ಲಿಯ ಹೆಸರು ನೋಡಿ ಬೇರೆ ಬೇರೆ ಸಂಖ್ಯೆ ಆರಸಿ ಹೇಳುವದರಿಂದ ಕೆಲವು ವೇಳೆ ಹಿಡಿಯುತ್ತದೆ. ಆ ಪ್ರಕಾರಾ ಆಗದೇ ಕೇಳಿದಕ್ಷಣಕ್ಕೆ ಹೇಳಲಿಕ್ಕೆ ಬರಬೇಕೆಂಬೊ ವುದ್ದಿಶ್ಯ ರಜಿಷ್ಠರದ ನಮೂನೆ ಛಾಪಿಸಿರುತ್ತದೆ ಆ ಪ್ರಕಾರ ಯಾವತ್ತು ಮಾಸ್ತರರು ಬುಕ್ಕಿನ ರಜಿಷ್ಠರ ಇಡಬೇಕು. ತಿಳಿಯುವದು

೨॥೪ ಮಾಹೆದಿಜಂಬರ ಸನ್ನ ೧೮೭೧

(Signed) Hanmant Ramchandra,

ಡ. ಇ. ಇ. ಜಿಲ್ಲಾ ಕಲಾದಗಿ.

ಸರಕ್ಯ್ಯೂಲರ ನಂಬರು

೮೭೭

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರ ಇವರಿಗೆ÷

ತಿಳಿಪಡಿಸುವದೇನಂದರೆ—

ರಜೆದಮೇಲೆ ಹೋದ ಕೂಡಲೆ ಹಾಂಗು ತಿರಿಗಿಬಂದ ಕೂಡಲೆ ಮತ್ತು ಹೊಸ ನೇಮಣೂಕ, ವರ್ಗಾವರ್ಗಿ ಆದರೆ ಛಾರ್ಜ ತಗೊಂಡ ಕಾಲಕ್ಕೆ ಮತ್ತು ಛಾರ್ಜ ಕೊಟ್ಟ ಕಾಲಕ್ಕೆ ಇತ್ತ ಕಡೆಗೆ ರಿಪೋರ್ಟ ಮಾಡಬೇಕು—

ಅದರಲ್ಲಿ ಯಾವ್ವ ಘಂಟೆಗೆ ಛಾರ್ಜ ಕೊಟ್ಟಿರುತ್ತದೆ ಮತ್ತು ತಗೊಂಡಿರುತ್ತದೆ ಅದನ್ನು ಬರಿಬೇಕು—

ವರ್ಗಾವರ್ಗಿ ಆದರೆ ಮೊದಲಿನ ಸ್ಥಳಕ್ಕೆ ಹಾಂಗು ಛಾರ್ಜ ತಗೊಂಡವರಿಗೆ ಅಂತರ ಯಷ್ಟು ಮೈಲು ಇರುತ್ತದೆ ಅದನ್ನು ಬರಿಬೇಕು—

ಮೇಲಿನ ಪ್ರ॥ ವಹಿವಾಟ ಇಡುವದಕ್ಕೆ ಪೂರ್ವದಲ್ಲಿ ಹುಕುಮಗಳು ಇದ್ದಾಗ್ಯೂ ಕೆಲವು ಮಾಸ್ತರರು ವಹಿವಾಟ ಇಡುವದಿಲ್ಲಾ ಹೀಗೆ ನಮ್ಮ ನಜರಿಗೆ ಬಂದವರಿಂದ ಪುನಃ ಹುಕುಂ ಕೊಟ್ಟಿರುತ್ತದೆ—ಇನ್ನ ಮೇಲೆ ಈ ಹುಕುಮಿನ ಪ್ರ॥ ವಹಿವಾಟ ಆಗದಿದ್ದರೆ ಯಾರಿಂದ ತಪ್ಪು ಆಗುವದೋ ಅವರಿಗೆ ಯೋಗ್ಯ ಶಿಕ್ಷೆ ಆಗುವಬಗ್ಗೆ ಮೆ॥ ಇ. ಇನಸ್ಪೆಕ್ಟರ ಸಾ॥ ರವರಕಡೆಗೆ ಶಿಫಾರಸ ಮಾಡಲಾಧೀತು. ತಿಳಿಯುವದು ತಾ॥೧೮ ಡಿಸೆಂಬರ ೧೮೭೧ ಇ.

(Signed) Hanmant Ramchandra,
ಡಿ. ಇ. ಇ. ಜಿಲ್ಹಾ ಕಲಾದಗಿ

ಕಲಾದಗಿಜಿಲ್ಹೆಯೊಳಗಿನಯಾವತ್ತುಸ್ಕೂಲಮಾಸ್ತರ
ಇವರಿಗೆ—ಸರಕ್ಯೂಲರ ಹುಕುಂ ನಂಬರ ೮೭೨

ತಿಳಿಪಡಿಸುವದೇನಂದರೆ—ಯಷ್ಟೋ ಸ್ಕೂಲಮಾಸ್ತರರು ಮಾ
ಲಿನ ಸರಕ್ಯೂಲರ ಹುಕುಮಿನ ಕಡಿಗೆ ಲಕ್ಷ್ಯಕೊಡದೆ ಸಾ
ಯು ಫೀ ಹಣ ೧೦ತಾರೀಖು ಮೀರಿದಮೇಲೆ ತಿಜೋರಿ
ಜಮೆ ಮಾಡುತ್ತಾರೆ. ಇದು ಅಗದಿ ಗೈರ ವಹಿವಾಟು ವಿ
ರುತ್ತದೆ—ಇನ್ನುಮೇಲೆ ಇಂಥಾ ವಹಿವಾಟು ನಜರಿಗೆ ಬಿದ್ದರೆ
ಹುಕುಮಿಗೆ ಅಮಾನ್ಯ ಮಾಡಿದಬಗ್ಗೆ ಯೋಗ್ಯ ತಜವಿಜಿಯು
ಧಾರಸ ಮೆ॥ ಇ. ಇ. ಸಾ॥ ಬಹಾದ್ದುರವರಕಡಿಗೆ ಮಾ
ಡಲಾದೀತು—ಇದು ಯಾವತ್ತರು ಲಕ್ಷ್ಯದಲ್ಲಿಟ್ಟು ವೇಳೆವೇ
ಳೆಕ್ಕೆ ಭರಣಾ ಮಾಡಬೇಕು. ಕದಾಚಿತ ಯೋಗ್ಯ ಕಾರಣ
ದಿಂದ ಭರಣಮಾಡದೆ ಆ ಕಾರಣವನ್ನು ರಶೀದಿಯಮೇಲೆ
ಬರಿಯು ಮಾಡಬೇಕು. ತಿಳಿಯುವದು ತಾ॥ ೧೫ ಮಾಹೆ ದಿ
ಸೆಂಬರ ಸನ್ನ
೧೮೭೧

(Signed) Hanmant Ramchaudra,
ಡಿ. ಇ. ಇ. ಜಿಲ್ಹಾ ಕಲಾದಗಿ

ಕಲಾದಗಿಜಿಲ್ಹೆಯೊಳಗಿನ ಯಾವತ್ತು ಸ್ಕೂಲಮಾಸ್ತರ
ಇವರಿಗೆ—ಸರಕ್ಯೂಲರಹುಕುಂ ನಂಬರ ೮೭೧

ತಿಳಿಪಡಿಸುವದೇನಂದರೆ—ಶಾಲಿಯಲ್ಲಿ ಹುಡುಗರಿಗೆ ಕ್ಲೇ
ಟಪಾಟಿಗಳು ಕೊಡಸಬೇಕು ಕಟಗಿಯ ಹಲಗಿಗಳ ಪ್ರಪ

ಯೋಗ ಮಾಡಬಾರದೆಂದು ಪೂರ್ವದಲ್ಲಿ ಸರಕ್ಯಾಲರ ಹುಕುಂ ಇದ್ದು ನಾವು ನೀಲಗುಂದ ಸಾಲಿಯ ಪರೀಕ್ಷೆಕ್ಕೆ ಹೋದಾಗ್ಗೆ ಇನ್ನೂ ಅಲ್ಲಿಯ ಮಾಸ್ತರ ಮೇಲಿನ ಹುಕುಂ ಅಮಲಿನಲ್ಲಿ ತಾರದೆ ಕೆಲವು ಕಟಗಿಯ ಹಲಗಿಗಳನ್ನೇ ಉಪಯೋಗ ಮಾಡಸುತ್ತಿದ್ದದ್ದು ನಮ್ಮ ನಜರಿಗೆ ಬಿತ್ತು ಆಗ್ಗೆ ಈ ವಹಿವಾಟ ಇನ್ನು ಯೇನು ಕಾರಣ ಇಟ್ಟೇದಿಯೆಂದು ಕೇಳಿದರೆ. ಇಲ್ಲಿ ಹಲಗಿಗಳ ಹೊರ್ತಾಗಿ ನಿವಾಹ ಇಲ್ಲಾ ಶ್ಲೇಟಪಾಟಿಗಳು ದೊರಿಯುವದಿಲ್ಲವೆಂದು ಉತ್ತರವನ್ನು ಕೊಟ್ಟನು. ಈ ಬಗ್ಗೆ ಪಂದಾವರ್ತಿ ಕ್ಷಮೆ ಮಾಡಿ ಮುಂದೆ ಶ್ಲೇಟಗಳನ್ನೂ ತರಸುವದಕ್ಕೆ ಸಮಕ್ಷ ಸಮಜು ಕೊಟ್ಟಿರುತ್ತದೆ—

ಸಂ॥ ಹಳ್ಳಿಯಲ್ಲಿ ಶ್ಲೇಟಗಳು ದೊರಿಯುವದಿಲ್ಲಾ ಇದು ಖರೆ ಇದ್ದಾಗ್ಯೂ ಅವು ಯೆಲ್ಲಿ ದೊರಿಯುವವು ಅಲ್ಲಿಂದ ತರಸಿ ಹುಡುಗರಿಗೆ ಕ್ರಯಕ್ಕೆ ಕೊಟ್ಟರೆ ಹುಡುಗರು ತಗೊಳ್ಳುವರು. ಈ ಬಂದೊಬಸ್ತ ಇಡತಕ್ಕ ಕೆಲಸ ಮಾಸ್ತರಂದಿರುತ್ತದೆ. ಇನ್ನ ಮೇಲೆ ಈ ಹುಕುಂ ಅಮಲಿನಲ್ಲಿ ತಾರದೆ ಇದ್ದ ಮಾಸ್ತರರಿಗೆ ಯೋಗ್ಯ ತಜವಿಜ ಆಗುವದಕ್ಕೆ ಮೆ॥ ಇ. ಇ. ಸಾ॥ ಬಹಾದ್ದುರವರ ಕಡೆಗೆ ಶಿಫಾರಸ ಮಾಡಲಾಯಿತು. ತಿಳಿಯುವದು ತಾ॥ ದಿಜಂಬರ ಸನ್ನ ೧೮೭೧

(Signed) Hanmant Remchandra,

ಡಿ. ಇ. ಇ. ಜಿಲ್ಹಾ ಕಲಾದಗಿ

ಶಾಲಾಪತ್ರಕವು.

———000———

ಪುಸ್ತಕ ೭] [ಸಂಚಿಕೆ ೧೧.

ಬೆಳಗಾವಿ, ಮಾಹೆ ಫೆಬ್ರುಅರಿ ೧೮೭೨.

Rotundity of the Earth

ಭೂಮಿಯ ಗೋಲಾಕಾರದ ಬಗ್ಗೆ ವಿಶೇಷ ಪ್ರಸಿದ್ಧವಾದಂಥ ಪ್ರಮಾಣಗಳು ಕೆಲವುಂಟು. ಅವುಯಾವವಂದರೆ

ಹಡಗವು ಬಂದರದೊಳಗಿಂದ ಹೊರಟು ಸ್ವಲ್ಪ ದೂರ ಹೋಗಲಾ ದಂಡೆಯ ಮೇಲೆ ನಿಂತವರಿಗೆ ಮೊದಲು ಅದರ ಬುಡವು ಕಾಣಿಸದ ಹಾಗಾಗುತ್ತದೆ. ತರುವಾಯ ಕೆಳಬದಿಯಲ್ಲಿದ್ದ ಪಟಗಳು ಅದೃಶ್ಯವಾಗುತ್ತವೆ; ಕಡೆಯಲ್ಲಿ ಪಟಸ್ತಂಭದ ತುದಿಯು ಕ್ರಮ ಕ್ರಮವಾಗಿ ಕಾಣಿಸದಹಾಗಾಗುತ್ತದೆ. ಹಡಗವು ದೂರ ಹೋಗುವದರಿಂದ ಹೀಗಾಗುತ್ತದೆಂದು ಕೆಲವರು ಅನ್ನುವರು. ಆದರೆ ಹಾಗಲ್ಲ; ಯಾಕಂದರೆ, ಇದೇ ಕಾರಣವು ನಿಜವಿದ್ದರೆ, ಹಡಗಕ್ಕಿಂತ ಅದರ ಪಟಸ್ತಂಭವು ಬಹು ಚಿಕ್ಕದಿರುವ ಕಾರಣ ಅದು ಮೊದಲು ಅದೃಶ್ಯವಾಗತಕ್ಕದ್ದು. ಸಮುದ್ರದ ಪೃಷ್ಠಭಾಗವು

ಕಂಸಾಕೃತಿಯಿರುವಕಾರಣ ದಂಡೆಯ ಮೇಲಿನ ಜನರಿಗೂ, ಹಡಗಕ್ಕೂ ನಡುವೆ ಅದು ಅಡ್ಡಬಂದು ಕೆಳಗಿನಿಂದ ಮೇಲಕ್ಕೆ ಹಡಗದ ಭಾಗಗಳು ಉತ್ತರೋತ್ತರವಾಗಿ ಅದೃಶ್ಯವಾಗುತ್ತವೆ. ಈ ಕಲ್ಪನೆಗೆ ಬಲಕೊಡುವಂಥ ಸಂಗತಿಯಿನ್ನೊಂದೇನಂದರೆ, ಹಡಗವು ತೀರ ಅದೃಶ್ಯವಾದನಂತರ ದಂಡೆಯಮೇಲಿನವರು ಗುಡ್ಡ ಮುಂತಾದ ಪ್ರದೇಶದಲ್ಲಿ ಹೋಗಿ ನಿಂತರೆ, ಆ ಹಡಗವು ಪುನಃ ಅವರಿಗೆ ಸ್ವಲ್ಪ ಹೊತ್ತು ಕಾಣಿಸುತ್ತದೆ. ಇದೇ ಮೇರಿಗೆ ಹಡಗದೊಳಗಿನ ಜನರಿಗೆ ಮೊದಲು ದಂಡೆಯು, ತರುವಾಯ ಮನೆಗಳು, ಆ ಮೇಲೆ ಗುಡಿಮುಂತಾದವುಗಳ ಶಿಖರಗಳೂ, ಬೆಟ್ಟಗಳಕೊನೆಗಳೂ ವೊಂದರಹಿಂದೊಂದು ಅದೃಶ್ಯವಾಗುತ್ತವೆ. ಈ ಸಂಗತಿಗಳು ಭೂಮಿಯಮೇಲೆ ಯೆಲ್ಲಕಡೆಯಲ್ಲಿ ಸಮವಾಗಿ ತೋರಿಬರುತ್ತವೆ. ಒಂದು ಯೆತ್ತರವಾದ ಕೊತ್ತಳದಿಂದಾಗಲಿ, ಗುಡ್ಡದಿಂದಾಗಲಿ, ನಾವು ದೂರ ಹೋದರೆ, ನಮಗೆ ಮೊದಲು ಅದರ ಬುಡವು ಮೊರೆಯಾಗುತ್ತದೆ, ಆ ಮೇಲೆ ನಡುಭಾಗವು, ಕಡೆಯಲ್ಲಿ ಕೊನೆಯು ಅದೃಶ್ಯವಾಗುತ್ತದೆ.

ಸಮುದ್ರದಲ್ಲಿ ಪಟಸ್ತಂಭದ ತುದಿಯಲ್ಲಿ ಕೂತವರಿಗೆ ಯೆಲ್ಲಕ್ಕೂ ಹೆಚ್ಚು ದೂರಕಾಣಿಸುತ್ತದೆ. ಆದದರಿಂದ ಹೊಸ ಭೂಪ್ರದೇಶವನ್ನು ಗೊತ್ತುಹಚ್ಚುವದಕ್ಕೂ, ದೂರಿದ್ದ ಬೇರೆ ಸಂಗತಿಗಳನ್ನು ನೋಡುವದಕ್ಕೂ ನಾವಿಕರು ಪಟಸ್ತಂಭದ ತುದಿಯಲ್ಲಿ ಯೇರಿ ಕೂಡ್ರುತ್ತಾರೆ.

ಇನ್ನೊಂದು ಸಂಗತಿಯೇನಂದರೆ ಭೂಮಿಯು ಆಕಾಶದೊಳಗಿನ ಗ್ರಹಗಳಲ್ಲಿ ವೊಂದಾಗಿದ್ದ ಕಾರಣ ಗೋಲರೂ

ಸಿದ್ಧನಾಥ ವಾಚನ ಮಂದಿರ.
ಮೋರಬ. ಜಿ ಧಾರವಾಡ.

ನಸ ಪ್ರೊತರ್ನ ಬೇರೆ ಆಕಾರವೇ ಅದಕ್ಕೆ ಸಂಭವಿಸುವದಿಲ್ಲ. ಈ ಬಗ್ಗೆ ಮುಂದೆ ಬರೆಯುವ.

ಪರಮಾಣುಗಳು ಒಂದನ್ನೊಂದು ಯೆಳೆಯುತ್ತಿರುವ ಕಾರಣ ಈ ಸೃಷ್ಟಿಯಲ್ಲಿ ಹಲವಿಧದ ಪೊಡವೆಗಳುಂಟಾಗಿ ರುತ್ತವೆಂಬುದನ್ನು ನಾವು ಬಲ್ಲೆವು. ಪದಾರ್ಥಗಳಲ್ಲಿ ಪರಮಾಣುಗಳು ಹೆಚ್ಚು ಕಡಿಮೆಯಿದ್ದಂತೆ ಅವುಗಳಲ್ಲಿ ಹೆಚ್ಚು ಕಡಿಮೆ ಆಕರ್ಷಣ ಶಕ್ತಿಯಿರುತ್ತದೆ. ಈ ಆಕರ್ಷಣವು ಸ್ನೇಹಾಕರ್ಷಣ, ಗುರುತ್ವಾಕರ್ಷಣ, ಮುಂತಾದ ಹಲವಿಧದ್ದುಂಟು.

ಮೇಲೆ ಹೇಳಿದಂತೆ ಈ ಸೃಷ್ಟಿಯೊಳಗಿನ ಪೊಡವೆಗಳುಂಟಾದದ್ದು ಸ್ನೇಹಾಕರ್ಷಣದಿಂದ. ಸ್ನೇಹಾಕರ್ಷಣವಿಲ್ಲದಿದ್ದರೆ, ಬ್ರಹ್ಮಾಂಡದೊಳಗಿನ ಪರಮಾಣುಗಳೆಲ್ಲ ಹಿಟ್ಟಿನ ರಾಶಿಯಂತೆ ಬೇರೆ ಬೇರೆಯಾಗುತ್ತಿದ್ದವು. ಇನ್ನು ಪರಮಾಣುಗಳೆಂದರೆ ದೃಷ್ಟಿಗೂ, ಸ್ಪರ್ಶಕ್ಕೂ ಅಗೋಚರವಾದ ಅತಿಸೂಕ್ಷ್ಮಕಣಗಳು. ಇವು ಒಂದರ ಸಮೀಪಕ್ಕೊಂದು ಬರಲಾಗಿ ಒಂದನ್ನೊಂದು ಯೆಳೆದು ಅಂಟಿಕೊಳ್ಳುತ್ತವೆ. ಯೆರಡು ಪರಮಾಣುಗಳು ಒಂದಕ್ಕೊಂದು ಅಂಟಿಕೊಂಡನಂತರ ಮೂರನೇದೊಂದು ಅವುಗಳ ಸಮೀಪಕ್ಕೆ ಬರಲಾಗಿ, ಅದು ಅವುಗಳಿಗೆ ಯಾವಸ್ಥಳದಲ್ಲಿ ಅಂಟಿಕೊಳ್ಳುವದೆಂಬುದು ವಿಚಾರಿಸಿ ನೋಡತಕ್ಕದ್ದು—ಆ ಮೊದಲಿನ ಯೆರಡುಗಳ ಸಂದಿನಲ್ಲಿ ಅವುಗಳ ಸಂಯುಕ್ತ ಆಕರ್ಷಣವು ಹೆಚ್ಚಿರುವ ಕಾರಣ ಅಲ್ಲಿಯೇ ಬಂದು ಅಂಟಿಕೊಳ್ಳುವದು. ಪುನಃ ಈ ಮೂರುಗಳಿಗೆ ನಾಲ್ಕನೇದೊಂದು ಅಂಟಿಕೊಳ್ಳಬೇಕಾದರೆ ಅದಾವದೂ ಮೂರುಗಳ ಸಂದಿನಲಿ

ಯೇ ಬಂದು ಕೂಡ್ರುವದು. ಈ ಮೇರೆಗೆ ಹೊಸಹೊಸದಾಗಿ ಬಂದು ಕೂಡ್ರುವ ಪರಮಾಣುಗಳೆಲ್ಲ ಹಿಂದೆ ಕೂಡಿದವುಗಳ ಸಂದುಗಳಲ್ಲಿ ಕೂಡ್ರುತ್ತ ಹೋಗುವವೆಂಬದು ಸ್ಪಷ್ಟವೇ. ಹೀಗೆ ಕೂಡಿದ ಪರಮಾಣುಗಳಿಂದ ಯಾವ ಆಕಾರವುಂಟಾಗುವದೆಂದು ಸ್ವಲ್ಪ ವಿಚಾರಿಸಿ ನೋಡಲಾಗಿ, ಅದು ಗೋಲಾಕಾರವೇ ಹೊರ್ತು ಬೇರೆ ಯಾವದೂ ಆಗಲಿಕ್ಕಿಲ್ಲವೆಂದು ತಿಳಿಯುವದು. ಸೃಷ್ಟಿಯೊಳಗಿನ ಪದಾರ್ಥಗಳೆಲ್ಲ ಇದೇ ಸಾಧಾರಣ ನಿಯಮದಂತೆ ಆಗಿರುವಕಾರಣ ಪದಾರ್ಥಗಳ ಸ್ವಾಭಾವಿಕ ಆಕೃತಿಯು ಬಹುತರವಾಗಿ ಗೋಲರೂಪ, ಅಥವಾ ಕಂಸಾಕಾರವಾಗಿರುತ್ತದೆ. ಆದರೆ ನೀರು, ಪಾರಜ ಮುಂತಾದ ಪ್ರವಾಹಿಗಳಲ್ಲಿ ಈ ನಿಯಮವು ಹೆಚ್ಚು ಸ್ಪಷ್ಟವಾಗಿ ತಿಳಿಯುತ್ತದೆ. ಯಾಕಂದರೆ ಈ ಪ್ರವಾಹಿಗಳ ಬಿಂದುಗಳು ತಪ್ಪದೆ ಗೋಲರೂಪವಾಗಿರುತ್ತವೆ. ಆದಾಗ್ಯೂ ಮರಗಳ ಬೊಡ್ಡೆಗಳೂ, ವಿಧವಿಧದ ಖನಿಜಗಳೂ, ಪ್ರಾಣಿಗಳ ಅವಯವಗಳೂ ಶರೀರಗಳೂ, ವನಸ್ಪತಿಗಳ ಫಲಗಳೂ, ಬೀಜಗಳೂ, ಪುಷ್ಪಗಳೂ, ಇವುಗಳೆಲ್ಲ ಹೆಚ್ಚು ಕಡಿಮೆ ಕಂಸಾಕಾರವಾಗಿಯೇ ಇರುತ್ತವೆ. ಇವು ಪ್ರವಾಹಿಗಳ ಬಿಂದುಗಳಂತೆ ಪೂರ್ಣ ಗೋಲರೂಪವಾಗದೆ ಇರುವದಕ್ಕೆ ಬೇರೆ ಅಸಂಖ್ಯ ಕಾರಣಗಳುಂಟು.

ಈ ನಿಯಮದಂತೆ ಭೂಮಿಯ ಸ್ವಾಭಾವಿಕ ಆಕಾರವು ಗೋಲರೂಪವೇ ಹೊರ್ತು ಬೇರೆಯಾವದೂ ಸಂಭವಿಸುವದಿಲ್ಲ. ಇನ್ನು ಗೋಲರೂಪವಾಗಿದ್ದ ಪೊಡವೆಗಳ ಯಾವ ಭಾಗದಲ್ಲಿ ಆಕರ್ಷಣವು ಹೆಚ್ಚಿರಬಹುದೆಂದು ಆಲೋಚಿಸಿ ನೋಡಲಾಗಿ, ಅವುಗಳ ಮಧ್ಯಬಿಂದುವಿನಲ್ಲಿಯೇ ಯೊಂದು

ಮೇಲಿನ ಸಿದ್ಧತೆಯಿಂದ ತಿಳಿಯುವುದು. ಈ ಮಧ್ಯಬಿಂದುವಿಗೆ ಗುರುತ್ವಮಧ್ಯವೆಂದು ಹೆಸರುಂಟು. ಭೂಮಿಯು ಗುರುತ್ವ ಮಧ್ಯದಲ್ಲಿ ಆಕರ್ಷಣವು ಹೆಚ್ಚಿರುವ ಕಾರಣ ಅದರ ಮೇಲಿನ ವಡವೆಗಳೆಲ್ಲ ಆ ಮಧ್ಯದಿಂದ ಎಳೆಯಲ್ಪಡುತ್ತವೆ. ಇದೇ ಕಾರಣದಿಂದ ಪದಾರ್ಥಗಳಲ್ಲಿ ಭಾರವುಂಟಾಗಿದೆ. ಈ ಪದಾರ್ಥಗಳಿಗೆ ನಡುವೆ ಏನು ಅಡ್ಡಿಯಾಗದಿದ್ದರೆ ಇವು ನೆಟ್ಟಗೆ ಹೋಗಿ ಭೂಮಿಯ ಮಧ್ಯಬಿಂದುವಿಗೆ ಅಂಟಿಕೊಳ್ಳುವವು. ತಾತ್ಪರ್ಯವೇನಂದರೆ ಮಧ್ಯಬಿಂದು ಸ್ಥಾನದಲ್ಲಿ ಆಕರ್ಷಣವೆಂಬದೊಂದು ಪದಾರ್ಥಗಳನ್ನು ಎಳೆಯುವ ಸೂತ್ರವೇ ಎಂದು ಹೇಳಬಹುದು. ಭೂಮಿಯಿಂದ ದೂರಹಾರಿದ ಪದಾರ್ಥಗಳು ಮರಳಿ ಭೂಮಿಯ ಮೇಲೆ ಬಂದು ಬೀಳುವ ಕಾರಣವು ಇದೇಸೂತ್ರವು. ಇದಿಲ್ಲದಿದ್ದರೆ ಪದಾರ್ಥಗಳಲ್ಲಿ ಭಾರವೇ ಇರುತ್ತಿದ್ದಿಲ್ಲವಾದ ಕಾರಣ ಭೂಮಿಯ ಮೇಲಿನ ಪದಾರ್ಥಗಳಲ್ಲಿ ಈಗ ಭಾರ ಮೂಲಕವಾಗಿ ವುಂಟಾಗುವ ಗತಿಯು ವುಂಟಾಗುತ್ತಿದ್ದಿಲ್ಲ. ಎಲ್ಲಿಯ ಪದಾರ್ಥಗಳು ಅಲ್ಲಿಯೇ ನಿಲ್ಲುತ್ತಿದ್ದವು. ಇಳಿಜಾರಾದ ಪ್ರದೇಶಗಳಲ್ಲಿ ಪ್ರವಾಹಿಗಳೂ, ಘನಪದಾರ್ಥಗಳೂ ಉರುಳಿ ಕೆಳಗೆ ಹೋಗುತ್ತಿದ್ದಿಲ್ಲ; ಆಕಾಶದಲ್ಲಿ ನಿರಾಧಾರವಾಗಿ ನಿಲ್ಲಿಸಿದ ಒಡವೆಯು ಅಲ್ಲಿಯೇ ನಿಲ್ಲುತ್ತಿತ್ತು; ಮೇಲಕ್ಕೆ ಹಾರಿಸಿದ ವಡವೆಗಳು ನಿರಂತರವಾಗಿ ಮುಂದಮುಂದಕ್ಕೇ (ಮೇಲಕ್ಕೇ) ಹೋಗುತ್ತಿದ್ದವು. ಇದರಿಂದ ತಿಳಿಯುವದೇನಂದರೆ, "ಕೆಳಗೆ", "ಮೇಲೆ", ಎಂಬ ಕಲ್ಪನೆಗಳು ನಮ್ಮ ಮನಸ್ಸಿನಲ್ಲಿ ಭೂಮಿಯ ಆಕರ್ಷಣದ ಮೂಲಕವಾಗಿ ಬಂದಿದ್ದು, ಭೂಮಿಯ ಪೃಷ್ಠ

ಭಾಗದ ಸಂಬಂಧದಿಂದಲೇ ಅವುಗಳನ್ನು ನಾವು ಪ್ರಯೋಗಿಸುತ್ತೇವೆ. ಕೆಳಗೆಂದರೆ ಭೂ ಪೃಷ್ಠಕ್ಕೆ ಸಮೀಪ, ಮೇಲೆಂದರೆ ಭೂ ಪೃಷ್ಠದಿಂದದೂರ, ಯೆಂಬ ಅರ್ಥವು ನಮ್ಮ ಮನಸ್ಸಿನಲ್ಲಿರುತ್ತದೆ.

ಭೂಮಿಯು ಗೋಲರೂಪವಿದ್ದರೆ ಅದರ ಮೇಲಿನ ವೊಡವೆಗಳು ಕೆಳಗೆ ಯಾಕೆ ಬೀಳುವದಿಲ್ಲವೆಂದು ಕೆಲಜನರು ಕೇಳುತ್ತಾರೆ. ಇದರ ಉತ್ತರವನ್ನು ಇನ್ನು ನಾವು ಹೇಳುವ ಪ್ರಯೋಜನವಿಲ್ಲ. ಅವರು ಮೇಲೆ ಬರೆದದ್ದನ್ನು ಓದಿ ತಿಳಿದುಕೊಳ್ಳತಕ್ಕದ್ದು. ಭೂಮಿಯು ಆಕಾಶದಲ್ಲಿ ನಿರಾಧಾರವಾಗಿ ಸೂರ್ಯನ ಆಕರ್ಷಣದಿಂದ ಅವನ ಸುತ್ತು ಮುತ್ತು ತಿರುಗುತ್ತದೆಂದು ಮುಂದೆ ತಿಳಿಯುವದು. ಭೂಮಿಯ ಮೇಲೆ ಸೂರ್ಯನಆಕರ್ಷಣೆಯಿಲ್ಲದಿದ್ದರೆ, ಅದು ಇಷ್ಟು ದೊಡ್ಡ ಗೋಲವಾದಾಗ್ಯೂ ಅದಕ್ಕೇನು ಭಾರವೇ ಇಲ್ಲದಾಗಿ, ಅದು ಆಕಾಶದಲ್ಲಿ ನಿರಾಧಾರವಾಗಿ ವೊಂದೇ ಕಡೆಯಲ್ಲಿ ನಿಂತುಕೊಳ್ಳುತ್ತಿತ್ತು. ತಾತ್ಪರ್ಯವೇನಂದರೆ, ಭೂಮಿಯಲ್ಲಿಯೂ, ಅದರ ಮೇಲಿನಪದಾರ್ಥಗಳಲ್ಲಿಯೂ ಸ್ವಾಭಾವಿಕ ಗತಿಯುಂಟಾಗುವದಕ್ಕೆ ಆಕರ್ಷಣವೇ ಹೊರ್ತು ಬೇರೆ ಯೇನೇನು ಕಾರಣವಿಲ್ಲೆಂದು ಪೂರಾ ತಿಳಿಯುತಕ್ಕದ್ದು. ಆಕರ್ಷಣದಿಂದಲೇ ಭೂಮಿಯು ಸೂರ್ಯನ ಸುತ್ತು ತಿರುಗುತ್ತದೆ; ಆಕರ್ಷಣದಿಂದಲೇ ಭೂಮಿಯ ಮೇಲಿನ ವೊಡವೆಗಳು ಅದರ ಪೃಷ್ಠಭಾಗದ ಮೇಲೆ ನಿಂತಿರುತ್ತವೆ; ಪೃಷ್ಠಭಾಗ ಬಿಟ್ಟು ದೂರಹೋದ ವೊಡವೆಗಳು ಆಕರ್ಷಣದಿಂದಲೇ ತಿರುಗಿ ಪೃಷ್ಠಭಾಗಕ್ಕೆ ಬರುತ್ತವೆ ಹೊರ್ತು ಬೇರೆ ಯೆಲ್ಲಿಯೂ ಹೋಗುವದಿಲ್ಲ; ಭೂಮಿಯ

ರುದ್ಧ ಭಾಗಗಳಲ್ಲಿ (ಹಿಂದುದೇಶದ ವಿರುದ್ಧ ಭಾಗವು ಅ
ಮೇರಿಕದೊಳಗಿನ ಪನಾಮ ಯೆಂಬ ಸಂಯೋಗ ಭೂಮಿ
ಯು) ವಾಸಿಸುವ ಮನುಷ್ಯ ಮುಂತಾದ ಪ್ರಾಣಿಗಳು ಆಕರ್ಷ
ಣದಿಂದಲೇ ಕಾಲಿಗೆಕಾಲು ಯೆದುರಾಗಿ ಭೂಮಿಯ ಮೇಲೆನಿ
ಲ್ಲುತ್ತಾರೆ, ಅಂದರೆ ನಮಗೆ ಪನಾಮ ದೊಳಗಿನವರು ತಲೆ
ಕೆಳಗಾಗಿ ನಿಂತಹಾಗೂ, ಅವರಿಗೆ ನಾವು ತಲೆಕೆಳಗಾಗಿ ನಿಂ
ತಹಾಗೂ ತೋರುತ್ತದೆ.

Extracts from Rajashekhara.

ರಾಜಶೇಖರ ದೊಳಗಿನ ಶ್ಲೋಕಗಳು.

॥ಉತ್ಪಲಮಾಲಾವೃತ್ತ॥

ಹೋಮದಕುಂಡದಿಂಕಡೆಸಿಡಿಲ್ದು ಪೊದಳ್ದಿರೆ ಕಂಡುಕೆಂ
ಡಮಂ
ಕಾಮಿಸಿಗೇರ ಪಣ್ಣೆನುತೆ ಪಣ್ಣನೆಪೋರ್ದಿ ತುಡುಂಕೆ ಕೈ
ಸುಡಲ್॥
ಭೂಮಿಗೆ ತರ್ಗಿ ಕುರ್ಗಿಮಿಗೆ ಪಲ್ಕೆರೆದುಃಖಿಸುತೂದಿಪು
ಳ್ದಿಡು।
ತ್ತಾಮುನಿಪುತ್ರರಂ ನಗಿಸಿ ಹರ್ಷಿಸುತೇಂ ಡಿಸಿತೋಂಪು
ಕೋಡಗಂ॥೬॥

ಅರ್ಥ—ಹೋಮದ ಕುಂಡದಿಂದ ಕಡೆಗೆ ಸಿಡಿದು ಹೊಳೆ
ಯುವಂಥಾದೊಂದು ಕೆಂಡವನ್ನು ಕಂಡು, ಇದು ಕೇರಹಣ್ಣೆಂ

ದು ತಿಳುಕೊಂಡು ಒಂದು ಕೋಡಗವು ತಿನ್ನಲಪೇಕ್ಷಿಸಿ, ಅದರ ಬಳಿಗೆ ಓಡಿ ಹೋಗಿ ಅದನ್ನು ಗಪ್ಪನೆ ಹಿಡಿದ ಕೂಡಲೇ ಅದರ ಕೈ ಸುಡಲಾಗಿ ನೆಲಕ್ಕೆ ತಗ್ಗಿ ಕುಗ್ಗಿ ಹಲ್ಲು ತೆರದು ಉಃಪ್ಪೆಂದು ಕೈ ಯೂದಿಕೊಂಡು ಹುಬ್ಬುಗಂಟಿಕ್ಕುತ್ತ ಹರ್ರೆಂದು ಒದರಿ ಆ ಋಷಿಗಳ ಮಕ್ಕಳನ್ನು ನಗಿಸಿತು.

ಚೋಳ ದೇಶದ ವರ್ಣನೆ.

ಕಂದ॥ ಅಂತೆಸೆವ ಮೇರುಗಿರಿಗೆಸ।
ಮಂತೊಪ್ಪುವ ದಕ್ಷಿಣಾಶೆಯೋಳ್ವಸಧರಣೀ॥
ಕಾಂತೆಯ ಸೀಮಂತದರ।
ತ್ನಾಂತಾನೆನೆ ಚೋಳಮಂಡಳಂ ಸೊಗಯಿಸುಗುಂ॥ ೯॥

ಅರ್ಥ—ಆ ಪ್ರಕಾರ ಶೋಭಿಸುವ ಮೇರುಗಿರಿಯ ದಕ್ಷಿಣಾ ದಿಕ್ಕಿನಲ್ಲಿ ಚನ್ನಾಗಿ ಒಪ್ಪುವ ಭೂಮಿಯೆಂಬ ಸುಂದರ ಸ್ತ್ರೀಯಳ ಬೈತಲೆಯ ರತ್ನಾಭರಣದಂತೆ ಚೋಳಮಂಡಳವು ಶೋಭಿಸಿತು.

॥ಮಹಾ ಸ್ರಗ್ಧರಾವೃತ್ತ॥

ದಳಿತಾಂಭೋಜಾಳಿ ತಳ್ತೊಪ್ಪುವ ಕೆರೆಕುಮುದಂಶೇವಿ
ತೋರ್ವರ್ಬ್ಬಿಷಂಡಂ।
ಕಳಹಂಸಶ್ರೇಣಿಯಿಂರಂಜಿಪ ಪೊಳೆಬೆಳೆಯಿಂಬಾಳ್ವಕೈ
ಯೂಪ್ಪಗಳಂಕಂ॥
ಗೊಳಪುದ್ಯತ್ಪುಷ್ಪವಾಟೀಕುಳಮಲರ್ಗಳಿಂ ಕಾಯ್ಗ

ಳಿಂ ಪಣ್ಗಳಿಂಮಂ।
ಜಾಳವಾದುದ್ಯಾನವಾನಾಡೊಳೆ ಪರಿದೆಸೆವುತ್ತಿರ್ಪುವಲ್ಲ
ಲ್ಲಿ ನಿಚ್ಚಂ ॥೭॥

ಅರ್ಥ—ಅರಳಿದ ಕಮಲಗಳ ಸಮೂಹದಿಂದ ಯುಕ್ತವಾಗಿ ಒಪ್ಪುವ ಕೆರೆಗಳೂ, ನೀಲೋತ್ಪಲಗಳಿಂದ ತೋರುವ ಸರೋವರಗಳೂ, ರಾಜಹಂಸ ಪಕ್ಷಿಗಳ ಪಙ್ತಿಗಳಿಂದ ಒಪ್ಪುವ ಹೊಳೆಗಳೂ, ಬೆಳೆಯಿಂದ ಸಮೃದ್ಧಿಯಾದ ಹೊಲಗಳೂ, ಹೂವುಗಳಿಂದ ಉತ್ಕೃಷ್ಟವಾಗಿ ಕಣ್ಣಿಗೆ ತೋರುವ ಹೂದೋಟಗಳೂ, ಹಣ್ಣು ಕಾಯುಗಳಿಂದ ಮನೋಹರವಾಗಿ ತೋರುವ ತೋಟಗಳೂ ಆ ಚೋಳದೇಶದಲ್ಲಿ ಅಲ್ಲಲ್ಲಿಗೆ ಯಾವಾಗಲೂ ಶೋಭಿಸುತ್ತಿರುವವು.

॥ಮಹಾ ಸ್ರಗ್ಧರಾವೃತ್ತ॥

ಅರಲಿಂವಣ್ಣಿಂಮರಂ ಪೆಣ್ಗಳಯಿನಳಯಿನುದ್ಯಾನಮಂ
ಭೋಜವಿಂದೀ।
ವರದಿಂಕಾಸಾರಮಾಸಾರ ದೆಪ್ರೊಸಬೆಳಯಿಂಭಾವಿಣಾವಿಾ
ಜದಿಂತ॥
ಣ್ಣೆರಲಿಂಮಾರ್ಗಂ ಮರಾಳೋತ್ಕರದೆ ನೆರವಚಕ್ರೌಘ
ದಿಂ ಸಿಂಧುಸಿಂಧೋ
ತ್ಕರದಿಂಪೇರಾನೆಯಿಂ ಕಾನನಮಿಡಿದೆಸಗುಂ ದೇಶಮೋ
ಳ್ಪಿಂದಜಸ್ರಂ॥೮।

ಅರ್ಥ=ಹೂವುಗಳಿಂದಲೂಹಣ್ಣುಗಳಿಂದಲೂಯುಕ್ತವಾದ ಮರಗಳೂ, ಹೆಣ್ಣು ಗಿಳಿಗಳಿಂದಲೂ ಭ್ರಮರಗಳಿಂದಲೂ

ಕೂಡಿದ ತೋಟಗಳೂ, ಕಮಲಗಳಿಂದಲೂ ನೈದಿಲೆಗಳಿಂ
ಲೂ ದಟ್ಟವಾದ ಸರೋವರಗಳೂ, ಮಳೆಯಿಂದಲೂ
ಳೆಯಿಂದಲೂ ಸಮೃದ್ಧಿಯಾದ ಭೂಮಿಯೂ, ಗಿಡಗಳಿಂ
ಲೂ ತಣ್ಣನ್ನ ನೆರಳಿನಿಂದಲೂ ಒಪ್ಪುವ ಮಾರ್ಗಗಳೂ, ಹ
ಸಪಕ್ಷಿಗಳ ಸಮೂಹದಿಂದಲೂ ಚಕ್ರವಾಕಪಕ್ಷಿಗಳಸಮೂಹ
ದಿಂದಲೂ ರಂಜಿಸುವ ಹೊಳೆಗಳೂ, ಸಿಂಹಗಳಿಂದಲೂ, ದೊ
ಡ್ಡ ದೊಡ್ಡ ಆನೆಗಳಿಂದಲೂ ಯುಕ್ತವಾದ ಅರಣ್ಯಗಳೂ
ಚೋಳದೇಶದಲ್ಲಿ ಯಾವಾಗಲು ಶೋಭಿಸುವವು.

ಕಾವೇರೀನದೀ ವರ್ಣನೆ.

॥ಮತ್ತೇಭವಿಕ್ರೀಡಿತವೃತ್ತ॥

ತರುಸಂತಾನಮದೊಪ್ಪೆ ತನ್ನ ತಟದೊಳ್ಕ್ಷೀರಾಟಕೆ
ದ್ಯೈದೆವ
ದಿರ್ಗದಿವ್ಯದ್ವೀಪಮಿಂಬುಗೊಂಡು ಜಳಮಂ ರಂಭಾದಿಗ
ಳ್ಸೇವಿಸು
ತ್ತಿರೆ ಕುಂಭಜಂಪವಗಾಹಿಸುತ್ತನಿಮಿಷವ್ರಾತಂ ಕರಂತೋ
ಷಿಸಿ
ರ್ಜರಗಂಗಾನದಿತಾನಿದೆಂಬ ತೆರದಿಂ ಕಾವೇರಿಕಣ್ಗೊಪ್ಪು
ಗುಂ॥ ೧॥

ಇದರಲ್ಲಿ ಕಾವೇರೀಪರ, ಗಂಗಾನದೀಪರಗಳೆಂದು ಎರಡು
ಅರ್ಥಗಳಿದ್ದುದರಿಂದ ಕೌಂಸದೊಳಗೆ ಗಂಗಾನದೀಪರವು ಬರೆ
ಯಲ್ಪಟ್ಟಿದೆ.

ಅರ್ಥ—ಇಕ್ಕೆಲದ ದಂಡೆಗಳಲ್ಲಿ ಗಿಡಗಳಸಮೂಹವು(

ಲ್ಪವೃಕ್ಷ)ಒಪ್ಪಲು, ನೀರಾಟಕ್ಕೆಂದು ಬಂದಂಥಸುಂದರವಾದ ಆನೆಗಳು(ಐರಾವತ)ಇಚ್ಛೈಸಿರಲು, ಸ್ಥಳಗೊಂಡು ಬೆಳೆದಬಾ ಮುಂತಾದ ಗಿಡಗಳು(ರಂಭೆ, ಊರ್ವಸಿ ಮುಂತಾದವರು) ನೀರನ್ನು ಸೇವಿಸುತ್ತಿರಲಾಗಿ, ಮೀನುಗಳ ಸಮೂಹವು(ದೇವತೆಗಳು)ಪ್ರೀತಿಯಿಂದ ಈಸಾಡುತ್ತಿರಲಾಗಿ, ಕಾವೇರೀ ನದಿಯು ದೇವಗಂಗೆಯು ಹಾಗೆ ಕಣ್ಣಿಗೆ ಶೋಭಿಸಿತು.

॥ಚಂಪಕಮಾಲಾವೃತ್ತ॥

ಪರದಳಿತಾಂಬುಜಾನನದೊಳೊಪ್ಪುವಕತ್ತುರಿಬೊಟ್ಟಿ
ನಂತೆಸಾ।
ರ್ದಿರಲಳಿತೊಟ್ಟ ಮುತ್ತುಗಳವೆಂಬಿನ ಮೊಪ್ಪಿ ರಶೀಕರಾ
ಳಿಬೆ॥
ಳ್ನೊರೆಸಿರಿಕಂಡ ದಣ್ಪಿನೆವಿರಾಜಿಸೆಪದ್ಮಪರಾಗವಾಸೆವಾ।
ಕ್ಷ್ವರಚಪಲಾಕ್ಷಿ ಪೊಣ್ಪಸ್ರೊಸವೆಣ್ಸಲೆ ಸಿಂಗರವಾಂತುತೋ
ರಿದಳ್॥೨॥

ಅರ್ಥ—ಅರ್ಧ ಅರಳಿದ ಕಮಲವೆಂಬ ಮುಖದಲ್ಲಿ ಒಪ್ಪು ಕಸ್ತೂರಿಯ ಬೊಟ್ಟಿನಹಾಗೆ ಭ್ರಮರವು ಹೊಂದಿರಲು, ಮೈಮೇಲೆ ಧರಿಸಿಕೊಂಡ ಮುತ್ತುಗಳೆಂಬುವ ಹಾಗೆ ಸಣ್ಣ ಸಣ್ಣ ನೀರ ಹನಿಗಳು ಶೋಭಿಸಲು, ಬಿಳೀ ನೊರೆಯು ಶ್ರೀಗಂಧದ ಲೇಪನದಂತೆ ಒಪ್ಪಲು, ಕಮಲದ ಪುಡಿಯು ಪೀತಾಂಬರದಂತೆ ತೋರಲು, ಮೀನುಗಳೆಂಬ ಚಂಚಲವಾದ ಕಣ್ಣುಗಳುಳ್ಳ ಹೊಳೆಯೆಂಬ ತರುಣಿ ಸ್ತ್ರೀಯುಳು ಶೃಂಗಾ

ರವಾಗಿ ತೋರಿದಳು.

॥ಮತ್ತೇಭ ವಿಕ್ರೀಡಿತವೃತ್ತ॥

ಇಳೆಯಂಪಾಲಿಪ ನೃಪನೊಂದುಬೆಳೆಯಂ ಚಂದ್ರಾಶ್ಮಸ
ದ್ರಶ್ಮಿನಿ।
ರ್ಮಳೆಯಂನಿರ್ಮಿತ ಶರ್ಮಧರ್ಮಫಳೆಯಂ ಪದ್ಮೋ
ತ್ಪಲೋತ್ಫುಲ್ಲಸಂ।
ಕುಳೆಯಂಕೋಕ ಬಳಾಕಹಂಸಬಳೆಯಂಡಿಂಡೀರ ಪಿಂ
ಡೌಘಮಂ।
ಜುಳೆಯಂಪೆಂಪಿನಲಂಪನಾಳ್ದ ಪೊಳೆಯಂ ಪೇಳ್ಟ್ಣ್ಣಸ
ಲ್ಟಕರ್ಮವೋ॥೨॥

ಅರ್ಥ—ಭೂಮಿಯನ್ನು ಸಂರಕ್ಷಿಸುವ ಪುಣ್ಯದೊಂದು ಬೆಳೆಯಾದಂಥ, ಚಂದ್ರಕಾಂತದ ಒಳ್ಳೇ ಕಾಂತಿಯಹಾಗೆ ನಿರ್ಮಳವಾದಂಥ, ನಿರ್ಮಿಸಲ್ಪಟ್ಟ ಸುಖಾಚಾರದ ಫಲವಾದಂಥ, ತಾವರೆ ನೈದಿಲೆಗಳ ಸಮೂಹವುಳ್ಳಂಥ ಚಕ್ರವಾಕ ಬೆಳ್ಳಕ್ಕಿ ಹಂಸಗಳ ಸಮೂಹವುಳ್ಳಂಥ, ನೊರೆಯ ಮುದ್ದಿಯಿಂದ ಮಂಜುಳವಾದಂಥ, ಅತಿ ಶೋಭೆಯನ್ನು ಧರಿಸಿದಂಥ, ಕಾವೇರೀ ನದಿಯನ್ನು ವರ್ಣಿಸುವದು ಯಾರಿಂದಾದೀತು.

ಶಾಂತವೀರಯ್ಯ ನವರಿಂದ ರಚಿಸಲ್ಪಟ್ಟ.

ನವರತ್ನ ಪದಕ.

(ಪೀಲಧೊರೆಗಳ ಕೀರ್ತಿಯು ವರ್ಣನೆ.)

ಂದ|| ಸುರುಚಿರ ಸುಮನಃ ಫಲದಂ।
ರಿರಂಜಿತ ಪಂಚಶಾಖ ಸಮಿತ ಸುಸಂಪತ್||
ರಸಯುತನೆನಿಸುವನಿಶಂ।
ೊರೆ ಪೀಲ್ ಭೂ ಕಲ್ಪವೃಕ್ಷ ವೆನಿಪುದು ಪುಸಿಯೇ?|| ೧।

||ಮತ್ತೇಭವಿಕ್ರೀಡಿತವೃತ್ತ||

ೊರೆ ಪೀಲ್ ಮುಂಬಯಿಲಾಖೆ ನಿಮ್ಮಯ ಮಹಾವ
ಷ್ಠಾಗಮಂ ಸಾರ್ದಿರಲ್ಕರೆ ವಿದ್ಯಾ ಘನ ಮಂಡಲಂ।
ಧೃತಪರೀಕ್ಷಾಮೋಘಶಬ್ದಂತದಾ
ೊರೆಜಿಲ್ಲಾಧಿಪಬಹಿರ್ಗಗಳ್ ನಲಿವಪ್ರೋಲ್ ಸ್ಕಾಟ್ಲ್ಯಂಡರ್ಣವ
ಘೋರೀಪಲೋ||
ರಯುಕ್ತಂ ಕರೆದತ್ತು ಪಾಸಮುಳೆಯಂ ಸ್ವಾಜ್ಞಾತಟೆಸ್ರಂಯು
ತಂ|| ೨||
ೊರೆಪೀಲ್ ನಿಮ್ಮಯ ಕಂನಡೀಳಿಗೆತನಂಗೆಯ್ವಾ ಮಹೀಪಾ
ರುತಂ।
ರಿದೆತ್ತಂ ಹಳೆಗಬ್ಬ ಪ್ರೂತಸವಿಮಾತ್ರೋಳ್ಗಂ ಪವೋಲೂಟಿ
ಮಂ
ೊರೆರಾಬರ್ಟ್ ಸನಾಮರ್ ಸ್ಕಾಂಗಸ್ಟ್ ಅರ್ಟ್ ಗ್ರೀಸರ್ ಕಲೆಕ್ಟ
ರ್ ಸುಪಟ್।

B

ಚರಣಂಗಳ್ಗೆಣೆಸಿತ್ತು ಪೊಕ್ಕು ಧೊರೆಕ್ಯಾಂಡೀ ಚಿತ್ರಕಾಸಾರ
ದೊಳ್ ॥೨

ಉರೆಮುಜ್ಜಂಜೆಯುಕೆಂಪನೋರೆಯುಮಹಾವಾಯುವ್ಯದಿಕ್ಪ
ದ್ಮಿನೀ
ಪರಪೈವಾಹವಮಾಡಿಕೊಂಬಮುನದಿಂಪ್ರೀತಿಟ್ಟು ಪೋಗಲ್
ಸಲ್
ಪರಸೂರ್ಯರ್ಗಂಪೊಸಕೆಬ್ಬು ಕಿತ್ತುಮಿಗೆಪ್ರೊಸ್ನಂಸಾಸಿರಂದಾನ
ವಂ
ಪೆರೆದತ್ತಾರೆಯುಮಬ್ಬುಸೂಂಕಿಧೊರೆಕ್ಯಾಂಡೀಚಂದ್ರಬಿಂ
ಬೋದಯಂ॥೪

ಮೆರೆಯಲ್ ಬೀಲ್ ಧೊರೆನಿಪ್ಪ ಯಾಜ್ಞಿಯದಿಕ್ಯಾಂಡೀ ಚಂದ್ರ
ಬಿಂಬೋದಯಂ
ಪರಿಪೆತ್ತಿಲ್ಲಿಯುಮಿಪ್ಪ ಕಂಸಡದ ಸದ್ವಿದ್ಯಾರ್ಣವಂ ಮೀರೆ
ಮಿ
ರುರೆಸತ್ಪ್ರಜ್ಞಾಕರಕಂಸಲಿಮದೀ ಟ್ರೀನಿಂಗಕಾಲೇಜ
ವಾ
ರಿರಹೋದಾಕರದೋಳರಳ್ದ ದುಕ್ತಂವಿದ್ಯಾರ್ಥಿನೀಲೋತ್ಪ
ಲಂ॥೫

ಪರಸೀಕ್ಸ್ಪೀರನಕಾವ್ಯಸಾರರಸಪ್ರೋಕ್ಷೀರಾಬ್ಧಿ ಡಿಂಡೀರ
ಪ್ರೋ॥
ಧೊರೆಪೀಲ್ ಸತ್ಸವಿಚಾರಕಲ್ಪಲತೆಯೊಳ್ ಪುಷ್ಟಿ ದರ್ಪೂಪ
ಣ್ಗಳೋ
ಪರವಾಗ್ದೇವಿಯುಸುಸ್ತನಾಮೃತಮಿದೋ ಟ್ರೀನಿಂಗಕಾಲೇ।
ಜದೋಳ್

ತರವಿದ್ವಾಂಸರುಮೆಚ್ಚಿಪೇಳ್ದ ಧೊರೆಕ್ಯಾಂಡೀವಾಕ್ಯ ಸಂದೋ
ಹಮೋ॥೬॥

॥ಕಂದ॥

ಬಡವಗೆಕಡವರದೊರದೋಲ್।
ತಡೆಯುದಬದ್ಧ ರೋಗಿಗಳಿಗೆವೈದ್ಯಂದೊರದೋಲ್॥
ಕಡುಪಸಿದಂಗೆರೆದೋಲ್ ಪಾ।
ಲೊಡೆಯುರೆಮೀಲ್ ನಿಮ್ಮ ಬರವದಾಯ್ತೀ ಧರೆಗಂ॥೭॥
ನಿಜದಿಂದಂನಿಜದೇವರ।
ನಿಜದಯುದಿಂವಿಜಯುಸೌಖ್ಯ ಸಂಪತ್ಪುತ್ರರ್॥
ನಿಜವಾಗಿರಲೆಂದನಿಶಂ।
ಸುಜನರುಕೊಂಡಾಡುತಿಹರುಮೀಲ್ ಧೊರೆನಿಮ್ಮಂ॥೮॥
ಅಕ್ಕರದಿಂದಂಲೋಕದ।
ಮಕ್ಕಳಿಗತಿಬುದ್ಧಿವಿದ್ಯೆವಿತ್ತುಪಕಾರವ॥
ಮಕ್ಕಳತೊಗುತಪ್ರೊಗಳ್ವರು।
ಸಿಕ್ಕಲ್ಪಾನಪದವಿಯೊಂದುಮೀಲಧೊರೆನಿಮಗಂ॥೯॥

॥ಗದ್ಯ॥

ಸತ್ಕವಿಕುಲಕಂಠಾಭರಣ ಸದ್ವಿದ್ಯಾಶರಣ ಪಂಡಿತೋದ್ಧರಣ ಪೇಶಭಾಷೆ ಸುಧಾರಣಸರ್ ಮೀಲ್ ಧೊರೆಸ್ಪೈರಿಕಟಿರ್ ವ್ಯಾಪಿಸಿದಕೀರ್ತಿಯುಂ ತ್ರಿಮುಸುಕಿರ್ಮಮುಹಾರಾಷ್ಟ್ರಭಾಷೆಯುಂ ಬಸ್ತ್ರೀಕ್ಕಿ ತಾಯರ್ ಮಕ್ಕಳ ಕೂಡಿಸಿದಂತೆ ಕರ್ನಾಟಭಾಷೆಯುಂ ಕರ್ನಾಟದೇಶಸ್ಥರೊಳು ಪಸರಿಸಿದ ಸದೋದಾರ ಗುಣದ ಕಡಲ್ ರಸಿಕರೊಳ್ಯಾರಸಲ್ ಸುಹಾರಸಿಕ ರಸಲ್ ಧೊರೆಗಳಿಂ ಪ್ರಕಟಿಸಿದ, ಕರ್ನಾಟ ಸಂಸ್ಕೃತ ಕವಿತಾ ವಿಶಾರದ ಷಡಕ್ಷರೀ ಕೃತ ಕವಿತಾ ಶಕ್ತಿ ಪ್ರಾ,

ಣ ರೂಪ ವೆನಿಪ, ನುತಕವಿಶೇಖರ ರಾಜಶೇಖರವಿಳಾಸ ಠಾ ಕಾವ್ಯ ಸಾರಾಮೃತ ರಸದಿಂ ಕರ್ಣಾಟ ಕಾವ್ಯ ಪ್ರಿಯ ಕುಸುಮಸುಗಂಧ ಲುಬ್ಧ ಭ್ರಮದ್ಭ್ರಮರ ಪಂಡಿತೋದ್ದಂಡ ಕುಜನತಮ ಪ್ರಚಂಡ ಮಾರ್ತಂಡ ಕ್ಯಾಂಡೀ ಪನೋಹರ್ಷಕರ ಕರ್ಣಾಟಭಾಷಾಲತೆ ಭೋಜರಾಜ ನಿ ಸಂಸ್ಕೃತ ಭಾಷೆ ಪ್ರಕಟಿಸಿದ ಪೋಲ್ ಕರ್ಣಾಟದೇಶ ಶಾಲೆಗಳೊಳೆತ್ತೆತ್ತ ಲುಂಪಸರಿಸಿ ಫಲಿತ ಪರೀಕ್ಷಾ ಪಾ ಫಲವನನು ಕರಿಸಿದ ವಿದ್ವಜ್ಜನಹೃದಯ ಭೂಷಿತ ನವರತ್ನ ಪದಕಂ ಪೋಲ್ ಧೊರೆಗಳ ಸದ್ಗುಣ ಪ್ರಶಂಸಾಲಂಕೃತ ಶಾಂತವೀರ ರಾಜಿದೇವ ಕಿತ್ತೂರ ಶ್ರೀನಿಂಗಕಾಲೇಜ ವಿಚಿತಂ ಕವಿಜನ ಮನೋರಂಜಿತ ಮಿದು ಸಮಾಪ್ತಂ

Notice.

ಜಾಪಕನಂಬರು ೮೦೬

ಧಾರವಾಡಜಿಲ್ಲೆದೊಳಗಿನ

ನೇಮಣೂಕಗಳು.

೧ ಧಾರವಾಡ ಕನ್ನಡಸಾಲಿಯ ಮಾಸ್ತರರಾದ ಗುರಪ್ಪಾ ಅಪ್ಪಾ ಮುರತಲೆ ಇವರನ್ನು ಹಾಂವೇರಿಸಾಲಿಯ ಹೆಡ್ಡ ಮಾಸ್ತರ ಜಾಗದ ಮೇಲೆ ನೇಮಿಸಿದ್ದೇವೆ—ಪಗಾರ ರೂ. (೪೦).

೨ ಹಾಂವೇರಿಸಾಲಿಯ ಅಕ್ಟಿಂಗ ಹೆಡ್ಡಮಾಸ್ತರಜಾಗಪ ಶ್ರೀನಿವಾಸ ರಾಮಚಂದ್ರ ಜಾಲಿಹಾಳಕರ ಇವರಿಗೆ ಧಾರವಾಡ ಕನ್ನಡಸಾಲಿಯ ಹೆಡ್ಡಮಾಸ್ತರಕೆಲಸಕ್ಕೆ ಅಕ್ಟಿ ನೇಮಿಸಿದ್ದೇವೆ—ಪಗಾರ ರೂ. (೩೦).

೩ ಗದಗಸಾಲಿಯ ಮಾಸ್ತರರಾದ ಶಿವಬಸಪ್ಪಾ ಚನಬಸ
ಪ್ಪ ಇವರನ್ನು ಪುನಃ ಬೇಟಗೇರಿಸಾಲಿಯ ಹೆಡ್ಡಮಾಸ್ತರ
ಲಸಕ್ಕೆ ನೇಮಿಸಿದ್ದೇವೆ—ಪಗಾರ ರೂ. (೩೦).

೪ ಹುಬ್ಬಳ್ಳಿ ೧ನೇ ನಂಬರದ ಕನ್ನಡಸಾಲಿಯ ಹೆಡ್ಡಮಾ
ರರಾದ ಎಣ್ಣೇಶ್ವರ ವೆಂಕಾಜಿಜ್ಯೋಸಿ ಇವರನ್ನು ಗದಗ
ಲಿಯ ಹೆಡ್ಡಮಾಸ್ತರಕೆಲಸಕ್ಕೆ ನೇಮಿಸಿದ್ದೇವೆ—ಪಗಾರ
ೂ. (೩೦).

೫ ಧಾರವಾಡ ತಾ॥ ಬೆಟಗೇರಿ ಸಾಲಿಯ ಮಾಸ್ತರರಾದ
ವಜೀ ಬಾಳಕೃಷ್ಣ ಯಮಕನಮರ್ಡಿ ಇವರನ್ನು ಕಲ
ಟಗಿ ತಾ॥ ಮಿಶ್ರಿಕೋಟೆಸಾಲಿಯ ಹೆಡ್ಡಮಾಸ್ತರ ಕೆಲಸ
ಕ್ಕೆ ಅಷ್ಟೇಪಗಾರದಮೇಲೆ (ರೂ. ೨೫) ನೇಮಿಸಿ—ಮಿಶ್ರಿ
ಕೋಟೆ ಸಾಲಿಯಮಾಸ್ತರರಾದ ಭೀಮಾಜಿ ಧೋಂಡೋ
ಪ್ರಭು ಇವರನ್ನು ಹುಬ್ಬಳ್ಳಿ ೧ನೇ ನಂಬರದ ಕನ್ನಡಸಾಲಿ
ಯ ಮಾಸ್ತರಕೆಲಸಕ್ಕೆ ನೇಮಿಸಿದ್ದೇವೆ—ಪಗಾರ
ರೂ. (೨೫).

೬ ಮಿಶ್ರಿಕೋಟೆಸಾಲಿಯ ಅ॥ ಮಾಸ್ತರರಾದ ಬಾಳಪ್ಪಾ
ನಾಸಪ್ಪಾ ಬೆಟಗೇರಿ ಇವರು ನಾವು ಪರೀಕ್ಷೆಕ್ಕೆ ಹೋದಸ
ಮಯದಲ್ಲಿ ಸಾಲಿಯಲ್ಲಿರದೇ ಏರಡನೇ ಊರಿಗೆ ಬಗರರ
ಜೇದಿಂದ ಹೋದಕಾರಣಾ ಮೊಹಬಾರ್ನ ಇ. ಇನಸ್ಪೇಕ್ಟರ
ಸಾಹೇಬರವರ ಮಂಜೂರಿಯಿಂದ ೫ ರೂಪಾಯಿ ದಂಡ
ಮಾಡಿರುತ್ತೇವೆ.

ತಾ॥ ೧೯ನೇ ಮಾಹೆ ಜ್ಯಾನೆವರಿ ೧೮೭೨ ಇ.

Signed) Chanbussppa B. Dháwar.

ಡೆ. ಇ. ಇ. ಜಿಲ್ಹಾ ಧಾರವಾಡ.

ನೋಟೀಸು.

ಧಾರವಾಡಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರರಿಗೆ—

ಈ ನೋಟೀಸಿನಿಂದ ತಿಳುಹಿಸುವದೇನಂದರೆ—ಕಸಬಾ ಗುತ್ತಲ ತಾಲೂಕ ಕರ್ಜಗಿ ಇಲ್ಲಿಯ ಮಾಸ್ತರರಾದ ಮೋರೋ ವಿನಾಯಕ ಜೋಶಿ ಇವರು ತಮ್ಮ ರಾಜೀನಾಮೆಯನ್ನು ಮಂಜೂರು ಮಾಡುವದಕ್ಕಿಂತ ಮುಂಚೆ ತಮ್ಮ ಕೆಲಸದ ಚಾರ್ಜವನ್ನು ಶಿಕ್ಷಕನಿಗೆ ಕೊಟ್ಟು ಹೋದಕಾರಣ ಮೆಹರ್ಬಾನ ಇಜ್ಯುಕೇಶನಲ್ ಇನಸ್ಪೆಕಟರ ಪ್ರಾಂತ ದಕ್ಷಿಣಭಾಗ ಇವರು ಸದರ ಮಾಸ್ತರರ ರಾಜೀನಾಮೆಯನ್ನು ಮಂಜೂರು ಮಾಡದೇ ಅವರನ್ನು ಈ ಖಾತೇದಿಂದ ತೆಗೆದು ಹಾಕಿದ್ದಾರೆ. ಆದಕಾರಣ ಯಾವತ್ತು ಮಾಸ್ತರರು ಈ ಪ್ರಕಾರ ಮಾಡದೇ ಹುಷಾರಿಯಿಂದ ಕೆಲಸ ಮಾಡಬೇಕು. ಮತ್ತು ಯಾವ ಮಾಸ್ತರರಾದರೂ ಇದರಂತೆ ವರ್ತಿಸಿದರೆ ಇದೇ ಶಿಕ್ಷೆಕ್ಕೆ ಪಾತ್ರರಾಗುವರು—

ತಾ॥ ೨೧ ಜೆನವರಿ ಸಂನ ೧೮೭೨೩.

(Signed) Chanbussppa B. Dhawar.

ಡ. ಇ. ಇ. ಜಿಲ್ಲಾ ಧಾರವಾಡ.

ಸರಕ್ಯುಲರ ನಂಬರು

೯೬೪

ಕಲಾದಗಿ ಜಿಲ್ಲೆಯೊಳಗಿನ ಯಾವತ್ತು ಸ್ಕೂಲಮಾಸ್ತರ ಜನರಿಗೆ—

ತಿಳುಹಿಸುವದೇನಂದರೆ—ಬರುವ ಫೇಬರವರಿ ತಿಂಗ

೨೧ನೇ ತಾರೀಖಿನ ದಿವಸಾ ಸರಕಾರಿ ಠರಾವಿನಮೇಲಿಂದ ಾನೆಸುಮಾರಿ ಆಗತಕ್ಕದ್ದಿದ್ದು ಈ ಖಾನೆಸುಮಾರಿ ಮಾಡು ಪ್ರದ್ಧಿಕ್ಕೆ ಯಾವದು ಈ ಬಗ್ಗೆ ಚನ್ನಾಗಿ ಸಮಜೂತ ೀಳುವವರದಶಿಂದ ನೀವು ನಿಂವು ಪೂರವಳಗಿನ ಗವಡ ುಲಕರ್ಣಿ ಕ್ರೈತ ಮುಂತಾದ ಜನರಿಗ್ಯೂ ನಿಮ್ಮ ಸಾಲಿವಳ ನ ಪುಡಗುರಿಗ್ಯೂ ಸಮಜೂತ ಕೊಡತಕ್ಕದ್ದೆನಂದರೆ—

ಖಾನೆಸುಮಾರಿಯನ್ನು ತೆಗೊಂಬುವದು ಇದೆ ಹೊಸದಾ ಅಲ್ಲ; ಪೂರ ಗವಡಕುಲಕರ್ಣಿಯರು ಕಾಲಕಾಲಕ್ಕೆ ಖಾನೆ ಸುಮಾರಿಯನ್ನು ತೆಗೆದುಕೊಂಬುವ ವಹಿವಾಟು ಈಗ ಅದೆ; ಇದರಂತೆ ಸರ್ವೈ ಖಾತೆದಲ್ಲಿ ಸಹಾ ಖಾನೆಸುಮಾರಿ ಆಗು ತ್ತ ಇರುತ್ತದೆ. ಫಕ್ತ ಹಿಂದುಸ್ಥಾನದಲ್ಲಿ ಖಾನೆಸುಮಾರಿ ತಗೊಂಬೊ ವಹಿವಾಟು ಉಂಟು ಹೀಂಗೇನು ಇಲ್ಲ ಯಾವ ತ್ತು ಸುಧಾರಿಸಿದ ದೇಶಗಳಲ್ಲಿ ವೇಳ್ಯಾ ವೇಳ್ಯಕ್ಕೆ ಅದು ತ ಗೊಂಬೊ ವಹಿವಾಟು ಅದೆ. ಇಂಗ್ಲಂಡದೇಶದಲ್ಲಿ ಸ್ವಲ್ಪ ದಿವಸದ ಕೆಳಗ ವಷ್ಟ್ರೆ ಖಾನೆಸುಮಾರಿ ಆಗಿರುತ್ತದೆ—

ಗ್ರಾಮದ ಗವಡ ಕುಲಕರ್ಣಿ ಯಾರು ಮಾಡುವ ಖಾನೆ ಸುಮಾರಿಯು ಅಪೂರ್ತಿ ಇರೋದರಿಂದ ನಿಜವ ಸಮಸಾದ ಮಾಹಿತಿ ತಿಳಕೊಳ್ಳುವವರಗೋಸ್ಕರ ಈಗಿನ ಖಾನೆಸುಮಾ ರಿ ಮಾಡತಕ್ಕದ್ದದೆ—

ಯಾವತ್ತು ವಿದ್ವಾಂಸರ ಅಪೇಕ್ಷೆಯು ಜನರ ಸಂಖ್ಯ, ಭಿನ್ನ ಭಿನ್ನ ಜ್ಯಾತಿ, ಧರ್ಮ, ವಿದ್ಯೆ ವ ಉದ್ಯೋಗ ಇವುಗಳ ಬಗ್ಗೆ ಬರೊಬರಿ ಮಾಹಿತಿ ಪಡಕೊಂಬೊದು ಮುಖ್ಯವಾಗಿ ಇರುತ್ತದೆ; ತಂಮ ದೇಶದ ಹಿತದಲ್ಲಿ ಅಪೇಕ್ಷೆಯುಳ್ಳ ಜನರಿಗೆ ಮೇಲಿನ ವಿಷಯಗಳ ಮಾಹಿತಿ ಇರೊದು ಅವಶ್ಯ

ವದೆ. ಮಧ್ಯೆ ಆಫ್ರಿಕಾ ಖಂಡದ ಹಿತದಬಗ್ಗೆ ನಮಗ ವಿಶೇಷ ಅಪೇಕ್ಷೆಯು ವುಂಟಾಗುವದಿಲ್ಲ ಯಾಕಂದರೆ ಆ ದೇಶದ ಜನರ ಸಂಖ್ಯೆ ವ ಸ್ಥಿತಿ ಈ ಬಗ್ಗೆ ನಮಗೆ ಮಾಹಿತಿ ಚಂದಾಗಿ ಇಲ್ಲ—

ದೇಶದ ಸಾರ್ವಜನಿಕ ಜ್ಞಾನವು ವೃದ್ಧಿಂಗತ ಮಾಡುವದಕ್ಕಾಗಿ ವ ಅದರಲ್ಲಿ ನ್ಯೂನತ್ವ ಇದ್ದರೆ ಅದು ಸುಧಾರಿಸುವದಕ್ಕಾಗಿ ಖಾನೆಸುಮಾರಿ ತಗೊಂಬೋದು ಅವಶ್ಯವದೆ—

ಯಾವನೊಬ್ಬ ನಿಗ್ಯಾದರು ವಂದು ಶಹರ ಅಥವಾ ಪ್ರಾಂತದ ನ್ಯೂನತೆ ಸರಕಾರದ ನಜರಿಗೆ ಹಾಕುವ ಅಪೇಕ್ಷೆಯುಂಟಾದರೆ ಆ ಪ್ರಕಾರ ಮಾಡುವದು ಈ ಖಾನೆಸುಮಾರಿ ಇಂದ ವುಂಟಾಗುವ ಮಾಹಿತಿ ಹೊರ್ತು ಇತರ ಸಾಧನಗಳಿಂದ ಆಗದು. ಇದರಂತೇ ನೇ ಸದರಿ ಮಾಹಿತಿ ಸರಕಾರಕ್ಕೂ ನಾವು ತಿಳಿಸತಕ್ಕದ್ದು ಅವಶ್ಯವಾಗಿರುತ್ತದೆ. ಯಾಕಂದರೆ ಜನರ ಸ್ಥಿತಿ ವ ಅವರಿಗೆ ಯೇನು ನ್ಯೂನತೆಗಳು ಅವೆ ಅವೆಲ್ಲಾ ತಿಳಕೊಂಬೊ ಕೆಲಸ ಸರಕಾರದ್ದು ಇರುತ್ತದೆ—

ಖಾನೆಸುಮಾರಿಯು ಬಹುತೇಕ ಭಾಗದಲ್ಲಿ ವಿದ್ಯೆಕ್ಕೆ ಸಂಬಂಧವಾದ ಮಾಹಿತಿ ಇರುತ್ತದೆ. ಅದರಲ್ಲಿ ದೇಶದ ಯಾವ ಭಾಗವು ವಿದ್ಯೆದಲ್ಲಿ ಯೆಷ್ಟು ಮುಂದ ಅದೆ ಇದು ತಿಳಿಯುತ್ತದೆ, ಮತ್ತು ಜನರ ಸಂಖ್ಯೆದ ಮಾನದಿಂದ ಯೆಲ್ಲಿ ಹೆಚ್ಚಿಗೆ ಸಾಲೆಗಳು ಬೇಕು ಇದರ ಮಾಹಿತಿ ಆಗುತ್ತದೆ, ಶಿವಾಯ ಜ್ಯಾತಿ ವ ಧರ್ಮದ ವಿಷಯದಲ್ಲಿ ಮಾಹಿತಿ ಅದರಲ್ಲಿ ಇರೋದರಿಂದ ಮುಸಲಮಾನ ಅಥವಾ ಬೇರೆ ಜ್ಯಾತಿಯ ಜನರು ಯಾವ ಸ್ಥಳದಲ್ಲಿ ಬಹಳ ಇರುತ್ತಾರೆ ಯಾವ ಸ್ಥಳದಲ್ಲಿ ಯಾವ ಪ್ರಕಾರದ ಶಾಲಾಗಳು ಮುದ್ದಾ

ಮು ಸ್ಥಾಪಿಸತಕ್ಕವು ಇದು ತಿಳಿಯುತ್ತದೆ—

ಪ್ರತಿವಂದು ಔರಸ ಚೌರಸ ಮೈಲಿನಲ್ಲಿ ಇಷ್ಟು ಜನರು ವಾಸ ಮಾಡಿದ್ದಾರೆಂಬ ಮಾಹಿತಿ ಸದರ ಖಾನೆಸುಮಾರಿಯಲ್ಲಿ ಇರೊದರಿಂದ ಯಾವ ಭಾಗದಲ್ಲಿ ರಸ್ತೆಗಳನ್ನು ಲೊಹ ಮಾರ್ಗಗಳನ್ನು ಅಥವಾ ನೀರಿನ ಕಾಲಿವೆಗಳನ್ನು ಮಾಡಿದರೆ ಫಾಇದೆ ಯಾಗುವದು ಇದು ಶುಲಭವಾಗಿ ತಿಳಿಯುವದು—

ಸದರಿ ಖಾನೆಸುಮಾರಿಯಲ್ಲಿ ಹುಚ್ಚರು, ಕಿವಡರು, ಮೂಕರು, ವಗೈರೆ ಜನರ ಬಗ್ಗ್ಯೂನೂ ಮಾಹಿತಿ ಇರೊದರಿಂದ ಆ ದುರ್ದೈವಿ ಜನರದಶಿಂವ ಆಶ್ರಯ ಸ್ಥಾನಗಳನ್ನು ಯೆಲ್ಲಿ ಸ್ಥಾಪಿಸತಕ್ಕದ್ದು ಇದು ಸರಕಾರಕ್ಕೆ ತಿಳೀ ಬರುತ್ತದೆ—

ಸದರಿ ಖಾನೆಸುಮಾರಿಯಲ್ಲಿ ವ್ಯಾಪಾರ ವ ವುದ್ಯೋಗ ಯೆಲ್ಲಿ ಯೆಷ್ಟು ಅವೆ ಇದರ ಮಾಹಿತಿ ಇರುತ್ತದೆ ಅದ್ದರಿಂದ ಕಾರಖಾನೆ ವಗೈರೆಯು ಕೆಲಸ ಮಾಡುವ ಪದ್ಧತಿ ವಗೈರೆ ಸುಧಾರಿಸುವದಕ್ಕೆ ನೆಟ್ಟಗ ಆಗುತ್ತದೆ ಇವರ ಹೊರ್ತು ವುದ್ಯೋಗ ವ್ಯಾಪಾರಗಳು ಯಾವು ಮೊದಲು ಇದ್ದು ಈಗ ಬದಲಾಗಿ ಅವೆ ಅವು ವೃದ್ಧಿಂಗತ ಮಾಡುವದಕ್ಕೆ ಯೇನು ಉಪಾಯ ಮಾಡತಕ್ಕದ್ದು ಇದು ತಿಳಿಯುತ್ತದೆ—

ಮೊದಲಿನ ಖಾನೆಸುಮಾರಿಯಲ್ಲಿ ಬರೊಬರಿ ವ ಪೂರ್ಣ ಮಾಹಿತಿ ಇಲ್ಲದೆ ಇರೋಣದರಿಂದ ಕಲೆಕಟರಸಾಹೆಬರವರು ಯಾವದಾವರೂ ಗ್ರಾಮಕ್ಕೆ ಹೊದಾಗ್ಯೆ ಆ ಗ್ರಾಮದ ಜನರಿಗೆ ವ ಗವುಡಗರಿಗೆ ಮಾಹಿತಿ ಕೇಳೊ ಅವಶ್ಯ ಬೀಳುತ್ತದೆ ಪರಂತು ಈಗ ಮಾಡುವ ಖಾನೆಸು ಮಾರಿ ಮೇ

ಲಿಂಪ ಯೋಕಂದರ ದೇಶದಬಗ್ಗ್ಯೇ ಮಾಹಿತಿ ನಮ್ಮಗಿ ಯುರಡನೆ ಅವರ ಮುದ್ದತು ತಗೊಳದಲೆ ತಿಳಿಯುತ್ತದೆ—

ಗಂಡಸರಬಗ್ಗ್ಯೆ ಯಾವ ಪ್ರಕಾರದ ಮಾಹಿತಿ ಬೇಕೊ ಅದೆ ಪ್ರಕಾರ ಮಾಹಿತಿ ಹೆಂಗಸರಬಗ್ಗ್ಯೆಸೂ ಬೇಕು; ಫಕ್ತ ಇಷ್ಟು ಮಂದಿ ಹೆಂಗಸರು ಇಷ್ಟು ಹುಡುಗರು ಇಷ್ಟೆ ಮಾಹಿತಿ ಕೇಳೋದಲ್ಲದೆ ವಿಶೇಷ ಮಾಹಿತಿ ಕೇಳೋಣಿಲ್ಲ ಇದು ಅವರು ಹೇಳದೆ ಮುಚ್ಚಿಕೊಂಡರೆ ಖಾನೆಸುಮಾರಿಯು ತಪ್ಪು ಆಗಿ ಹೋಗುವದು; ವ ಅದರಿಂದ ಸರಕಾರಕ್ಕೆ ಆ ಗ್ರಾಮವು ಕಡಿಮೆ ಮಹತ್ವವುಳ್ಳದ್ದು ಯೆಂದು ತಿಳಿಯುಲಿಕ್ಕೆ ಕಾರಣ ವಾಗುವದು—

ಈಗಿನ ಖಾನೆಸುಮಾರಿ ಮಾಡುವ ವೃದ್ದಿಶ್ಯೆ ಸರಕಾರಕ್ಕೆ ಕರ ವಗೈರೆ ತಗೊಂಬೋದರಬಗ್ಗ್ಯೆ ಅದೆ ಹೀಂಗೇನು ಇಲ್ಲ, ಫಕ್ತ ಮೇಲೆ ಬರದ ಮಾಹಿತಿಬಗ್ಗ್ಯೆ ಬೇಕಾಗಿರುತ್ತದೆ. ಇದು ಪೂರಾ ಧ್ಯಾನದಲ್ಲಿಡ ಬೇಕು—

ಸದರಿ ಖಾನೇಸುಮಾರಿ ಮಾಡೋಣದರಿಂದ ಕರ ಜ್ಯಾಸ್ತಿ ಕೂಡಸುವ ವೃದ್ದಿಶ್ಯೆ ಸರಕಾರದ್ದು ಇಲ್ಲ ಅಂತ ತಿಳಸುವ ಕಾರಣ ವಿಲ್ಲ, ಯಾಕಂದರೆ ಆ ಜನರಿಗೆ ಅನಮಾನ ಹುಟ್ಟೇತು. ಕರ ಕಟ್ಟುತಾರೆಂದು ಅವರು ಅಂದರೆ ಮಾತ್ರ ಸರಕಾರ ವೃದ್ದಿಶ್ಯೆ ಹೀಂಗ ಇರೋಣಿಲ್ಲ ವೆಂಬ ಸಮಜು ಕೊಟ್ಟು ಅವರ ಮೂರ್ಖ ಸಮಜೂತ ದೂರ ಮಾಡರಿ—

ತಿಳಿಯಿಯೋದು ತಾರಿಖು ೨೨ ಮಾಹೆ ಜನವರಿ ಸಂ ೧೮೭೨

ಇಶಿನಿ—

(Signed) Hanmant Ramchandra.

ಡಿ. ಅ. ಇ. ಜಿಲ್ಹಾ ಕಲಾದಗಿ

ನಂಬರು ೯೬೯

ನೋಟಿಸು.

ಕಲಾದಿಗಿ ಜಿಲ್ಹೆಯೊಳಗಿನ ಯಾವತ್ತು

ಸ್ಕೂಲ ಮಾಸ್ತರರಿಗೆ—

ತಿಳಿಪಡಿಸುವದೇನಂದರೆ—ನಾವು ಸಾರವಾಡ ಸಾಲಿಯ ಪರಿಕ್ಷೆಕ್ಕೆ ಹೋದಾಗ್ಗೆ ಸಾಲಿಯಲ್ಲಿ ಹೊಲಸು ಯಿದದ್ದು ನಜರಿಗೆ ಬಂತು ಸಾಲಿಯು ಕಸಾ ತಗದು ಸ್ವಛ ಮಾಡಿದ್ದಿಲ್ಲ—ಸಾದಿಲವಾರ ನೇಮಣೂಕೆ ಶಿಗತ್ತಿದ್ದು ಹೀಗೆ ಹೊಲಸ ಯಿಡುವದು ಅಗದಿ ಗೈರಕೆಲಸವದೆ ಈಬಗ್ಗೆ ಆ ಸಾಲಿಯ ಮಾಸ್ತರರಿಗೆ ಒಂದು ಸಾರಿ ಸಮಜು ಕೊಟ್ಟು ಯಾವತ್ತು ಮಾಸ್ತರರು ಲಕ್ಷ್ಯದಲ್ಲಿಡುವದರ ಸಲುವಾಗಿ ಈ ನೋಟಿಸು ಪ್ರಶಿದ್ಧ ಮಾಡಿರುತ್ತದೆ— ಈ ನೋಟಿಸಿನ ವಿರುದ್ಧ ಯಾವ ಸ್ಕೂಲ ಮಾಸ್ತರರು ನಡಿಯುತ್ತಾರೆ ಅವರ ಮೇಲೆ ನಾವು ನಾಖುಷ ಆವೇವು ತಿಳಿಯುವದು—ತಾ॥ ೨೩ ಮಾಹೆ ಜ್ಯಾನೆವಾರಿ ಸನ್ನ ೧೮೭೨

(Signed) Hanmant Ramchandra.

ಡಿ. ಇ. ಇ. ಜಿಲ್ಹಾ ಕಲಾದಗಿ.

ಸ್ಮರಣ ವಹಿ ಯಿಲ್ಲವೆ ರೋಜನಿಶಿ.

೧೮೭೨ನೇ ವರುಷದಬಗ್ಗೆ

ತಾವು ನಿತ್ಯದಲ್ಲಿ ಏನೇನ ಮಾಡುತ್ತೇವೆಯೋ ನೋಡುತ್ತೇವೆಯೋ ಅದು ನೆನಪಿಗಾಗಿ ಬರೆದಿಡುವದು ಮಹತ್ವಪುಳ್ಳದ್ದುಂಟು. ಕಾರಣ ಅದಕ್ಕೆ ತಕ್ಕವಾದ ಸಾಧನವೆಲ್ಲ ಜನರ ಬಳಿಯಲಿರುವದು ಅವಶ್ಯಕವಾದದ್ದೆಂದು ಈ ವಹಿಯು ಕನ್ನಡಿಗರಿಗೋಸ್ಕರ ಸಿದ್ಧ ಮಾಡಲ್ಪಟ್ಟಿದೆ. ಇದರ

ಲ್ಲಿ ಪಂಚಾಂಗದೊಳಗಿನ ಎಲ್ಲ ಸಂಗತಿ ಯಿದ್ದು ಪ್ರತಿ ತಾರೀಖಿನ ಕೆಳಗೆ ಮಜಕೂರ ಬರೆಯುವದಕ್ಕೆ ಜಾಗೆಯುಂಟು. ಇದನ್ನು ಉಪಯೋಗಿಸಿದರೆ ಅದರಿಂದಾಗುವ ಲಾಭವು ತಿಳಿಯಬಹುದು. ಇದರ ಕ್ರಯವು ಪ್ರತಿ ಒಂದಕ್ಕೆ ಆರಆಣೆ ಹಾಗು ಬಂಗೀ ಖರ್ಚು ಎರಡ ಆಣೆ ಬೀಳುವದು. "ಪ್ರಣೇ ಲೋಕಕಲ್ಯಾಣೇಚ್ಛು" ಅಫೀಸಿನಲ್ಲಿಯೂ "ಬೆಳಗಾವೀಸಮಾಚಾರ" ಅಫೀಸಿನಲ್ಲಿಯೂ ಕ್ರಯದ ಹಣವನ್ನಾಗಲಿ ಟಿಕೀಟುಗಳನ್ನಾಗಲಿ ಕಳುಹಿಸಿದರೆ ಪಹಿಗಳು ರವಾನಿಸಲ್ಪಡುವವು. ತಾ|| ನೇ ಡಿಸೆಂಬರ ೧೮೭೧ನೇ ಇ||

ಸದಾಶಿವ ಶಿವರಾಮ ಗಳತಗೆ

ಶಾಲಾಪತ್ರಕವು.

ಪುಸ್ತಕ ೬] [ಸಂಚಿಕೆ ೧೨.

ಬೆಳಗಾವಿ, ಮಾಹೆ ಮಾರ್ಚ ೧೮೬೨.

Natural Philosophy.

ಪದಾರ್ಥವಿಜ್ಞಾನವು.

೧೮ ಬೇರೆ ಬೇರೆ ಘನತ್ವವುಳ್ಳ ಪದಾರ್ಥಗಳೊಳಗಿಂದ ಹೋಗುವಾಗ ಪ್ರಕಾಶವು ವಕ್ರವಾಗುವ ಕಾರಣದಿಂದ ಬಿಸಿಲು ಕಾಲದ ದಿವಸಗಳಲ್ಲಿ ಸುಂದರವಾದ ಚಮತ್ಕಾರಗಳು ದೃಷ್ಟಿಗೆ ಬೀಳುತ್ತವೆ. ಕಪ್ಪು ಬಣ್ಣದ ವಡವೆಗಳು ಸೂರ್ಯನ ಕಿರಣಗಳೊಳಗಿಂದ ಬಹಳ ಕಾವೇರುವವು, ಪ್ರಕಾಶವನ್ನು ನುಂಗಿ ಪುನಃ ಹೊರಗೆ ಬಿಡುತ್ತವೆ. ಅದರಿಂದ ಅವುಗಳಿಗೆ ಹೊಂದಿದ್ದ ಹವೆಯು ಸುತ್ತುಮುತ್ತಲಿನ ಹವೆಗಿಂತ ಹೆಚ್ಚು ವಿರಲವಾಗಿ, ಮೇಲಕ್ಕೆ ಏರಿ ತನಗಿಂತ ಹೆಚ್ಚು ಘನವಾದ ಹವೆಗೆ ಸ್ಥಲ ಕೊಡುತ್ತದೆ. ಆದರೆ ಈ ವಿರಲ ಹವೆಯು ಮೇಲಕ್ಕೆ ಏರುವಾಗ ಗಾಳಿಯಿಂದಲೂ, ಬೇರೆ ಅನೇಕ ಕಾರಣಗಳಿಂದಲೂ, ಹೊಯ್ದಾಡುತ್ತಿರುತ್ತದೆ. ಅದರಿಂದ ಈ ಹವೆಯು ಆಚೆಯಲ್ಲಿದ್ದ ವಡವೆಗಳಿಂದ ಕಿರಣಗಳು ನಮ್ಮ ಕಣ್ಣುಗಳೊಳಗೆ ಬರುವಾಗ ಈ ಹವೆಯೊಳಗಿಂದ ಹಾಯ್ದು ಬರುತ್ತಿದ್ದ ಕಾರಣ, ಆ ವಡವೆಗಳು [illegible]ಗಳಲ್ಲಿ ತೇಲಾಡುವಹಾಗೆ ತೋರುತ್ತವೆ. ಮಧ್ಯಾಹ್ನದ

ಬಿಸಿಲಿನಲ್ಲಿ ಮಾರ್ಗಸ್ಥರಿಗೆ ಈ ಬಗೆಯಾಗಿ ತಮ್ಮ ಮುಂದೆ ಕಾಣುವ ಭೂ ಪ್ರದೇಶವೆಲ್ಲ ನೀರೊಳಗೆ ಮುಳುಗಿ ತೆರೆಗಳಲ್ಲಿ ಅಲ್ಲಾಡುತ್ತಿದ್ದಹಾಗೆ ತೋರುತ್ತದೆ. ಇದಕ್ಕೇ ನಾವು ಮೃಗಜಲವೆಂದೆನ್ನುತ್ತೇವೆ. ಯಾಕಂದರೆ ಜಿಗರೆಗಳು ಮಧ್ಯಾಹ್ನದಸಮಯದಲ್ಲಿ ನೀರಡಿಸಿದಾಗ ಈ ವಿಧದ ತರಂಗಗಳನ್ನು ದೂರ ನೋಡಿ, ಅವು ನಿಜವಾಗಿ ನೀರಿನ ತರಂಗಗಳೇ ಯೆಂದೆಣಿಸಿ, ಆ ನೀರನ್ನು ಕುಡಿಯುವದಕ್ಕೋಸ್ಕರ ಮುಂದಮುಂದಕ್ಕೆ ಓಡಿದಹಾಗೆ ಆ ನೀರು ದೂರದೂರ ಹೋದಂತೆ ತೋರಿ, ಅವುಗಳಿಗೆ ಕಡೆಯಲ್ಲಿ ನೀರೇ ಸಿಕ್ಕುವದಿಲ್ಲ. ಹೊಗೆ ಹಡಗಗಳಲ್ಲಿ ಹೊಗೆಯುಬಂಬಿಗೆ ಹೊಂದಿದ್ದ ಹವೆಯೊಳಗಿಂದ ಆಚೆಯ ಪದಾರ್ಥಗಳನ್ನು ನೋಡಿದರೆ, ಅವುಗಳಾದರೂ ಹೀಗೇ ಕಾಣುತ್ತವೆ. ಯಾಕಂದರೆ ಆ ಬಂಬು ಕಾಯ್ದಿದ್ದಕಾರಣ, ಅದಕ್ಕೆ ಹೊಂದಿದ್ದ ಹವೆಯು ಹೆಚ್ಚು ವಿರಲವಾಗಿರುತ್ತದೆ.

೧೯ ಸಮುದ್ರದ ದಡಗಳೂ, ಹಡಗಗಳೂ, ಬೆಟ್ಟಗಳೂ ಪ್ರಾಪ್ತಾಪ್ತ ದೂರಿನಿಂದ ನೋಡಲಾಗಿ ಮೇಲಕ್ಕೆ ಏರಿದಹಾಗೆ ಕಾಣುತ್ತವೆ. ಇದಾದರೂ ಕಿರಣ ಪರಾವರ್ತನದಲ್ಲಿ ಹೆಚ್ಚು ಕಡಿಮೆ ಯಾಗುವದರಿಂದಲೇ ಆಗುತ್ತದೆ. ಈ ವಿಧದ ದರ್ಶನ ಚಮತ್ಕಾರಗಳು ಮೆಸೀನಪಟ್ಟಣದನೆರೆಯಲ್ಲಿದ್ದ ಸಾಮುದ್ರಧುನಿಯಲ್ಲಿ ಬಹಳ ಕಾಣುತ್ತವೆ. ಇವುಗಳಿಗೆ ಇತಲಿಯು ಜನರು"ಫಾಟಾಮೋರ್ಗನಾ"ಯೆಂದೆನ್ನುತ್ತಾರೆ. ಸೂರ್ಯೋದಯಕಾಲದಲ್ಲಿ ಕಿರಣಗಳು ೪೫ ಅಂಶಗಳ ವಕ್ರತೆಯಿಂದ ರೆಜ್ಜಿಯೋ ಯೆಂಬ ಸಮುದ್ರದಲ್ಲಿ ಬೀಳುತ್ತಿರುತ್ತವೆ. ಆಗ ಮಳೆಯಿಂದಲೂ,ಗಾಳಿಯಿಂದಲೂ ಸಮುದ್ರದ

ನೀರು ಅಲ್ಲಾಡದೆ ಇದ್ದು, ಪಟ್ಟಣದೊಳಗಿನ ಜನರು ಯೆತ್ತರವಾದ ಪ್ರದೇಶದಲ್ಲಿ ಸೂರ್ಯನ ಕಡೆಗೆ ಬೆನ್ನು ಮಾಡಿ ಸಮುದ್ರದೊಳಗೆ ನೋಡುತ್ತ ನಿಂತರೆ, ಅವರಿಗೆ ಆ ಸಮುದ್ರದಮೇಲೆ ಯೆಣಿಕೆಯಿಲ್ಲದಷ್ಟು ಕಂಬಗಳೂ, ಕಮಾನುಗಳೂ, ಕೋಟೆಗಳೂ, ಕೊತ್ತಳಗಳೂ ಅತಿಸ್ಪಷ್ಟವಾಗಿ ಕಾಣುತ್ತವೆ. ಇದೇಮೇರಿಗೆ ಪಟ್ಟಣದೊಳಗಿನ ಯೆತ್ತರವಾದ ಗೋಪುರಗಳೂ, ದೊಡ್ಡ ಮಂದಿರಗಳೂ, ಕಿಡಿಕಿಗಳೂ, ಬನಗಳೂ, ಮನೋಹರವಾದ ಬೈಲುಗಳೂ, ಅವುಗಳಲ್ಲಿ ಮೇಯುವ ದನಗಳೂ, ಅಸಂಖ್ಯ ಮನುಷ್ಯರ ಸಮುದಾಯಗಳೂ, ಬೇರೆ ಹಲವಿಧದ ಚಮತ್ಕಾರಗಳೂ ಅಸಂಖ್ಯವಾಗಿ ಕಾಣುತ್ತವೆ.

ಕಿರಣಪರಾವರ್ತನವು.

೨೮ನೇ ಅಧ್ಯಾಯ.

ಪರಾವರ್ತನ ನಿಯಮಗಳೂ, ಪತನ ಪರಾವರ್ತನ ಕೋನಗಳೂ, ಗೋಲಾಂತರ ಗೋಲಬಾಹ್ಯ ಪೃಷ್ಠಭಾಗಗಳಿಂದ ಪರಾವರ್ತನವೂ, ಕನ್ನಡಿಗಳೂ, ಕೇಂದ್ರ ಪ್ರದೇಶಗಳೂ, ರಥಗಳ ದೀಪಗಳೂ—

೨೦ "ಕಿರಣಪರಾವರ್ತನ" ವೆಂಬದೊಂದು ಸ್ವತಂತ್ರ ಶಾಸ್ತ್ರವೆಂದು ಯೆಣಿಸ್ಪಡುತ್ತದೆ. ಇದರಲ್ಲಿ ಮೇಲೆ ಹೇಳಿದ ವಿಷಯಗಳೆಲ್ಲ ಸಂಗ್ರಹಿಸಲ್ಪಡುತ್ತವೆ.

೨೧ ಗೋಡೆಯ ಮೇಲೆ ಚೆಂಡನ್ನು ಅಪ್ಪಳಿಸಿದರೆ ಅದು ಹಿಂದಕ್ಕೆ ಪುಟಿಯುವದು. ಇದೇ ಮೇರಿಗೆ ಕಿರಣಗಳು ಪ್ರೊಢವೆಗಳ ಮೇಲೆ ಬಿದ್ದು ಹಿಂದಿರುಗುತ್ತವೆ. ಈ ಹಿಂದಿರುಗುವಿಕೆಗೆ ದರ್ಶನಾನುಶಾಸನ ಶಾಸ್ತ್ರದಲ್ಲಿ ಪರಾವರ್ತನ

ನ ವೆಂದೆನ್ನುತ್ತಾರೆ.

೨೨ ಗೋಡೆಯ ಮೇಲಿಂದ ಹಿಂದಕ್ಕೆ ಪುಟಿಯುವ ಚೆಂಡು ವೊದಲು ಹೋಗುವಾಗ ಲಂಬ ರೇಖೆಯಿಂದ ಹೋಗಿದ್ದರೆ, ಅದು ಅದೇ ಲಂಬ ರೇಖೆಯಲ್ಲಿ ಹಿಂದಿರುಗುವದು. ಆದರೆ ಅದು ವಾರೆಯಾಗಿ ಹೋಗಿ ಗೋಡೆಗೆ ಬಡಿದರೆ ಅದು ವೊದಲಿನ ಮಾರ್ಗದಿಂದ ಹಿಂದಿರುಗದೆ, ಅದರ ವಿರುದ್ಧ ದಿಕ್ಕಿನಲ್ಲಿ ಹಾರಿಹೋಗುವದು. ಈ ನಿಯಮವು ಕಿರಣಗಳಿಗಾದರೂ ಸಂಬಂಧಿಸುತ್ತದೆ. ಕಿರಣಗಳು ಪದಾರ್ಥಗಳ ಮೇಲೆ ಯಾವ ಮಾರ್ಗದಿಂದ ಹೋಗಿ ಬೀಳುತ್ತವೆಯೋ, ಆ ಮಾರ್ಗಕ್ಕೆ ಪತನ ರೇಖೆಯೆಂತಲೂ, ಹಿಂದಿರುಗುವ ಮಾರ್ಗಕ್ಕೆ ಪರಾವರ್ತನ ರೇಖೆಯೆಂತಲೂ ಅನ್ನುತ್ತಾರೆ. ಮೇಲೆ ಹೇಳಿದ ನಿಯಮದಿಂದ ವೊಂದು ಅತಿ ಗೌರವವುಳ್ಳ ನಿಯಮವು ಫಲಿತವಾಗುತ್ತದೆ. ಅದೇನಂದರೆ, "ಪತನಕೋನವು ಯಾವಾಗಲೂ ಪರಾವರ್ತನ ಕೋನಕ್ಕೆ ಸರಿಯಾಗಿರುತ್ತದೆ." ಈ ನಿಯಮದ ಬಗ್ಗೆ ಹಿಂದೆ ವೊಂದು ಪ್ರಸಂಗದಲ್ಲಿ ವಿಸ್ತಾರವಾಗಿ ಬರೆದಿರುತ್ತೇವೆ.

Extracts from Rajashekhara.

ರಾಜಶೇಖರದೊಳಗಿನ ಶ್ಲೋಕಗಳು.

ಬತ್ತದ ಗದ್ದೆಗಳ ವರ್ಣನೆ.

ಕಂದ॥ ಗಿಳಿಗಳಬಳಗಂಗಳ್।
ನಿಳಿದೊಳ್ ಪೊಕ್ಕೆಳಸಿಬಳಸಿ ಖರಚಂಚುಪುಟಂ॥
ಗಳಸುಡಿವುದೆಂದಗಿದುನೀ।
ಗರ್ಳನೊಳಪೊಕ್ಕಂತೆನಲ್ಲ ಗರ್ವಗಳ್ ಸೆಗುಂ॥ ೧॥

ಅರ್ಥ—ಗಿಳಿಗಳ ಸಮೂಹವು ಬಯಿಸಿ ಗರಗರನೆ ಇಳಿದು ಒಳಗೆ ಹೊಕ್ಕು ಸುತ್ತುಗಟ್ಟಿ ತೀಕ್ಷ್ಣವಾದ ತಮ್ಮ ಚಂಚುಗಳಿಂದ ಕುಕ್ಕಿ ಕುಕ್ಕಿ ಮುರಿಯುವವೆಂದು ಅಂಜಿ* ನೀರೊಳಗೆ ಹೊಕ್ಕವೋ, ಏನೋ ಅನ್ನುವಹಾಗೆ ನೀರು ತುಂಬಿದ ಬತ್ತದ ಗದ್ದೆಗಳು ಒಪ್ಪುದವು.

ಕಂದ॥ಪಾಲ್ದುಂಬಿದ ಸಾಲ್ದೆನೆಗಳ।
ನೆಲ್ದುರುಗಲನೋಲ್ದು ಕೀಳೆಗಿಳಿಚಯಂಭರದಿಂ॥
ಜೋಲ್ದಿಳೆಗಿಳಿವಂತಿರೆಬಂ।
ಬಲ್ದೆರೆಯೊಳ್ಪೊಳೆದು ಮಡಿಯ ನೀರೊಳ್ತೋರ್ಕುಂ
॥೨॥

ಅರ್ಥ—ಹಾಲು ತುಂಬಿದ ಬತ್ತದ ತೆನೆಗಳ ಸಾಲುಗಳನ್ನು ಗಿಳಿಗಳು ಸೀಳಲಾಗಿ, ಅವು ಅಂಜಿ ಭೂಮಿಯೊಳಗೆ ಇಳಿಯುತ್ತವೆಯೋ ಏನೋ ಅನ್ನುವಹಾಗೆ ಮಡಿಯ ನೀರ ತೆರೆಗಳೊಳಗೆ ಪ್ರತಿ ಬಿಂಬಿಸಿದ ಬತ್ತದ ತೆನೆಗಳು ಒಪ್ಪುದವು.

॥ಚಂಪಕಮಾಲಾವೃತ್ತ॥

ಬಳಸಿರೆ ನೀಲ ನೀರಜವನಂ ಕೆರೆಯಂಚಿನವೋಲ್ಪೊಡ
ರ್ಪನಿಂ।
ಬೆಳೆವೆಳೆಗೆಂಪನಾಂತ ಕದೆಗರ್ದೆಗಳಂತರವರ್ಣದಂತೆ ಕೆಂ॥
ಗೊಳಿಸೆ ಶುಕಾಳಿ ಚಿತ್ರ ಮನೆ ರಂಜಿಸೆಪಚ್ಚೆಯ ಶಾಲಿಯುಂ
ಧರಾ।

---

*ಅಂಜಿದವರು ನೀರೊಳಗೆ ಹೋಗುತ್ತಾರೆ, ಅಥವಾ ಹುಲ್ಲು ಕಡ್ಡಿಯನ್ನು ಕಚ್ಚುತ್ತಾರೆ ಎಂದು ಕಾವ್ಯಾದಿಗಳಲ್ಲಿ ಬರೆಯುತ್ತಾರೆ.

ಲಲನೆವಿಳಾಸದಿಂ ತಳೆದಳೆಂದೆನೆ ಶಾಲಿಯ ಗದ್ದೆ ತೋರು
ಗುಂ॥೩॥

ಅರ್ಥ—ಸುತ್ತು ಮುತ್ತಿನ ನೀಲೋತ್ಪಲದ ಬನವು ಕರೆ ಅಂಚಿನಹಾಗೆ ಒಪ್ಪಲು, ಶೋಭೆಯಿಂದ ಬೆಳೆದು ಎಳೆಗೆಂಪನ್ನು ಪಡೆದ ಕಳೆಯ ಗದ್ದೆಗಳು ಒಳಗಿನ ಬಣ್ಣದಹಾಗೆ ತೋರಲು, ಮೇಯಲಿಕ್ಕೆ ಬಂದು ಕುಳಿತ ಗಿಳಿಗಳು ಚಿತ್ರದಹಾಗೆ ರಂಜಿಸಲು, ಭೂಮಿಯೆಂಬ ಸ್ತ್ರೀಯು ಹಸುರ ಶೀರೆಯನ್ನು ಉಟ್ಟುಕೊಂಡಳೋ ಏನೋ ಅನ್ನುವಹಾಗೆ ಬತ್ತದ ಗದ್ದೆಗಳು ತೋರುವವು.

ಕಂದ॥ಅರಗಿಳಿ ಸೀಳ್ದೊಡೆ ಪಾಡಿಯೋ।
ಳ್ಸರಿದಿರೆ ನೆಲ್ಪಾಲದಂಬುವಂ ಹಂಸಂ ಬೇ॥
ರಿರಿಸುತ್ತಮದೀರ್ಗಂಟಿ ಕಾಣುತೆ।
ಶಿರಮೊಲೆಸಂತೊಲೆವ ಕಳಮೆಗಳ್ಕಣ್ಗೆಸೆಗುಂ॥೪॥

ಅರ್ಥ—ಗಿಳಿಗಳು ತಿನ್ನಬೇಕೆಂಬ ಇಚ್ಛೆಯಿಂದ ಬತ್ತದ ತೆನೆಗಳನ್ನು ಸೀಳಿದ ಕೂಡಲೆ ಅವುಗಳೊಳಗಿನ ಹಾಲು ಮಡಿಯು ನೀರೊಳಗೆ ಸೇರಲು, ಹಂಸಗಳು ನೀರನ್ನು ಬೇರೆ ಮಾಡಿ ಆ ಹಾಲನ್ನು ಕುಡಿಯ ಹತ್ತಿದವು; ಅವುಗಳ ಜಾಣತನವನ್ನು ಕಂಡು ತಲೆ ದೂಗುತ್ತವೋ ಏನೋ ಅನ್ನುವಹಾಗೆ ಬತ್ತದ ತೆನೆಗಳು ಗಾಳಿಗೆ ಒಲೆದಾಡುತ್ತಿದ್ದವು.

ಅರವಟ್ಟಿಗೆಯ ವರ್ಣನೆ

॥ಮಹಾ ಸ್ರಗ್ಧರಾವೃತ್ತ॥

ಎಳೆಗಾಂಗೋಳ್ಗಂಬದಿಂ ಬಾಳೆಯತೊಲೆಯಿ ನಳಿಸ್ಸಾರ
ಕಲ್ಹಾರಪುಷ್ಪಂ।

ಗಳ ಘಂಟಾಶ್ರೇಣಿಯಿಂ ಕೇತಕಿಯದಳದ ಕೀಲ್ಪಂಕ್ತಿಯಿಂ
ಬಾಳವೇಸ್ರ್ಗ||
ಗಳ ಕೇರಂಬಾಲಸತ್ಪಲ್ಲವದ ತೋರಣದಿಂ ಡಿಕ್ಷುದಂಡಂಗ
ಳಿಂ ಕಂ|
ಣ್ಗೆ ಳಕುಂ ನಾನಾಲತಾಂತಪ್ರಸರಸರಯುತಂಗಳ್ಪ್ರಸಾ
ಮಂಟಪಂಗಳ್||೫||

ಅರ್ಥ—ಎಳೆ ಅಡಿಕೆಯ ಮರಗಳ ಕಂಬಗಳಿಂದಲೂ, ಬಾಯು ತೋರಣಗಳಿಂದಲೂ, ಭ್ರಮರಗಳಿಂದ ಅಧಿಕವಾದ ಸೌಂಧಿಯು ಹೂವುಗಳೆಂಬ ಘಂಟೆಯ ಸಾಲುಗಳಿಂದಲೂ, ಕೇದೆ ದಳಗಳ ಸಣ್ಣ ಸಣ್ಣ ಜಂತ್ರಿಗಳಿಂದಲೂ, ಬಾಳದ ಬೇನ ತಟ್ಟಿಯಿಂದಲೂ, ಎಳೆ ತಳಿರುಗಳ ತೋರಣದಿಂದಲೂ, ಬ್ಬುಗಳಿಂದಲೂ, ಹಲವು ತರದ ಹೂವಿನ ಸರಗಳಿಂದಲೂ ಯುಕ್ತವಾದ ಅರಪಟ್ಟಿಗೆಯ ಹಂದರಗಳು ಕಣ್ಣಿಗೆ ತೋರಿವು.

||ಚಂಪಕಮಾಲಾವೃತ್ತ||

ತೊಳಗುವ ಚಂದ್ರಕಾಂತಕಳಶಂ ಬಿಡದಂಬುಜನೇತ್ರೆ
ನೀರನಂ|
ಜುಳಪುಟದಲ್ಲಿ ನಿಂದಿರೆಯೆ ತನ್ನಧರಾಧರರಾಗಮಿಶ್ರಿ
ತೋ||
ಜ್ವಳಮರುಣಾಂಬುವೆಂದು ಸಿಕ್ತನಿಪುರ್ಣದ ನೀಕ್ಷಿಸಿ ಸಕ್ಕೊ
ಡಾಕೆಯು|
ಜ್ವಳದಶನಾಂಶುಮಿಶ್ರ ಮದು ಶಂಕೆಯನೋಡಿಸೆ ಪಾಂಥ
ನಿಂಂಟಿದಂ||೬||

ಅರ್ಥ—ಕಮಲದಹಾಗೆ ಕಣ್ಣುಗಳುಳ್ಳ ಸ್ತ್ರೀಯು ಶು

ಕಾಶಿಸುವ ಚಂದ್ರಕಾಂತದ ತಂಬಿಗೆಯನ್ನು ಹಿಡಿದು ನೀರ
ಸಿ ಬಂದ ಹಾದಿಕಾರನ ಬೊಗಸೆಯೊಳಗೆ ನೀರನ್ನು ಹಣಿಸ
ಗಿ, ಅವಳ ಕೆಂದುಟಿಯ ಕೆಂಪು ಕಾಂತಿಯು ಆ ನೀರೊಳ
ಯುಕ್ತವಾದದ್ದನ್ನು ಕಂಡು ರಕ್ತವೆಂದು ತಿಳುಕೊಂಡು
ಡಿಯದೆ ಸುಮ್ಮನೆ ಕುಳಿತನು, ಅದನ್ನು ಕಂಡು ನಕ್ಕ ಕೂ
ಲೆ ಆಕೆಯ ಹಲ್ಲಿನ ಪ್ರಕಾಶವು ಆ ಸಂಶಯವನ್ನು ಬಿಡಿ
ತು, ಆವಾಗ ಆ ಹಾದಿಕಾರನು ನೀರ ಕುಡಿದನು.

ಕಂದ॥ ಕರತಳಗತಜಳಬಿಂಬಿತ।
ತರುಣೀನೇತ್ರಮನೆ ನೋಡಿಪೆರನೋರ್ವರ್ಗಂತ॥
ತ್ಪರಿಮಳಕೆಂದಿಟ್ಟಿಸುತ್ತಾಂ।
ಬುಗುಹಮಿವೆಂದೀಂಟಲೊಲ್ಲದೀಕ್ಷಿಸುತಿರ್ದಂ॥ ೭॥

ಅರ್ಥ—ಮತ್ತೊಬ್ಬನು ತನ್ನ ಬೊಗಸೆಯೊಳಗಿನ ನೀರೊ
ಳಗೆ ಪ್ರತಿಬಿಂಬಿಸಿದ ನೀರ ಹಣಿಸುವ ಸ್ತ್ರೀಯಳ ಕಣ್ಣು
ಳನ್ನು ಕಂಡು, ಇವು ಸುವಾಸಕ್ಕಾಗಿ ಇಟ್ಟಂಥ ನೀಲೋ
ಲಗಳೆಂದು ತಿಳುಕೊಂಡು ಕುಡಿಯದೆ ನೋಡುತ್ತಿದ್ದನು.

॥ಚಂಪಕಮಾಲಾವೃತ್ತ॥

ಉಗುರ್ಗಳನುಣ್ಗದಿರ್ಗಳವಹಾಂಗೆ ಶಶಿಪ್ರಭೆಸಾರಸ
ಘ
ಸೊಗಯಿಪಸುಯ್ಯಲರ್ಗರಕ್ಕವಾರಿಯೊಳಾಗಿಸೆನಿರ್ಮ
ತ್ವಮಂ
ನೆಗಳ್ದತಿಶೈತ್ಯಮಂ ಮೃದುಸುಗಂಧಮನಿಂದುನಿಭಾಸ್ಯ
ಸೂಸೆಮ
ಗಿರ್ಗಗನೆಪರ್ಗೆ ತಣ್ಣನಾನೆ ತನುಝೊಂಪಿಸೆಕಂಪಿಸೆನೀರನೀ
ಡಿದಂ॥೮॥

ಅರ್ಥ—ನೀರ ಹಣಿಸುವ ಚಂದ್ರಮಣಿಯು ಉಗುರುಗಳ
ಪ್ಪದ ಕಾಂತಿಯು, ಅವಳ ಪ್ರಕಾಶಿಸುವ ಕಡೆಗಣ್ಣಿನ ಪ್ರ
ಸೆಂಬ ಬೆಳದಿಂಗಳು, ಸುಗಂಧದಿಂದ ಸುಖಕೊಡುವ ಆ
ರು ಶ್ವಾಸವು, ಆ ನೀರೊಳಗೆ ನಿರ್ಮಲತ್ವವನ್ನು, ತಂಪ
, ಸುವಾಸವನ್ನು ಉಂಟು ಮಾಡುವವು; ಆ ನೀರ ಕುಡಿ
ವಾಗ ಹಾದಿಕಾರನ ಎದೆಯು ತಣ್ಣಗಾಗಿ ಝುಮ್ಮನೆ ನ
ಗಿತು.

ತೋಟಗಳ ವರ್ಣನೆ.

ಕಂದ॥ ಇರುಳೊಸರ್ವಚಂದ್ರಮಣಿಬಂ।
ಧುರತತ್ಪುರಸಾಲದಂಬುಬಳಯಿಸೆಬಳೆದಾ॥
ಪುರನಂದನವುಂಹರಹರ।
ಸುರನಂದನವೊಂದುಬಣ್ಣಿಸಲ್ಬಗೆವುಗವೇ॥೯॥

ಅರ್ಥ—ಆ ಊರ ಕೋಟೆಗೋಡೆಯು ಚಂದ್ರಕಾಂತದ ಕ
ಗಳು ರಾತ್ರಿಯಲ್ಲಿ ಬೆಳದಿಂಗಳಿಗೆ ನೀರು ಬಿಡುತ್ತಿದ್ದ
ಆ ನೀರು ತೋಟದೊಳಗೆ ಹೋಗುವದರಿಂದ ತೋಟ
ಳಗಿನ ಗಿಡಗಳೂ, ಬಳ್ಳಿಗಳೂ, ಮರಗಳೂ ಸೊಗಸಿನಿಂ
ಬೆಳೆದು ಇಂದ್ರನ ತೋಟದಹಾಗೆ ತೋರುವವು.

ಕಳರವವಿಲ್ಲದಿರ್ದ ಪಿಕನಂಬೆಗಳಾಡದ ಪೂಗೊಳಂಥ
ಳಾ।
ವಳಿಬಳಸಿಲ್ಲದಿರ್ದ ಪೊಸಮಾವಿನ ಮಾತುಗಳಾಡದಿರ್ದ
ನೆ॥
ಣ್ಗಿಳಿಯೊಳಿರಾಜಿ ರಾಜಿಸದ ತಾವರೆ ಪೂಗುಡಿಮಾಡಿತೋ
ರದ।

NOTICES.

ನೋಟಿಸು.

ಕಸಬೇ ಅತ್ತಿಗೇರಿ ತಾಲೂಕ ಬಂಕಾಪುರ ಇಲ್ಲಿಲಿಯ ಹೆಡ್ಮಾಸ್ತರರಾದ ಪರಪ್ಪಾ ಮುಕಬಸಪ್ಪಾ ಯೆಂಬವರ ರಾಜಿನಾಮೆಯು ಮಂಜೂರ ಆಗುವಕ್ಕಿಂತ ಮುಂಚೆ ವರು ತಮ್ಮ ಕೆಲಸದ ಚಾರ್ಜ ಕೊಟ್ಟು ಹೊರಟು ಹೋದಕಾರಣ—ಮೆಹೆರಬಾನ ಎಜೂಕೇಶನಲ್ ಇನಸ್ಪೇಕಟರವರ ಹುಕುಮಿನ ಮೇಲಿಂದ ಸದರ ಮಾಸ್ತರನನ್ನು ಶಾಲಾಕೆಯಿಂದ ತೆಗೆದಿದ್ದೇವೆ—

ತಾ॥ ೩ನೇ ಮಾಹೆ ಮಾರ್ಚ ೧೮೭೨ ಇ. ಮುಕ್ಕಾಮ ವನು;

(Signed) Chanbussappa B. Dharwar.

ಡಿ. ಅ. ಇ. ಜಿಲ್ಹಾ ಧಾರವಾಡ.

ನೋಟಿಸು.

ಯಾವತ್ತು ಮಾಸ್ತರಜನರಿಗೆ ತಿಳಿಪಡಿಸುವದೇನಂದರೆ ವೈಲಿಯನ್ನು ತೆಗೆಯುವವರು ನಿಮ್ಮ ಸಾಲಿಗಳಿಗೆ ಬರುವಕ್ಕೆ ಮೊದಲು ವೈಲಿ ತೆಗಿಸಿಕೊಂಡವರು ತೆಗಿಸಿಕೊಳ್ಳದವರು ಮತ್ತು ವೈಲಿಬಂದು ಹೋದವರು ಇಷ್ಟಿಷ್ಟು ಹುಡುಗರು ಸಾಲಿಯಲ್ಲಿ ಇದ್ದಾರೆಂದು ಒಂದು ಯಾದಿಯನ್ನು ತಯಾರಮಾಡಿ ವ್ಯಾಕಸಿನೇಟರರಿಗೆ ಕೊಡಬೇಕು. ವೈ ತೆಗಿಯುವವರು ನಿಮ್ಮ ಸಾಲಿಗಳಿಗೆ ಬರುವವಕ್ಕೆ ಮೊದಲ ಇಂಥಾದಿವಸ ಬರುವೆವೆಂದು ನಿಮಗೆ ತಿಳಿಸುವರು. ಅವರು

ಪಕಾಲಕ್ಕೆ ಪ್ರತಿತೆಗೆಯುವ ಕೆಲಸಕ್ಕೆ ನಿಮ್ಮಿಂದಾದಷ್ಟು ಸ
ಯವನ್ನು ನೀವು ಮಾಡಬೇಕು. ತಿಳಿಯುವದು.
೭ನೇ ತಾರಿಖೆ ಮಾರ್ಚ ೧೮೭೨ ಇ.

(Signed) R. E. CANDY.
ಅ. ಎ. ಇ. ದಕ್ಷಿಣಭಾಗ.

Correspondence.

ಪತ್ರವ್ಯವಹಾರವು.

ರಾ॥ ರಾ॥ ಪಾಠಪತ್ರಿಕೆಯ ಮಾಲೀಕರಿಗೆ—

ಪವಾಡಿಗಿ ಮಾಸ್ತರನ ವಿನಯಪೂರ್ವಕವಿನಂತಿ. ಈಗ
ಗೆ ಬರೆದಿರುವ ನಾಲ್ಕು ಪಂಕ್ತಿಗಳು ತಮ್ಮ ಕರಕಮಲ
ಉದ್ಭವಿಸುವ ಶಾಲಾಪತ್ರಿಕೆಯಲ್ಲಿ ಪ್ರಸಿದ್ಧಿಸುವಿರೆಂ
ಮಹತ್ವಾಕಾಂಕ್ಷೆಯಿಂದ ಕಳಿಸುತ್ತೇನೆ.

೧ ಕವಿತಾಪದ್ಧತಿಯೆಂಬ ಪುಸ್ತಕದಲ್ಲಿ ಕನ್ನಡಕವಿತಾ
ಡುವನೇಮಗಳು ಬಹುಸರಸವಾಗಿ ಹೇಳಿಹವು ಅದರಲ್ಲಿ
ಗಳನೇಮಗಳು ಸಹ ಸೂಚಿಸಿರುವದು ಏನಂದರೆ, ಪ
ಪದಗಳಂತೆ ಪಪದಗಳು ಇರಬೇಕೆಂದು ಹೇಳಿದೆ.
ದರೆ ಪದಗಳಿಗೆ, ನುಡಿಗಳೆಂತಲೂ ದರುನುಡಿಗಳಿಗೆ ನಾ
ಚರಣಗಳೆಂತಲೂ, ಇರುತ್ತವೆ. ಆದರೆ ಅಂಥಾನುಡಿಗಳ
ದಲಿನಚರಣದ ಆರಂಭದಲ್ಲಿ ಪಲ್ಲವದಂತೆ ಗಣವಿಟ್ಟು
ರಡನೆಚರಣ ಮೊದಲಾದವುಗಳಿಗೆ ದಾವಗಣವಿಟ್ಟರು ಬ
ದೊ, ಅಥವಾ ನಾಲ್ಕು ಚರಣಗಳ ಆರಂಭದಲ್ಲಿ ಪಲ್ಲ
ಗಣದಂತೆ ಇಡಬೇಕೊ. ಎಂಬದಬಗ್ಗೆ ಒಂದು ಸಂಶಯ
ಮೊದಲಿಗೆ ದೇವಗಣ ವಿಟ್ಟು ಆ ಮೇಲೆ ದಾವಗಣ
ರೂ ಚಿಂತಿಯಿಲ್ಲಯೆಂದು ತಿನೇ ನೇಮುವದೆ. ಆದರೆ

ದೇವಗಣವು ಪಲ್ಲವದ ಆರಂಭಕ್ಕೆ ಇಟ್ಟು ಆ ಮೇಲೆ ನು
ಗಳ ಚರಣಗಳ ಆರಂಭಕ್ಕೆ ದಾವಗಣ ಇಟ್ಟರೂ ಚಿಂತೆಯಿ
ಲ್ಲ ಹ್ಯಾಗೆ.

೭ ಏನುತಪ್ರಾಸಿಗೆ ಸಂಭಂಧದಕ್ಷರಗಳು ಇರಬೇಕೆಂದು ನೇಮ
ವುಂಟು. ಆದರೆ ಆ ಸಂಭಂದದಕ್ಷರಗಳಿಗೆ ಬೇಕಾದ ಒತ್ತಕ್ಷ
ರಗಳು ಕೇರಿದರೆ ಪ್ರಾಸಿನಲ್ಲಿ ಇಡಲಿಕ್ಕೆ ಬರುತ್ತದೋ ಇ
ಲ್ಲೋ.

ಸಾಂಪ್ರತು ಕವಿತಾ ಪದ್ಧತಿಯಲ್ಲಿ ಹೇಳಿರುವ ನೇಮದ
ತೆ ಹಿಂದೆ ಮಾಡಿದ ಕವಿಗಳ ಪದಗಳು ಈಗ ಮಾಡುವ ನಾ
ಕ ಮೊದಲಾದ ಪದಗಳು ಸರಿ ನೋಡಿದರೆ, ಒಂದೂ ಕ
ನೇಮಕ್ಕೆ ಸರಿಯಾಗವಲ್ಲವು. ಆದರೆ ಇವರು ದಾವ ಆಧಾ
ದ ಮೇಲಿಂದ ಮಾಡಿರುವರು.

ಈ ಪ್ರಕಾರ ಸಂಶಯು ಬಂದದರಿಂದ ಈ ಸಂಶಯುವು ತ
ಮು ಶ್ರೋತರ್ಸಅಸ್ವರ ಕಡೆಯಿಂದ ನಿವಾರಣ ವಾಗುವದಿಲ್ಲ
ದು ಧೃಡಸಿಕ್ಷಯು ಮಾಡಿಕೊಂಡು ತಂಮು ಕಡಿಗೆ ಕಳಿಸಿ ಇ
ದ್ಧೇನೆ ತಮಗೆ ಏಹಿತ ಕಂಡರೆ ಛಾಪಿಸಿ ಪ್ರಸಿದ್ಧ ಮಾ
ಬೇಕು.

ಮೇಲಿನ ಸಂಶಯುವು ಕೆಲವಟ್ಟು ಗೃಹಸ್ಥನು ಸೂಚಿಸಿದ
ರಿಂದಲೂ, ನ ಗೂ ನಿಜವಾಗಿ ತೋರಿದ್ದರಿಂದಲೂ, ಬರದು
ಕಳಿಸಿ ಇದ್ದೇನೆ. ಇದರಲ್ಲಿ ಏನೋನಾದರು ತಪ್ಪುಯಿದ್ದ
ತಿದ್ದಿ ಶುದ್ಧ ಮಾಡಬೇಕು. ತಾರಿಖು ೮ ಮಾಹೆ ನವಂಬ
ಸನ್ ೧೮೭೧ ಇ.

ಹನುಮಂತ ಭೀಮಾಜಿ ಹುನಗುಂ
ಕರ ಸ್ಕೂ. ಮಾ. ನಂದವಾಡಿಗಿ.

ನೋಟೀಸು

ಕಲಾದಗಿ ಜಿಲ್ಹೆಯೊಳಗಿನ ಯಾವತ್ತು ಸ್ಕೂಲ ಮಾಸ್ತರ ಜನರಿಗೆ —
ರಿಮೂಟಿ ಎ. ಇ. ಜಿಲ್ಹಾ ಮಜಕೂರ ಇವರ ಕಡೆ ಯಿಂದಾ ತಿಳವಡಿಸುವದೇನಂದರೆ, ಇನ್ನು ಮುಂದೆ ನಿಮ್ಮ ಹಜರಿ ಕಿರ್ದಿಗೆ ಬರದಂತೆ ತುಂಬಬೇಕು.

	ಹೆಸರುಗಳು —	ತಾರೀಖುಗಳು																	
		೧	೨	೩	೪	೫	೬	೭	೮	೯	೧೦	೧೧	೧೨	೧೩	೧೪	೧೫	೧೬	೧೭	೧೮
೧	ಬಾಳಕೃಷ್ಣ ಗೋವಿಂದ	X	\	/	0	X	X	X	X	ಶಿ.	ಶಿ.	X	X	X	0	\	\	\	X
೨	ಲಕ್ಷ್ಮಣರಾವ ವೆಂಕಟೇಶ —	X	X	X	X	X	X	X	X	X	ಶಿ.	ಶಿ.	0	ರ	ರ	ರ	ರ	\	/
೩	ಶಿವರಾಮ ರಾಮಚಂದ್ರ	X	X	X	\	\	ರ	ರ	ಶಿ.	X	X	X	X	X	0	0	0	ಶಿ.	ಶಿ.
೪	ಹನುಮಂತ ಬಳವಂತ	X	X	X	X	X	X	X	X	X	X	X	X	X	X	X	X	X	X

ಒಂದು ದಿವಸ ಪೂರಾ ಹಜರ ಇದ್ದರೆ. —————— × ಈ ಗುರ್ತು ಮಾಡಬೇಕು.

ಮುಂಜಾನೆ ಮಾತ್ರ ಹಜರಿದ್ದರೆ. —————— / ಈ ಗುರ್ತು ಮಾಡಬೇಕು.

ಮಧ್ಯಾಹ್ನದಲ್ಲಿ ಮಾತ್ರ ಹಜರಿದ್ದರೆ. —————— \ ಈ ಗುರ್ತು ಮಾಡಬೇಕು.

ಪೂರಾ ದಿವಸ ಗೈರಹಜರಿದ್ದರೆ. —————— 0 ಈ ಗುರ್ತು ಮಾಡಬೇಕು.

ರೋಗ ಇದ್ದರೆ. —————— ರೋ. ಈ ಗುರ್ತು ಮಾಡಬೇಕು.

ರಜಾ ಕೊಟ್ಟಿದ್ದರೆ. —————— ರ ಈ ಗುರ್ತು ಮಾಡಬೇಕು

(I) (II) ಈ ಗುರ್ತುಗಳು ಇನ್ನು ಮುಂದೆ ಹಾಕುತ್ತಾ ಹೋಗಬಾರದು. ತಿಳಿಯಬೇಕು
ತಾರೀಖು ೨೭ ನೇ ಮಾಹೆ ಫೆಬ್ರುವರಿ ಸನ್ ೧೮೬೫ ನೇ ಇಸವಿ-

(Signed) Hunmant R.

ಡಿ. ಎ. ಇ. ಜಿಲ್ಲಾ ಕಲಾದಗಿ.

ತಾ ೧೮—೧೨—೭೧

ಕಾರವಾಡ

ಕರ್ನಾಟಕ ಶಾಲಾ ಪತ್ರಕರ್ತರಭಿಮುಖಕ್ಕೆ
ವಿನಯದಿಂದೊಬ್ಬ ವಿದ್ಯಾರ್ಥಿಯ ವಿನಂತಿಯು—

ತಮ್ಮಿತ್ತ್ರಲಾಗಿನ ಸಂಚಿಕೆಯೊಳ್ ನೂತನಾಕ್ಷರಂಗಳಂ ನೀಟ್ಟೆದಾಗಾದಾನಂದವಂ ವರ್ಣಿಸಲಾರೆ. ರಾಜಶೇಖರದೊಳಗಣ ಕೆಲ ಶ್ಲೋಕಾರ್ಥಂಗಳಂ ಬಲ್ಲವರ್ಗದ್ಯರೂಪದಿಂ ಬರೆಯುವದರಿಂಗರಿಯಲಾರದವುಗೆ ಭಿನ್ನ ಪದಗಳಂ ಬಿಡಿಸಿರ್ಪ ಪದಗಳಂ ತಿಳಿಯುತ್ತಲೆ ಭಾರಮಕ್ಕುಂ ನಿದಾನಂ ನಾನೀ ಪೆರಡು ಶ್ರೇಣಿಯುಂ ಪೇಳು ಗ್ರಾಮದತ್ತಣಿಂ ಪೊರಡುವ ಕರ್ನಾಟಕಶಾಲಾಪತ್ರಿಕಾಭಿಧಾನಮಂ ಪೊಂದಿದ ಮಾಸಿಕ ಪುಸ್ತಕದೊಳಂಕಿಸುವಿರೆಂದೆಂಬುತ್ತೆ. ಕತ್ರೆಯಿಂ ಬರವೆನು. ಪ್ರತಿ ತಿಂಗಳೊಳ್ನಮ್ಮ ಮುದ್ರಾಕ್ಷರ ಶಾಲೆಗೆ ಶ್ಲೋಕಾರ್ಥಮಂ ಗದ್ಯರೂಪದಿಂ ಬರೆದು ಕಳಿಸುವರ್ಗಂಧಿಯಿಂ ಕೊಡಿದ ಶಬ್ದಂಗಳಂ ಅಧಿಕ ಚಿನ್ಹದಿಂ ಚಿನ್ಹಿತಮಾಗಿ ನಮ್ಮೆಲ್ಲರ ಕಲ್ಯಾಣಕ್ಕೋಸ್ಕರೀಪರೆಂದು ಮನಃಪೂರ್ವಕ ಬೇಡುವೆಂ.

ರಾಜಮಾನ್ಯ ರಾಜಶ್ರೀ ಕನ್ನಡ ಶಾಲಾ ಪತ್ರಕರ್ತ
ಮುಕ್ಕಾಮ ಬೆಳಗಾವ ಇವರು ಪರಾಂಬರಿಸುವಬಗ್ಗೆ

ವಿದ್ಯಾ—ಬುದ್ಧಿಮಾನ್ಸ್ತರ ಜನರಲ್ಲಿ ಒಬ್ಬನಾದ ನನ್ನ ಅರಿಕೆಯು ನ್ಪ್ಪಿಕ್ಕೆಕೊಂಡು ಈ ಕೆಳಗೆ ಬರದ ನಾಲ್ಕು ಪಂಕ್ತಿಗೆ ಸ್ಥಳ ಕೊಡಬೇಕಾಗಿ ಬೇಡಿಕೊಳ್ಳುತ್ತೇನೆ.

ಯಾವನು ಬೇರೆಯವನ ವಿಷಯದಲ್ಲಿ ದ್ರೋಹವನ್ನು

ಆಗಲಿ ಯಾ ಹಿತವನ್ನೇ ಆಗಲಿ, ಮಾಡುವಬಗ್ಗೆ, ತನ್ನ ಮನಸಿನಲ್ಲಿ ಆಲೋಚಿಸಿದಾಗ ಆ ಭಾಗವು ಈ ಎರಡನೇಯವನ ಮನಸಿಗೆ ಸೂಚಿಸುವದರಿಂದ ಈ ಬೇರೆಯವನು ಸಾಹಾ ಅವನ ವಿಷಯದಲ್ಲಿ ಸಂಶಯವಾಗಲೀ, ಪ್ರೀತಿಯಾಗಲೀ ಬೆಳಸುವನು. ಇದರಿಂದ;(ಶರೀರಭಿನ್ನಂ ಪರಮಾತ್ಮ ಮೇಕಂ||) ಅಂದರೆ ಶರೀರವು ಬೇರೆಯಾಗಿದ್ದರು ಪರಮಾತ್ಮ ಎಂಬ ಪದಾರ್ಥವು ಎಲ್ಲರಲ್ಲಿಯೂ ಒಂದೇಯಾಗಿರುತ್ತದೆ. ಎಂದು ನಿಶ್ಚಯವಾಗುತ್ತದೆ. ಈ ವಿಷಯ ಒಂದು ಕಥೆಯುಂಟು.

ಒಂದು ರಾಜಧಾನಿಯಲ್ಲಿರುವ ಅರಸಿಗೆ, ಬಹಳ ಸ್ನೇಹಿತನಾದ, ಒಬ್ಬ ಸಾವಕಾರನು ಗಂಧದ ಕಟ್ಟಿಗೆ ವ್ಯಾಪಾರ ಮಾಡುತ್ತಿರುವಾಗ ಒಂದು ಸಾರೆ ಸುಮಾರು ಒಂದು ಲಕ್ಷ ರುಪಾಯಿಯ ಗಂಧ ಸರಕನ್ನು ದಾಸ್ತಾನ ಮಾಡಿದನು. ಮುಂದೆ—೩ ೪ ವರ್ಷ ಕಳೆದರೂ, ಸರಕು ಮಾರಲಿಲ್ಲ. ಆಗ ಮುದ್ದಲಿಗೆ ಕೋಟಿ ಬರುವಂತೆ ಕಂಡು ಬಹಳ ಚಿಂತೆ ಮಾಡುತ್ತ ಮಲಗಿದಾಗ ಅವನು ಮನಸಿನಲ್ಲಿ ವಿಧ ವಿಧ ಕಲ್ಪನೆ ಯೋಚಿಸಹತ್ತಿದನು. ಕೊನೆಗೆ ಸಿದ್ಧ ಮಾಡಿದ್ದೇನೆಂದ್ರೆ ಈ ಪಟ್ಟಣದ ಅರಸು ಸತ್ತರೆ ಮಾತ್ರ, ಅರ್ಧ ಗಂಧ ಖರ್ಚು ಆಗುವದು, ಯಾಕಂದ್ರೆ ಶ್ರೀಮಂತರು ಸತ್ತರೆ, ಅವರ ಕಳೇವರವನ್ನು ಚಂದನದ ಕಟ್ಟಿಗೆಯಿಂದ, ದಹನ ಮಾಡುವರು, ಹೀಗೆ ಯೋಚಿಸಿದನು. (ದಾರ ಯತ್ನ)ಮರುದಿವಸ ಸಾವಕಾರನು ರಾಜಸಭೆಗೆ ಹೋದಾಗ ಅರಸನು ಸ್ನೇಹಿತನನ್ನು ಕಂಡರೂ ಎಂದಿನಂತೆ ಕರೆದು ತನ್ನ ಬಳಿಯ ಕುಳ್ಳಿರಿಸಿಕೊಳ್ಳಲಿಲ್ಲ. ತಾತ್ಪರ್ಯವೇನೆಂದ್ರೆ ಇದನು ದ್ರೋಹ ಯೋಚಿಸಿದ್ದು ಅರಸನಿಗೆ ತಿಳಿಯದೇ ಇದ್ದಾಗ್ಯೂ ಮನಸಿಗೆ ಬೇಸರಾಯಿತು. ಆ

ಗೆ ಸಾಹುಕಾರನು ಬಹಳ ಖಿನ್ನನಾದನು. ಆದರೂ ಈ ಕಾರಣ ಗೊತ್ತಾಗಲಿಲ್ಲ. ಈ ಮೇರಿಗೆ ನಾಲ್ಕೆಂಟು ದಿವಸ ಗಳದ ಮೇಲೆ ಧನಿಕನು ಮಂತ್ರಿಯ ಬಳಿಗೆ ಹೋಗಿ ನಡದವಿಚಾರ ತಿಳಿಸಲು, ಮಂತ್ರಿಯು—ಅಪ್ಪಾ ನೀನು ಅರಸನಿಗೆ ಯೇನಾದರೂ ದ್ರೋಹ ಚಿಂತನೆಯನ್ನು ಅಂತರಂಗವಲ್ಲಾಗಲಿ, ಬಹಿರಂಗದಲ್ಲಿಯಾಗಲೀ ಮಾಡಿದ್ದುಂಟೋ? ಯನ್ನಲು. ಆಗ ಅವನಿಗೆ ಧಸಕು ಹೊಡದು ಸರಿ ಒಂದು ದಿನ ಚಿಂತೆಯಲ್ಲಿ ಕೂತಾಗ ಈ ಊರ ಅರಸು ಸತ್ತರೆ ನನ್ನ ಗಂಧ ಖರ್ಚಾಗುವದು. ಎಂತ ಮಾತ್ರ ಮನಸಿನಲ್ಲಿ ಅಂದಿದ್ದೆ ಇಷ್ಟೇ ಸರಿ? ಅಂದೊಡನೆ, ಪ್ರಧಾನಿಯು—ಅಹುದು ಅದೇಕಾರಣ—ನಿನ್ನ ಮನಸ್ಸಿನಲ್ಲಿ ವಿಕಲ್ಪ ಹುಟ್ಟಿದ್ದರಿಂದಲೆ ಅರಸಿಗೂ ಬೇಸರ ಮನಸು ಹುಟ್ಟಿತು—ಆದ್ರೆ ಇದಕ್ಕೆ ಒಂದು ಉಪಾಯ ಮಾಡತಕ್ಕದ್ದು ಯಾವದರಬಗ್ಗೆ—ನೀನು ದ್ರೋಹ ಯೋಚಿಸಿದೆಯೋ, ಅದನ್ನೇ ಸುಟ್ಟು ಬಿಡು ಅಂದ್ರೆ ಮುಂದೆ—ಹ್ಯಾಗಾಗುತ್ತದೆ ನೋಡು. ಅಂದೊಡನೆ ಸಾಹುಕಾರನು—ಒಳ್ಳೇದೆಂದು ಹೇಳಿ—ತನ್ನಲ್ಲಿರುವ ಯಾವತ್ತು ಗಂಧದ ಕಟ್ಟಿಗೆಯನ್ನು ಊರ ಸುತ್ತಲು ಒಟ್ಟಿಸಿ, ಬೆಂಕಿ ಹಚ್ಚಿಸಿದನು—ಆಗ ಆ ವಾಸನೆಯು ಊರತುಂಬ ಹರಡು, ಬಹಳ ಮಂದಿ ಆಶ್ಚರ್ಯಪಟ್ಟರು—ಅರಸು ಸಾಹಾ ಇದೇನೆನುತ್ತ ಕೇಳಲು—ಮಂತ್ರಿಯು ನಡದ ವೃತ್ತಾಂತವನ್ನೆಲ್ಲ ತಿಳಿಸಿದನು. ಆಗ ದೊರೆಯು ಆಳುಗಳ ಕಳಿಸಿ ಬೆಂಕಿ ನಂದಿಸಿ—ಸಾಹುಕಾರನ್ನ ಕರದು ಎಂದಿನಂತೆ, ಬಹಳ ಪ್ರೀತಿಯಿಂದ, ಮನ್ನಿಸಿದನು, ಮತ್ತು ಅರಸನ್ನೇನಂದರೆ—ಇಷ್ಟುದಿನದಿಂದ ನನಗೆ ಸಾಹುಕಾರನ್ನ ಕಂಡರೆ ಆಗದ ಹಾಗೆ ಆಯಿತು. ಆಕಾರಣ ನಾನು ಅವನನ್ನು ಮನ್ನಿಸಲಿಲ್ಲ

ಎಂದು ಹೇಳಿ ಬಹಳ ಸನ್ಮಾನ ಮಾಡಿ. ಉಳಿದ ಗ್ರಂಥವನ್ನು ತಾನು ಕ್ರಯಕ್ಕೆ ತೆಗೆದುಕೊಂಡು ಸಂಗ್ರಹಕ್ಕೆ ಇಡಿಸಿದನು. ತಾತ್ಪರ್ಯ ವೇನೆಂದ್ರೆ ನಾನು ನನ್ನ ಮನಸಿನಲ್ಲಿ ಇನ್ನೊಬ್ಬನಿಗೆ ವಿರೋಧ ಬೆಳೆಸಿ ಬಹಿರಂಗಕ್ಕೆ ಸ್ನೇಹವಿಟ್ಟರೆ ಆವನಾದರು ಅಂತರಂಗದಲ್ಲಿ—ಸಂಶಯ ಇಟ್ಟೇ ಇರುತ್ತಾನೆ ಇದು ನಿಶ್ಚಯವೇ ಇದಕ್ಕೆ—ಮೇಲೆ ಬರೆದ ಶ್ಲೋಕವೇ ದೃಷ್ಟಾಂತ.

ಪತ್ರ ವಿಸ್ತಾರವಾದ ಮಾಫಿ ಇರಲಿ—ಎಂಬುದಾಗಿ ಪ್ರಾರ್ಥಸುತ್ತೇನೆ ಲೋಭ ವಿರಬೇಕು.

ಮುಕ್ಕಾಮ ಚಿಗಹಳ್ಳಿ, ತಾ|| ೧೬
ಮಾಹೆ ಡಿಸಂಬರ ೧೮೭೧೩.

ಶ್ರೀನಿವಾಸ ರಾಮಚಂದ್ರ
ಬಂಕಾಪೂರ ಪಂತೋಜಿ
ಸರಕಾರಿ ಶಾಲೆ ಚಿಗಹಳ್ಳಿ

ರಾ||ರಾ||ದಕ್ಷಿಣ ಭಾಗದ ಶಾಲಾ ಪತ್ರಕರ್ತರಿಗೆ—

ವಿಂ ವಿಂ ನಾನು ಬರೆದ ಪತ್ರಕ್ಕೆ ತಮ್ಮ ಸುಂದರವಾದ ಪತ್ರಕದಲ್ಲಿ ಸ್ಥಳ ದೊರವದ್ದು ನೋಡಿ ಬಹಳ ಆನಂದ ಪಟ್ಟೆನು ಇದಲ್ಲದೆ ನನಗೆ ಉಮೇದ ಬರುವಂತೆ ನನ್ನ ಪತ್ರದ ಕೆಳಗೆ ತಮ್ಮ ಕರದ್ವಯದಿಂದ ಹುಟ್ಟಿದ ಮುತ್ತಿನಂಥ ಪಂಕ್ತಿಗಳನ್ನು ನೋಡಿ ಅತಿ ಆಭಾರಿ ಆಗಿದ್ದೇನೆ. ಈಗ ಪುನಃ ಸ್ವಲ್ಪ ಬರೆಯುವದಕ್ಕೆ ಪ್ರಾರಂಭ ಮಾಡಿದ್ದೇನೆ. ಇದಕ್ಕೂ ಸ್ಥಳ ದೊರದಲ್ಲಿ ನನ್ನ ಪ್ರಯತ್ನವು ಸಫಲ ವಾಗುವದೆಂದು ಬೇಡಿಕೊಳ್ಳುತ್ತೇನೆ.

ಹೋದ ಪತ್ರಕದಲ್ಲಿ ಬರೆದ ವಿಷಯವನ್ನು ಬರೆಯುವ ಭಿತ್ತಿ ಆದರೂ ನನಗೆ ಸಂಶಯಗಳು ಬಂದದರಿಂದ ಯಾವ

ದರೂ ನನ್ನ ಸಂಶಯವನ್ನು ದೂರ ಮಾಡುವರೆಂಬ ಅಪೇಕ್ಷೆಯಿಂದ ಕೆಳಗೆ ಬರೆಯುತ್ತೇನೆ.

ಚಂದ್ರನು ಕ್ಷಿತಿಜದಲ್ಲಿರುವಾಗ್ಗೆ (ಉದಯಾಸ್ತ ಸಮಯದಲ್ಲಿ) ಕೆಂಪು ಕಾಣಿಸುತ್ತಾನೆ. ಇದರ ಕಾರಣವು ನನಗೆ ಚೆನ್ನಾಗಿ ತಿಳಿಯಲೊಲ್ಲದು. ಒಂದು ಪಕ್ಷಕ್ಕೆ ಒಂದು ಶಾಸ್ತ್ರದ ಪ್ರಕಾರ ನೋಡಿದರೆ, ಕನಕಾದ್ರಿಯಿಂದಾ ಹೊರಡುವ ಕಾರಣ ಅದರ ಕಾಂತಿಯಿಂದ ಕೆಂಪು ಕಾಣಿಸುತ್ತಾನೆಂದು ನನ್ನ ಮನಸ್ಸಿನ ಸಂಶಯವನ್ನು ದೂರ ಮಾಡಿಕೊಂಡೆನೆಂದರೆ, ಪೃಥ್ವಿ ಮೇಲೆ ಕನಕಾಚಲ ಎಲ್ಲಿಯೂ ಇಲ್ಲ. ಅನ್ನುವಬಗ್ಗೆ ಭೂಗೋಲ ಶಾಸ್ತ್ರವು ಮುಂದರಿಸುತ್ತದೆ. ಮತ್ತು ಸೂರ್ಯನಾದರೂ ಇದೇ ಪ್ರಕಾರ ಕಾಣುವದಲ್ಲದೆ ಅದ್ಯಾಕೆ ಕ್ಷಿತಿಜದಲ್ಲಿರುವಾಗ್ಗೆ ಕಿರಣ ಸಹಾ ಕೆಂಪು ಕಾಣುವದರಿಂದ ಸಂಶಯದ ಪ್ರಂಜಿಯೇ ತುಂಬಿಕೊಂಡದೆ.

ತಾರೀಖು ೧೨ನೇ ದಶಂಬರ ೧೮೭೧ ದಿವಸ ಸೂರ್ಯಗ್ರಹಣವಾಯಿತು ಇದು ಹ್ಯಾಗಾಯಿತು ಇದನ್ನು ಬರೆಯುವ ಅಗತ್ಯವಿಲ್ಲ. ಆದರೆ ಆಗ ಸಂಶಯ ಬರುವಂಥಾದೊಂದು ಚಮತ್ಕಾರವಾಯಿತ್ತು. ಅದನ್ನು ತಿಳಕೊಳ್ಳಲಪೇಕ್ಷಿಸುವ ನನ್ನ ಮನಸ್ಸಿನ ಸಂಶಯವನ್ನು ಬರದು ತಿಳುಕೊಳ್ಳುವದು ನನಗೆ ಬಹಳ ಆನಂದಕರವಾಗಿದೆ. ಅದೇನೆಂದರೆ ಸೂರ್ಯನಿಗೆ ಗ್ರಹಣವಾದಾಗ್ಗೆ ಅವನ ಕಿರಣಗಳು ಕಡಿಮೆ ಆಗತಕ್ಕದ್ದೇ ಸರಿ. ಆದರಪ್ರಯುಕ್ತ ಅವನ ಕಿರಣಗಳು ಯಾವದಾದರೊಂದು ತೂತಿನೊಳಗಿಂದ ಕೋಣಿಕಡಿಗೆ ಪಾರಾಗಿ ನೆಲದ ಮೇಲೆ ಬೀಳಬೇಕಾದರೆ ಆ ತೂತಿನ ಆಕಾರದಂತೆ ಬೀಳದೆ, ಸೂರ್ಯನ ಅಂಶ ಎಷ್ಟು ಪ್ರಕಾಶ ಉಳಿದಿತ್ತೋ ಅಷ್ಟೇ ಆ

ದೇಶಸುಧಾರಣೆಯಂದರೆ ಒಬ್ಬೊಬ್ಬ ಮನುಷ್ಯನ ಉದ್ಯೋಗ, ಜಾಗ್ರತೆ, ಪ್ರಮಾಣಿಕತನಗಳ ಜುಮುಲು. ಇದೇ ಮೇರಿಗೆ ದೇಶದಕೆಡಗಾಲವೆಂದರೆ, ಅದರೊಳಗಿನ ಬೇರೆ ಬೇರೆ ಮನುಷ್ಯರ ಆಲಸ್ಯ, ಸ್ವಾರ್ಥ, ದುರ್ಗುಣಗಳ ಜುಮುಲು. ನಾವು ಇಂಥಾದೊಂದು ಸಂಗತಿಯು ದೇಶಕ್ಕೆ ಕೇಡಾದದ್ದೆಂದು ಹೇಳುತ್ತೇವಲ್ಲ, ಅದು ಬಹಳವಾಗಿ ಆ ದೇಶದೊಳಗಿನ ಜನರ ದುರ್ನಡತೆಯು ಬಹು ಹೆಚ್ಚಾದ ಬೆಳವಣಿಗೆಯೇ ಎಂದು ಕಂಡು ಬರುವದು. ಇಂಥಾ ಕೇಡನ್ನು ಕಾಯ್ದೆಗಳ ಸಹಾಯದಿಂದ ಮುರಿದು ನಿರ್ಮೂಲ ಮಾಡುವದಕ್ಕೆ ನಾವು ಯತ್ನ ಪಟ್ಟಾಗ್ಯೂ, ಆ ದೇಶದೊಳಗಿನ ಜನರ ನಡತೆಯಲ್ಲಿ ಮೂಲತಃ ಸುಧಾರಣೆಯುಂಟಾಗುವ ಮಟ್ಟಿಗೂ, ನಮ್ಮ ಯತ್ನದಿಂದ ಆ ಕೇಡು ನಿರ್ಮೂಲವಾಗದೆ ಬೇರೊಂದು ಸ್ವರೂಪದಿಂದ ಹೆಚ್ಚು ಬಲದೊಂದಿಗೆ ಉದ್ಭವಿಸುವದು. ಈ ವಿಚಾರವು ನಿಜವಾದರೆ, ಇದರಿಂದ ಫಲಿತವಾಗುವದೇನಂದರೆ, ಜನರು ತಮ್ಮ ಸ್ವಂತ ಉದ್ಯೋಗಗಳಿಂದ ತಮ್ಮ ಸ್ಥಿತಿಯನ್ನು ತಿದ್ದಿಕೊಂಡು ಹೆಚ್ಚಿನ ಮಾನವು

ಳ್ಳವರಾಗುವ ಹಾಗೆ ಅವರಿಗೆ ಸಹಾಯ ಮಾಡಿ ಉದ್ರೇಕ ಪ
ಡಿಸುವದರಲ್ಲಿ ಅತ್ಯುತ್ತಮ ತರದ ದೇಶಾಭಿಮಾನವೂ ಜನ
ವಾತ್ಸಲ್ಯವೂ ಇದ್ದಷ್ಟು ಕಾಯ್ದೆಗಳನ್ನು ಬದಲು ಮಾಡು
ವದರಲ್ಲಿಯೂ ಸ್ಥಾಪನೆಗಳನ್ನು ಸುಧಾರಿಸುವದರಲ್ಲಿಯೂ
ಇಲ್ಲ.

ಮನುಷ್ಯನು ಬಹಿರಂಗದಲ್ಲಿ ಹ್ಯಾಗೆ ಆಳಲ್ಪಡುತ್ತಾನೆಂ
ಬದು ವಿಶೇಷ ಮಹತ್ವವುಳ್ಳದ್ದಲ್ಲೆಂದು ಹೇಳಬಹುದು; ಆ
ದರೆ ಅವನು ಅಂತರಂಗದಲ್ಲಿ ತನ್ನನ್ನು ತಾನೇ ಹ್ಯಾಗೆ ನ
ಡಿಸಿ ಕೊಳ್ಳುತ್ತಾನೆಂಬದು ಅವನ ಯಾವತ್ತು ಸುಖ ದುಃಖ
ಗಳಿಗೆ ಕಾರಣವಾಗಿರುತ್ತದೆ. ಕೆಲವೊಬ್ಬ ಕ್ರೂರ ಮನುಷ್ಯ
ನ ಶೆರೆಯಾಳಾಗಿ ದುಡಿಯುವದು ಬಹು ದೊಡ್ಡ ಕೇಡೆಂಬ
ದಕ್ಕೆ ಸಂದೇಹವಿಲ್ಲ; ಆದರೂ ಹಾಗೆ ದುಡಿಯುವವನು ನಿಜ
ವಾಗಿ ಗುಲಾಮನಲ್ಲ; ತನ್ನ ಸ್ವಂತ ಅಜ್ಞಾನಕ್ಕೂ, ಸ್ವಾರ್ಥ
ಕ್ಕೂ, ದುರ್ಗುಣಕ್ಕೂ ದಾಸನಾಗಿ ವರ್ತಿಸುವವನೇ ನಿಜವಾ
ಗಿ ಗುಲಾಮನು. ಈ ವಿಧವಾಗಿ ಅಂತರಂಗದಲ್ಲಿ ದಾಸ್ಯಾವ
ಸ್ಥೆಯನ್ನು ಹೊಂದಿದ ದೇಶಗಳು ಸರಕಾರದಲ್ಲಿ, ಅಥವಾ
ಸ್ಥಾಪನೆಗಳಲ್ಲಿ ಹೆಚ್ಚು ಕಡಿಮೆ ಯುಂಟಾಗುವದರಿಂದ ಸ್ವ
ತಂತ್ರವಾಗಲಾರವು; ಪ್ರಜೆಗಳ ಸ್ವಾತಂತ್ರ್ಯವು ಅವರನ್ನು
ಆಳುವ ಸರಕಾರಕ್ಕೆ ಪೂರ್ಣಸಂಬಂಧವಾಗಿ ಇರುತ್ತದೆ,
ಎಂಬ ಭ್ರಾಂತಿಯು ಜನರಲ್ಲಿ ಇರುವ ಮಟ್ಟಿಗೂ, ಈ
ವಿಧದ ಹೆಚ್ಚು ಕಡಿಮೆಗಳನ್ನು ಎಷ್ಟು ಪ್ರಯಾಸದಿಂದ ಕೊಂ
ಡಾಗ್ಯೂ, ಅವು ಸೂತ್ರಗೊಂಬೆಯ ಆಟದೊಳಗಿನ ಗೊಂಬೆ
ಗಳು ಬದಲಾದ ಹಾಗೇ ಎಂದು ತಿಳಿಯ ತಕ್ಕದು. ಒಬ್ಬೊ
ಬ್ಬ ಮನುಷ್ಯನ ನಡತೆಯನ್ನು ಆಶ್ರಯಿಸಿ ಉಂಟಾದ ಸ್ವಾ

ತಂತ್ರ್ಯವೇ ದೃಢವಾದದ್ದು. ಈ ವಿಧದ ಸ್ವಾತಂತ್ರ್ಯ ಒಂದೇ ಜನರ ಸ್ವಸ್ಥತೆಗೂ, ದೇಶದ ಘನತೆಗೂ ನಿರ್ವಿವಾದವಾದ ಆಸ್ಪದವಾಗಿರುತ್ತದೆ. ಜಾನ ಸ್ಟೂವಾರ್ಟಮಿಲ್ಲನೆಂಬವನು ನಿಜವಾಗಿ ಹೇಳುತ್ತಾನೆ; ಯೇನಂದರೆ "ಪ್ರಜೆಗಳು ತಮ್ಮ ತಮ್ಮ ವ್ಯಕ್ತಿ ಸಂಬಂಧದ ಅಭಿಮಾನದಿಂದ ನಡೆಯುವ ಮಟ್ಟಿಗೂ, ಕೇವಲರಾಜಸತ್ತೆಯಿಂದ* ಸಹ ಬಹಳ ಕೇಡು ಉಂಟಾಗದು. ಪ್ರಜೆಗಳ ಸ್ವಾತಂತ್ರ್ಯವನ್ನು ಮುರಿದು ಹಾಕುವ ಸರಕಾರವೇ ಕೇವಲರಾಜಸತ್ತಾತ್ಮಕವು, ಅದು ಬೇರೆ ಯಾವ ಹೆಸರಿನಿಂದ ಪ್ರಸಿದ್ಧವಿದ್ದರೂ ಚಿಂತಿಲ್ಲ."

ಮನುಷ್ಯ ಜಾತಿಯ ಸುಧಾರಣೆಯನ್ನು ಕುರಿತು ಪ್ರಾಚೀನ ಕಾಲದ ತಪ್ಪಿನ ತಿಳುವಳಿಕೆಗಳು ದಿನ ದಿನಕ್ಕೆ ಹೆಚ್ಚು ಹೆಚ್ಚು ಬೈಲಿಗೆ ಬರುತ್ತವೆ. ತಮ್ಮ ಸುಖಕ್ಕೋಸ್ಕರವಾಗಿ ಕೆಲಜನರು ಸೀಝರರನ್ನು+ ನೆನಸುತ್ತಾರೆ; ಕೆಲವರು ದೇಶಾಚಾರಗಳನ್ನು ನೆನಸುತ್ತಾರೆ; ಕೆಲವರು ಪಾರ್ಲಿಮೆಂಟಸಭೆಯಕಾಯ್ದೆಗಳನ್ನು ನೆನಸುತ್ತಾರೆ. "ನಾವು ಸೀಝರರಂಥ

---

*ಸರಕಾರಗಳಲ್ಲಿ ಮುಖ್ಯವಾಗಿ ರಾಜಸತ್ತಾತ್ಮಕವೆಂತಲೂ, ಪ್ರಜಾಸತ್ತಾತ್ಮಕವೆಂತಲೂ ಯೆರಡು ಭೇದಗಳು. ರಾಜಸತ್ತಾತ್ಮಕದಲ್ಲಿ ಪುನಃ ಯೆರಡು ಭೇದಗಳು. ಯಾವ ವಿಧದ ಅಡ್ಡಿಯಿಲ್ಲದೆ ಅರಸು ಒಬ್ಬನೇ ತನ್ನ ಮನಸ್ಸಿಗೆ ಬಂದಂತೆ ಪ್ರಜೆಗಳನ್ನು ಆಳಿದರೆ, ಅದು ಕೇವಲ ರಾಜಸತ್ತೆಯು; ಅರಸನು ಪ್ರಜೆಗಳ ಅಭಿಪ್ರಾಯವನ್ನನುಸರಿಸಿ ಆಳಿದರೆ ಅದು ರಾಜಪ್ರಜಾತ್ಮಕವು. ಪ್ರಜಾಸತ್ತಾತ್ಮಕದಲ್ಲಿ ಸಹಯೆರಡು ಭೇದಗಳುಂಟು. ರಾಜ್ಯದೊಳಗಿನ ದೊಡ್ಡ ಮನುಷ್ಯರು ಮಾತ್ರ ಸಮುದಾಯಗಟ್ಟಿ ಆಳಿದರೆ ಅದು ವರಿಷ್ಠಸತ್ತಾತ್ಮಕ; ಎಲ್ಲ ಪ್ರಜೆಗಳು ಸಮಾನಾಧಿಕಾರದಿಂದ ಆಳಿದರೆ, ಅದು ಶುದ್ಧ ಪ್ರಜಾಸತ್ತಾತ್ಮಕ.

+ ಜೂ ಪಾಂದಿಸೀಝುರರೆಂಬ ಅರಸರು ರೋಮಪಟ್ಟಣದಲ್ಲಿ ಆಗಿ ಹೋದರು. ಅವರ ಕಾಲದಲ್ಲಿ ರೋಮರಾಜ್ಯದ ಪ್ರಜೆಗಳು ಬಹು ಸುಖದಿಂದಿದ್ದರು. ಅವರಲ್ಲಿ ಅಗಸ್ತಸಸೀಝುರನೆಂಬವನಕಾಲ ಕೀರ್ತಿಯುಂತು ಭಂಗಾರದ ಕಾಲವೆಂದೆನಿಸಿಕೊಂಡಿತು.

ಅರಸರಮಾರ್ಗಪ್ರತಿಷ್ಠೆಯು ಮಾಡತಕ್ಕದ್ದು. ಅವರು ಸಿಕ್ಕಮೇಲೆಅವರನ್ನು ಗೊತ್ತುಹಿಡಿದು ಅನುಸರಿಸುವ ಜನರು ಬಹು ಸುಖಿಗಳಾಗುವರು."† ಹೀಗೆಂಬುವವರ ತಾತ್ಪರ್ಯವು ಸ್ವಲ್ಪದರೊಳಗೆ ಯೇನಂದರೆ, ಜನರಸಲುವಾಗಿ ಯೆಲ್ಲಕೆಲಸಗಳೂ ಮಾಡಲ್ಪಡಬೇಕು, ಅವರು ಸ್ವತಃ ಯೇನುಮಾಡಬಾರದು. ಈ ಮತವನ್ನು ಅನುಸರಿಸಿದರೆ ಮನುಷ್ಯರ ಮನದರಿಕೆಯೆಲ್ಲನಷ್ಟವಾಗಿ ಬೇಕಾದತರದ ಕೇವಲರಾಜಸತ್ತೆಗೆ ಶೀಘ್ರವಾಗಿ ಮಾರ್ಗವುಂಟಾಗುವದು. ಸೀಝರರಂಥ ಅರಸರಿರಬೇಕೆಂಬ ಮತವು ಮನುಷ್ಯರ ಮೂರ್ತಿಗಳನ್ನು ಮಾಡಿ ಪೂಜಿಸುವ ಅತಿನೀಚತರವಾದ ಮತವೆಂಬದಕ್ಕೆ ಸಂದೇಹವಿಲ್ಲ. ಈ ಮತದಿಂದ ಕೇವಲ ಅಧಿಕಾರಕ್ಕೆ ಮಾನವುಂಟಾಗುವದು; ಅದರಿಂದ ಕೇವಲ ಹಣಕ್ಕೆ ಮಾನ ಕೊಟ್ಟರೆ ಯೆಷ್ಟು ಹೀನತ್ವ ಬರುವದೋ, ಅಷ್ಟು ಹೀನತ್ವವುಳ್ಳ ಪರಿಣಾಮವಾಗುವದು. ಜನರ ಮನಸ್ಸಿನಲ್ಲಿ ತುಂಬಿಸುವದಕ್ಕೆ ತಕ್ಕಂಥ ಹೆಚ್ಚು ಹಿತವಾದ ಮಾರ್ಗವು ಯಾವದೆಂದರೆ, ತನಗೆ ತಾನೇ ಸಹಾಯ ಮಾಡಿಕೊಳ್ಳಬೇಕೆಂಬುವದೇ. ಈ ಮಾರ್ಗವು ಜನರಿಗೆ ತಿಳಿದು ಇದರಂತೆ ಅವರು ನಡೆಯಲಿಕ್ಕೆ ಹತ್ತಿದಕ್ಷಣವೇ ಸೀಝರರಂಥ ಅರಸರಿರಬೇಕೆಂಬ ಮತವು ನಷ್ಟವಾಗಿ ಹೋಗುವದು. ಈ ಯೆರಡು ಮತಗಳು ಒಂದಕ್ಕೊಂದು, ಪ್ರತ್ಯಕ್ಷ ವಿರೋಧವಾದವುಗಳು; ವಿಕ್ಟರ ಹ್ಯೂಗೋಯೆಂಬವನು ಲೇಖಣಿಯನ್ನೂ, ಕತ್ತಿಯನ್ನೂ ಕುರಿತು ಹೇಳಿದ್ದು (ಒಂದು ಇನ್ನೊಂದನ್ನು ಕೊಲುವದೆಂದು) ಇವುಗಳಿಗಾದರೂ ಸಮವಾಗಿ ಹತ್ತುತ್ತದೆ.

† ಮೂರನೇ ನೇಪೋಲಿಯನ್ನನು ಬರೆದ "ಸೀಝರನ ಚರಿತ್ರ"

EXTRACTS FROM RAJASHEKHARA.

ರಾಜಶೇಖರದೊಳಗಿನಶ್ಲೋಕಗಳು

ಮಳೆಗಾಲದವರ್ಣನೆ.

॥ಚಂಪಕಮಾಲಾವೃತ್ತ॥

ಅಲರ್ದುದು ಕಾಡಮಲ್ಲಿಗೆ ಮುಗುಳ್ತುದು ಜಾದಿ ಕದಂಬ ಕು
ಟ್ಮಳಂ।
ಬಲಿದುದು ಪೊದೊಡೆಂಬೆಯುನೊಡರ್ಚಿತು ಕೇತಕಿ ಕೇಕಿ ಸ
ಣ್ಪನಿಂ॥
ನಲಿದುದು ಹಂಸೆ ಹಾರಲನುಗೆಯ್ದುದು ಚಾದಗೆ ರಾಗಮಾಂ
ತ್ತುದು।
ಜ್ವಲತ್ರಿಯನಪ್ಪುಕೈದುದು ವಿಯೋಗಿಗಳಂಗದೊಳಂಗಜಾನ
ಲಂ॥ ೧॥

ಅರ್ಥ—ಮಳೆಗಾಲದಲ್ಲಿ ಕಾಡಮಲ್ಲಿಗೆಯ ಬಳ್ಳಿಗಳು ಹೂವುಬಿಟ್ಟವು; ಜಾಜಿಮಲ್ಲಿಗೆಯ ಬಳ್ಳಿಗಳು ಮುಗುಳು ಬಿಟ್ಟವು; ಕಡವಾಲದ ಮೊಗ್ಗೆಗಳು ಬಲಿತವು; ಕೇದಗಿಯ ಹೊಡೆಗಳು ಹೊರಬಿದ್ದವು; ನವಿಲುಗಳು ಆನಂದಪಟ್ಟವು; ಹಂಸಗಳು ಹಾರಲನುವಾದವು; ಚಾತಕಪಕ್ಷಿಗಳು ಸಂತೋಷಪಟ್ಟವು; ವಿರಹಿಗಳ ಮೈಯಲ್ಲಿ ಕಾಮಾಗ್ನಿಯು ಪ್ರಜ್ವಲಿಸಹತ್ತಿತು.

॥ಚಂಪಕಮಾಲಾವೃತ್ತ॥

ಸುಳಗೊಳುತಿತ್ತಿ ಸುಟ್ಟುರೆ ಧರಾರಜಮಂ ಕೆಳಗೊಂದೆ ದಂ
ಡದಂ।

ತುಳಿದ ತತಾತಪಂ ಬಳಸಿ ಪಲ್ಲವಪಂತಿರೆ ಬಾನುಮಧ್ಯದೋ|
ಳ್ಪೊಳಗುವ ಭಾನು ಭರ್ಮಕಳಶಂಬೊಲದೊಪ್ಪಿರೆ ಬಟ್ಟಿಕಿಲ್ಕಾಗಿ
ಲ್ತಾಳ್ದಪುದು ಕಾಲಭೂಪತಿಯ ಪೀಲಿಯ ಸತ್ತಿಗೆಯೊಂದ ಲೀಲೆಯಿಂ॥ ೨|

ಅರ್ಥ—ಸುಟ್ಟರಗಾಳಿಯು ಗರ್ರನೆ ತಿರುಗಿ ಭೂಮಿಯ ಮೇಲಿನ ಧೂಳಿಯನ್ನು ಎತ್ತಿದ್ದರಿಂದ ಅದು ಕೆಳಗಿನ ದಂಡದಂತೆ, ಸುತ್ತುಮುತ್ತು ಬಳಸಿದ ಬಿಸಿಲು ಜಾಲಾರದಂತೆ, ಆಕಾಶದಲ್ಲಿ ಹೊಳೆಯುವ ಸೂರ್ಯನು ಬಂಗಾರದ ಕಳಶದಂತೆ ತೋರಲು, ವರ್ತುಲಾಕಾರವಾದದ್ದೊಂದು ದೊಡ್ಡ ಮೋಡವು ಮಳೆಗಾಲನೆಂಬ ರಾಜನ ನವಿಲಗರಿಯ ಸತ್ತಿಗೆಯಂತೆ ಒಪ್ಪಿತು.

॥ಮತ್ತೇಭವಿಕ್ರೀಡಿತವೃತ್ತ॥

ರವಿಚಂದ್ರಪ್ರಚುರಪ್ರಭಾಪ್ರಚಯಮಂ ಮೇಘಂ ಮುಸುಂಕುತ್ತೆ ಕಾ
ಷ್ಠೋರ್ವಿಶಿಷ್ಟಂ ತಟಿದಂಕುರಾಲ್ಪರುಚಿಯಂ ಬೀರಿತ್ತುದಗ್ರಸ್ಫುರ॥
ತ್ಕವಿಕಾವ್ಯಪ್ರಕಟಪ್ರಭಾವಮನದಂ ಕೀಳ್ಕಬ್ಬಿಗಂ ಗುಪ್ತಿಗೈ|
ದವರಾತ್ಮೀಯಕೃತಿಪ್ರಭಾವತೆಯನಾದಂ ತೋರ್ಪವೋಲ್ಧಾತ್ರಿಯೊಳ್॥೩॥

ಅರ್ಥ—ಭೂಮಿಯಲ್ಲಿ ಕೀಳಕವಿಯು ಪ್ರಸಿದ್ಧ ಕವಿಗಳ ಕಾವ್ಯಪ್ರಭೆಯನ್ನು ಬಚ್ಚಿಟ್ಟು, ತನ್ನ ಅಲ್ಪಕಾವ್ಯದ ಬೆಳಕನ್ನು ಹ್ಯಾಗೆ ತೋರಿಸುತ್ತಾನೋ, ಹಾಗೆ ಮಳೆಗಾಲದಲ್ಲಿ

ಮೋಡವು ಸೂರ್ಯ ಚಂದ್ರರ ಪ್ರಸಿದ್ಧವಾದ ಪ್ರಭೆಯು
ನ್ನು ಆಚ್ಛಾದಿಸಿ ಕಪ್ಪಿನಿಂದ ವ್ಯಾಪಿಸಲ್ಪಟ್ಟ ಮಿಂಚಿನ ಅಲ್ಪ
ಕಾಂತಿಯನ್ನು ತೋರಿಸುವದು.

ಕಂದ॥ ಕಡಲವಿಷಮೀಂಟಿದೊಡೆ ತ।
ನ್ನೊಡಲಂ ಬಿಡದಡರೆ ಕರ್ಪುವೆತ್ತಂಗದಿನಾ॥
ಗಡೆ ಜೀವನಮುಂ ಬಿಟ್ಟುದು।
ಜಡದಂ ಮೃಡನುಳಿದನೆಂದೊಡುಳಿದರ್ಗಳವೇ?॥೪॥

ಅರ್ಥ—ಸಮುದ್ರದೊಳಗಿನ ವಿಷವನ್ನು (ನೀರನ್ನು)
ಕುಡಿದದ್ದರಿಂದ ಆ ವಿಷವೇರಿ ಮೋಡದ ಮೈಯೆಲ್ಲ
ಕಪ್ಪಾಗಿ ಆ ಕ್ಷಣವೇ ಅದು ಜೀವನವನ್ನು(ನೀರನ್ನು)ಬಿಟ್ಟಿ
ತು. ಸಮುದ್ರದೊಳಗಿನ ವಿಷವನ್ನು ಕುಡಿದು ಶಿವನು ಉ
ಳಿದನೆಂದರೆ ಉಳಿದವರಿಗೆ ಸಾಧ್ಯವೇ?

ಕಂದ॥ ಸುರಚಾಪಚಂಪಕಸ್ರಜ।
ಕುರವಣಿಸುತ್ತಸಿತಜಲದಮಧುಪಸಮು॥
ತ್ಕರಮೆರಗಿದಂತೆ ಮೆರೆದುದು।
ಪರಿಕಿಸದಾತ್ಮೀಯಜೀವನವ್ಯಯಭಯಮಂ॥೫॥

ಅರ್ಥ—ಇಂದ್ರ ಧನುಸ್ಸೆಂಬ ಸಂಪಿಗೆ ಹೂವಿನ ಮಾಲೆಗೆ
ಕರೀ ಮೋಡಗಳೆಂಬ ಭ್ರಮರಗಳು ತಮ್ಮ ಜೀವನದ(ನೀ
ರಿನ)ಹಾನಿಯ ಭಯವನ್ನು ತೊರೆದು ತವಕಿಸುತ್ತ ಎರಗಿ
ದಂತೆ ಶೋಭಿಸಿದವು.

॥ಉತ್ಪಲಮಾಲಾವೃತ್ತ॥

ಎಂನ ಸಹಾಯದಿಂ ನೆರೆದು ತಾಳ್ದು ಘನತ್ವಮನಸ್ಮದೀಯ
ಮಿ।
ಪ್ರೋನ್ನತತೇಜಮಂ ತವಿಪನೆಂದನಿಲಂ ಮುಗಿಲಂ ಕನಲ್ದು

ಶ್ಲೋ॥

ಯ್ಪಂನೆಗಳೆಘನಧ್ವನಿ ಕಳಲ್ದುದಿರ್ದತ್ತು ಘನೋಪಳೌಘ
ದಂ।

ತಂ ನಿಜಮಲ್ಲದಿರ್ದೊಡಿಳೆಯಲ್ಲಿದು ನೀರದನಾಮಮೆಂತು
ದೇ?॥೬॥

ಅರ್ಥ—ತನ್ನ ಸಹಾಯದಿಂದ ಈ ಮೋಡವು ಕೂಡಿ ಘನತ್ವ ವನ್ನು ಪಡೆದು ತನ್ನಮಿತ್ರನಾದ ಸೂರ್ಯನ ತೇಜವನ್ನು ಕುಂದಿಸುವದೆಂದು ಗಾಳಿಯು ಸಿಟ್ಟಿನಿಂದ ಮೋಡವನ್ನು ಹೊ ಯ್ಯಿತು, ಅದರಿಂದ ಮೋಡವು ಒದರುತ್ತದೆಯೋ ಏನೋ ಅನ್ನುವ ಹಾಗೆ ಗರ್ಜನೆಯುಂಟಾಯ್ತು; ಅದರ ಹಲ್ಲುಗಳು ಉದರಿ ಬಿದ್ದವೋ ಏನೋ ಅನ್ನುವ ಹಾಗೆ ಮೋಡದಿಂದ ಆ ಣೆಕಲ್ಲುಗಳು ಉದರಿದವು; ಈಕಾರಣದಿಂದಲೇ ಮೋಡಕ್ಕೆ ನೀರದ(ಹಲ್ಲು ಇಲ್ಲದು)ಎಂಬ ಹೆಸರುಂಟಾಯ್ತು.

ಕಂದ॥ಎಳಸಿ ನಿಜಚಂಚುಪುಟದೊ।

ಳ್ತುಳೆದಿನೆಯಳ್ಗರೆದು ಮರಿಗಳಂ ತಣಿಪಿ ಮನಂ॥

ಗೊಳುತಳುಪಿ ಸೆಳೆದು ಜಳಕಣ।

ಕುಳಮಂ ಪೀರ್ದತ್ತು ಚಾತಕಂ ಚದುರಿಂದಂ॥೭॥

ಅರ್ಥ—ಮಳೆಗಾಲದಲ್ಲಿ ಚಾತಕಪಕ್ಷಿಯು ತನ್ನ ಚಂಚುಪು ಟದಿಂದ ನೀರನ್ನು ತಕ್ಕೊಂಡು ತನ್ನ ಹೆಂಡತಿಗೂ ಮರಿಗಳ ಗೂ ಗುಟುಕು ಕೊಟ್ಟು, ಮನಸು ಸಮಾಧಾನ ಮಾಡಿಕೊಂ ಡು ಜಾಣತನದಿಂದ ನೀರ ಕುಡಿಯಿತು.

॥ಉತ್ಪಲಮಾಲಾವೃತ್ತ॥

ಚಾದಗೆಯಂತೆ ಮುಂಬನಿಯನೇಂಬರೆಪೀರ್ದುದೆ ವಲ್ಲಿಯಂ
ತಿದೇಂ।

ೋದುವೆ ವಾರಿಯಿಂ ಕಡವಿನಂತೆ ಮುಗುಳ್ಚುದೆ ತನ್ನಹಾ
ಯಾದಿಂ॥
ೇದಗೆಯಂತೆ ಪೂತುದೆ ಮುಗಿಲ್ಗಳ ಪಂಗಿಸಿತುಂಟೆ ಕೇಕಿ
ಯರಾ।
ಾದದೆ ಕಂಡು ನರ್ತಿಸುವುದಿದಲ್ತೆ ಸಮಾನವಯಃಪ್ರವರ್ತ
ನಂ॥೮॥

ಅರ್ಥ—ಮಳೆಗಾಲದಲ್ಲಿ ಚಾತಕಪಕ್ಷಿಗಳ ಹಾಗೆ ನವಿಲುಗಳು ಮುಂಬನಿಗಳನ್ನು ಕುಡಿದವೋ? ಬಳ್ಳಿಗಳ ಹಾಗೆ ನೀರಿನಿಂದ ತೊಯ್ದುವೋ? ಕಡವಾಲದ ಮರದ ಹಾಗೆ ಮುಗುಳಬಿಟ್ಟವೋ? ಕೇದಗೆಯು ಹಾಗೆ ಹೊಡೆಬಿಟ್ಟವೋ? ಇಲ್ಲ. ಈ ಮೇರಿಗೆ ಮೋಡಗಳ ಹಂಗು ತಮಗೆ ಎಷ್ಟು ಮಾತ್ರವಿಲ್ಲದೆ ಮೋಡಗಳನ್ನು ಕಂಡು ನವಿಲುಗಳು ಆನಂದದಿಂದೆ ಕುಣಿಯುವವು, ಇದು ಸಮಾನವಯಸ್ಸಿನ ವರ್ತನೆಯಲ್ಲದೆ ಬೇರೆಯೇನೂ ಅಲ್ಲ.

ಹಿಮವದೃತುವರ್ಣನೆ

॥ಚಂಪಕಮಾಲಾವೃತ್ತ॥

ನೆಗದುಡುಚಾಲದಂತೆ ಪೊಸಮೊಲ್ಲೆಯ ಬಲ್ಮುಗುಳೊಪ್ಪೆ
ಪದ್ಮಮಂ।
ುಗೆ ತೊಳೆದಲ್ಲಿ ಲಕ್ಷ್ಮಿ ನಿಲೆ ನೈದಿಲೊಳುಬ್ಬಿದ ಮರ್ಬು
ಪಿಂಗಿದಂ॥
ತಗಲಿರೆ ಕಾಮುಗಿಲ್ಗಳೆ ಚೋಂನದ ಪೋಲ್ಪೊ ಸಮಂಜ
ಸಾರ್ಥವೆ।
ಚ್ಚಗೆಯನಮುಚ್ಚೆ ತಾಳ್ದನುದಿತೋದಯಮಂ ಹಿಮಕಾ
ಲಚಂದ್ರಮಂ॥೧।

ಅರ್ಥ—ಚಳಿಗಾಲವೆಂಬ ಚಂದ್ರನು ಉದಯವಾಗಲು, ಮಲ್ಲಿಗೆಯ ಮೊಗ್ಗೆಗಳೆಂಬ ನಕ್ಷತ್ರಗಳು ಒಪ್ಪಿದವು; ತಾವ ರೆಗಳು ಮುಚ್ಚಿಕೊಂಡವು; ನೀಲೋತ್ಪಲಗಳು ಅರಳಿದವು ಕರ್ಣೇಮೋಡವೆಂಬ ಕಗ್ಗತ್ತಲೆಯು ಹಿಂಗಿತು; ಮಂಜೆಂಬ ಬೆ ಳದಿಂಗಳು ಪಸರಿಸಿತು; ಸಮುದ್ರವು ಉಕ್ಕೇರಿತು.

ಕಂದ॥ ರಯದಿಂ ಮುಸುಂಕುತಿರ್ಪ ಶೀ।
ತಯುಹಿಮಮಂ ಕಳೆಯಲೆಂದೊಡನೆಂ ಶಿಖಿಯುಸಮಾ॥
ಶ್ರಯಮೆಸಗಿ ಕಳೆಯನೆನಲಾ।
ಶ್ರಯಾಶನಾಶ್ರಯದಿನಿಷ್ಟಮೇಂ ಸಮನಿಪ್ಪುದೇ?॥೭॥

ಅರ್ಥ—ಭರದಿಂದ ಆಚ್ಛಾದಿಸುವ ಚಳಿಯನ್ನು ನೀಗಬೇಕೆಂದು ಒಬ್ಬ ಪುರುಷನು ಬೆಂಕಿಯನ್ನು ಕಾಸಿಕೊಳ್ಳುತ್ತಿದ್ದನು; ಆದಾಗ್ಯೂ ಚಳಿಯು ಕಡಿಮೆಯಾಗಲಿಲ್ಲ. ಆಶ್ರಯಿಸಲಿಕ್ಕೆ ಬಂದಂಥ ಕಾಷ್ಟಮುಂತಾದವುಗಳನ್ನು ಧ್ವಂಸ ಮಾಡುವ ಅಗ್ನಿಯು ಆಶ್ರಯದಿಂದ ಇಷ್ಟಪ್ರಾಪ್ತಿಯಾದೀತೇ?

॥ಸ್ವಾಗತವೃತ್ತ॥

ಗೇರಹಣ್ಣಿನಿದು ಕೆಂಡಮೆನುತ್ತಂ।
ಸಾರಿ ಮೇಲೆ ತೃಣವಿಟ್ಟದನೂದ॥
ಲ್ಸೇರಿ ಬಾಯ ಪೊಗೆ ತಳ್ತಿರೆ ಕಂಡಾ।
ದಾರಿಗಂ ಮುದದಿನೂದುತಮಿರ್ದಂ॥೮॥

ಅರ್ಥ—ಚಳಿಗಾಲದಲ್ಲಿ ಒಬ್ಬ ಹಾದಿಕಾರನು(ಪ್ರಯಾಣಮಾಡುವಾಗ) ಮಾರ್ಗದಲ್ಲಿ ಬಿದ್ದದ್ದೊಂದು ಗೇರಹಣ್ಣನ ಕಂಡು ಇದು ಕೆಂಡವೆಂದು ತಿಳಿದು(ಕಾಸಿಕೊಳ್ಳಬೇಕೆಂದು) ದರ ಮೇಲೆ ಹುಲ್ಲನ್ನು ಇಟ್ಟು ಅದನ್ನು ಊದಹತ್ತಿದನು, ಆಗ ಚಳಿಯಿಂದ ತನ್ನ ಬಾಯೊಳಗಿನ ಹೊಗೆಯು ಹೊರಟ

ನ್ನು ಕಂಡು ಬೆಂಕಿ ಹೊತ್ತಿ ಹೊಗೆ ಹಾಯಿತೆಂದು ತಿಳುಕೊಂಡು
ಸಂತೋಷದಿಂದ ಮತ್ತೂ ಊದುತ್ತಿದ್ದನು.

ಕಂದ॥ಚಳಗಾರದೆ ಪೇರಾಲದ।
ಕೆಳಗಿರ್ಪನಿತರೊಳೆ ಚಪಳಕಪಿ ನಿಡುಗೋಡಂ॥
ಸೆಳೆದಲುಗೆ ಸೂಸುವೆಲೆವನಿ।
ಗಳನೋರ್ವಂ ನನೆದು ನಡುಗಿ ಸಿಡಿಮಿಡಿಗೊಂಡಂ॥ ೪॥

ಅರ್ಥ—ಒಬ್ಬ ಗೃಹಸ್ಥನು ಚಳಿಯನ್ನು ತಾಳಲಾರದೆ ಆಲದ ಮರದ ಕೆಳಗೆ ಕೂತ ಸಮಯದಲ್ಲಿ ಒಂದು ಚಪಲಕಪಿ ಯು ನಿಡಿದಾದ ಕೊಂಗೆಯ ಮೇಲೆ ಹತ್ತಿ ಅದನ್ನು ಹಿಡಿದು ಅಲುಗಿಸಲು, ಎಲೆಗಳ ಮೇಲಿನ ಮಂಜಿನ ಹನಿಗಳು ಮೈ ಮೇಲೆ ಸೂಸಿದರಿಂದ ತೋಯಿಸಿಕೊಂಡು ಗದ್ಗದನೆ ನಡುಗಿ ಸಿಡಿಮಿಡಿಗೊಂಡನು.

ಕಂದ॥ಹಾದಿಯೊಳೂದಿದನೋರ್ವಂ।
ಬೂದಿ ಕರಂ ಪಾರೆ ಕೆಂಡಮಂ ಕಂಡಮಿದೆಂ॥
ದಾದರಿಸಿ ಕುಕ್ಕಿ ಕೊಕ್ಕಿಂ।
ನೋದುದದಂ ಕಾಗೆ ಮಾಗೆ ಯೋನತಿಶಯಮೋ॥೫॥

ಅರ್ಥ—ಹಾದಿಯಲ್ಲಿ ಬಿದ್ದಂಥ ಕೆಂಡವನ್ನು ಕಂಡು(ಕಾಸಿ ಕೊಳ್ಳಬೇಕೆಂದು) ಒಬ್ಬ ಗೃಹಸ್ಥನು ಊದಿದನು, ಅದರ ಮೇಲಿನ ಬೂದಿಯು ಹಾರಿದ ಕೂಡಲೆ ಅದನ್ನು ಕಂಡು ಕಾ ಗೆಯು ಕೆಂಡವೆಂದು ತಿಳಿದು ಬಯಸಿ ಕೊಕ್ಕಿನಿಂದ ಕುಕ್ಕಿ ತಿಂ ದಿತು. ಆದ ಬಳಿಕ ಚಳಿಯು ಅತಿಶಯವಿನ್ನೆಷ್ಟೆಂತ ಹೇಳಲಿ!!

ಕಂದ॥ಪುಲ್ಲಿಕ್ಕಿ ಪೋಗೆ ಪಥಿಕ।
ರ್ಮೆಲ್ಲನೆ ಸುಡಲಾರದಗ್ನಿ ಹಿಮಸಮಯಮಹೀ॥
ವಲ್ಲಭನತ್ತಣಿನಗಿದೇಂ।

ಪುಲ್ಲಂ ಕರ್ಚಿದುದೊ ಬೇಳನಲ್ತೆಲ್ತೆಸಗುಂ॥೩॥

ಅರ್ಥ—ದಾರಿಯಲ್ಲಿ ಬಿದ್ದ ಬೆಂಕಿಯ ಮೇಲೆ ಹಾದಿಕಾರರು ಹುಲ್ಲನ್ನು ಹಾಕಿ ಹೋಗಿರಲು, ಚಳಿಯ ಯೋಗದಿಂದ ಆ ಬೆಂಕಿಯು ಅದನ್ನು ಸುಡಲಾರದೆ ಹಿಮವದೃತುವೆಂಬ ಅರಸನಿಗೆ ಹೆದರಿ ಹುಲ್ಲನ್ನು ಕಚ್ಚಿತೋ ಏನೋ ಅನ್ನುವ ಹಾಗೆಬಪ್ಪಿತು.

॥ಸ್ರಗ್ಧರಾವೃತ್ತ॥

ಏಳುತ್ತಂ ಮೆಲ್ಲನಲ್ಲಿಂ ಮರಿಯುಮರ್ದಿರೆ ಕೀಳ್ಪೊಟ್ಟೆ!
ಯೋಳ್ಸಕರ್ಗವೆತ್ತಾ
ಬಾಳಂ ಮೇಣ್ಪೊಳ್ಕ ನೋಡುತ್ತಸವಸದೆ ಬಿಸಿಲ್ಗೆತ್ತ ಜಿ
ರ್ಣಗಚ್ಛದಂಗಳ್॥
ಮೇಳಂಗೊಂಡೊಪ್ಪೆ ಶಾಖಾಗ್ರದೊಳಡರ್ದಲುಗಲ್ ಸೂಸ
ಮೇಲ್ವೈಕಿಲೆತ್ತ
ನಾಳೀಜಂಘಂ ಕರಂ ಪಲ್ದೆರೆದು ನಡುಗಿ ಹರ್ರೆಂದು ಪುಬಿ
ಕ್ಕಿತಾಗಳ್॥೪

ಅರ್ಥ—ಚಳಿಗಾಲದಲ್ಲಿ ಹೆಣ್ಣು ಮಂಗಗಳು ತಮ್ಮ ತಮ್ಮ ಮರಿಗಳನ್ನು ಹೊಟ್ಟೆಗೆ ಅವಚಿಕೊಂಡು ಮೆಲ್ಲನೆ ಎದ್ದು ಹೋಗುವಾಗ ಚಳಿಯಿಂದ ಸುಕ್ಕುಗಟ್ಟಿದ ಆ ಮರಿಗಳು ಮರದ ಮೇಲೆ ದಟ್ಟಾಗಿ ಒಪ್ಪುವ ಹಣ್ಣೆಲೆಗಳನ್ನು ಕಂಡು ಬಿಸಿಲೆಂದು ತಿಳಿದು ಶೀಘ್ರವಾಗಿ ಓಡಿ ಹೋಗಿ ಆ ಕೊಂಬೆಯನ್ನು ಏರಿ ಅಲುಗಿಸಲು, ಮೈ ಮೇಲೆಲ್ಲ ಮಂಜಿನ ಹನಿಗಳು ಸೂಸಿದ್ದರಿಂದ ಮಂಗಗಳು ನಡುಗಿ ಹರ್ರೆಂದು ಹಲ್ಕಿಸಿದು ಹುಬ್ಬು ಗಂಟಿಕ್ಕಿದವು.

Champu Ramayen and Champu Bharata with commentories in Canarese by Mr. Shantaviraya.

ಶಾಂತವೀರ ರಾಜದೇವ ಕೃತಕರ್ನಾಟಕ ವ್ಯಾಖ್ಯಾನಗಳು.

॥ಚಂಪೂಭಾರತಸವ್ಯಾಖ್ಯಾನೇ ಪ್ರಥಮಸ್ತಬಕಃ॥

॥ಮಾಲಿನೀವೃತ್ತಂ॥

ತುಹಿನಕಿರಣವಂಶಸ್ಥೂಲಮುಕ್ತಾಫಲಾನಾಂ।
ವಿಪುಲಭುಜವಿರಾಜದ್ವೀರಲಕ್ಷ್ಮೀವಿಭೂಮ್ನಾಂ॥
ಹಸಿತಸುರಪುರಶ್ರೀರಸ್ತಿಸಾಹಸ್ತಿನಾಖ್ಯಾ।
ರಿಪುಜನದುರವಾಪಾರಾಜಧಾನೀಕುರೂಣಾಂ॥೧॥

॥ಅನ್ವಯಃ॥

ತುಹಿನಕಿರಣವಂಶಸ್ಥೂಲಮುಕ್ತಾಫಲಾನಾಂ, ತುಹಿನಕಿರಣ=ಹಿಮಕಿರಣವುಳ್ಳ ಚಂದ್ರನ, ವಂಶ=ವಂಶದ (ಬಿದಿರಿನ) ಸ್ಥೂಲಮುಕ್ತಾಫಲಾನಾಂ=ಸ್ಥೂಲವಾದ ಮುತ್ತುಗಳಾದಂಥ ವಿಪುಲಭುಜವಿರಾಜದ್ವೀರಲಕ್ಷ್ಮೀವಿಭೂಮ್ನಾಂ, ವಿಪುಲ=ವಿಸ್ತಾರವಾದ, ಭುಜ=ಬಾಹುಗಳಲ್ಲಿ, ವಿರಾಜತ್=ಒಪ್ಪುವ, ವೀರಲಕ್ಷ್ಮೀ=ವೀರಲಕ್ಷ್ಮಿಯಿಂದ, ವಿಭೂಮ್ನಾಂ=ಅತಿಶಯವುಳ್ಳಂಥ; ಕುರೂಣಾಂ=ಕುರುದೇಶಾಧಿಪರ, ಹಸಿತಸುರಪುರಶ್ರೀಃ, ಹಸಿತ=ಹಾಸ್ಯಮಾಡಲ್ಪಟ್ಟ, ಸುರಪುರ=ಸ್ವರ್ಗದ, ಶ್ರೀಃ=ಶೋಭಾ ಸಂಪತ್ತುಳ್ಳಂಥ; ರಿಪುಜನದುರವಾಪಾ, ರಿಪುಜನ=ಶತ್ರುಜನರಿಂದ, ದುರವಾಪಾ=ಪಡೆಯಲ್ ಅಶಕ್ಯವಾದಂಥ; ಹಸ್ತಿನಾಖ್ಯಾ=ಹಸ್ತಿನಾವತಿಯೆಂಬ ಹೆಸರುಳ್ಳಂಥ, ಸಾ=ಆ ರಾಜಧಾನೀ=ರಾಜಧಾನಿಯು ಅಸ್ತಿ=ಇರುತ್ತದೆ.

॥ಶಾಸ್ತ್ರವಿಷಯಃ॥

ವ್ಯಾ—ವಿರಾಜತ್= (ವಿ+ರಾಜ್+ಅತ್) ವಿ ಎಂಬುದು

ಉಪಸರ್ಗ, ರಾಜ್ ಎಂಬ ಈ ಧಾತುವಿಗೆ ನಪುಂಸಕಲಿಂಗದ
ಲ್ಲಿ ಅಶ್ ಪ್ರತ್ಯಯ ಪರವಾಗಿ ವರ್ತಮಾನ ಕೃದ್ವ್ಯಾಚಿಯಾ
ಯ್ತು; ಅಸ್ತಿ=(ಅಸ್+ತಿ)ಅಸ್ ಎಂಬುದು ಅದಿ ಗಣ, ಉ
ಗ್ವಿಕರಣ, ಪರಸ್ಮೈಪದ, ತಿ ಎಂಬುವದು ಲಟ್, ವರ್ತಮಾ
ನಕಾಲ, ಪರಸ್ಮೈಪದ, ಪ್ರಥಮ ಪುರುಷ, ಏಕವಚನ, ಪ್ರ
ರಾಜಧಾನೀ ಕರ್ತೃ, ಅಸ್ತಿ ಕ್ರಿಯಾಪದ, ಅಕರ್ಮಕ. ಕ
ಪ್ರ. ಕುರೂಣಾಂ ಎಂಬ ವಿಶೇಷ್ಯಪದಕ್ಕೆ ಫಲಾನಾಂ, ವಿಭೂ
ಮ್ನಾಂ ಎಂಬ ಈ ಎರಡು ಪದಗಳು ವಿಶೇಷಣಗಳಾದವು;
ರಾಜಧಾನೀ ಎಂಬ ವಿಶೇಷಪದಕ್ಕೆ ಶ್ರೀಃ, ಆಖ್ಯಾ, ಅವ
ಪಾ, ಎಂಬ ಈ ಮೂರು ಪದಗಳು ವಿಶೇಷಣಗಳಾದವು. ವ
ಶ=ವಂಶಕ್ಕೂ ಬಿದರಿಗೂ ಈ ಶಬ್ದವು ಎರಡರ್ಥಗಳದ್ದ
ದಬಿದರಿನಲ್ಲಿ ಮುತ್ತುಗಳು ಹುಟ್ಟುತ್ತವೆ ಎಂಬುದು ಲೋ
ಕ ಪ್ರಸಿದ್ಧವು ಆ ಕಾರಣದಿಂದ ಇದು ಸಂಶ್ಲಿಷ್ಟ ರೂಪಕಾ
ಯಿತು. ಛಂ—ನ, ನ, ಮ, ಯ, ಯ, ಈ ಗಣಗಳು ಯು
ಕ್ತವಾಗಲು ಮಾಲಿನೀವೃತ್ತವಾಯಿತು.

॥ಭಾವಾರ್ಥಃ॥

ಚಂದ್ರವಂಶವೆಂಬ ಬಿದರಿನಲ್ಲಿ ಹುಟ್ಟಿದ ಮುಕ್ತಾಫ
ಳಾದಂಥ, ಬಾಹುಗಳಲ್ಲಿ ವೀರಲಕ್ಷ್ಮಿಯನ್ನು ಧರಿಸಿದ ಚ
ವರ್ತಿಗಳಾದಂಥ, ದುರ್ಯೋಧನ ಧರ್ಮರಾಜರ ರಾಜಧ
ಯು ಅಮರಾವತಿಯನ್ನು ಹಾಸ್ಯ ಮಾಡುವದಾಗಿಯೂ
ರಿಗಳಿಗೆ ಅಸಾಧ್ಯವಾಗಿಯೂ ಹಸ್ತಿನಾವತಿಯೆಂಬ ಹೆಸರು
ದ್ದಾಗಿಯೂ ಭೂಮಿಯಲ್ಲಿ ಶೋಭಿಸಿತು.

॥ಚಂಪೂರಾಮಾಯಣೇ ಸವ್ಯಾಖ್ಯಾನೇ ಬಾಲಕಾಂಡಃ॥

॥ವಸಂತತಿಲಕಾವೃತ್ತಂ॥

ಉಚ್ಚೈರ್ಗತಿರ್ಜಗತಿಸಿಧ್ಯತಿಧರ್ಮತಶ್ಚೇತ್।
ತಸ್ಯಪ್ರಮಾಚವಚನೈಃಕೃತಕೇತರೈಶ್ಚೇತ್॥
ತೇಷಾಂಪ್ರಕಾಶನದಶಾಚಮಹೀಸುರೈಶ್ಚೇತ್।
ತಾನಂತರೇಣನಿಪತೇತ್ಕ್ವನುಮತ್ಪ್ರಣಾಮಃ॥ ೨॥

॥ಅನ್ವಯಃ॥

ಜಗತಿ=ಲೋಕದಲ್ಲಿ, ಉಚ್ಚೈರ್ಗತಿಃ, ಉಚ್ಚೈರ್=ಉನ್ನತವಾದ, ಗತಿಃ=ಸ್ವರ್ಗಸ್ಥಾನವು, ಧರ್ಮತಃ=ಹೋಮಾದಿಧರ್ಮಗಳಿಂದ, ಸಿಧ್ಯತಿಚೇತ್=ಸಿದ್ಧಿಸಿದರೆ, ಚ, ತಸ್ಯ=ಆ ಧರ್ಮದ, ಪ್ರಮಾ=ಯಥಾರ್ಥಜ್ಞಾನವು, ಕೃತಕೇತರೈಃ=ಅಕೃತ್ರಿಮವಾದಂಥ, ವಚನೈಃ=ಮಹಾವಾಕ್ಯಗಳಿಂದ, ಸಿಧ್ಯತಿಚೇತ್=ಸಿದ್ಧಿಸಿದರೆ, ಚ, ತೇಷಾಂ=ಆ ವಾಕ್ಯಗಳ, ಪ್ರಕಾಶನದಶಾ=ಜ್ಯೋತಿರ್ದಶೆಯು, ಮಹೀಸುರೈಃ=ಬ್ರಾಹ್ಮಣರಿಂದ, ಸಿಧ್ಯತಿಚೇತ್=ಸಿದ್ಧಿಸಿದರೆ, ತಾನಂತರೇಣ=ಆ ಬ್ರಾಹ್ಮಣರ ಹೊರತಾಗಿ, ಮತ್ಪ್ರಣಾಮಃ, ಮತ್=ನನ್ನ, ಪ್ರಣಾಮಃ=ನಮಸ್ಕಾರವು, ನಿಪತೇತ್=ಪ್ರವರ್ತಿಸುವದು, ಕ್ವನು=ಯಾವಲ್ಲಿ.

॥ಶಾಸ್ತ್ರವಿಷಯಃ॥

ವ್ಯಾ.—ಸುರೈಶ್ಚೇತ್= (ಸುರೈಃ+ಚೇತ್) ವಿಸರ್ಗದ ಮುಂದೆ ಚಛ ಬರಲು ಆವಿಸರ್ಗವು ಶಕಾರವಾಗುವದು; ಸಿಧ್ಯತಿ=(ಸಿದ್ಧ್ಯತಿ) (ಷಿಧ್+ಯ್+ತಿ)ಷಿಧ್ಎಂಬುದು ನಾಲ್ಕನೆಗಣದ ಧಾತು, ಯ್ ಎಂಬುದು ಶ್ಯವಿಕರಣ, ತಿ ಎಂಬುದು ಲಟ್, ವರ್ತಮಾನಕಾಲ, ಪರಸ್ಮೈಪದ, ಪ್ರಥಮಪುರುಷ, ಏಕವಚನ; ನಿಪತೇತ್=(ನಿ+ಪತ್+ಏತ್)ನಿ ಎಂಬುದು ಉಪಸರ್ಗ, ಪತ್ಎಂಬುದು ೧ ನೆ ಗಣದಧಾತು, ಏ

ತ್ ಎಂಬುದು ವಿಧಿಲಿಙ್, ಪರಸ್ಮೈಪದ, ಪ್ರಥಮಪುರುಷ, ಏಕವಚನ; ಪ್ರ—ಪ್ರಣಾಮಃ ಕರ್ತೃ, ನಿಪತೇತ್ ಕ್ರಿಯಾಪದ, ಅಕರ್ಮಕ. ಕ. ಪ್ರ.; ಧರ್ಮತಃ=(ಧರ್ಮ+ತಃ) ಈ ಧರ್ಮಶಬ್ದಕ್ಕೆ ಪಂಚಮ್ಯರ್ಥದಲ್ಲಿ ತಸಿಪ್ರತ್ಯಯ ಪರವಾಯಿತು; ಅ.—ಏಕಾವಳ್ಯಲಂಕಾರ. ಛಂ—ತ, ಭ, ಜ, ಜ, ಎರಡು ಗುರುಗಳು ಇವು ಯುಕ್ತವಾಗಲು ವಸಂತತಿಲಕಾವೃತ್ತಂ ಎನಿಸುವದು.

ಭಾವಾರ್ಥ

ಹೋಮಾದಿ ಧರ್ಮಗಳಿಂದ ಸದ್ಗತಿಯೂ ವೇದವಾಕ್ಯಗಳಿಂದ ಆ ಧರ್ಮಗಳ ಯಥಾರ್ಥಜ್ಞಾನವು ಬ್ರಾಹ್ಮಣರಿಂದ ಆ ಜ್ಞಾನದ ವಾಕ್ಯಾರ್ಥತ್ವವೂ ಲೋಕದಲ್ಲಿ ಪ್ರಾಪ್ತವಾದರೆ ಆ ಬ್ರಾಹ್ಮಣರನ್ನು ಕುರಿತು ನಮಸ್ಕಾರ ಮಾಡುವೆನು.

ಶಾ. ರಾ. ಕಿ.

EDUCATIONAL INTELLIGENCE.

ವಿದ್ಯಾಖಾತೆಯ ವರ್ತಮಾನಗಳು.

ವಿದ್ಯಾಖಾತೆಯ ಡಾಯರೆಕ್ಟರರಾದ ಮೆಹರ್ಬಾನ್ ಪೀಲಥೊರೆಗಳು ತ್ವರಿತಕ್ಕೆ (ಸುಮಾರು ೬ ತಿಂಗಳುಗಳವರೆಗೆ) ಮುಂಬಯಿಯ ಮ್ಯುನಿಸಿಪಲ ಕಮಿಶನರರ ಕೆಲಸಕ್ಕೆ ನೇಮಿಸಲ್ಪಟ್ಟರು.

ಎಲ್ಫಿನ್‌ಸ್ಟನ್ ಕಾಲೇಜದ ಪ್ರಿನ್ಸಿಪಾಲರಾದ ಮೆಹರ್ಬಾನ್ ಚಾಟಫೀಲ್ಡ ಥೊರೆಗಳು, ಪೀಲಥೊರೆಗಳು ತಿರುಗಿ ಬರುವತನಕ, ಡಾಯರೆಕ್ಟರರಾಗಿ ನೇಮಿಸಲ್ಪಟ್ಟರು.

ಪುಣೆಯೊಳಗಿನ ಡೆಕ್ಕನ್‌ಕಾಲೆಜದ ಪ್ರಿನ್ಸಿಪಾಲರಾದ ಮೆಹರ್ಬಾನ್ ವರ್ಡ್ಸ್ವರ್ಥಧೊರೆಗಳು ತ್ವರಿತಕ್ಕೆ ಎಲ್ಫಿನ್‌ಸ್ಟನ್ ಕಾಲೇಜದ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟರು.

ಅವರಸ್ಥಳದಲ್ಲಿ ಅದೇ ಡೆಕ್ಕನ್ ಕಾಲೇಜದೊಳಗಿನ ಸಂಸ್ಕೃತ ಪ್ರೊಫೆಸರರಾದ ಮೆಹರ್ಬಾನ್ ಕಿಲಹಾರ್ನಧೊರೆಗಳು ನೇಮಿಸಲ್ಪಟ್ಟರು.

ನಮ್ಮದಕ್ಷಿಣಭಾಗದ ಅಕ್ಟಿಂಗ ಎಜುಕೇಶನಲ್ ಇನಸ್ಪೆಕ್ಟರರಾದ ಮೆಹರ್ಬಾನ್ ಕ್ಯಾಂಡೀಧೊರೆಗಳನ್ನು ವಹ್ರಾಡಪ್ರಾಂತದಲ್ಲಿ ಡಾಯರೆಕ್ಟರರ ಕೆಲಸಕ್ಕೆ ನೇಮಿಸಿದರಿಂದ ಅವರಸ್ಥಳದಲ್ಲಿ ಬೆಳಗಾವೀಜಿಲ್ಲೆಯ ಸುಪರನ್ಯೂಮರರೀ ಅಸಿಸ್ಟಾಂಟ ಕಲೆಕಟರರಾದ ಮೆಹರ್ಬಾನ್ ಜೇ. ಎಫ್. ಫ್ಲೀಟ ಧೊರೆಗಳು ನೇಮಿಸಲ್ಪಟ್ಟು, ಅವರು ಈ ತಿಂಗಳಲ್ಲಿ ಈಹೊಸಕೆಲಸದ ಚಾರ್ಜತೆಗೆದು ಕೊಂಡರು. ಕ್ಯಾಂಡಿಧೊರೆಗಳು ೧೨ನೇ ತಾರೀಖಿನಲ್ಲಿ ವಹ್ರಾಡಕ್ಕೆ ಹೋದರು.

ಕಲಾದಗೀಜಿಲ್ಲೆಯ ಮಾಜೀ ಡೆ. ಇನಸ್ಪೆಕ್ಟರರಾದ ರಾ. ರಾ. ವಿಶ್ವನಾಥ ವಿಷ್ಣುಗುರ್ಜರ ಇವರುವೊಂದು ಫೌಜದಾರಿ ಪ್ರಕರಣದಲ್ಲಿ ಸಾಕ್ಷ್ಯಯುಸಲುವಾಗಿ ಈಗ ಬೆಳಗಾವಿಗೆ ಬಂದಿರುತ್ತಾರೆ.

ಕಲಾದಗೀಜಿಲ್ಲೆಯ ಈಗಿನ ಡೆ. ಇನಸ್ಪೆಕ್ಟರರಾದ ರಾ.ರಾ. ಹಣಮಂತ ರಾಮಚಂದ್ರ ಶಿರಟ್ಟೀ ಇವರು ಸರಕಾರೀ ಕೆಲಸದನಿಮಿತ್ತವಾಗಿ ಬೆಳಗಾವಿಗೆ ಬಂದಿರುತ್ತಾರೆ.

ರಾಜಶೇಖರ ವಿಲಾಸದ ಪ್ರಥಮಾಶ್ವಾಸವನ್ನು ರಾ. ರಾ. ಗಂಗಾಧರ ಮಡಿವಾಳೇಶ್ವರ ತ್ರಾ. ಎ. ಇವರು ಟೀಕಿಸಿ ಸ್ವಂತ ವೆಚ್ಚದಿಂದ ಛಾಪಿಸಿದರು. ಅದರಿಂದ ಇವರಿಗೆ ಸರಕಾರದವರು ೨೦೦ ರೂಪಾಯಿ ಇನಾಮು ಕೊಟ್ಟರು, ಹಾಂಗೂ ವೆಚ್ಚ ಮಾಡಿದ ೪೩೦ ರೂಪಾಯಿ ಕೊಟ್ಟು ಇವರಕಡೆಯಿಂದ ೮೦೦ ಪ್ರತಿಗಳನ್ನು ತಕ್ಕೊಂಡರು.

ಮುಂದಿನ ಆಶ್ವಾಸಗಳನ್ನು ಚನ್ನಾಗಿ ಟೀಕಿಸಿದವರಿಗೆ ನಾ. ಡೈರೆಕ್ಟರಧೊರೆಗಳು ಪ್ರತಿ ಆಶ್ವಾಸಕ್ಕೆ ೨೦೦ ರೂಪಾಯಿಗಳಂತೆ ಇನಾಮು ಕೊಡಲೊಡಂಬಟ್ಟಿರುತ್ತಾರೆ.

ಹೊಸಪುಸ್ತಕವು.

ಧಾರವಾಡಜಿಲ್ಲೆಯ ಡಿ. ಇನಸ್ಪೆಕ್ಟರರಾದ ರಾ. ರಾ. ಚನಬಸಪ್ಪ ಬಸಲಿಂಗಪ್ಪ ಇವರು ಇಂಗ್ಲಿಶದಿಂದ ಕನ್ನಡಭಾಷೆಯೊಳಗೆ ಭಾಷಾಂತರಮಾಡಿ, ಧಾರವಾಡದೊಳಗೆ ಶಿಲಾಯಂತ್ರದಲ್ಲಿ ಛಾಪಿಸಿದ "ನಗದವರನ್ನು ನಗಿಸುವಂಥ್ದಬಂದು ಬಹುಚಮತ್ಕಾರವಾದ ಕಥೆಯು" ಯೆಂಬ ಪುಸ್ತಕದ್ದೊಂದು ಪ್ರತಿಯನ್ನು ನಮಗೆ ಕಳುಹಿಸದಂತೆ ನಾವು ಅತ್ಯಾದರಪೂರ್ವಕವಾಗಿ ಅದನ್ನು ಸ್ವೀಕರಿಸುತ್ತೇವೆ. ಈ ಪುಸ್ತಕದಬಗ್ಗೆ ನಮ್ಮ ಅಭಿಪ್ರಾಯವನ್ನು ಬೇಗ ಪ್ರಕಟಿಸುವೆವು-

A FABLE.

ದಂತಕಥೆ

" ಸಂಸಾರ ಮಾಡುವ ಜಾಣತನದ ವಿಷಯಕ್ಕೆ
ತಂದೆಯಿಂದ ಮಕ್ಕಳಿಗೆ ಉಪದೇಶವಾದಬಗ್ಗೆ "

ಒಂದು ಪಟ್ಟಣದಲ್ಲಿ ರಾಚಪ್ಪನೆಂಬ ಒಬ್ಬ ಶೆಟ್ಟಿ ಇರು

ತ್ತಿದ್ದನು. ಅವನಿಗೆ ಬಸವನೂ, ಶಿವಲಿಂಗನೂ, ಎಂಬ ಇಬ್ಬರು ಮಕ್ಕಳಿದ್ದರು. ಶೆಟ್ಟಿಯು ಬಹಳ ಸಾವಕಾರನೂ, ಬುದ್ಧಿಯು ವ್ಯವಹಾರದ ವಿಷಯಕ್ಕೆ ಬಹು ಜಾಣನೂ, ಆಗಿದ್ದನು. ಮುಂದೆ ಕೆಲವು ಕಾಲದನಂತರ ಆ ಶೆಟ್ಟಿಯು ಮೈಯಲ್ಲಿ ಯೇನೋ ಒಂದು ರೋಗ ಹುಟ್ಟಿ ಕೇವಲ ಅದರಿಂದ ಅಶಕ್ತನಾದನು. ಹಾಂಗು, ತಾನು ಈ ರೋಗದಿಂದ ಇನ್ನು ಉಳಿಯುವದಿಲ್ಲೆಂದು ತಿಳಿದು, ಆತನು ತನ್ನ ಇಬ್ಬರು ಮಕ್ಕಳನ್ನು ಹತ್ತಿರ ಕರೆದು ಅವರಿಗೆ ಕೆಲವು ಉಪದೇಶಗಳನ್ನು ಹೇಳಿದ್ದೇನಂದರೆ—ಈಗ ನಾನಂತು ಉಳಿಯುವದಿಲ್ಲ, ಆದದರಿಂದ ನನ್ನ ಹತ್ತಿರಿದ್ದ ಸಂಚಿತ(ದ್ರವ್ಯ), ವನ್ನು ನಿಮ್ಮಿಬ್ಬರಿಗೂ ಸಮವಾಗಿ ಹಂಚಿಕೊಡುತ್ತೇನೆ, ಮತ್ತು, ನಾನು ಹೇಳಿದಂತೆಯೇ ನೀವು ನಿಮ್ಮ ನಿಮ್ಮ ಸಂಸಾರವನ್ನು ಸಾಗಿಸುತ್ತ ಹೋಗಿರಿ. ನೀವು ಪ್ರತಿ ಒಂದು ಊರಲ್ಲಿ ಒಂದೊಂದು ಮನೆ ಕಟ್ಟುತ್ತ ಹೋಗರಿ. ಹಾಂಗು, ಯಾರಿಗಾದರು ಕೊಟ್ಟಿರುವ ಸಾಲವನ್ನು ಮರಳಿ ಕೇಳಬೇಡರಿ. ಹಾಂಗು, ಮೆತ್ತಗೆ ಮಾಡಿಕೊಂಡು ಮಲಕೊಳ್ಳರಿ. ಮತ್ತು, ಕಮ್ಮಗೆ ಮಾಡಿಕೊಂಡುಣ್ಣಿರಿ; ಎಂದು ಈ ಪ್ರಕಾರ ಮುಖ್ಯವಾದ ನಾಲ್ಕು ಸದುಪದೇಶದ ಮಾತುಗಳನ್ನು ಹೇಳಿದನಂತರ ಸ್ವಲ್ಪ ದಿವಸದೊಳಗೆ ರಾಚಪ್ಪ ಶೆಟ್ಟಿಯು ಮೃತ ಹೊಂದಿದನು. ಆಗಲವನ ಮಕ್ಕಳಿಬ್ಬರಲ್ಲಿ ಹಿರಿಯ ಮಗನಾದ ಬಸವನು, ಸ್ವಲ್ಪ ದಡ್ಡನೂ, ಯುಕ್ತಿ ಇಲ್ಲದವನೂ, ಹಾಂಗು, ಅವಿಚಾರಿಯೂ, ಆಗಿದ್ದನು. ಮತ್ತು, ಎರಡನೇ(ಚಿಕ್ಕ)ಮಗನಾದ ಶಿವಲಿಂಗನು ಕೇವಲ ಜಾಣನೂ, ಯುಕ್ತಿವಂತನೂ, ಹಾಂಗು, ವಿಚಾರ ಶಕ್ತಿಯುಳ್ಳವನೂ, ಆಗಿದ್ದನು. ಹೀಗಿರ

ಲು ಹಿರಿಯ ಮಗನು ತಮ್ಮ ತಂದೆಯು ಸಾಯುವಾಗ್ಯೆ ಹೇಳಿದಂತೆ, ಪ್ರತಿ ಒಂದು ಊರಲ್ಲಿ ಲಕ್ಷಾವಧಿ ರೂಪಾಯಿಗಳ ತನಕ ವೆಚ್ಚಮಾಡಿ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಲಾರಂಭಿಸಿದನು; ಹಾಂಗು, ಯಾರಾದರು ತನ್ನ ಹತ್ತಿರ ಬೇಕಾದಷ್ಟು ಸಾಲವನ್ನು ಬೇಡಲಿಕ್ಕೆ ಬಂದಗಳಗ್ಯೆ ಅವರಿಗೆ ಕೊಟ್ಟು, ಮರಳಿ ಅವರನ್ನು ಕೊಟ್ಟ ಸಾಲ ಕೇಳುತ್ತಿದ್ದಿಲ್ಲ, ಇದರ ಅರ್ಥವೇ ಅವನಿಗ ಕೊಟ್ಟ ಸಾಲವನ್ನು ಕೇಳಬಾರದೆಂದು ತಿಳಿದಿತ್ತು. ಹಾಂಗು, ಎಷ್ಟೋ ಹಣ ವೆಚ್ಚಮಾಡಿ ಗಾದಿ ಲೇಪು ಮುಂತಾದ ಬಹು ಕ್ರಯವುಳ್ಳ ಮೆತ್ತಗಿನ ಹಾಸಿಕೆಯ ಸಾಮಾನುಗಳನ್ನೂ, ಹೊದ್ದು ಕೊಳ್ಳುವದಕ್ಕಾಗಿ ಚಲೋ ಚಲೋ ಶ್ರೇಷ್ಟ ಬಟ್ಟೆಗಳನ್ನೂ, ಮಾಡಿಸಿಕೊಂಡು ಮೆತ್ತಗೆ ಮಾಡಿ ಮಲಗಿಕೊಳ್ಳುತ್ತಾ ಹೋದನು, ಇದರ ಅರ್ಥವೇ ಅವನು ಮೆತ್ತಗೆ ಮಾಡಿ ಮಲಕೊಂಬೋಣವೆಂದು ತಿಳಿದಿದ್ದನು. ಮತ್ತು, ತರತರದ ಪಂಚಪಕ್ವಾನ್ನಗಳನ್ನೂ, ಮತ್ತೂ ಕೆಲವು ಕಮ್ಮಗಿನ ಖಾದ್ಯಗಳನ್ನೂ ಈ ಪ್ರಕಾರ ಪಾಕ ಮಾಡಿಸಿ ಕಮ್ಮನ ಊಟ ಮಾಡುತ್ತಾ ಇರುತ್ತಿದ್ದನು, ಇದರ ಅರ್ಥವೇ ಅವನು ಕಮ್ಮಗೆ ಮಾಡಿಕೊಂಡು ಉಂಬೋಣವೆಂದು ತಿಳಿದಿದ್ದನು. ಈ ಮೇರೆಗೆ ತನ್ನ ಸಂಸಾರದ ಕ್ರಮ ವಿಡಿಸುತ್ತಾ ನಡದಿರಲು "(ಕೂತು ತಿಂದರೆ ಕುಡಿಕೆ ಹಣ ಸಹ ಸಾಲದು) ಎಂಬ ಗಾದೆಯಂತೆ ಸ್ವಲ್ಪ ದಿವಸದಲ್ಲಿಯೇ ಅವನ ಹತ್ತಿರಿದ್ದ ಹಣವೆಲ್ಲ ಸರಿದು ಕೇವಲದರಿದ್ರನಾದನು; ಈ ಪ್ರಕಾರ ಹಿರಿಯವನ ಗತಿಯಾಯಿತು.

(ಮುಂದಕ್ಕೆ ಸಾಗುವದು).

ಶಾಲಾಪತ್ರಕವು.

———ooo———

ಪುಸ್ತಕ ೮] [ಸಂಚಿಕೆ ೪.

ಬೆಳಗಾವಿ, ಮಾಹೆ ಜುಲಾಯಿ ೧೮೭೨.

SELF HELP.

ತನಗೆ ತಾನೇ ನೆರವಾಗುವದು.

ದೇಶಾಚಾರದಬಲವೂ, ಪಾರ್ಲಿಮೆಂಟ ಸಭೆಯ ಕಾಯ್ದೆ
ಗಳಬಲವೂ ಸಹ ಜನರ ಮೂಢಭಕ್ತಿಯಿಂದಲೇ ಈಗ ನಡೆ
ಯುತ್ತದೆಂದೆನ್ನಬಹುದು—ಅಯರ್ಲಂಡದ ನಿಜವಾದ ದೇಶಾ
ಭಿಮಾನಿಯನ್ನಿಸಿಕೊಂಡ ವುಯಿಲಿಯಂದಾರ್ಗನ ಯೆಂಬವ
ನು ದಬ್ಲಿನಪಟ್ಟಣದ ಕಲಾಕೌಶಲ್ಯಗಳ ಪ್ರದರ್ಶನದ ಸಮಾ
ಪ್ತಿಯಲ್ಲಿ ಅಂದದ್ದು ಇಲ್ಲಿ ಬರೆಯಲಿಕ್ಕೆ ತಕ್ಕದ್ದು. ಅವ
ನು ಯೇನಂದನೆಂದರೆ," ನಾನು ನಿಜವಾಗಿ ಹೇಳುತ್ತೇನೆ,
ಸ್ವಾತಂತ್ರ್ಯವೆಂಬ ಶಬ್ದವನ್ನು ನುಡಿದದ್ದು ಕೇಳಿ ನನಗೆ ನ
ನ್ನಸ್ವಂತ ದೇಶದ್ದೂ, ಊರವರದೂ ಸ್ಮರಣವಾಗದೆ ಯೆಂ
ದೂ ನಿಲ್ಲಲಿಲ್ಲ. ಈ ಸ್ಥಳದಿಂದ ಆ ಸ್ಥಳದಿಂದ,
ಬೇರೊಂದು ಸ್ಥಳದಿಂದ ನಮಗೆ ಸಿಕ್ಕುವದೆಂದು ಕೋ
ರಿದ ಸ್ವಾತಂತ್ರ್ಯವನ್ನೂ, ಪರದೇಶಗಳಿಂದ ನಮ್ಮೊಳಗೆ
ಬರುವ ಜನರಿಂದಲುಂಟಾಗುವ ದೊಡ್ಡ ಲಾಭಗಳನ್ನೂ ಕು
ರಿತು ನಾನು ಬಹಳಸಾರೆ ಕೇಳಿದ್ದೇನೆ. ಪರದೇಶದ ಜನರ
ಸಂಗಡ ವ್ಯವಹಾರ ನಡಿಸುವದರಿಂದ ನಮಗೆ ಆಗುವ ಲಾಭ

ಗಳಿಗೆ ಯೆಲ್ಲರಂತೆ ನಾನಾದರೂ ಪ್ರಾಣಕೊಡುತ್ತೇನೆ; ಆದರೂ ನಮ್ಮ ಉದ್ಯೋಗಸಂಬಂಧದ ಸ್ವಾತಂತ್ರ್ಯವು ನಮ್ಮನ್ನೇ ಅವಲಂಬಿಸಿಕೊಂಡಿರುತ್ತದೆಂದು ನಾನು ಯಾವಾಗಲೂ ನಿಶ್ಚಯವಾಗಿ ತಿಳಿದುಕೊಂಡಿದ್ದೇನೆ. ನಮ್ಮ ಶಕ್ತಿಯನ್ನು ಜಾಗ್ರತೆಯಿಂದ ನೇಮಕವಾಗಿ ಪ್ರಯೋಗಿಸಿ ಸುಲಭವಾದ ಉದ್ಯೋಗಗಳನ್ನು ನಡಿಸುವಂಥ ನಮಗೆ ಈಗಿನದಕ್ಕಿಂದ ಹೆಚ್ಚಿಗೆ ಒಳಿತಾದೈಶ್ವರ್ಯವೂ, ಸುಭಿಕ್ಷವೂ ಯಾವುದೂ ಬರಲಿಲ್ಲೆಂದು ನಾನು ನಂಬುತ್ತೇನೆ. ನಾವು ಒಳ್ಳೇ ಕೆಲಸಕ್ಕೆ ಕೈಹಾಕಿದ್ದೇವೆ, ಆದರೆ ನಮ್ಮ ಕೋರಿಕೆಯು ಕೈಗೂಡಬೇಕಾದರೆ ನಮ್ಮ ಮನಸ್ಸಿನ ದೃಢನಿಶ್ಚಯವೇ ಕಾರಣವಾಗಿರುತ್ತದೆ. ನಾವು ಮನಮುಟ್ಟಿ ನಮ್ಮ ಉದ್ಯೋಗವನ್ನು ಮಾತ್ರ ನಡಿಸಿದರೆ ಬೇಕಾದ ಜನರಿಗೆ ಸರಿಯಾಗಿ ಅನುಕೂಲವುಳ್ಳವರೂ, ಸುಖಿಗಳೂ, ಸ್ವತಂತ್ರರೂ ಆಗುವೆವು."

ಯೆಲ್ಲ ದೇಶಗಳು ತಮ್ಮತಮ್ಮೊಳಗಿನ ನಿವಾಸಿಗಳ ಪೂರ್ವಿಕರಾದ ಅನೇಕಜನರಿಂದ ನಡಿಸಲ್ಪಟ್ಟ ವಿಚಾರಗಳಿಂದಲೂ, ಕೃತ್ಯಗಳಿಂದಲೂ, ಈಗಿನ ಸ್ಥಿತಿಗೆ ಬಂದಿರುತ್ತವೆ. ಸಮಾಧಾನವೃತ್ತಿಯುಳ್ಳವರಾಗಿ ದೃಢನಿಶ್ಚಯದಿಂದ ಕೆಲಸ ಮಾಡುವ ಜನರು, ಯಾವವರ್ಗದವರೇ ಇರಲಿ, ಯಾವಸ್ಥಿತಿಯವರೇ ಇರಲಿ—ಭೂಮಿಯ ಹಸನಮಾಡುವವರೂ, ಖನಿಗಳನ್ನು ಹುಡಿಕಿತೆಗೆಯುವವರೂ, ಹೊಸವಸ್ತುಗಳನ್ನು ಹುಟ್ಟಿಸುವವರೂ, ಹೊಸಶೋಧಗಳನ್ನು ಮಾಡುವವರೂ, ನಮ್ಮ ನಿತ್ಯಕ್ರಮದಲ್ಲಿ ಬೇಕಾಗುವ ವೊಡವೆಗಳನ್ನು ಮಾಡುವವರೂ, ಯಾಂತ್ರಿಕರೂ, ಶಿಲ್ಪಿಗರೂ, ಕವಿಗಳೂ, ತತ್ವಜ್ಞಾನಿಗಳೂ, ರಾಜನೀತಿಜ್ಞರೂ—ಇವರೆಲ್ಲರು ತಮ್ಮತಮ್ಮ ದೇಶ

ಗಳಲ್ಲಿ ಈಗ ಒದಗಿದ ಭವ್ಯವಾದ ಪರಿಣಾಮಕ್ಕೆ ಸಹಾಯಿಗಳಾಗಿದ್ದಾರೆ. ಒಂದು ತಲೆಯವರು ತಮ್ಮ ಹಿಂದಿನ ತಲೆಯವರು ಮಾಡಿದ ಕೆಲಸಗಳ ಮೇಲೆ ಕಲ್ಪನೆಗಳನ್ನು ರಚಿಸಿ ಹೆಚ್ಚು ಹೆಚ್ಚು ಸುಧಾರಣೆಯುಳ್ಳವರಾಗುತ್ತ ನಡೆದರು. ಸುಧಾರಣೆಯೆಂಬ ಮಂದಿರವನ್ನು ಕಟ್ಟುವ ಶಿಲ್ಪಿಗರಾದ ಈ ಸತ್ಕಾರ್ಯಕರ್ತರು ಒಬ್ಬರಹಿಂದೊಬ್ಬರು ಯೆಡೆಬಿಡದೆ ಬಂದದರಿಂದ ಉದ್ಯೋಗ, ಶಾಸ್ತ್ರ, ಕಲೆಗಳಲ್ಲಿ ಮೊದಲಲಿದ್ದ ಅವ್ಯವಸ್ಥೆಯು ಹೋಗಿ ವ್ಯವಸ್ಥೆಯುಂಟಾಯಿತು. ಈಮೇರಿಗೆ ಸೃಷ್ಟಿಕ್ರಮದಲ್ಲಿ ಈಗಿನ ಕಾಲದ ಜನರು ತಮ್ಮ ಪೂರ್ವಜರ ಉದ್ಯೋಗ ಚಾತುರ್ಯಗಳಿಂದ ಸಾಧಿಸಲ್ಪಟ್ಟ ಘನವಾದ ಆಸ್ತಿಗೆ (ಸುಧಾರಣೆಗೆ) ಬಾಧ್ಯರಾದರು; ಇದೇ ಆಸ್ತಿಯನ್ನು ನಾವು ಕೆಡಿಸದೆ, ಹೆಚ್ಚಿಗೆ ತಿದ್ದಿ ನಮ್ಮ ಮುಂದಿನ ವಂಶಿಕರಿಗೆ ಕೊಡಬೇಕಾಗಿದೆ.

ಬೇರೆಬೇರೆ ಮನುಷ್ಯರು ಆಲಸ್ಯಬಿಟ್ಟು ಮಾಡಿದ ಕೆಲಸಗಳಲ್ಲಿ ವ್ಯಕ್ತವಾದ ಆತ್ಮ ಸಹಾಯದ ಹವಣಿಕೆಯು ಯಾವಾಗಲೂ ಇಂಗ್ಲಿಷಜನರ ನಡತೆಯ ಮುಖ್ಯ ಕುರುಹಾಗಿದೆ. ಇದರಿಂದ ಇಂಗ್ಲಿಷರ ದೇಶದ ಶಕ್ತಿಯ ನಿಜವಾದ ಪರಿಮಾಣವು ತಿಳಿಯುತ್ತದೆ. ಸಾಧಾರಣ ಜನ ಸಮುದಾಯದೊಳಗಿಂದ ಒಡೆದು ಕಾಣಿಸುವವರಾಗಿ, ಯೆಲ್ಲರಿಗಿಂತ ಹೆಚ್ಚು ಪ್ರಸಿದ್ಧಿಯಪಟ್ಟು, ಸಮಸ್ತರಿಂದ ಬಹುಮಾನಹೊಂದಿದಂಥ ವ್ಯಕ್ತಿಗಳ ಮಾಲಿಕೆಯು ಇಂಗ್ಲಿಷರಲ್ಲಿ ಯಾವಾಗಲೂ ಕಂಡು ಬಂದವೆ. ಆದರೆ ಆವರ ಸುಧಾರಣೆಯು ಕಡಿಮೆ ಪ್ರಸಿದ್ಧರಾದ ಸಾಧಾರಣತರದ ಮನುಷ್ಯರ ಸಮುದಾಯಗಳಿಂದ ಸಹ ಉಂಟಾಗಿದೆ. ಯಾವದೊಂದು ದೊಡ್ಡ ಕಾಳಗದ ಇತಿಹಾಸ

ಪಲ್ಲಿ ದಳವಾಯಿಗಳ ಹೆಸರುಗಳೇ ಜನರ ನೆನಪಿನಲ್ಲಿ ನಿಂತಾಗ್ಯೂ, ಬಹುಶಃ ಒಬ್ಬೊಬ್ಬ ಬಂಟನ ಶೌರ್ಯದಿಂದಲೂ, ಪರಾಕ್ರಮದಿಂದಲೂ ಜಯಗಳು ಸಂಪಾದಿಸಲ್ಪಟ್ಟವು. ಮನುಷ್ಯನ ಜನ್ಮವಾದರೂ ಶಿಪಾಯಿಯ ಯುದ್ಧದಂತೆಯೇ ಉಂಟು; *ರಾಂಕಿನಲ್ಲಿ ಇರುವ ಮನುಷ್ಯರು ಹೆಚ್ಚು ಕೆಲಸಮಾಡಬೇಕಾಗುತ್ತದೆ. ಬಹುಜನರ ಚರಿತ್ರಗಳು ಬರೆಯಲ್ಪಡಲಿಲ್ಲ; ಆದರೂ ಹೆಚು ದೈವಶಾಲಿಗಳಾಗಿ ಚರಿತ್ರಗಳಲ್ಲಿ ವರ್ಣಿಸಿಕೊಳ್ಳಲ್ಪಟ. ದೊಡ್ಡ ಮನುಷ್ಯರ ಕೃತ್ಯಗಳು ಸಾಧಾರಣರಿಗೆ ಎಷ್ಟು ಬಲಕೊಟ್ಟವೋ, ಅಷ್ಟೇ ಅವರ ಕೃತ್ಯಗಳು ಬಲಕೊಟ್ಟವು. ಉದ್ಯೋಗ, ತಾಳ್ಮೆ, ಪ್ರಮಾಣಿಕತನಗಳ ಉದಾಹರಣೆಯನ್ನು ತನ್ನ ನೆರೆಯವರ ಕಣ್ಣುಮುಂದೆ ಇಡುವಂಥ ಕೇವಲ ನೀಚಾವಸ್ಥೆಯ ಮನುಷ್ಯನು ಸಹ ತಾನು ಇರುವಾಗಲೂ, ಸತ್ತನಂತರವೂ, ತನ್ನ ದೇಶದ ಹಿತವನ್ನು ಸಾಧಿಸುತ್ತಾನೆ. ಯಾಕಂದರೆ ಅವನ ವ್ಯವಹಾರವೂ, ನಡತೆಯೂ ಯಾರಿಗೂ ತಿಳಿಯದೆ ಎರಡನೆಯವರ ವ್ಯವಹಾರಗಳಲ್ಲಿ ಸೇರಿಕೊಂಡು ಯಾವಾಗಲೂ ಒಳ್ಳೇ ಉದಾಹರಣೆಯನ್ನುಂಟುಮಾಡುತ್ತವೆ.

ನಮ್ಮ ದಿನಚರ್ಯದ ಅನುಭವಗಳಿಂದ ತಿಳಿಯುವದೇನಂದರೆ, ಬೇರೆಬೇರೆ ಜನರು ತಮ್ಮ ತಮ್ಮ ಉದ್ಯೋಗಗಳನ್ನು ಆಲಸ್ಯ ಬಿಟ್ಟು ನಡಿಸುವದನ್ನು ನೋಡಿ ಎರಡನೇಯವರು ತಮ್ಮ ನಡತೆಯನ್ನೂ ಉದ್ಯೋಗವನ್ನೂ ತಿದ್ದಿಕೊ

---

* ರಾಂಕಂದರೆ, ಶಿಪಾಯಿಗಳ ಸಾಲು, ಅಥವಾ ದೊಡ್ಡ ಪದವಿಯ ಸ್ಥಾನ. ಯುದ್ಧದಲ್ಲಿ ಸಾಲಾಗಿನಿಂತ ಶಿಪಾಯಿಗಳು ಹ್ಯಾಗೆ ಮುಂದವರಿದು ಕೆಲಸಮಾಡಬೇಕಾಗುತ್ತದೆಯೋ, ಹಾಗೆ ವ್ಯವಹಾರದಲ್ಲಿ ದೊಡ್ಡ ಪದವಿಯ ಮನುಷ್ಯರು ಕೆಲಸ ಮಾಡಬೇಕಾಗುತ್ತದೆಂಬ ತಾತ್ಪರ್ಯವು.

ಳ್ಳುವದಕ್ಕೆ ಬಲವಾದ ಸಹಾಯವುಂಟಾಗುತ್ತದೆ. ಇದರಿಂದಲೇ ನಿಜವಾಗಿ ವ್ಯವಹಾರಕ್ಕೆ ಉಪಯುಕ್ತವಾದ ವಿದ್ಯಾಭ್ಯಾಸವುಂಟಾಗುತ್ತದೆ. ಈ ವಿದ್ಯಾಭ್ಯಾಸಕ್ಕೆ ಸರಿನೋಡಿದರೆ, ಶಾಲೆಗಳಲ್ಲಿಯೂ, ವಿದ್ವತ್ಸಭೆಗಳಲ್ಲಿಯೂ, ಮಹಾವಿದ್ಯಾಲಯಗಳಲ್ಲಿಯೂ ಸಂಪಾದಿಸ ಬಹುದಾದ ವಿದ್ಯಾಭ್ಯಾಸವು ಆತ್ಮ ಸುಧಾರಣೆಯ ಕೇವಲ ಆರಂಭವೆಂದು ಹೇಳಬಹುದು. ಇದಕ್ಕಿಂತಲೂ ಪ್ರತಿದಿನವು ನಮ್ಮ ಮನೆಗಳಲ್ಲಿಯೂ, ಓಣಿಗಳಲ್ಲಿಯೂ, ಮಾರಾಟದ ಅಂಗಡಿಗಳಲ್ಲಿಯೂ, ಕಾರಖಾನೆಗಳಲ್ಲಿಯೂ, ನೇಯುವ ಮನೆಗಳಲ್ಲಿಯೂ, ನೇಗಲ ಹೊಡೆಯುವಲ್ಲಿಯೂ, ಕೈಗಾರಿಕೆಯ ಕೆಲಸ ನಡೆಯುವ ಸ್ಥಳಗಳಲ್ಲಿಯೂ ಬಹುಜನರು ನೆರೆಯುವ ಸ್ಥಳಗಳಲ್ಲಿಯೂ ಆಗುವ ವ್ಯವಹಾರದ ವಿದ್ಯಾಭ್ಯಾಸವು ಅಪರಿಮಿತವಾಗಿ ಹೆಚ್ಚು ಪರಿಣಾಮವುಳ್ಳ ವಿದ್ಯಾಭ್ಯಾಸವೆಂಬುದಕ್ಕೆ ಸಂದೇಹವಿಲ್ಲ. ಮನುಷ್ಯನಿಗೆ ವ್ಯವಹಾರದಲ್ಲಿ ಪ್ರಾವೀಣತ್ವವನ್ನುಂಟುಮಾಡುವ ವಿದ್ಯಾಭ್ಯಾಸವಿದೇ. ಇದಕ್ಕೆ ಸ್ಕಿಲ್ಲರನೆಂಬ ವಿದ್ವಾಂಸನು ಮನುಷ್ಯಜಾತಿಯ ವಿದ್ಯಾಭ್ಯಾಸವೆಂದು ಹೆಸರನ್ನಿಟ್ಟಿದ್ದಾನೆ. ಈ ವಿದ್ಯಾಭ್ಯಾಸವು ಮನುಷ್ಯನ ಕೃತ್ಯಗಳಿಗೂ, ನಡತೆಗೂ, ಆತ್ಮ ಸುಧಾರಣೆಗೂ, ತನ್ನ ಮನಸ್ಸನ್ನು ತನ್ನ ವಶದಲ್ಲಿ ಇಟ್ಟುಕೊಳ್ಳುವ ಗುಣಕ್ಕೂ ಸಂಬಂಧವಾದದ್ದು. ಇವುಗಳಿಂದಲೇ ಮನುಷ್ಯನಿಗೆ ನಿಜವಾದ ಶಿಕ್ಷಣೆಯು ಉಂಟಾಗಿ, ಅವನು ಜನ್ಮವಿರುವವರೆಗೂ ಮಾಡತಕ್ಕ ಕೆಲಸಗಳನ್ನೂ, ವ್ಯವಹಾರಗಳನ್ನೂ ತಕ್ಕಂತೆ ಮಾಡುವದಕ್ಕೆ ಯೋಗ್ಯನಾಗುತ್ತಾನೆ. ಈ ವಿಧದ ವಿದ್ಯಾಭ್ಯಾಸವು ಯೆಷ್ಟು ಪುಸ್ತಕಗಳನ್ನು ಕಲಿತಾಗ್ಯೂ, ಯೆ

ಷ್ಟು ವಿದ್ಯೆಗಳನ್ನು ಕಲಿತಾಗ್ಯೂ ಉಂಟಾಗದು. ಬೇಕನ್ನನು ಯಾವಾಗಿನಂತೆ ಗೌರವವುಳ್ಳ ಶಬ್ದಗಳಿಂದ ಹೇಳುವದೇನಂದರೆ, "ವಿದ್ಯೆಗಳು ತಮ್ಮ ಸ್ವಂತ ಉಪಯೋಗವನ್ನು ಕಲಿಸುವದಿಲ್ಲ. ಅವುಗಳ ಉಪಯೋಗವೆಂಬದೊಂದು ಸ್ವತಂತ್ರ ಬುದ್ಧಿ ಕೌಶಲ್ಯವುಂಟು; ಅದು ಯೆಲ್ಲ ವಿದ್ಯೆಗಳಗಿಂತ ಹೆಚ್ಚಿನದು; ಅದನ್ನು ಸ್ವಾನುಭವಗಳಿಂದ ಮಾತ್ರ ಸಂಪಾದಿಸಬಹುದು." ಈ ಅಭಿಪ್ರಾಯವು ಬುದ್ಧಿಯ ಸುಧಾರಣೆಗೂ, ನಮ್ಮ ನಿತ್ಯಕ್ರಮದ ವ್ಯವಹಾರಗಳಿಗೂ, ಸಮವಾಗಿ ಸಂಬಂಧಿಸುತ್ತದೆ. ಯಾಕೆಂದರೆ, ಮನುಷ್ಯನು ಓದುವದಕ್ಕಿಂತ ಕೆಲಸ ಮಾಡುವವರಿಂದ ಹೆಚ್ಚು ಪೂರ್ಣನಾಗುತ್ತಾನೆಂಬ ಬುದ್ಧಿಯ ಮಾತನ್ನು ಯೆಲ್ಲ ವಿಧದ ಅನುಭವಗಳು ಪ್ರತ್ಯಕ್ಷ ತೋರಿಸಿ, ದೃಢಪಡಿಸುತ್ತವೆ. ಮನುಷ್ಯ ಜಾತಿಯನ್ನು ನಿರಂತರವಾಗಿ ಹೊಸದಾದದ್ದನ್ನು ಮಾಡುವದು ವಿದ್ಯೆವೆಂಬುವದಕ್ಕಿಂತ ವ್ಯವಹಾರವೆಂಬುವದೂ, ಅಭ್ಯಾಸವೆಂಬುವದಕ್ಕಿಂತ ಕೆಲಸವೆಂಬುವದೂ, ಚರಿತ್ರೆಗಳೆಂಬುವದಕ್ಕಿಂತ ನಡತೆಯೆಂಬುವದೂ ವಿಹಿತವು.

ಆದಾಗ್ಯೂ ದೊಡ್ಡವರ ಚರಿತ್ರೆಗಳು, ವಿಶೇಷವಾಗಿ ಸತ್ಪುರುಷರ ಚರಿತ್ರೆಗಳು, ಪರರಿಗೆ ಸಹಾಯಿಗಳಂತೆಯೂ, ಮಾರ್ಗದರ್ಶಿಗಳಂತೆಯೂ, ಉತ್ತೇಜಕಗಳಂತೆಯೂ ಉಪಯೋಗವುಳ್ಳವುಗಳಾಗಿವೆ. ಕೆಲವು ಅತ್ಯುತ್ತಮಚರಿತ್ರೆಗಳು ಕೇವಲ ಧರ್ಮಪುಸ್ತಕಕ್ಕೆ ಸರಿಯಾಗಿರುತ್ತವೆ. ಅವುಗಳಿಂದ ಉತ್ತಮ ಸ್ಥಿತಿಯ ಸಂಪಾದಿಸಿಕೊಳ್ಳುವ ಮಾರ್ಗವನ್ನೂ, ಉತ್ತಮವಿಚಾರಗಳ ಮಾರ್ಗವನ್ನೂ, ಪರರಿಗೂ ತನಗೂ ಹಿತಕರವಾದ ಬಲವುಳ್ಳ ಕೃತ್ಯಗಳ ಮಾರ್ಗವನ್ನೂ

ಕಲಿತುಕೊಳ್ಳಬಹುದು. ಅವು ನಮಗೆ ಆತ್ಮಸಹಾಯ, ಶಾಂತಿಯುಳ್ಳ ಇಷ್ಟಾರ್ಥಚಿಂತನೆ, ಸಿಕ್ಕಯಹಿಡಿದು ಕೆಲಸಮಾಡೋಣ, ಸರಳಭಾವಗಳ ಬಲವು ಯೆಷ್ಟೆಂಬಬಗ್ಗೆ ಬೆಲೆಯುಳ್ಳ ಉದಾಹರಣೆಗಳನ್ನು ತೋರಿಸುತ್ತವೆ. ಈ ಉದಾಹರಣೆಗಳು ಪರಾಕ್ರಮಿಗಳೆಂದೆನಿಸಿಕೊಂಡವರ ಘನವಾದ ಸಡತೆಯು ಸ್ಥಿರವಾಗುತ್ತ ಹೋದಹಾಗೆ ಪ್ರಕಟವಾಗಿ, ತನ್ನ ಸಲುವಾಗಿ ತಾನೇ ಕೆಲಸಮಾಡಿಕೊಳ್ಳುವ ಶಕ್ತಿಯು ಯೆಷ್ಟುವರೆಗೆ ಮನುಷ್ಯನಲ್ಲಿ ಉಂಟೆಂಬದನ್ನು ನಿಃಸಂದೇಹವಾದ ಭಾಷೆಯಿಂದ ವ್ಯಕ್ತಪಡಿಸುತ್ತವೆ. ಇದಲ್ಲದೆ ಈ ಉದಾಹರಣೆಗಳಿಂದ ಅತಿ ನೀಚಾವಸ್ಥೆಯ ಮನುಷ್ಯನು ಸಹ ನಿಜವಾದಹೆಸರನ್ನು ಪಡೆಯುವದಕ್ಕೂ, ಘನವಾದಯೋಗ್ಯತೆಯನ್ನು ಸಂಪಾದಿಸುವದಕ್ಕೂ ಯೋಗ್ಯನಾಗಬೇಕಾದರೆ ತನ್ನ ಮಾನ ತಾನೇ ಕಾಯ್ದುಕೊಳ್ಳುವದೂ, ತನ್ನನ್ನು ತಾನೇ ನಂಬುವದೂ ಯೆಷ್ಟು ಆವಶ್ಯಕವಾಗಿರುತ್ತದೆಂಬದು ಅತಿಸ್ಪಷ್ಟವಾಗಿ ತಿಳಿಯುತ್ತದೆ.

ಶಾಸ್ತ್ರ, ವಿದ್ಯೆ, ಕಲೆಗಳಲ್ಲಿ ನಿಪುಣರಾದ ದೊಡ್ಡಮನುಷ್ಯರು, ವಿಚಾರವೆಂಬ ಸದ್ವರ್ತಮಾನವನ್ನು ಭೂಮಿಯಲ್ಲಿ ಪ್ರಸಿದ್ಧಮಾಡಬಂದವರು ಇಂಥಾದೊಂದು ವಿಶೇಷ ಪದವಿಯುಳ್ಳವರೇ, ಅಥವಾ ಜಾತಿಯವರೇ ಇದ್ದರೆಂಬಹಾಗಿಲ್ಲ. ಮಹಾ ವಿದ್ಯಾಲಯಗಳಲ್ಲಿಯೂ, ಕಾರಖಾನೆಗಳಲ್ಲಿಯೂ, ಹೊಲಮನೆಗಳಲ್ಲಿಯೂ ಬಡವರಲ್ಲಿಯೂ, ಧನವಂತರಲ್ಲಿಯೂ ಸಮವಾಗಿ ಅವರು ಪ್ರಕಟವಾದರು. ಕೆಲಧರ್ಮೋಪದೇಶಕರಾದ ಬಹುದೊಡ್ಡ ಸಾಧು

ದವರು ಒಂದೊಂದುವೇಳೆ ಅತ್ಯುನ್ನತವಾದ ಪದಕ್ಕೆ ಯೇರಿದರು. ತೋರಿಕೆಯಲ್ಲಿ ಬಹುದುಸ್ತರವಾದ ತೊಂದರೆಗಳಿಂದಸಹ ಅವರಿಗೆ ಅಡ್ಡಿಯುಂಟಾಗಲಿಲ್ಲ. ಯೆಷ್ಟೋಸಾರಿ ಆ ತೊಂದರೆಗಳಿಂದಲೇ ಅವರಿಗೆ ಸಹಾಯವುಂಟಾಯಿತು. ಹ್ಯಾಗೆಂದರೆ, ಅಂಥಾ ಅಡ್ಡಿಗಳು ಬಂದದರಿಂದ ಅವರ ಸಹನಶಕ್ತಿಯೂ, ಶ್ರಮ ಮಾಡುವ ಸಾಮರ್ಥ್ಯವೂ ಜಾಗೃತವಾಯಿತು, ಅಪಾರವಾದ ಬುದ್ಧಿಕೌಶಲ್ಯಕ್ಕೆ ಉತ್ತೇಜನವು ಉಂಟಾಯಿತು. ಆ ತೊಂದರೆಗಳು ಬರದೆಹೋಗಿದ್ದರೆ, ಈ ಸದ್ಗುಣಗಳು ಇದ್ದಲ್ಲಿಯೇ ಅಡಗಿಹೋಗುತ್ತಿದ್ದವು. ಈ ವಿಧವಾಗಿಬಂದ ಅಡ್ಡಿಗಳು ಹ್ಯಾಗೆ ದಾಟಲ್ಪಟ್ಟವು, ಅವುಗಳನ್ನು ದಾಟುವ ಯತ್ನಮಾಡಿದವರಿಗೆ ಜಯವು ಹ್ಯಾಗೆಪ್ರಾಪ್ತವಾಯಿತು, ಯೆಂಬುದರ ಉದಾಹರಣೆಗಳನ್ನು ಯೆಲ್ಲರೂಬಲ್ಲರು. ಇಂಥಾ ಉದಾಹರಣೆಗಳಿಂದಲೇ "ಮನಸ್ಸಿದ್ದರೆ ಮುಗಿಲಿಗೆ ಕೈಹಚ್ಚಬಹುದು" ಯೆಂಬಗಾದೆಯುಂಟಾಗಿದೆ. ಉದಾಹರಣಾರ್ಥವಾಗಿ ನೋಡು, ಅತ್ಯುತ್ತಮಕವಿಯೂ ಸತ್ಪುರುಷನೂ ಆದ ಜೆರಿಮೀ ಟೆಲರ ಯೆಂಬವನು ನಾದಿಗರಲ್ಲಿ ಹುಟ್ಟಿದನು. ಇದೇ ಮೇರಿಗೆ ನೂಲುವ ಯಂತ್ರವನ್ನು ಮಾಡಿದವನೂ, ನೂಲಿನ ಬಟ್ಟೆಗಳ ಮಗ್ಗಗಳನ್ನು ಸ್ಥಾಪಿಸಿದವನೂ ಆದ ಸರ ರಿಚರ್ಡ ಆರ್ಕರಾಯಿಟ ಯೆಂಬವನು; ಅತಿಪ್ರಸಿದ್ಧಿಯಹೊಂದಿದ ಮುಖ್ಯ ನ್ಯಾಯಾಧೀಶಗಳಲ್ಲಿ ಹೆಸರಾದ ಲಾರ್ಡ ತೆಂತರ್ಡನ ಯೆಂಬವನು; ಭೂಮಿಯ ಸ್ವರೂಪವನ್ನು ಲೇಖಿಸುವವರಲ್ಲಿ ಮೇಲಾದ ಟರ್ನರ ಯೆಂಬವನು; ಇವರೆಲ್ಲರು ನಾದಿಗರಲ್ಲಿಯೇ ಹುಟ್ಟಿದರು.

EXTRACTS FROM RAJASHEKHARA.

ರಾಜಶೇಖರದೊಳಗಿನ ಶ್ಲೋಕಗಳು

ವಸಂತಋತುವರ್ಣನ.

॥ಮತ್ತೇಭವಿಕ್ರೀಡಿತವೃತ್ತ॥

ಕಳಕಂಠೀಕಳನಾದಕಾಹಳೆ ಮಿಳದ್ಭೃಂಗಾವಳೀರಾವಮುಂ।
ಕುಳಗೀತಂ ಶುಕವಂದಿವೃಂದನಿನದಂ ಮಂದಾನಿಲಾಂದೋ
ಳಿತೋ।
ತ್ಪಳವಲ್ಲೀಮೃದುಲಾಸ್ಯಮೊಪ್ಪಿರೆ ವನಶ್ರೀವಲ್ಲಭಂ ಸಂ
ಮುದಂ।
ವಳೆದೇಳ್ತಂದನಮಂದವೈಭವಯುತಂ ಚೈತ್ರಕ್ಷಮಾಧೀಶ್ವ
ರಂ॥೧॥

ಅರ್ಥ—ಬನಗಳ ಐಶ್ವರ್ಯದಿಂದ ಯುಕ್ತವಾದ ವಸಂತಋತುವೆಂಬ ಅರಸನು ಬಂದಾಗ, ಕೋಗಿಲೆಗಳ ಧ್ವನಿಯು ಕಾಳೆಯ ಧ್ವನಿಯಂತೆ, ಕೂಡಿದ ಭ್ರಮರಗಳ ಸ್ವರವು ಇಂಪಾದ ಗಾನದಂತೆ, ಗಿಳಿಗಳ ಶಬ್ದಗಳು ವಂದಿಗಳ ಸ್ತುತಿಗಳಂತೆ, ಮಂದಮಾರುತನಿಂದ ಅಲ್ಲಾಡುವ ಎಳೆಬಳ್ಳಿಗಳು ನರ್ತನ ಮಾಡುವ ಸ್ತ್ರೀಯರಂತೆ ಶೋಭಿಸಿದವು.

॥ಮಹಾಸ್ರಗ್ಧರಾವೃತ್ತ॥

ನಗಿಸುತ್ತಂ ಮಲ್ಲಿಕಾಕಾಮಿನಿಯನಳಿರವವ್ಯಾಜದಿಂ ಸೋಂ
ಕಿ ಮೆಯ್ಯೊ।
ಗನ್ನೆತ್ತಂ ಚೈತ್ರದೂತೀಯುವತಿಗೆ ಮುಕುಳವ್ಯಾಜದಿಂ
ಘರ್ಮವಾರ್ಬಿಂ॥
ಗಳಂ ಮೋಹಿತವಲ್ಲೀವನಿತೆಗೆ ಪದೆದೆತ್ತಂಕುರವ್ಯಾ

ಟ್ಟಗೆ ರೋಮಾಂಚಂಗಳಂ ಸದ್ವಿಟನೆನೆ ಸುಳಿದಂ ವೇಗದೂ
ರಂ ಸಮೀರಂ॥೭॥

ಅರ್ಥ—ವಸಂತಕಾಲದಲ್ಲಿ ಮಂದಮಾರುತವೆಂಬ ವಿಟಪುರುಷನು ಭ್ರಮರ ಸ್ವರನಿಮಿತ್ತದಿಂದ ಮಲ್ಲಿಗೆ ಬಳ್ಳಿಯೆಂಬ ಕಾಮಿನಿಯನ್ನು ನಗಿಸುತ್ತ(ಅರಳಿಸುತ್ತ)ಚೈತ್ರದೂತೀಬಳ್ಳಿಯೆಂಬ ಸುಂದರಿಯನ್ನು ಮೈಸೋಂಕಿ ಅವಳ ಮೈಯೆಲ್ಲ ಮೊಗ್ಗೆಗಳೆಂಬ ಬೆವರಿನ ಹನಿಗಳನ್ನು ಹುಟ್ಟಿಸುತ್ತ, ಬಳಿಕ ಮಾವಿನ ಗಿಡಕ್ಕೆ ಹಬ್ಬಿದ ಬಳ್ಳಿಯೆಂಬ ರಮಣಿಯನ್ನು ಆಲಂಗಿಸಿ ಅವಳ ಮೈಮೇಲೆ ಮುಗುಳುಗಳೆಂಬ ರೋಮಗಳನ್ನು ನೆಟ್ಟಗೆ ಮಾಡುತ್ತ ಸಂಚರಿಸಿದನು.

॥ಚಂಪಕಮಾಲಾವೃತ್ತ॥

ತಳಿರ್ಗಳಮಾವು ಪಲ್ಲವಿಪಶೋಕೆ ಮುಗುಳ್ತುದಿಮುರ್ಗೆತ್ತೆ
ಮೊಗ್ಗೆಯಂ।
ತಳೆಯಲೊಡರ್ಚೆ ನಿಂದ ಪೊಸಮಲ್ಲಿಗೆ ಪುಷ್ಪಮನಾಂತಚಂ
ಪಕಂ॥
ಸಳೆಯೆಲೆಯಿಕ್ಕಿ ಸಂಣನನೆಯೇರಿದಪಾಟಳಪೂವನಾಂತುಕಂ।
ಗೊಳಿಸುವ ಕರ್ಣಿಕಾರಮಲದೀರ್ವಿದ ಮುತ್ತಮದೆತ್ತನೋ
ಳ್ಪೊಡಂ॥೮॥

ಅರ್ಥ—ವಸಂತ ಕಾಲದಲ್ಲಿ ಯೆತ್ತ ನೋಡಿದರೂ ಚಿಗಿಯುವ ಎಳೆಮಾವಿನ ಮರಗಳೂ, ತಳಿರ್ಗೊಳ್ಳುವ ಅಶೋಕೆಯವೃಕ್ಷಗಳೂ, ಮುಗುಳುಬಿಡುವ ಅದಿರ್ಗಂಚೆಗಳೂ, ಮೊಗ್ಗೆ ಬಿಡುವ ಮಲ್ಲಿಗೆ ಬಳ್ಳಿಗಳೂ, ಹೂವಾಗುವ ಸಂಪಿಗೆ ಮರಗಳೂ, ಹಣ್ಣೆಲೆಗಳನ್ನು ಬಿಟ್ಟು ನನೆಗೊಳ್ಳುವ ಪಾದರಿ ಗಿಡಗಳೂ, ಹೂವುಗಳಿಂದ ತುಂಬಿದ ಬೆಟ್ಟದಾವರ

ಯು ಗಿಡಗಳೂ, ಮುತ್ತುಲ ಗಿಡಗಳೂ ಶೋಭಿಸುವವು.

ಕಂದ|| ಸಿರಿಯುಳ್ಳೊಡಳಗಳಂದೀ|
ವರದೊಳ್ಬಡದಿರ್ದುತ್ತೊಲಗೆ ತ್ತೊಲಗುತ್ತಿ ವಿಕಚಾಂ||
ಬುರುಹದೊಳ್ ನೆಲಸೆ ನೆಲಸಿದು|
ವರರೆ ಗತಶ್ರೀಕನಪ್ಪನಂ ಸೇವಿಪರಾರ್||೪||

ಅರ್ಥ—ಅರಳಿದ ನೈದಿಲೆಯ ಹೂವುಗಳಲ್ಲಿ ಸುಗಂಧವಿರುವ ತನಕ ಭ್ರಮರಗಳು ಅಲ್ಲಿಯೇ ಇರುವವು; ಅವು ಮುಗಿದ ಕೂಡಲೇ ಆ ನೈದಿಲೆಗಳನ್ನು ತೊರೆದು ಆಗ ಅರಳಿದ ತಾವರೆಗಳಲ್ಲಿ ಬಂದು ನಿಲ್ಲುವವು. ಅಕಟಕಟಾ, ಐಶ್ವರ್ಯ ಕಳಕೊಂಡವನನ್ನು ಯಾರು ಓಲೈಸುವರು!!!

ಕಂದ|| ಅಳಗಳೊಡನೊಡನೆ ದನಿಗುಡೆ|
ಗಿಳಿಗಳ್ನಲಿನಲಿದು ಮಾರವೀರನ ಬಿರುದಾ||
ವಳಿಯಂ ಪಾಡುತ್ತಾಡಿದ|
ವೆಳೆಗಾಳಿಗೆ ತೂನೆವ ತಳಿರ್ಗಳುಯ್ಯಲನಾಗಳ್||೫||

ಅರ್ಥ—ಭ್ರಮರಗಳು ಆಗಾಗ್ಗೆ ಧ್ವನಿಗೊಡಲು, ಗಿಳಿಗಳು ಆನಂದದಿಂದ ಕಾಮವೀರನ ಬಿರುದುಗಳನ್ನು ಹಾಡುತ್ತ ಎಳೆಗಾಳಿಗೆ ಓಲೆದಾಡುವ ಎಲೆಗಳ ಜೋಕಾಲಿಯನ್ನು ಆಡಿದವು.

ಬೇಟೆಯ ವರ್ಣನೆ.

||ಉತ್ಪಲಮಾಲಾವೃತ್ತ||

ಕಾಡಲಗೊರ್ಗಂಚಲಂ ಮುರಿದು ಸೋಮುರ್ಗಡಿಗಿಟ್ಟು ಮರಂ
ವದೊಳ್ಪದಂ|
ಗಾಢ ಕುರಂಗನಾಭಿಯನುರೋಜಕೆ ಲೇಪಿಸಿ ಪಲ್ಲವಂಗ
ಳಂ||

ಜೋಡಿಸಿ ಕಟ್ಟಿ ಪೆರ್ಚ್ಚಿದ ನಿತಂಬಕೆ ಸಾರ್ಚ್ಚಿ ಕರೀಂದ್ರ
ಕುಂಭಮೋ
ಳ್ಮೂಡಿದ ಮುತ್ತಿನೆತ್ತಿಸರದಿಂ ಸರಗಟ್ಟಿ ಕೊರಲ್ಗೆ ಕೂ
ಮಾರ್ಯಿಂ॥೬॥

ಅರ್ಥ—ಒಬ್ಬ ಬೇಡನು ಅಡವಿಯೊಳಗಿನ ಹೂವಿನ ಗೊಂ
ಚಲುಗಳನ್ನು ಮುರಿದು ತನ್ನ ಹೆಂಡತಿಯು ಸಡಿಲಾದ ತುರು
ಬಿನಲ್ಲಿಟ್ಟು, ಪುಷ್ಪರಸದಲ್ಲಿ ಕಸ್ತೂರಿಯನ್ನು ಕಲಿಸಿ ಅವಳ
ಸ್ತನಗಳಿಗೆ ಲೇಪಿಸಿ, ಕೋಮಲವಾದ ತಳಿರುಗಳನ್ನು ಹೊಂ
ದಿಸಿ ನಡುವಿಗೆ ಒಡ್ಯಾಣದಂತೆ ಸುತ್ತುಗಟ್ಟಿ, ಕಾಡಾನೆಗಳ ತ
ಲೆಯೊಳಗಿನ ಮುತ್ತುಗಳನ್ನು ಆರಿಸಿಕೊಂಡು ಸರಗೊಳಿಸಿ
ಪ್ರೀತಿಯಿಂದ ಅವಳ ಕೊರಳೊಳಗೆ ಹಾಕಿ,

॥ಮತ್ತೇಭವಿಕ್ರೀಡಿತವೃತ್ತ॥

ಕ್ರೀಡಿಸುತ್ತಂ ನಡೆ ನೋಡಿ ಗಾಡಿ ವಿಗೆ ಬೇಡಂ ಬೇಡಿದೋ
ಳ್ಪಂಣನಿ
ತ್ತಡಿಯೊಳ್ಮುಳ್ಮೊನೆ ನಾಂಟದಂತೆ ನಡೆಸುತ್ತಲ್ಲಲ್ಲಿ ಸಲ್ಲೀ
ಲೆಯಿಂ॥
ಮೊಡಗೂಡುತ್ತೆ ಮಡಲ್ತ ಪೆರ್ಮಳೆಗಳೋಳ್ಚೆ ಲ್ವಾದರಲ್ಮಾ
ಸಿನೋಳ್
ಬಡೆದಂ ಸಂಮುದಮಂ ನಿಜಾಂಗಜಿತಚಂಚದ್ವಲ್ಲಿಯೋಳ್ಬಲ್ಲಿ
ಯೊಳ್॥೭॥

ಅರ್ಥ—ಈ ಮೇರೆಗೆ ಬೇಡನು ಆಭರಣಗಳನ್ನು ಇಡಿ
ಸಿ, ಅವಳನ್ನು ಶೃಂಗಾರಗೊಳಿಸಿ, ಸೊಗಸಿನಿಂದ ನೋಡಿ
ಬೇಡಿದಂಥ ಇನಿದಾದ ಹಣ್ಣುಗಳನ್ನು ಅವಳಿಗೆ ಕೊಡುತ್ತ
ಕಾಲೊಳಗೆ ಮುಳ್ಮೊನೆಗಳು ನಡದಂತೆ ಮೆಲ್ಲ ಮೆಲ್ಲಗೆ ನ

ಧಿಸಿಕೊಂಡು, ಹಬ್ಬಿದ ಬಳ್ಳಿಗಳಿಂದ ಸುತ್ತುಗಟ್ಟಲ್ಪಟ್ಟ ದೊಡ್ಡ ಮನೆಗೆ ಅವಳನ್ನು ಕರಕೊಂಡು ಬಂದು, ಅಲ್ಲಿ ಮೃದುವಾದ ಹೂವಿನ ಹಾಸಿಗೆ ಮೇಲೆ ಅವಳೊಡನೆ ಕೂತುಕೊಂಡು ಆನಂದ ಪಟ್ಟನು.

NOTICES.

ನೋಟೀಸುಗಳು.

ಯಾವತ್ತು ಜನರಿಗೆ ತಿಳಿಸುವದೇನಂದರೆ-ಬರುವ ಸಪಟಂಬರತಿಂಗಳ ೧೬ ನೇ ತಾರೀಖಿನ ದಿವಸಾ ೧, ೨ ನೇ ಕ್ಲಾಶಿನ ಸರಟಿಫಿಕೇಟಗಳು ಪಡದು ಕೊಳ್ಳುವಾಪೇಕ್ಷೆಯುಳ್ಳ ಪ್ರಮೋದವಾರರ ಪರೀಕ್ಷೆಯು, ಕಲಾದಗಿಯಲ್ಲಿ ಯಿರುವ ಯಿಂಗ್ರಜಿ ಶಾಲೆಯ ಗೃಹದಲ್ಲಿ ಬೆಳ್ಳಗ್ಗೆ ೧೧ ಘಂಟಕ್ಕೆ ಶುರು ಆಗುವದು. ಪ್ರಮೋದವಾರರ ವಯಸ್ಸು ೧೭ ವರುಷದ ಮೇಲೆ ಮತ್ತು ೨೫ ವರ್ಷದೊಳಗೆ ಯಿರಬೇಕು.

ವಕೀಲಿ ಪರೀಕ್ಷೆಕ್ಕೆ ಹೋಗುವ ಯಿಚ್ಛೆಯುಳ್ಳ ಜನರ ಪರೀಕ್ಷೆಸಹಾ ಅದೇ ವ್ಯಾಳ್ಯದಲ್ಲಿ ತಕ್ಕೊಳಲ್ಪಡುವದು. ಯೆರಡನೇ ತಾರೀಖಿಗೆ ತಕ್ಕೊಳ್ಳಲಾರದು. ಆದ್ದರಿಂದ, ಯಿಂಥಾ ಜನರುಕೂಡಾ ಆವತ್ತೇ ಹಾಜರಯಿರಬೇಕು. ಯಿವರಿಗೆ ೨೫ ವರುಷದ ನಿಬಂಧನೆಯಿಲ್ಲಾ; ತಾರೀಖ ೧ ಜುಲಯಿ ಸನ್ನ ೧೮೬೨ ಯಿಸವಿ.

(Signed) Hanmant Ramchandra.

ಡ. ಯಿ. ಯಿ. ಜಿಲ್ಲಾ ಕಲಾದಗಿ

ಸರಟೀಫಿಕೇಟ ಪರೀಕ್ಷೆಯ ವಿಷಯುಕ್ಕೆ.

ಸನ್ ೧೮೭೧ ಇಸವಿ ಜನವರಿ ತಿಂಗಳ ಶಾಲಾಪತ್ರಿಕೆಯಲ್ಲಿ ಛಾಪಿಸಲ್ಪಟ್ಟ ನೋಟಿಸಿಗೆ ಅನುರೋಧಿಸಿ, ತಿಳಿಯಪಡಿಸುವದೇನಂದರೆ—ಅದರಲ್ಲಿ ಬರದ ಪರೀಕ್ಷೆಯು ತಾರೀಖು ೧೪ನೇ ಅಗಟಂಬರ ಸನ್ ೧೮೭೨ನೇ ಇಸವಿದಿವಸಾ ಬೆಳಗಾವಿ ಟ್ರೇನಿಂಗಕಾಲೇಜದಲ್ಲಿ ಮೆಹರ್ಬಾನ ಎಜ್ಯುಕೇಶನಲ್ ಇನಸ್ಪೇಕ್ಟರ ಧೊರೆಗಳವರು ತೆಗೆದುಕೊಳ್ಳುವರು. ಕಾರಣಾ ಈ ಪರೀಕ್ಷೆಯನ್ನು ಕೊಡಲಿಚ್ಛಿಸುವವರು ನಾಲ್ಕು ದಿವಸ ಪೂರ್ವದಲ್ಲಿಯೇ ತಮ್ಮ ಹೆಸರನ್ನು ಜಸ್ತುರದಲ್ಲಿ ಶೇರಿಸಲಿಕ್ಕೆ ಪ್ರಿನಸಿಪಾಲ್ ಟ್ರೇನಿಂಗಕಾಲೇಜ ಇವರಕಡಿಗೆ ಬಂದು ಹಜರಾಗತಕ್ಕದ್ದು.

ಸನ್ ೧೮೭೦ ಇಸವಿ ಸಪಟಂಬರ ತಿಂಗಳ ಶಾಲಾಪತ್ರಿಕೆಯ ೧೮೮ನೇ ಪತ್ರದಲ್ಲಿ ಮೆಹರ್ಬಾನ ಡಾಯರೆಕ್ಟರ ಧೊರೆಗಳವರು ಕೊಟ್ಟ ನೋಟಿಸಿನ ಪ್ರಕಾರ ಇದು ಕಡೆಯ ಪರೀಕ್ಷೆಯು ಇರುವದರಿಂದ, ಅಂಟ್ರೆಂಡರಾಗಿರುವ ಮಾಸ್ತರರು ಇದಕ್ಕೆ ವಿಶೇಷ ಲಕ್ಷವನ್ನು ಕೊಡತಕ್ಕದ್ದು.

ತಾರೀಖು ೬ನೇ ಜುಲಾಯಿ—
ಸನ್ ೧೮೭೨ನೇ ಇಸವಿ—

(Signed) B. K. HOOLGOAL.
ಪ್ರಿನಶಿಪಾಲ್. ಟ್ರೆ. ಕಾ. ಬೆಳಗಾವಿ

(Signed) J. F. FLEET.
ಆಕ್ಟಿಂಗ ಎ. ಇ. ದಕ್ಷಿಣ ಭಾಗ

ಪ್ರವೇಶ ಪರೀಕ್ಷೆಯ ವಿಷಯಕ್ಕೆ.

ಬೆಳಗಾವಿ ಟ್ರೇನಿಂಗಕಾಲೇಜದಲ್ಲಿ ಅಭ್ಯಾಸ ಮಾಡಲಿಚ್ಛಿಸುವವರಿಗೆ ತಿಳಿಯ ಪಡಿಸುವದೇನಂದರೆ—ಸದರ ಪರೀಕ್ಷೆಯು ತಾರೀಖು ೯ ನೇ ಮಾಹೆ ಸಪಟಂಬರ ಸನ್ನ೧೮೭೨ ಇಸವಿ ದಿವಸಾ ಟ್ರೇನಿಂಗಕಾಲೇಜದಲ್ಲಿಯೂ, ಧಾರವಾಡ, ಕಲಾದಗಿ, ಕಾರವಾರ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೇಕ್ಟರವರ ಆಫೀಸಗಳಲ್ಲಿಯೂ ಆಗುವದು. ಆದರೆ ಈ ಪರೀಕ್ಷೆಯನ್ನು ಕೊಡಲಪೇಕ್ಷಿಸುವವರು ಎರಡು ದಿನ ಪೂರ್ವದಲ್ಲಿಯೇ ಆಯಾಯ ಸ್ಥಳಗಳಲ್ಲಿ ಹಾಜರಾಗಿ, ತಾವು ಅಭ್ಯಾಸ ಮಾಡಿರುವ ಶಾಲೆಯ ಮಾಸ್ತರರ ಕಡೆಯಿಂದ, ತಮ್ಮ ವಯುಕ್ಕೋಸ್ಕರ ಸರಟೀಫಿಕೇಟಗಳನ್ನು ತೆಗೆದುಕೊಂಡು ಬಂದು, ತಮ್ಮ ಹೆಸರು ಪರೀಕ್ಷೆಯ ಪಟ್ಟಿಗೆ ದಾಖಲು ಮಾಡಿಸಬೇಕು. ಈ ಪರೀಕ್ಷೆಯು ಇತ್ತಕಡೆಗೆ ಠರಾವಾದ ಐದನೇ ಸ್ಟ್ಯಾಂಡರ್ಡನಂತೆ ಅಂದರೆ ಎತ್ತೆಯಂತೆ ಆಗುವದು

ಕನ್ನಡ ಕವಿತೆಯ ಎರಡನೇ ಪುಸ್ತಕವು ಶಿದ್ಧವಾಗಿರುವದಿಲ್ಲವ ಕಾರಣಾ ಮೊದಲನೇ ಪುಸ್ತಕದಲ್ಲಿಯೇ ಉಮೇದವಾರರು ಪರೀಕ್ಷಿಸಲ್ಪಡುವರು. ತಿಳಿಯುವದು ತಾರೀಖು ೩ ನೇ ಜುಲಾಯಿ ಸನ್೧೮೭೨ ಇಸವಿ—

(Signed) B, K. HOOLGOAL.
ಪ್ರಿನಶಿಪಾಲ್. ಟ್ರೆ. ಕಾ. ಬೆಳಗಾವಿ.

(Signed) J. F. FLEET.
ಆಕ್ಟಿಂಗ ಎ. ಇ. ದಕ್ಷಿಣಭಾಗ.

The Necessity and Benefit of Education.

(New poetry.)

ವಿದ್ಯಾಭ್ಯಾಸದ ಅವಶ್ಯಕತೆಯೂ, ಲಾಭವೂ

||ಶಾರ್ದೂಲವಿಕ್ರೀಡಿತವೃತ್ತ||

ಶ್ರೀವಿದ್ಯಾಧನವೇಮಹಾಧನವದನಿಕ್ಷೇಪಂಮನುಷ್ಯರ್ಗೆ
ದೇ-
ಲಾವಣ್ಯಂ ಗುರುಪ್ರಸಂಗವಂಗೆಗುರು ನಾಸದ್ಬಾಂಧವಂ
ಶ್ರೀ ಕರಂ||
ದೈವಂ ಭೋಗಯಶಸ್ಕರಂ ಹಿತಪರಂ ಭೂಪಾಲ ಸಂ
ಪೂಜ್ಯಮಿಂ-
ತೀವಿದ್ಯಾಧನಹೀನನಾದವನಹೀನಂ ನಿರ್ಧನಂ ಹೀನ
ನೇ?||೧||

||ಶಾರ್ದೂಲವಿಕ್ರೀಡಿತ||

ಲೇಸೈ ಗರ್ಭವಿಘಾತಮ ಪ್ಪುದ ನಿಕಂ ಸ್ತ್ರೀಸಂಗಸಂ
ವರ್ಜನಂ|
ಲೇಸೈ ಜನ್ಮಿಸಿದಾಗ ಪೋಪುದದುತಾಂಪೆಣ್ಣಾಗಿಪುಟ್ಟಿರ್
ಪುದುಂ|
ಲೇಸೈ ಭಾರ್ಯೆಯು ಬಂಜೆಯಪ್ಪುದು ಕರಂ ಸೊಲ್ಲ
ಪ್ಪುದೆಂತಾದೊಡೇ-
ನೈಸಲ್ಲಂ ಧನರೂಪ ಸದ್ಗುಣ ಯುತಂ ವಿದ್ಯಾನುಪೇ
ತಂಸುತಂ||೨||

||ಇಂದ್ರವಜ್ರವೃತ್ತಗಳು||

ಬಾಲತ್ವ ದೊಳ್ಬಾಲಕರಂ ಸುವಿದ್ಯಾ

ಬಾಲರ್ಗೆ ಪಿತೃಕರ್ಗೆ ಬಕಂಗಳಂತಾ
ಬಾಲರ್ಗೆ ಭಾಹಂಸಸಮಾಜಕೊಪ್ಪರ್॥೩॥
ಲಾವಣ್ಯತಾರುಣ್ಯಯುತರ್ಕುಲೀನರ್
ತಾವಾಗಿವಿದ್ಯಾವ್ಯತಿರಿಕ್ತರೊಪ್ಪರ್॥
ದಾವಾಗಲುಂಗಂಧವದಿಲ್ಲದಂತಿ-
ರ್ಪಾವಾತಪೋಭಾಗದಪುಷ್ಪಗಳಂತೆ॥೪॥

॥ವಸಂತತಿಲಕಾವೃತ್ತ॥

ಕಾವ್ಯನಂಗೆ ಪುಚ್ಛ ವಿರಹೀನದರಂತೆವಿದ್ಯಾ
ಹೀನಂಗೆ ಜೀವವಿರಲೇಂ ನಿಜಗುಹ್ಯಮುಂಸ-
ನ್ಮಾನಕ್ಕೆ ಹಾನಿಬರದಂತೆ ಸುರಕ್ಷಿಸಲ್ಕೆ—।
ತಾನೇಂ? ಸಮರ್ಥನೋ? ಸುದ್ಯೆಸುಧಾಜನ್ಮಜಂನು॥೫॥

॥ಮಾಲಿನೀವೃತ್ತವು॥

ವಿನಯಮುಮಸುವಿದ್ಯಾಲಾಭದಿಂಬಪ್ಪುದಾ ಮೇ
ಲ್ವಿನಯದೆವರಪಾತ್ರತ್ವಂಸುಪಾತ್ರತ್ವದಿಂದಂ॥
ಧನವ ಪಡೆಯುವಂ ತದ್ದ್ರವ್ಯದಿಂಧರ್ಮವಲ್ಲಿಂ—
ದನಿಯುಮಿತಸುಖಂ ವಿದ್ಯಾಖ್ಯಬೀಜಂ ನಿರರ್ಘ್ಯಂ॥೬॥

॥ವಸಂತತಿಲಕಾವೃತ್ತ॥

ವಾರಾಶಿಗಲ್ಪ ನದಿಯುಂ ನದಿಯೊಯ್ಯುವಂತೆ।
ತಾರಾಜನಲ್ಲಿ ಕರದೊಯ್ಯುವುದು ಮಾನವಂನಂ—॥
ತಾರಾಜಿ ಪಾತನಸುವಿದ್ಯೆಯು ಮುಂನವಂಗೆ।
ಬೀರುತ್ತದೈ ಸುಖವ ಸಂಪದಮುಂ ಯಶಸ್ಸಂ॥೭॥

॥ಶಾರ್ದೂಲವಿಕ್ರೀಡಿತವೃತ್ತ॥

ಕಾಪಾಡುತ್ತಿಪ್ರದೀಪ್ಸಿತಾರ್ಥಗಳನಿತ್ತುಂತಾಯಿಯೊಲ್ತಂ

ತೇಜೋಳಾತ್ರ್ಯಪ್ರದ್ಯುಹ್ರತ್ರೋಕ್ತ್ಯಯ ಯಾಶ್ರೀವೃದ್ಧಿಯಂ
ಗೈವ್ರದು॥
ಸಾಪತ್ನ್ಯಕಲದಿಶೋಕಮಂ ತವಿಸಿ ಭಾರ್ಯಾಪುತ್ರರೊ
ಲ್ಸಂತೋಷವಂ-
ನೂರ್ಪುರ್ಕೈಸುವುದೇ ಸುಕಲ್ಪಲತೆಯಂತೀ ವಿದ್ಯೆಯೋ
ನೀಯದೋ?೮॥

॥ಮತ್ತೇಭವಿಕ್ರೀಡಿತವೃತ್ತಗಳು॥

ಕಸುಗೊಳ್ಳಲ್ಕದ ಗೋಚರಂ ಸುಖಮನೆಂದುಂ ಪೇರ್ಚ
ಸುತ್ತಿರ್ಪ್ಪುದಿಂ-
ನೊಸೆಯುತ್ತಿತ್ತರುಮರ್ಥಗಳ್ಗೆ ಬಹುವಿಸ್ತೀರ್ಣತ್ವಕೈತ
ರ್ಪ್ಪುದಾ-
ರ ಸುವಿದ್ಯಾಖ್ಯದ ಗುಪ್ತಮಾದ ಧನ ಮಾಕಲ್ಪಾಂತ
ಕುಂತೀರದಿಂ-
ತೆಸೆವಾಧೀರರಿಗಾರಿದಿರ್? ಬಿಡವರೋಳ್ಭ್ಯಮಾಲಸೀಂ
ಮಾನವಂ॥೯॥

ರವಿಯಿಂದುತ್ತಮಮಾದಲಂಕರಣ ಮುಂಟೇ? ವಾಸರ
ಕ್ಕಿಂದುವಿಂ-
ದವಿಶೇಷೋಕ್ತವಿಭೂಷಣಂದೊರೆವುದೇನ್ಯ? ರಾತ್ರಿಗ
ಸ್ತ್ರೀಗೆಬೇ-
ರೆವಿಭೂಷಾವಳಿಯುಂಟೆ? ಕುಂಕುಮವಬಿಟ್ಟಿಂದೀಮನು
ಷ್ಯಂಗಮೊ-
ಪ್ಪುವವಿದ್ಯಾಖ್ಯವಿಭೂಷೆಯಂಬಿಡಲುಮತ್ತುಂಟೇ? ನ
ಹಾಭೂಷಣಂ॥೧೦॥

ವಿನಯಂಸದ್ಗುಣಗಳ್ ಸುಶೀಲತೆಯುಂ ಸಾರಾಸಾರಸು
ಜ್ಞಾನಮುಂ||
ಮನಕಾನಂದವನೇಕದುರ್ವ್ಯಸನನಾಶಂಬುದ್ಧಿಚಾತುರ್ಯ
ಮುಂ||
ಘನಪಾಂಡಿತ್ಯರಸಜ್ಞತಾ ಸ್ವಪರಕಲ್ಯಾಣಜ್ಞತಾ ದ್ಯಂಗ
ಳುಂ||೧||
ಜನಮಾಸ್ಥಾನದಮಾನಗಳ್ಕರಿಹಯಶ್ವೇತಾತಪತ್ರಾದಿಗ
ಳ್|
ಜನರೊಳ್ಪೂಜ್ಯತೆಯುಂಸುಗೌರವವುಲೋಕಪ್ರೀತಿ
ಯುಂಖ್ಯಾತಿಯುಂ||
ಅನಿಶಂ ಪಂಡಿತಮೈತ್ರಿಯುಂ ಪರಮಬ್ರಹ್ಮಜ್ಞಾನಮು
ಖ್ಯಂಗಳೇ||
ಘನವಿದ್ಯಾಮೃತಪಾನದಿಂ ಜನಿಸಿಜನ್ಮಂ ಸಾರ್ಥಕಂಭೂ
ಮಿಯೊಳ್||೨||

ಜಾಣನು ಈ ನಿಬಂಧವಲಕ್ಷ್ಯಕೊಟ್ಟೋದಿದರೆ ಅವನ ಮನಸು ಈ ವಿಷಯಕ್ಕೆ ಜಾಗರೂಕವಾಗದೆ ಯಿರಲಿಕ್ಕಿಲ್ಲ.

ಧೊಂಡೊ ನರಸಿಂಹ ಮುಳಬಾಗಲಕರ

A FABLE.

ದಂತಕಥೆ

ಆದರೆ ಚಿಕ್ಕವನು ಪ್ರತಿಒಂದು ಊರಲ್ಲಿ ಒಂದೊಂದು ಸ್ನೇಹಸರ ಮನೆಯನ್ನು ಸಂಪಾದಿಸುತ್ತಾ ನಡೆದನು, ಇದ

ಮನೆಯನ್ನು ಕಟ್ಟಿಸೋಣವೆಂದು ತಿಳದಿದ್ದನು. ಹಾಂಗು,
ಯಾರಿಗಾದರು ಸಾಲವನ್ನು ಕೊಡಬೇಕಾದರೆ ಅವರಿಂದ,
ತಾನು ಯೇನಾದರು ಒಂದು ಜಿನಸನ್ನು ಒತ್ತೆಯಾಗಿ"(ತಾ
ನು ಕೊಡತಕ್ಕ ರೂಪಾಯಿಗಳಿಗಿಂತಲು ಸ್ವಲ್ಪ ಹೆಚ್ಚು ಬೆಲೆ
ಯುಳ್ಳದ್ದು),"ಇಟ್ಟುಕೊಂಡು ರೂಪಾಯಿಗಳನ್ನು ಕೊಡು
ತ್ತಿದ್ದನು, ಹೀಗಾದಬಳಿಕ ಕೊಟ್ಟಿರುವ ರೂಪಾಯಿಗಳನ್ನು
ಮರಳಿ ಬೇಡುವ ಪ್ರಯೋಜನವೇನು? ಇದರರ್ಥವೇ ಅ
ವನು ಕೊಟ್ಟಸಾಲ ಮರಳಿ ಬೇಡಬಾರದೆಂಬದೆಂದು ತಿಳದಿ
ದ್ದನು. ಹಾಂಗು, ಯಾವವ್ಯಾಳ್ಯಕ್ಕೆ ತನಗೆ ಬಹಳ ನಿದ್ರೆ
ಬರುತಿತ್ತೋ, ಆಗ್ಯೆ ಯೇನು ಶಿಕ್ಕದ್ದರಮೇಲೆ ಮಲಕೊ
ಳ್ಳುತ್ತಿದ್ದನು, ಇದರರ್ಥವೇ ಅವನು ಮೆತ್ತಗೆ ಮಾಡಿಕೊಂ
ಡು ಮಲಗೋಣ, ಎಂಬುತಿಳದಿದ್ದನು. ಮತ್ತು, ಯಾವಾಗ್ಯೆ
ತನಗೆ ಬಹಳ ಹಶಿವೆಯಾಗುತ್ತಿತ್ತೋ ಆವ್ಯಾಳ್ಯದಲ್ಲಿ ಯೇ
ನು ಇದ್ದದ್ದನ್ನು ಊಟಮಾಡುವದಲ್ಲದೆ ಅದನ್ನೇ ಅಮೃತ
ಸಮಾನ ತಿಳಯುತ್ತಿದ್ದನು, ಇದರರ್ಥವೇ ಅವನು ಕಮ್ಮ
ಗೆಂದು ತಿಳಯುತ್ತಿದ್ದನು. ಈ ಮೇರೆಗೆ ಚಿಕ್ಕಮಗನು ಬ
ಹುಜಾಣತನದಿಂದ ಸಂಸಾರನಡಿಸಿ ಕೆಲವು ಕಾಲದೊಳಗೆ ಎ
ಣಿಕಿಲ್ಲದಷ್ಟು ಸಾವುಕಾರನಾದನು. ಅಂದಬಳಿಕ ಆ ಶೆಟ್ಟಿಯು
ಇಬ್ಬರುಮಕ್ಕಳಲ್ಲಿ, ಚಿಕ್ಕವನಿಗೂ, ಹಿರಿಯವನಿಗೂ, ಎ
ಷ್ಟು ವ್ಯತ್ಯಾಸ" (ಹೆಚ್ಚುಕಡಿಮೆ)" ಘಂಟುನೋಡಿರಿ! ಹಿರಿ
ಯವನು ಕೇವಲದರಿದ್ರನಾದದ್ದು ನಾವೇನೋಡಿದೆವು, ಮ
ತ್ತು, ಚಿಕ್ಕವನು ದೊಡ್ಡಸಾವುಕಾರನಾದದ್ದೂ ನಾವೇನೋ
ಡೆವು; ಇದರ ತಾತ್ಪರ್ಯವೇನಂದರೆ ಯಾವದಾದರೊಂದು

ಪೂರ್ಣವಿಚಾರ ಮಾಡತಕ್ಕದ್ದು; ಇಲ್ಲದಿದ್ದರೆ ಆ ಕೆಟ್ಟಯ ಹಿರಿಯ ಮಗನಂತೆ ಗತಿಹೊಂದುವರು, ಇದಕ್ಕೆ ಸಂದೇಹವಿಲ್ಲ. ಆದರೂ ಕೆಲವೊಬ್ಬರ ಸ್ವಭಾವಗುಣವಿರುವದೇನಂದರೆ, ಕೇವಲ ಹಿರಿಯರೇ ಹೇಳಿದಮಾತೆಂದು ಅದಕ್ಕೆ ನಂಬುವಲ್ಲಿಯಾದರೂ,"(ಪ್ರತ್ಯಕ್ಷಕಂಡರೂ ಪ್ರಮಾಣಿಸಿನೋಡಬೇಕು)"ಎಂಬ ಗಾದಿಯಂತೆ ಯಾವದಾದರೊಂದು ಕೆಲಸದಲ್ಲಿ ಕೈ ಹಾಕಬೇಕಾದರೆ ಬಹಳ ವಿಚಾರದಿಂದನೋಡಿ ಹಾಕಬೇಕು ಇದರಿಂದ ಆಕೆಲಸಕ್ಕೆ ಎಂದೂ ಹಾನಿಯುಂಟಾಗಲರಿಯದು. ಈ ಮಾತು ಚನ್ನಾಗಿ ಲಕ್ಷದಲ್ಲಿಡತಕ್ಕದ್ದು.

Champu Ramayen and Champu Bharata with commentaries in Canarese by Mr. Shantaviraya.

ಶಾಂತವೀರ ರಾಜದೇವ ಕೃತಕರ್ನಾಟಕ ವ್ಯಾಖ್ಯಾನಗಳು.

॥ಚಂಪೂರಾಮಾಯಣೇ ಭಾಲಕಾಂಡಃ॥

.।ವಸಂತತಿಲಕಾವೃತ್ತಂ॥

ಗದ್ಯಾನುಬದ್ಧರಸಮಿಶ್ರಿತಪದ್ಯಸೂಕ್ತಿಃ।
ಹೃದ್ಯಾಹಿವಾದ್ಯಕಲಯಾಕಲಿತೇವಗೀತಿಃ॥
ತಸ್ಮಾದ್ದಧಾತುಕವಿಮಾರ್ಗಜುಷಾಂಸುಖಾಯ।
ಚಂಪೂಪ್ರಬಂಧರಚನಾಂರಸನಾಮದೀಯಾ॥೧॥

॥ಅನ್ವಯಃ॥

ಗದ್ಯಾನುಬದ್ಧರಸಮಿಶ್ರಿತಪದ್ಯಸೂಕ್ತಿಃ, ಗಧ್ಯ=ಗದ್ಯಗಳ, ಅನುಬದ್ಧ ರಸ= ಸಂಯುಕ್ತರಸದಿಂದ, ಮಿಶ್ರಿತ=ಕೂಡಿ

ದ್ಯಕಲಯಾ, ವಾದ್ಯ=ಮೃದಂಗಮೊದಲಾದ ವಾದ್ಯಗಳ, ಕಲಯಾ=ಮಧುರ ಸ್ವರದಿಂದ, (ಅಹಿಕಲಯಾ=ಶ್ರುತಿಯಿಂದ) ಆಕಲಿತಾ=ಸಂಬಂಧವಾದ, ಗೀತಿಯಿವ=ಗಾನದೋಪಾದಿಯಲ್ಲಿ, ಹೃದ್ಯಾ=ಮನೋಹರವು, ಹಿತಸ್ಮಾತ್=ಆಕಾರಣದೆಸೆಯಿಂದ, ಕವಿಮಾರ್ಗಜುಷಾಂ=ಕವಿಮಾರ್ಗದಲ್ಲಿ ಪ್ರಿಯುಕ್ತರರಾದ ವಿದ್ವಜ್ಜನರ, ಸುಖಾಯ=ಸೌಖ್ಯದಗೋಸ್ಕರ, ಮದೀಯಾ=ನನ್ನ ಸಂಬಂಧವಾದ, ರಸನಾ=ನಾಲಿಗೆಯು, ಚಂಪೂಪ್ರಬಂಧರಚನಾಂ=ಚಂಪೂಪ್ರಬಂಧದ ನಿರ್ಮಾಣವನ್ನು, ದಧಾತು=ಧಾರಣಮಾಡಲಿ.

॥ಶಾಸ್ತ್ರವಿಷಯ॥

ರಸನಾ ಕರ್ತೃ, ಚಂಪೂಪ್ರಬಂಧರಚನಾಂ ಕರ್ಮ, ದಧಾತು ಕ್ರಿಯಾಪದ, ಸಕರ್ಮಕ, ಕ. ಪ್ರ.; ದಧಾತು=(ದ+ಧಾ+ತು)ದ ಎಂಬುದು ಶ್ಲುವಿಕರಣದಿಂದ ವಿಶೇಷಾಕ್ಷರವು, ಧಾ ಎಂಬುದು ಮೂರನೆಗಣದ ಧಾತು, ತು ಎಂಬುದು ಲೋಟ್ ಲಕಾರ, ಆಶೀರ್ವಾದ, ಪರಸ್ಮೈಪದ, ಪ್ರಥಮಪುರುಷ, ಏಕವಚನ; ಅಂ—ಪೂರ್ವ ವಾಕ್ಯದಲ್ಲಿ ಉಪಮಾನೋಪಮೇಯಗಳ ಸಾಧಾರಣದ ಧರ್ಮಸಮಾನವಾಗಲು ಪೂರ್ಣೋಪಮಾಲಂಕಾರಂ — ಉಕ್ತಾವಸಂತತಿಲಕಾತಭಜಾಜಗೌಗ, ಹೀಂಗೆಂಬುದು ಕೇದಾರಲಕ್ಷಣವು.

॥ಭಾವಾರ್ಥ॥

ಮೃದಂಗ ಮೊದಲಾದ ವಾದ್ಯಗಳಿಂದ ಕೂಡಿದ ಗಾನದಹಾಂಗೆ ಗದ್ಯಗಳರಸದಿಂದ ಕೂಡಿದ ಪದ್ಯಗಳ ಮಧುರೋಕ್ತಿಗಳು ಮನೋಹರವಾಗುವದರಿಂದ ವಿದ್ವಜ್ಜನ ಸುಖಗೋಸ್ಕರ ನನ್ನ ನಾಲಿಗೆಯು ಗದ್ಯಪದ್ಯಗಳಿಂದ ಯುಕ್ತವಾದ ಚಂಪೂ

ಪ್ರಬಂಧವನ್ನು ನಿರ್ಮಿಸಲಿ.

॥ಚಂಪೂಭಾರತೇ ಪ್ರಥಮಸ್ತಬಕಃ॥

॥ವಸಂತತಿಲಕಾವೃತ್ತಂ॥

ಯಸ್ಯಾಮುದಗ್ರನೃಪಮಂದಿರಚಂದ್ರಶಾಲಾ।
ವಾತಾಯನೇ ಗತಿವಶಾದ್ವಪುಷಿ ಪ್ರಸಕ್ತಾಂ॥
ದೀಪಾಗ್ರಧೂಮಮಷಿಕಾಂ ಶಿಶಿರಾಂಶುಬಿಂಬೇ।
ಮೋಹಾತ್ಕುರಂಗ ಇತಿ ಮುಗ್ಧಜನಾ ವದಂತಿ॥೩॥

॥ಅನ್ವಯ॥

ಯಸ್ಯಾಂ=ಹಸ್ತಿನ ನಗರದಲ್ಲಿ, ಉದಗ್ರನೃಪಮಂದಿರ ಚಂದ್ರಶಾಲಾವಾತಾಯನೇ, ಉದಗ್ರ=ಉನ್ನತವಾದ, ನೃಪಮಂದಿರ=ಅರಮನೆಗಳ, ಚಂದ್ರಶಾಲಾ=ಶಿರೋಗೃಹದ, ವಾತಾಯನೇ=ಗವಾಕ್ಷೆಯಲ್ಲಿ, ಗತಿವಶಾತತ್, ಗತಿ=ಗಮನದ, ವಶಾತ್=ಆಧೀನತ್ವದೆಸೆಯಿಂದ, ವಪುಷಿ=ಮಧ್ಯ ಶರೀರದಲ್ಲಿ, ಪ್ರಸಕ್ತಾಂ=ಲಗ್ನವಾದಂಥ, ದೀಪಾಗ್ರಧೂಮಮಷಿಕಾಂ, ದೀಪ=ದೀವಿಗೆಗಳ, ಅಗ್ರ=ಕುಡಿಗಳ, ಧೂಮ=ಹೊಗೆಯ, ಮಷಿಕಾಂ=ಮಸಿಯನ್ನು, ("ದೃಷ್ಟ್ವಾ=ನೋಡಿ") ಮುಗ್ಧಜನಾಃ=ಮೂಢಜನರು, ಮೋಹಾತ್= ಮೋಹದದೆಸೆಯಿಂದ, ಶಿಶಿರಾಂಶುಬಿಂಬೆ, ಶಿಶಿರಾಂಶು=ಹಿಮಕಿರಣವುಳ್ಳ ಚಂದ್ರನ, ಬಿಂಬೆ=ಮಂಡಲದಲ್ಲಿ, ಕುರಂಗಃ=ಎರಳೆಯು, "ಅಸ್ತೀತಿ= ಸ್ಪಷ್ಟ ಇರುತ್ತದೆ ಯೆಂದು," ವದಂತಿ=ಹೇಳುತ್ತಾರೆ.

॥ಶಾಸ್ತ್ರವಿಷಯ॥

ವ್ಯಾ೦_ಜನಾವದಂತಿ=(ಜನಾಃ+ವದಂತಿ) ಅಃ ಇದರ ಮುಂದೆ ಮೃದುವ್ಯಂಜನ ಅಥವಾ ಸ್ವರಪರವಾಗಲು ವಿಸರ್ಗ ಇಲ್ಲ; ವದಂತಿ=(ವದ್+ಅಂತಿ) ವದ್ ಎಂಬುದು ೧ನೆ ಗಣದ

ಧಾತು, ಅಂತಿ ಎಂಬುದು ಲಟ್ ಲಕಾರ, ವರ್ತಮಾನಕಾಲ, ಪ್ರಥಮಪುರುಷ, ಬಹುವಚನ. ಅಂ_ ಅನ್ಯಾರೋಪಣೋಮಾಡಲುಶುದ್ಧಾಪಹ್ನುತ್ಯಲಂಕಾರ;

॥ಭಾವಾರ್ಥ॥

ಹಸ್ತಿನಾವತಿಯಲ್ಲಿರುವ ಅರಮನೆಯ ಮೇಲಮಂಟಪದ ಬೆಳಕಿಂಡಿಯಲ್ಲಿ ಹಾಯ್ದು ಅದರ ಶರೀರದಲ್ಲಿ ಹತ್ತಿದೀವಿಗೆ ಕುಡಿಗಳ ಹೊಗೆಯ ಕಾಡಿಗೆಯನ್ನು ಕಂಡು ಮೋಹದಿಂದ ಮೂಢ ಜನರು ಚಂದ್ರಬಿಂಬದಲ್ಲಿ ಎರಳೆಯು ರುತ್ತದೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ.

Correspondence.

ಪತ್ರವ್ಯವಹಾರವು.

ರಾಜಮಾನ್ಯರಾಜಶ್ರೀ ಬೆಳಗಾವಿ ಕನ್ನಡ ಮಾಸಪತ್ರಿಕೆ ಕರ್ತರ ಚರಣ ಯುಗಗಳಿಗೆ.

ವಿನಂತಿವಿಜ್ಞಾಪನೆ:—ತಮ್ಮ ಕರದಲ್ಲೊಪ್ಪುವ ಅಂದವಾದ ಪತ್ರದಲ್ಲಿ ನನ್ನ ಕಿಂಚಿತ್ಪ್ರಾರ್ಥನೆಯನ್ನು ಮುದ್ರಿಸುವಿರೆಂಬುವ ಮಹತ್ಕಾಂಕ್ಷೆಯನ್ನು ತಾಳಿದ್ದೇನೆ.

$ಷ^{೪}+೨ಷ^{೩}+೪ಷ^{೨}-೨೦ಷ=೧೦೮$ ಇದರಲ್ಲಿ ಷದ ಕಿಮ್ಮತ್ತು ತಿಳಿಯುವದು.

ಈ ಉದಾಹರಣವು ನಮ್ಮ ಬಂಧುಗಳಾದ ವಿದ್ವಾಂಸ ಮಾಸ್ತರರು ಚನ್ನಾಗಿ ಬಿಡಿಸಿ ರೀತಿ ಸಹಿತ ಇದೇ ಪತ್ರಿಕೆಲ್ಲಿ ತಿಳಿಸುವರೆಂಬುವದರ ದೆಸೆಯಿಂದ ಬರೆದಿದ್ದೇನೆ. ಇದನ್ನು ತಾವು ತಾತ್ಸಾರಮಾಡದೆ ಮುದ್ರಿಸುವದಕ್ಕೆ ಕೊಡುವ ಯತ್ನಿಸಬೇಕು. ಇಂತಿ ಬಿನ್ನಹ.

ಶಿವಾಜಿ ಅಪ್ಪಾಜಿ ಶಿರಸಂಗಿಕರ ಪಂತೋಜಿ ಭೋಸ

ಶಾಲಾಪತ್ರಕವು.

ಪುಸ್ತಕ ೮]   [ಸಂಚಿಕೆ ೫.

ಬೆಳಗಾವಿ, ಮಾಹೆ ಆಗಸ್ಟ. ೧೮೭೨.

SELF HELP.

ತನಗೆ ತಾನೇ ನೆರವಾಗುವದು.

ಶೇಕ್ಸಪೀಯರನು ಹ್ಯಾಗಿದ್ದನೆಂದು ಯಾರಿಗೂ ತಿಳಿದಿಲ್ಲ. ಆದರೆ ಅವನು ಕಡಿಮೇತರದ ಜನರೊಳಗೆ ಹುಟ್ಟಿದನೆಂಬದಕ್ಕೆ ಸಂದೇಹವಿಲ್ಲ. ಅವನ ತಂದೆಯು ಕಟಕರವನಿದ್ದು, ದನಗಳನ್ನು ಸಾಕಿ ಮಾರಾಟ ಮಾಡುತ್ತಿದ್ದನು. ಶೇಕ್ಸಪೀಯರನು ಸಹ ಚಿಕ್ಕತನದಲ್ಲಿ ಉಣ್ಣೆಯನ್ನು ಹಿಂಜುವ ಕೆಲಸ ಮಾಡುತ್ತಿದ್ದನೆಂದು ಹೇಳುತ್ತಾರೆ. ಆದರೆ ಅವನು ಮೊದಲು ಕೆಲದಿವಸ ಒಂದು ಶಾಲೆಯಲ್ಲಿ ಬಾಗಿಲ ಕಾಯುವ ಕೆಲಸ ಮಾಡಿದನಂತರ ಒಬ್ಬ ಚಿನಿವಾಲನ ಮುತಾಲೀಕನಾಗಿದ್ದನೆಂದು ಕೆಲವರು ಹೇಳುತ್ತಾರೆ. ನಿಜವಾಗಿ ನೋಡಿದರೆ ಅವನು ಯಾವಮನುಷ್ಯನೂ ಅಲ್ಲ, ಯೆಲ್ಲ ಮನುಷ್ಯಜಾತಿಯ ಸಾರವೇ ಶೇಕ್ಸಪೀಯರನು_ಯಾಕಂದರೆ ಅವನು ತಾನು ಬರೆದ ನಾಟಕಗಳಲ್ಲಿ ಯಾವಜನರ ಭಾಷೆಯನ್ನು ಹ್ಯಾಗ ಬರೆಯಬೇಕೋ, ಹಾಗೇ ಬರೆದಿದ್ದಾನೆ. ಅವನು ಬರೆದ ಅಂಬಿಗರ ಭಾಷೆಯಲ್ಲಿ ಯಷ್ಟುಮಾತ್ರವೂ ತಪ್ಪು ಇಲ್ಲೆಂದು ನೋಡಿ, ಒಬ್ಬ ನಾವಿಕ ಗ್ರಂಥಕರ್ತನು

ಅವನು ಅಂಬಿಗರವನಿದ್ದನೆಂದು ಸ್ಥಾಪಿಸುತ್ತಾನೆ. ಒಬ್ಬ ಧರ್ಮೋಪದೇಶಕನು ಅವನ ಲೇಖಗಳಲ್ಲಿ ತೋರುವ ಪ್ರಮಾಣಗಳಿಂದ ಅವನು ಒಬ್ಬ *ಪಾರ್ಸನ್ನನ ಮುತಾಲೀಕನಿದ್ದನೆಂದು ತರ್ಕಿಸುತ್ತಾನೆ. ಒಬ್ಬ ಪ್ರಸಿದ್ಧನಾದ ಕುದುರೆಯು ಮಾಂಸ ಪರೀಕ್ಷಕನು ಶೇಕ್ಸಪೀಯರನು ಕುದುರೆಗಳ ಮಾರಾಟ ಮಾಡುವವನಿದ್ದಾನೆಂದು ಹೇಳುತ್ತಾನೆ. ಆದರೆ ಶೇಕ್ಸಪೀಯರನು ಒಬ್ಬ ನಟನಿದ್ದನೆಂಬದಕ್ಕೆ ಸಂದೇಹವಿಲ್ಲ. ಯಾಕಂದರೆ ವಿಪುಲವಾದ ಅನುಭವಗಳಿಂದಲೂ, ಅವಲೋಕನಗಳಿಂದಲೂ ತನ್ನ ಅತ್ಯಾಶ್ಚರ್ಯಕರವಾದ ಜ್ಞಾನಭಾಂಡಾರವನ್ನು ತುಂಬಿಕೊಂಡು ಅವನು ತಾನಿರುವಮಟ್ಟಿಗೂ ಅನೇಕ ವೇಷಗಳಿಂದ ಜನರ ಕಣ್ಣೆದುರಿಗೆ ತೋರಿದನು. ಉಳಿದ ಸಂಗತಿಗಳು ಹ್ಯಾಗೇ ಇರಲಿ, ಅವನು ದೃಢವಾದ ಅಭ್ಯಾಸಿಯೂ, ಶ್ರಮಪಟ್ಟು ಕೆಲಸ ಮಾಡುವವನೂ ಇದ್ದನೆಂಬದು ನಿಜವು. ಈಹೊತ್ತಿಗೂ ಅವನ ಗ್ರಂಥಗಳು ಇಂಗ್ಲಿಶಜನರ ನಡತೆಯನ್ನು ಸ್ಥಿರಪಡಿಸುವದಕ್ಕೆ ಒಳ್ಳೇ ಸಹಾಯಕೊಡುತ್ತವೆ.

ಬ್ರಿಂಡಲೀಯೆಂಬ ಯಂತ್ರಿಕನೂ, ಕುಕ್ಕನೆಂಬ ನಾವಿಕನೂ, ಬರ್ನನೆಂಬ ಕವಿಯೂ ದಿನಗೂಲಿಯು ಕಷ್ಟ ಮಾಡುವವರಲ್ಲಿ ಹುಟ್ಟಿದರು. ಕಲ್ಲುಕುಟ್ಟಿಗರೂ, ಉಪ್ಪಾರರೂ ಬೆನ್ಜಜಾನಸನ್ನ ಯೆಂಬವನ ಬಗ್ಗೆ ಅಭಿಮಾನವಹಿಸಬಹುದು. ಇವನು ಲಿಂಕನ್ಸಇನ್ನಯೆಂಬ ಇಮಾರತನ್ನು ಕಟ್ಟುವಾಗ ಕಿಸೆಯೊಳಗೆ ಪುಸ್ತಕವನ್ನೂ, ಕೈಯೊಳಗೆ ಕರಣಿಯನ್ನೂ ಇಟ್ಟುಕೊಂಡು ಕೆಲಸಮಾಡಿದನು. ಇದೇಮೇರಿಗೆ ಎಡವ

* ಇಂಗ್ಲಂಡದಲ್ಲಿ ಒಂದೊಂದು ತಾಲೂಕಿಗೆ ಒಬ್ಬೊಬ್ಬ ಧರ್ಮಾಧಿಕಾರಿಯನ್ನು ನೇಮಿಸುತ್ತಾರೆ. ಅವನಿಗೆ ಪಾರ್ಸನ್ನನೆಂದು ಹೆಸರುಂಟು.

ರ್ಗಸ್‌ನೂ, ಟೆಲಫರ್ಡನೂ ಯೆಂಬ ಯಂತ್ರಜ್ಞರು, ಹ್ಯೂವಿ ಲ್ಲರನೆಂಬ ಭೂಗರ್ಭಶಾಸ್ತ್ರಜ್ಞನು, ಲೇಖಕನೂ, ಮೂರ್ತಿಗಾರನೂ ಆದ ಅಲ್ಲನ್ ಕನಿಂಗಂ ಯೆಂಬವನು, ಇವರೆಲ್ಲರು ಕಲ್ಲುಕುಟ್ಟಿಗರಲ್ಲಿ, ಅಥವಾ ಉಪ್ಪಾರರಲ್ಲಿ ಹುಟ್ಟಿದವರೇ. ಇನಿಗೋ ಜೋನ್ಸನೆಂಬ ಗೃಹಶಿಲ್ಪಿಯೂ, ಹಾರಿಸನ್ನನೆಂಬ ಕಾಲಮಾಪಕ ಯಂತ್ರಕರ್ತನೂ, ಜಾನಹಂಟರನೆಂಬ ಶಾರೀರಶಾಸ್ತ್ರಜ್ಞನೂ, ರಾಮನೀ, ಓಪೀಯೆಂಬ ಚಿತ್ರಗಾರರೂ, ಜಾನ್ ಗಿಬ್ಸನ್ನನೆಂಬ ಮೂರ್ತಿಗಾರನೂ, ಪ್ರೋಫೇಸರಲೀಯೆಂಬ ಪೂರ್ವದೇಶಗಳ ಭಾಷಾಭಿಜ್ಞನೂ ಬಡಗಿಯವರಲ್ಲಿ ಹೆಸರಾದರು

ಜೇಡರಲ್ಲಿ ಸಿಮ್‌ಸನ್ನನೆಂಬ ಗಣಿತಜ್ಞನೂ, ಬೇಕನ್ನನೆಂಬ ಮೂರ್ತಿಗಾರನೂ, ಇಬ್ಬರು ಮಿಲ್ನಸರಯೆಂಬವರೂ, ಆಡಾಮ್ ವಾಕರನೂ, ಜಾನ ಫಾಸ್ತರನೂ, ವುಯಿಲಸನ್ನನೆಂಬ ಪಕ್ಷಿ ಪರೀಕ್ಷಕನೂ, ಡಾಕ್ತರ ಲಿವಿಂಗಸ್ತನ್ನನೆಂಬ ದೇಶಸಂಚಾರಕನೂ, ಟಾನ್ನಾಹಿಲ್ಲನೆಂಬ ಕವಿಯೂ ಹುಟ್ಟಿದರು. ಹೆಸರಾದ ಸರ ಕ್ಲೌಡೆಸ್ಲೀ ಶಾವೆಲ್ಲನೆಂಬ ಹಡಗಪಡೆಯ ದಳವಾಯಿಯೂ, ಸ್ತರ್ಜನ್ನನೆಂಬ ವಿದ್ಯುಲ್ಲತಾಭಿಜ್ಞನೂ, ಸಾಮ್ಯುಅಲ್ ಡ್ರೂಯೆಂಬ ನಿಬಂಧಕಾರನೂ, ಕ್ವಾರ್ಟರ್ಲೀರಿವ್ಯೂಯೆಂಬ ವರ್ತಮಾನ ಪತ್ರಕರ್ತನಾದ ಜೆಫರ್ಡನೆಂಬವನೂ, ಬ್ಲೂಮಫೀಲ್ಡನೆಂಬ ಕವಿಯೂ, ವುಯಿಲಿಯಂ ಕೇರೀಯೆಂಬ ಪಾದರಿಯೂ, ಸಮ್ಮಗಾರರಲ್ಲಿ ಹುಟ್ಟಿದರು. ಮೊರಿಸನ್ನನೆಂಬ ಇನ್ನೊಬ್ಬ ಬಹು ಕಷ್ಟಪ್ರಯತ್ನವುಳ್ಳ ಪಾದರಿಯು ಮೊಚ್ಚೆಯು ಕೊರಡುಗಳನ್ನು ಮಾಡುವವರವನಿದ್ದನು. ಬಾನ್ಯಪಟ್ಟಣದಲ್ಲಿ ಸಮಗಾರರೊಳಗೆ ಇತ್ತಕಡೆ